ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

06 ಜನವರಿ 2016 ಪುಟ 20 ರೂ. 15/-



Occupy UGC ಚಳವಳಿ

ಜನಮುಡಿ 2015



ದೇಶಕಾಲ ಮುಖಾಮುಖಿ

ಪರಿಷತ್ ಚುನಾವಣೆ

ಮಂಡ್ಯ: ಕಾಂಗ್ರೆಸ್-ಜೆಡಿಎಸ್‌ಗೆ 'ಒಳೇಟು' ಭೀತಿ

ರ್ಗ-ದಾವಣಗೆರೆ: ಕೈಗೆ ಆಚಾರಿಯ ಬಲ; ಕಮಲ ವಿಲವಿಲ!

ಾರವಾಡ: ಶೆಟ್ಟರ್ ಸೋದರರಿಗೆ ಹೊಸ ಸಂಕಟ


ಕ-ಉಡುಪಿ: ಆಸ್ಕರ್ ಆಣತಿ ಸುತ್ತ ಕಾಂಗ್ರೆಸಿಗರ ಪರಿಷತ್ ಫೈಟಿಂಗ್

ಉತ್ತರಕನ್ನಡ: ಪ್ರತಿಷ್ಠೆ ಪಣಕ್ಕಿಟ್ಟಿರುವ ಡಾನ್ ದೇಶಪಾಂಡೆ

ಹೆಚ್‌ಡಿಎಫ್‌ಸಿ ಭಟ್ಟಮ್ಮ ದೋಚಿದ ದುಡ್ಡು ಎಲ್ಲಮ್ಮ?

ಜನಸಂಖ್ಯೆಗೆ ತಕ್ಕಷ್ಟು ಮದ್ಯದಂಗಡಿಗಳ

ಸಿದ್ದರಾಮಯ್ಯನವರ ಆಲೋಚನೆ ಸರಿಯೇ



ಡಾ.ವಾಸು ಎಚ್.ವಿ.

ಮುಖ್ಯಮಂತ್ರಿಯಾದ ನಂತರ ಸಿದ್ದರಾಮಯ್ಯನವರು ಮದ್ಯ ಮಾರಾಟದ ವಿಚಾರದಲ್ಲಿ ಹಾಲಿ ಇರುವ ನೀತಿಯನ್ನು ಬದಲಿಸುವ ಕುರಿತು ಮಾತನಾಡಿರುವುದು ಇದು ಮೂರನೇ ಸಾರಿ. ಮೊದಲನೇ ಸಾರಿ ಮಾತನಾಡಿದ್ದು, ಅಧಿಕಾರ ವಹಿಸಿಕೊಂಡ ಆರಂಭದಲ್ಲೇ. ಆಗ ಅಗ್ಗದ ಮದ್ಯವನ್ನು ತರುವ ಬಗ್ಗೆ ಹೇಳಿದ್ದರು. ಎರಡನೇ ಸಾರಿ ಮಾತನಾಡಿದ್ದು ಎರಡನೇ ಬಜೆಟ್ ಅಧಿವೇಶನದಲ್ಲಿ. 'ಸಾರಾಯಿ ರದ್ದು ಮಾಡಿದ ಮೇಲೆ, ಹಳ್ಳಿಗಳಲ್ಲಿ ಮದ್ಯ ಸಿಗುತ್ತಿಲ್ಲ. ಹೀಗಾಗಿ ಅಲ್ಲಿನ ಅಂಗಡಿಗಳಲ್ಲಿ ಮದ್ಯವು ಅಕ್ರಮವಾಗಿ ಲಭ್ಯವಾಗುವ ಸ್ಥಿತಿ ನಿರ್ಮಾಣವಾಗಿದೆ. ಇದನ್ನು ಸರಿಪಡಿಸಲು ಒಂದೋ ಸಾರಾಯಿ ತರಬೇಕು, ಇಲ್ಲವೇ ಹಳ್ಳಿಗಳಲ್ಲೂ ಬಾಟಲಿ ಮದ್ಯ ಮಾರಾಟ ಮಾಡಲು ಲೈಸೆನ್ಸ್ ನೀಡಬೇಕು' ಎಂದು ಆಗ ಹೇಳಿದ್ದರು. 'ಸಂದರ್ಭ ಏನಿದೆ ಎಂದು ಹೇಳಿದ್ದೇನೆಯೇ ಹೊರತು ಸಾರಾಯಿಯನ್ನು ಮತ್ತೆ ಆರಂಭಿಸುವ ಆಲೋಚನೆ ಇಲ್ಲ' ಎಂಬ ಸ್ಪಷ್ಟನೆಯನ್ನೂ ನೀಡಿದ್ದರು.


ಈ ಬಗ್ಗೆ ಪ್ರಶ್ನೆ ಎದ್ದಾಗ 'ಮುಖ್ಯಮಂತ್ರಿಯವರು ಸದುದ್ದೇಶದಿಂದ ಆಡಿದ ಮಾತುಗಳನ್ನು ಸುಮ್ಮನೇ ತಿರುಚಲಾಗುತ್ತಿದೆ ಅಷ್ಟೇ' ಎಂದು ಅವರ ಅಭಿಮಾನಿಗಳು ದೂರುತ್ತಿದ್ದರು. ಹಳ್ಳಿಯ ಜನರು, ಅದರಲ್ಲೂ ದುರ್ಬಲ ಸಮುದಾಯದವರು ಸಾರಾಯಿ ನಿಷೇಧದಿಂದ ಹೆಚ್ಚು ಹಣ ಕಳೆದುಕೊಳ್ಳಬೇಕಾಗಿ ಬಂದಿದೆ; ಹಾಗಾಗಿ ಇಂತಹದೊಂದು ಕ್ರಮ ಅಗತ್ಯ ಎಂಬುದು ಸಿದ್ದರಾಮಯ್ಯನವರ ಮನಸ್ಸಿನಲ್ಲಿದೆಯೇ ಅಥವಾ ಬೊಕ್ಕಸಕ್ಕೆ ಹೆಚ್ಚಿನ ತೆರಿಗೆ ಸಂಗ್ರಹಿಸುವ ಗುರಿಯಿಂದ ಹೀಗೆ ಹೇಳುತ್ತಿದ್ದಾರೆಯೇ ಎಂಬ ಬಗ್ಗೆ ಅನುಮಾನ ಹುಟ್ಟಲು ಕಾರಣಗಳಿವೆ. ಇತ್ತೀಚೆಗೆ ಮತ್ತೊಂದು ಸುದ್ದಿಯೂ ಹೊರಬಿದ್ದಿರುವುದು ಇದಕ್ಕೆ ಪುಷ್ಟಿ ಕೊಡುತ್ತದೆ. ಕಳೆದ 15 ವರ್ಷಗಳಲ್ಲಿ ರಾಜ್ಯ ಸರ್ಕಾರವು ನಿರ್ದಿಷ್ಟ ಅವಧಿಯಲ್ಲಿ ಮಾಡಿದ ಸಾಲ ಸಿದ್ದರಾಮಯ್ಯನವರ ಕಾಲದಲ್ಲೇ ಹೆಚ್ಚು ಎಂಬುದು ಆ ಸುದ್ದಿ. ಹೀಗಾಗಿ ಬೊಕ್ಕಸದ ಆದಾಯ ಹೆಚ್ಚಿಸಲು ಅಬಕಾರಿ ಮೂಲದ ತೆರಿಗೆಯು ಒಂದು ಮುಖ್ಯ ಮೂಲವಾದುದರಿಂದ ಈ ರೀತಿಯ ಆಲೋಚನೆ ಬರುತ್ತಿರಬಹುದೇ ಎಂಬ ಅನುಮಾನ ಸಹಜ.

ಅಬಕಾರಿ ಮಂತ್ರಿ ಮನೋಹರ ತಹಸೀಲ್ದಾರ್ ಅವರು ಸುಮಾರು 1750 ಹೊಸ ಮದ್ಯದಂಗಡಿಗಳಿಗೆ ಲೈಸೆನ್ಸ್ ನೀಡುವ ಕುರಿತು ಸರ್ಕಾರ ಪರಿಶೀಲಿಸುತ್ತಿದೆ ಎಂದು ಹೇಳಿದ್ದಾರೆ. ಇದನ್ನು ನಂತರದಲ್ಲಿ ಮುಖ್ಯಮಂತ್ರಿಯವರೂ ಸಮರ್ಥಿಸಿಕೊಂಡು, 'ಜನಸಂಖ್ಯೆಗನುಗುಣವಾಗಿ ಮದ್ಯದಂಗಡಿಗಳೂ ಹೆಚ್ಚಬೇಕಲ್ಲವೇ?' ಎಂದಿದ್ದಾರೆ. ಹೌದು ರಾಜ್ಯದಲ್ಲಿ ಜನಸಂಖ್ಯೆ ಹೆಚ್ಚುತ್ತಿದೆ. ಆದರೆ ಸರ್ಕಾರೀ ಶಾಲೆಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಸರ್ಕಾರೀ ವೈದ್ಯರ ಸಂಖ್ಯೆ ಅಷ್ಟು ಹೆಚ್ಚಾಗುತ್ತಿಲ್ಲ. ತಾನು ಶೋಷಿತ ಸಮುದಾಯಗಳ ಪರ ಕೆಲಸ ಮಾಡುತ್ತೇನೆಂದು ಬಹಿರಂಗವಾಗಿ ಹೇಳುವ ಧೈರ್ಯ ಹೊಂದಿರುವ ಒಬ್ಬ ಮುಖ್ಯಮಂತ್ರಿಯ ಆದ್ಯತೆಗಳು ಸರಿಯಿವೆಯೇ ಎಂಬ ಪ್ರಶ್ನೆಗೆ ಉತ್ತರ ಬೇಕಿದೆ. ಅಥವಾ ಇದು ಸಿದ್ದರಾಮಯ್ಯನವರ ಮಿತಿ ಮಾತ್ರ ಅಲ್ಲ, ನಾವಿಂದು ಆಯ್ಕೆ ಮಾಡಿಕೊಂಡಿರುವ ಆಡಳಿತ ವಿಧಾನದಲ್ಲೇ ತಪ್ಪಿದೆಯೇ? ಉದ್ದಿಮೆದಾರರಿಗೆ ತೆರಿಗೆ ಹಾಕಿದರೆ ಹೂಡಿಕೆ ಬರುವುದಿಲ್ಲ, ಆದಾಯ ತೆರಿಗೆ ಹೆಚ್ಚಿಸಿದರೆ ಬಾಯಿ ಬಡಿದುಕೊಳ್ಳುವ ಶಕ್ತಿ ಇರುವ ಮಧ್ಯಮವರ್ಗವನ್ನು ಎದುರು ಹಾಕಿಕೊಳ್ಳಬೇಕು. ಹಾಗಾಗಿ ಜನಸಾಮಾನ್ಯರಿಗೆ ತೆರಿಗೆ ಹೆಚ್ಚಿಸಿ, ದೇಶದ ಜಿಡಿಪಿ ಹೆಚ್ಚಿಸಲು ಜಿಎಸ್‌ಟಿ ತೆರಿಗೆ ಪದ್ಧತಿ ತರಲು ಮೋದಿ ಹೊರಟಿದ್ದರೆ, ಜನಸಾಮಾನ್ಯರಿಗೆ ಹೆಚ್ಚೆಚ್ಚು ಕುಡಿಸಿ ಆದಾಯ ಹೆಚ್ಚಿಸಿಕೊಳ್ಳಲು ಸಿದ್ದರಾಮಯ್ಯ ಹೊರಟಿದ್ದಾರಾ?

ಹಾಗಾದರೆ ಕೇರಳದಲ್ಲಿ ಮದ್ಯದಂಗಡಿಗಳ ಸಂಖ್ಯೆಯನ್ನು ಕಡಿಮೆ ಮಾಡಲಾಗುತ್ತಿರುವುದು, ಬಿಹಾರದಲ್ಲಿ ನಿತೀಶ್ ಕುಮಾರ್ ಬರುವ ಏಪ್ರಿಲ್‌ನಿಂದ ಮದ್ಯ ನಿಷೇಧ ಮಾಡಲು ಯೋಜಿಸಿರುವುದು ಹೇಗೆ? ಅಂದರೆ, ಇರುವ ವ್ಯವಸ್ಥೆಯಲ್ಲೂ ಕೆಲವು ಬದಲಾವಣೆಗಳನ್ನು ತರುವುದು ಸಾಧ್ಯವಿದೆ. ಸಿದ್ದರಾಮಯ್ಯನವರು ಆ ನಿಟ್ಟಿನಲ್ಲಿ ಮುಂದಾಗುತ್ತಿಲ್ಲವೇಕೆ?

ಹೊಸ ಅಂಗಡಿಗಳಿಗೆ ಲೈಸೆನ್ಸ್ ಕೊಡುತ್ತಿರುವುದು 23 ವರ್ಷಗಳ ನಂತರ. ಕಡೆಯ ಬಾರಿಗೆ ಹೊಸ ಲೈಸೆನ್ಸ್ ಕೊಟ್ಟದ್ದು 1992ರಲ್ಲಿ, ಅದಾದ ನಂತರ 2003ರಲ್ಲಿ ಈ ಮದ್ಯ ಮಾರಾಟವನ್ನು ಮತ್ತು ಅದರಿಂದ ಬರುವ ತೆರಿಗೆಯನ್ನು ವ್ಯವಸ್ಥಿತಗೊಳಿಸುವ ಉದ್ದೇಶದಿಂದ ಕರ್ನಾಟಕ ರಾಜ್ಯ ಪಾನೀಯ ನಿಗಮವನ್ನು ಸ್ಥಾಪಿಸಲಾಯಿತು. ಆ ನಂತರ ಸಾರಾಯಿ ನಿಷೇಧವಾಯಿತು (ಜೂನ್ 2007). ಲೈಸೆನ್ಸ್ ಇರುವ ಸುಮಾರು 15,000 ಮದ್ಯದಂಗಡಿಗಳಲ್ಲಿ ಹೆಚ್ಚಿನವು ಪಟ್ಟಣಗಳಲ್ಲಿದ್ದುದರಿಂದ ಹಳ್ಳಿಗಳಲ್ಲಿ ಅಧಿಕೃತ ಮದ್ಯ ಮಾರಾಟ ನಿಂತುಹೋಯಿತು. ಇದರಿಂದ ಹಳ್ಳಿಗಳಲ್ಲಿ ಅಕ್ರಮ ಮದ್ಯ ಮಾರಾಟ ಹೆಚ್ಚಾಗುತ್ತಿದೆ. ಹಾಗಾಗಿ ನಾವು ಹೊಸ ಮದ್ಯದಂಗಡಿಗಳಿಗೆ ಲೈಸೆನ್ಸ್ ನೀಡುತ್ತಿದ್ದೇವೆ ಎಂಬುದು ಸರ್ಕಾರದ ವಾದ. ಆದರೆ, ಈ ಅಕ್ರಮ ಮದ್ಯ ಮಾರಾಟಕ್ಕೆ ಕಾರಣ ಸರ್ಕಾರವೇ ಆಗಿದೆ ಎಂಬುದನ್ನು ಮರೆಮಾಚಲಾಗುತ್ತಿದೆ. 'ಅಕ್ರಮ' ಎಂದಾಕ್ಷಣ ಅದು ಕಳ್ಳಭಟ್ಟಿಯೋ ಅಥವಾ ತೆರಿಗೆ ತಪ್ಪಿಸಿ ಉತ್ಪಾದಿಸಲಾಗುತ್ತಿರುವ ಮದ್ಯದ ಮಾರಾಟವೋ ಅಲ್ಲ, ಕರ್ನಾಟಕ ರಾಜ್ಯ ಪಾನೀಯ ನಿಗಮದ ಸಗಟು ಗೋದಾಮುಗಳಿಂದಲೇ ಹೋಗಿ (ಅಂದರೆ ತೆರಿಗೆ ಲೆಕ್ಕಕ್ಕೆ ಸಿಕ್ಕಿ), ಚಿಲ್ಲರೆ ಅಂಗಡಿಗಳಿಗೆ ಹೋಗುವ ಮದ್ಯವೇ ಹಳ್ಳಿ ಹಾಗೂ ಪಟ್ಟಣಗಳ ದಿನಸಿ ಅಂಗಡಿಗಳಿಗೂ ಹೋಗುತ್ತಿದೆ. ಈ ರೀತಿ ಹೋಗಲು ಕಾರಣವಿದೆ. ಅದೇ ಟಾರ್ಗೆಟ್ ನಿಗದಿ ಎಂಬ ನೀತಿ. ಈ ಬಗ್ಗೆ ಇದೇ ಅಂಕಣದಲ್ಲಿ ಬರೆಯಲಾಗಿತ್ತು.

ಸಾರಾಯಿ ನಿಷೇಧಕ್ಕೆ ಸ್ವಲ್ಪ ಮುಂಚೆಯೇ ಕರ್ನಾಟಕದಲ್ಲಿ ಮಾರಾಟವಾಗುವ ಎಲ್ಲಾ ಮದ್ಯವೂ ಕರ್ನಾಟಕ ರಾಜ್ಯ



ಪಾನೀಯ ನಿಗಮ (ಕೆಎಸ್‌ಬಿಸಿಎಲ್)ದ ಮೂಲಕವೇ ಹೋಗಬೇಕೆಂದು ಸರ್ಕಾರ ತೀರ್ಮಾನಿಸಿತು ಮತ್ತು ಅಂತಹದೊಂದು ಸಂಸ್ಥೆಯನ್ನು ಹುಟ್ಟು ಹಾಕಿತು. ಆ ನಂತರ ಸಾರಾಯಿ ನಿಷೇಧ ಮಾಡಲಾಯಿತು. ಅಲ್ಲಿಂದ ಮುಂದಕ್ಕೆ ಪ್ರತೀ ತಿಂಗಳೂ ಸಹ ಒಂದೊಂದು ಜಿಲ್ಲೆಯಲ್ಲಿ ಎಷ್ಟು ಮದ್ಯವನ್ನು ಮಾರಾಟ ಮಾಡಬೇಕೆಂಬುದರ ಬಗ್ಗೆ ಟಾರ್ಗೆಟ್ ನಿಗದಿ ಪಡಿಸಲಾಯಿತು ಮತ್ತು ಈ ಟಾರ್ಗೆಟ್‌ಅನ್ನು ಪ್ರತೀ ತಿಂಗಳೂ ಏರಿಸಲಾಯಿತು.

ಉದಾಹರಣೆಗೆ 2014ರ ಜನವರಿಯಲ್ಲಿ (ಕೊಪ್ಪಳ ಜಿಲ್ಲೆಯಿಂದ ಲಭ್ಯವಾದ ಮಾಹಿತಿಯಂತೆ) ಐಎಂಎಲ್ ಮದ್ಯದ ಟಾರ್ಗೆಟ್‌ಅನ್ನು 96,550 ಬಾಕ್ಸ್‌ಗಳೆಂದು ನಿಗದಿ ಮಾಡಲಾಯಿತು. ಆ ತಿಂಗಳು 78,210 ಬಾಕ್ಸ್‌ಗಳನ್ನು ಮಾರಾಟ ಮಾಡಲಾಯಿತು; ಫೆಬ್ರವರಿಯಲ್ಲಿ 98,305 ಬಾಕ್ಸ್‌ಗಳೆಂದು ನಿಗದಿ ಪಡಿಸಲಾಗಿದ್ದರೆ, 80,774 ಬಾಕ್ಸ್‌ಗಳನ್ನು ಮಾರಾಟ ಮಾಡಲಾಯಿತು. ಮಾರ್ಚ್‌ನಲ್ಲಿ 1,07,519 ಬಾಕ್ಸ್‌ಗಳ ಟಾರ್ಗೆಟ್ ನಿಗದಿ ಮಾಡಲಾಯಿತು ಮತ್ತು 85,998 ಬಾಕ್ಸ್‌ಗಳನ್ನು ಮಾರಾಟ ಮಾಡಲಾಯಿತು.


ಇಂತಹ ನೀತಿಯನ್ನು ಅನುಸರಿಸುತ್ತಾ ಬಂದಿದ್ದರಿಂದ ಕರ್ನಾಟಕದಲ್ಲಿ ಮದ್ಯ ಮಾರಾಟ ಹೆಚ್ಚಾಗುತ್ತಾ ಬಂದಿತು. ಸಾಮಾನ್ಯವಾಗಿ ಪಂಜಾಬ್ ಹಾಗೂ ಕೇರಳ ರಾಜ್ಯಗಳು ಅತ್ಯಂತ ಹೆಚ್ಚು ಐಎಂಎಲ್ ಮದ್ಯವನ್ನು ಕುಡಿಯುತ್ತಿದ್ದ ರಾಜ್ಯಗಳಾಗಿದ್ದವು. ಕರ್ನಾಟಕಕ್ಕೆ ಅಂತಹ 'ಹೆಸರು' ಇರಲಿಲ್ಲ. ಆದರೆ, 2009-10ರ ಹೊತ್ತಿಗೆ ಕರ್ನಾಟಕವು ದೇಶದಲ್ಲಿ (ಆಂಧ್ರದ ನಂತರ) ಎರಡನೇ ಸ್ಥಾನಕ್ಕೇರಿತು. ಆ ವರ್ಷ ಕರ್ನಾಟಕವು 389.97 ಲಕ್ಷ ಕೇಸ್‌ಗಳಷ್ಟನ್ನೂ, ಕೇರಳವು 187.42 ಲಕ್ಷ ಕೇಸ್‌ಗಳನ್ನೂ, ಪಂಜಾಬ್ ರಾಜ್ಯವು 242 ಲಕ್ಷ ಕೇಸ್‌ಗಳಷ್ಟನ್ನೂ, ಆಂಧ್ರವು 412 ಲಕ್ಷ ಕೇಸ್‌ಗಳಷ್ಟನ್ನೂ ಮಾರಾಟ ಮಾಡಿತ್ತು, 2006-07ರಲ್ಲಿ ಕರ್ನಾಟಕದಲ್ಲಿ ಅದು ಕೇವಲ 153.61 ಲಕ್ಷ ಕೇಸ್‌ಗಳಾಗಿದ್ದವು ಎಂದರೆ ಹೆಚ್ಚಳದ ಪ್ರಮಾಣದ ಅಂದಾಜು ಸಿಗಬಹುದು.

ಅಂದರೆ ಬಹಳ ಪ್ರಜ್ಞಾಪೂರ್ವಕವಾಗಿ, ಜಿಲ್ಲಾವಾರು ಟಾರ್ಗೆಟ್ ನಿಗದಿ ಮಾಡಿ, ಜಿಲ್ಲಾ ಅಬಕಾರಿ ಅಧಿಕಾರಿಗಳ ಮೇಲೆ ಒತ್ತಡ ಹಾಕಿ ಮದ್ಯ ಮಾರಾಟವನ್ನು ಹೆಚ್ಚಿಸಲಾಗುತ್ತದೆ. ಒಂದು ವೇಳೆ ಅವರು ಅಷ್ಟು ಮದ್ಯ ಮಾರಾಟವಾಗಲು 'ಕ್ರಮ' ಕೈಗೊಳ್ಳದಿದ್ದರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಲಾಗುತ್ತದೆ. 'ನಿಮ್ಮ ವ್ಯಾಪ್ತಿಯಲ್ಲಿ ಸೆಕೆಂಡ್ಸ್ ಮದ್ಯ ಮಾರಾಟವಾಗುತ್ತಿರುವುದರಿಂದಲೇ ಹೀಗಾಗುತ್ತಿದೆ' ಎಂದು. ಹಾಗಾಗಿ ಅವರುಗಳು ಇದೇ ರೀತಿಯ ಟಾರ್ಗೆಟ್‌ಅನ್ನು ಬಾರ್/ವೈನ್‌ಸ್ಟೋರ್‌ಗಳಿಗೆ ನಿಗದಿ ಮಾಡುತ್ತಾರೆ. ಅಷ್ಟು ಮಾರಾಟ ಮಾಡಲಾಗದೇ, ಅವರು ಹಳ್ಳಿಯ ಪೆಟ್ಟಿಗೆ ಅಂಗಡಿಗಳಿಂದ ಹಿಡಿದು ಎಲ್ಲರಿಗೂ ಸಾಗಿಸುತ್ತಾರೆ. ಇದು ಒಂದು ಬಹಿರಂಗ ಸತ್ಯ.

ಈ ರೀತಿ ಹೆಚ್ಚಿಸಲಾದ ಮದ್ಯಪಾನವನ್ನು ನಿಯಂತ್ರಿಸಲು 'ಪಾನ ಸಂಯಮ ಮಂಡಳಿ' ಎಂಬ ಸರ್ಕಾರದ ಮಂಡಳಿಯಿಂದ ಸಾಂಕೇತಿಕವಾದ ಕೆಲವು ಕ್ರಮಗಳನ್ನೂ ಸರ್ಕಾರವು ತೆಗೆದುಕೊಳ್ಳುತ್ತದೆ. 'ಹೆಂಡ ಸಾರಾಯಿ ಸಹವಾಸ, ಹೆಂಡತಿ ಮಕ್ಕಳ ಉಪವಾಸ' ಎಂಬ ಜಾಹೀರಾತುಗಳನ್ನು ಅಲ್ಲಲ್ಲಿ ಹಾಕಿಸುವುದು! ತಾವು ಮದ್ಯಪಾನದ ಪರವಿಲ್ಲ ಎಂದು ತೋರಿಸಿಕೊಳ್ಳುವುದು, ಸರ್ಕಾರಗಳಿಗೂ ಅವಶ್ಯ. ಹಾಗಾಗಿ ಇಂತಹ ದ್ವಿಮುಖ ನೀತಿ ಅನುಸರಿಸುತ್ತಾರೆ ಹೀಗಾಗಿಯೇ ಸಾರಾಯಿ ನಿಷೇಧಿಸಿದ ಕುಮಾರಸ್ವಾಮಿ ಸರ್ಕಾರ ಮತ್ತು ಯಡಿಯೂರಪ್ಪ ಹಾಗೂ ಇತರ ಬಿಜೆಪಿ ಮುಖ್ಯಮಂತ್ರಿಗಳು ಇನ್ನೂ ಹೆಚ್ಚು ಮದ್ಯದಂಗಡಿಗಳಿಗೆ ಲೈಸೆನ್ಸ್ ನೀಡಲು ಮುಂದಾಗಲಿಲ್ಲ. 3 ಬಾರಿ ಅಬಕಾರಿ ಇಲಾಖೆ ಈ ಕುರಿತು ಪ್ರಸ್ತಾಪವನ್ನು ಸಲ್ಲಿಸಿದ್ದರೂ, ಅದರತ್ತ ಮನಸ್ಸು ಮಾಡಲಿಲ್ಲ, ಆದರೆ, ತೆರಿಗೆ ಪಾವತಿಸಿ, ಲೈಸೆನ್ಸ್ ಇಲ್ಲದೇ ಹಳ್ಳಿ ಮೂಲೆಗಳಲ್ಲೂ ಮದ್ಯ ಮಾರಾಟ ಆಗುವುದನ್ನು ತಪ್ಪಿಸಲೂ ಹೋಗಲಿಲ್ಲ.

ಮದ್ಯದ ಲಭ್ಯತೆಯು ಸುಗಮವಾದಂತೆಲ್ಲಾ ಕುಡಿತವೂ ಹೆಚ್ಚಾಗುತ್ತಾ ಹೋಗುತ್ತದೆ. ಎಲ್ಲರೂ ಕುಡಿಯುತ್ತಾರಾದರೂ, ಇದರಿಂದ ಹೆಚ್ಚು ತೊಂದರೆಗೊಳಗಾಗುವವರು ಆಯಾ ಪ್ರದೇಶದ ಬಡವರು, ಭೂರಹಿತ ಕೂಲಿ ಕಾರ್ಮಿಕರು, ದಲಿತರು, ಆದಿವಾಸಿಗಳು ಮತ್ತು ಅತೀ ಹಿಂದುಳಿದ ಜಾತಿಗಳಿಗೆ ಸೇರಿದವರು. ಆಯಾ ಕುಟುಂಬಗಳ ಮಹಿಳೆಯರು ಮತ್ತು ಮಕ್ಕಳ ಪಾಡಂತೂ ಹೇಳತೀರದು. ಅಂದರೆ, ಸಾರಾಯಿ ನಿಷೇಧದ ನಂತರ ಈ ಜನರು ಒಂದು ಬಗೆಯ ಕುಡಿತದಿಂದ ಇನ್ನೊಂದು ಬಗೆಯ ಕುಡಿತಕ್ಕೆ ಹೊರಳಿಕೊಂಡಿದ್ದು ಮಾತ್ರವಲ್ಲ, ಹೆಚ್ಚೆಚ್ಚು ಕುಡುಕರಾಗಲೂ ಸರ್ಕಾರದ ನೀತಿ ಕಾರಣವಿದೆ. ಈ ಸಮುದಾಯಗಳ ಏಳಿಗೆಯ ಬಗ್ಗೆ ಸಿದ್ದರಾಮಯ್ಯನವರಿಗೆ ಆಸ್ಥೆಯಿರುವುದೇ ಆದಲ್ಲಿ, ಟಾರ್ಗೆಟ್‌ಅನ್ನು ಪ್ರತೀ ತಿಂಗಳೂ ಇಳಿಸುತ್ತಾ ಬರಬೇಕು. ಯಾವ ಕಾರಣಕ್ಕೂ ಗ್ರಾಮಾಂತರ ಪ್ರದೇಶಗಳಲ್ಲಿ ಹೊಸ ಲೈಸೆನ್ಸ್ ಕೊಡಬಾರದು. ಅದುವೇ ನಿಜವಾದ ಸಾಮಾಜಿಕ ನ್ಯಾಯವಾಗಿರುತ್ತದೆ.

ಆದರೆ ಸಾಮಾಜಿಕ ನ್ಯಾಯದ ಹೊಸ ವರಸೆಯನ್ನು ಸರ್ಕಾರ ಕಂಡುಕೊಂಡಿದೆ. ಹೊಸ ಸರ್ಕಾರ ಬಂದನಂತರ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸದನ ಸಮಿತಿಯ ಅಧ್ಯಕ್ಷರಾದ ಪಿ.ಎಂ.ನರೇಂದ್ರ ಸ್ವಾಮಿ ಸರ್ಕಾರಕ್ಕೆ ಕಳಿಸಿದ್ದ ಶಿಫಾರಸ್ಸನ್ನು ನೆನೆದುಕೊಳ್ಳಬೇಕು. 'ಹೊಸ ಮದ್ಯದಂಗಡಿಗಳ ಲೈಸೆನ್ಸ್‌ಅನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವ್ಯಕ್ತಿಗಳಿಗೆ ನೀಡಬೇಕು. ಬ್ಯಾಕ್‌ಲಾಗ್ ಹುದ್ದೆಗಳಂತೆಯೇ ಇದರಲ್ಲೂ ಸಾಮಾಜಿಕ ನ್ಯಾಯ ಪಾಲಿಸಿಲ್ಲ' ಎಂಬುದು ಅವರ ಶಿಫಾರಸ್ಸಾಗಿತ್ತು. ಇದೀಗ ಅಬಕಾರಿ ಸಚಿವ ಮನೋಹರ ತಹಸೀಲ್ದಾರ್ ಸಹ ಇದನ್ನೇ ಹೇಳಿದ್ದಾರೆ. 'ಹೊಸ ಮದ್ಯದಂಗಡಿಗಳ ಲೈಸೆನ್ಸ್ ನೀಡುವುದರ ಮುಖಾಂತರ ಹಿಂದುಳಿದ ಮತ್ತು ದಲಿತ ಸಮುದಾಯದ ಯುವಕರಿಗೆ



ಉದ್ಯೋಗ ನೀಡಬಹುದು' ಎಂದು ಅವರು ಕಳೆದ ವ... ಬಹಿರಂಗವಾಗಿ ಹೇಳಿಕೆ ನೀಡಿದ್ದಾರೆ. ಕರ್ನಾಟಕ ಅಬಕ... (ಭಾರತೀಯ ಮತ್ತು ವಿದೇಶ ಮದ್ಯ ಮಾರಾಟ) (ತಿದ್ದುಪ... ನಿಯಮ-2013ನ್ನು ತಂದು ಪರಿಶಿಷ್ಟ ಜಾತಿ ಮ... ಪಂಗಡಗಳ ವ್ಯಕ್ತಿಗಳು ಮದ್ಯದಂಗಡಿಗಳ ಲೈಸೆನ್ಸ್‌ಅ... ಪಡೆಯಲು ಇದ್ದ ನಿಯಮಗಳನ್ನು ಸಡಿಲಿಸಲಾಯಿ... ಅಂದರೆ, ಮದ್ಯದಂಗಡಿಗಳ ಲೈಸೆನ್ಸ್ ಕೊಡುವುದ... ನಿರ್ಬಂಧಿಸಿದ್ದರೂ, ಸ್ಟಾರ್ ಹೋಟೆಲ್‌ಗಳು ಹೆಚ್ಚು ಹ... ನೀಡಿ ಮದ್ಯದ ಲೈಸೆನ್ಸ್ ಪಡೆಯಲು ಅವಕಾಶವಿತ... ಅವನ್ನು ಮತ್ತಷ್ಟು ಸಡಿಲಿಕೆಯೊಂದಿಗೆ (10ರಿಂದ ... ಕೊಠಡಿಗಳುಳ್ಳ ಲಾಡ್ಜ್ ಹೊಂದಿರುವ ಎಸ್‌ಸಿ-ಎಸ್... ಪಂಗಡದವರಿಗೆ) ಕೆಲವು ಲೈಸೆನ್ಸ್ ನೀಡಲೂ ಅವಕ... ಮಾಡಿಕೊಳ್ಳಲಾಗಿತ್ತು.

ಸರ್ಕಾರದ ಈ ರೀತಿಯ ಅಹಿಂದ ನೀತಿಯ... ಒಪ್ಪಲು ಸಾಧ್ಯವೇ? ಅಂದರೆ, ಈ ನಾಡಿನ ಅತ್ಯಂತ ದುರ್ಬ... ಸಮುದಾಯಗಳಿಗೆ ಅಧಿಕೃತವಾಗಿ ಮದ್ಯದ ಲಭ್ಯತೆಯ... ಹೆಚ್ಚಿಸಲು, ಅದೇ ದುರ್ಬಲ ಸಮುದಾಯಗಳಿಗೆ ಸೇರಿ... ಸಬಲರಿಗೆ ಲೈಸೆನ್ಸ್ ನೀಡುವುದೇ ಸಾಮಾಜಿಕ ನ್ಯಾಯವೇ... ಸರ್ಕಾರಕ್ಕೆ ಗ್ರಾಮೀಣ ಭಾಗದ ದುರ್ಬಲ ಸಮುದಾಯಗ... ಬಗ್ಗೆ ಕಾಳಜಿಯಿದ್ದುದೇ ಆಗಿದ್ದಲ್ಲಿ, ಟಾರ್ಗೆಟ್ ಇಳಿ... ಹಂತಹಂತವಾಗಿ ಮದ್ಯ ಮಾರಾಟವನ್ನು ಕಡಿ... ಮಾಡುವುದರ ಕಡೆಗೆ ಆಲೋಚಿಸಬೇಕಿತ್ತು. ಆದರೆ, ಅದ... ಉಲ್ಟಾ ಮಾಡುತ್ತಿರುವುದಲ್ಲದೇ, ಅದನ್ನೂ ದುರ್ಬ... ಸಮುದಾಯಗಳ ಕೆಲವರಿಗೆ ಹಣ ಮಾಡಿಕೊಳ್ಳು... ದಾರಿಯನ್ನಾಗಿ ಪರಿವರ್ತಿಸಲಾಗುತ್ತಿದೆ. ಅಂದರೆ ಇದ... ಕೇವಲ ಜಾತಿ ಪ್ರಶ್ನೆಯಲ್ಲ, ದುರ್ಬಲ ಜಾತಿಗಳಲ್ಲೇ ಒ... ಸಣ್ಣ ವಿಭಾಗದ ವರ್ಗ ಸ್ಥಾನಮಾನವನ್ನು ಹೆಚ್ಚಿ... ಆ ಮೂಲಕ ಅವರು ಇಡೀ ದುರ್ಬಲ ಸಮುದಾ... ಪ್ರತಿನಿಧಿಗಳಾಗಿ ತಮ್ಮದೊಂದು ಲಾಬಿ ಗುಂಪ... ಕಟ್ಟಿಕೊಳ್ಳಲು ಅನುವು ಮಾಡಿಕೊಳ್ಳುವುದಷ್ಟೇ ಇದರಿ... ಸಾಧ್ಯ.

ಸಿದ್ದರಾಮಯ್ಯನವರು ಈ ನಾಡಿನ ಎಲ್ಲಾ ಶೋಷಿ... ಸಮುದಾಯಗಳನ್ನು ಸಮಗ್ರವಾಗಿ ಮೇಲೆತ್ತುವ ಕುರಿ... ಯೋಜನೆಗಳ ಕಡೆಗೆ ಆಲೋಚಿಸಲು ತಮ್ಮ ಸಮಯ... ಗಮನ ಹಾಗೂ ಸಾಮರ್ಥ್ಯವನ್ನು ವಿನಿಯೋಗಿಸು... ಅಗತ್ಯವಿದೆ. ■

ಗಲ್ಲು ಶಿಕ್ಷೆಯಾಗಲಿ, ತಿದ್ದುಪಡಿಯಾಗಲಿ ಅತ್ಯಾಚಾರಗಳನ್ನು ತಡೆಯುವುದಿಲ್ಲ



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಸಾಮೂಹಿಕ ಅತ್ಯಾಚಾರಕ್ಕೆ ಗುರಿಯಾಗಿ ತನ್ನ ಪ್ರಾಣವನ್ನೇ ಕಳೆದುಕೊಂಡ ನಿರ್ಭಯಾಳಿಗೆ ಆದದ್ದು ಯಾವ ಯುವತಿಗೂ ಆಗಕೂಡದು. ಆಕೆಯ ಮೇಲಾದ ಬರ್ಬರ ಕ್ರೌರ್ಯ, ಬದುಕು-ಸಾವಿನ ನಡುವೆ ಆಕೆ ಮಾಡಿದ ಹೋರಾಟ, ಕೊನೆಗೂ ತನ್ನ ಮೇಲಾದ ಅಮಾನುಷ ಹಿಂಸೆಗೆ ಆಕೆ ಬಲಿಯಾದದ್ದು... ಎಲ್ಲವೂ ನಮ್ಮ ದೇಶವನ್ನು ಅದೆಷ್ಟು ಅಲ್ಲಾಡಿಸಿತ್ತೆಂದರೆ ಎಲ್ಲೆಡೆ ಪ್ರತಿಭಟನೆಗಳಾದವು. ಮಹಿಳೆಯರು ಮಾತ್ರವಲ್ಲ, ಪುರುಷರೂ ನಿರ್ಭಯಾಳಿಗೆ ನ್ಯಾಯ ಸಿಗಬೇಕೆಂದು ಒತ್ತಡ ತಂದರು. ಇಂತಹ ಪ್ರಕರಣಗಳು ಮುಂದೆ ನಡೆಯಬಾರದೆಂದರೆ ಅತ್ಯಾಚಾರಿಗಳನ್ನು ಗಲ್ಲಿಗೇರಿಸಬೇಕೆಂದೂ, ಅವರ ಅಂಗಾಂಗಗಳನ್ನು ಕತ್ತರಿಸಿ ಹಾಕಬೇಕೆಂದೂ ಕೆಲವರು ವಾದಿಸಿದರು.

ಸಾರ್ವಜನಿಕ ಪ್ರತಿಭಟನೆಗಳು ಜನಸಾಮಾನ್ಯರ ಆಕ್ರೋಶದ ಅಭಿವ್ಯಕ್ತಿ ಆಗಿದ್ದಾಗಲೂ ನಿರ್ಭಯಾ ಪ್ರಕರಣ ಇತರೆ ಚರ್ಚೆಗಳನ್ನೂ ಹುಟ್ಟುಹಾಕಿತ್ತು. ನಮ್ಮ ದೇಶದಲ್ಲಿ ಮಹಿಳೆಯರನ್ನು ಹೇಗೆ ನಡೆಸಿಕೊಳ್ಳುತ್ತೇವೆ, ಅವರಿಗೆ ರಕ್ಷಣೆ ಹೆಚ್ಚಿಸುವುದು ಹೇಗೆ, ಮಹಿಳೆಯರ ಮೇಲಿನ ದಮನಕ್ಕೆ ಮೂಲ ಕಾರಣವಾಗಿರುವ ಪುರುಷಪ್ರಧಾನ ಚಿಂತನೆಯನ್ನು ಬದಲಾಯಿಸುವುದು ಹೇಗೆ ಎಂಬೆಲ್ಲ ಚರ್ಚೆಗಳು ನಡೆದಿದ್ದವು. ಇದೆಲ್ಲದರ ನಡುವೆಯೇ ಅತ್ಯಾಚಾರಿಗಳಿಗೆ ಎಂತಹ ಶಿಕ್ಷೆ ವಿಧಿಸಬೇಕೆಂದು ಕಾನೂನನ್ನು ಬದಲಾಯಿಸಲು ನಿವೃತ್ತ ನ್ಯಾಯಮೂರ್ತಿ ಜೆ.ಎಸ್.ವರ್ಮಾ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನೂ ರಚಿಸಲಾಗಿತ್ತು. ಹಲವರು "ಈ ಅಪರಾಧಕ್ಕೆ ಗಲ್ಲುಶಿಕ್ಷೆ ವಿಧಿಸಿದರೆ ಅದು ಮಹಿಳೆಯರ ಪ್ರಾಣಕ್ಕೆ ಅಪಾಯ ತಂದಿಡುತ್ತದೆ. ಯಾಕೆಂದರೆ, ಅತ್ಯಾಚಾರಿಯು ಮುಂದೆ ಮಹಿಳೆ ತನ್ನ ವಿರುದ್ಧ ಸಾಕ್ಷಿ ನೀಡಬಾರದೆಂದು ಆಕೆಯನ್ನು ಕೊಲ್ಲುತ್ತಾನೆ" ಎಂದು ವಾದಿಸಿದರೂ ನಿರ್ಭಯಾ ಪ್ರಕರಣದಿಂದಾಗಿ ಅದೆಷ್ಟು ಸಾಮಾಜಿಕ ಒತ್ತಡ ಇತ್ತೆಂದರೆ ವರ್ಮಾ ಸಮಿತಿಯು ಅತ್ಯಾಚಾರಿಗಳನ್ನು ಗಲ್ಲಿಗೇರಿಸಬಹುದು ಎಂದು ಸಲಹೆ ನೀಡಿತ್ತು. ಅದರಂತೆ ನಿರ್ಭಯಾಳ ಮೇಲೆ ಅತ್ಯಾಚಾರವೆಸಗಿ ಆಕೆಯ ಸಾವಿಗೆ ಕಾರಣರಾದ ನಾಲ್ವರಿಗೆ ಗಲ್ಲುಶಿಕ್ಷೆಯನ್ನು ವಿಧಿಸಲಾಗಿತ್ತು ಮತ್ತು ಇನ್ನೂ ಹದಿನೆಂಟು ವರ್ಷ ತುಂಬಿರದಿದ್ದ ಒಬ್ಬ 'ಬಾಲಾಪರಾಧಿ'ಗೆ ಬಾಲಾಪರಾಧಿ ನ್ಯಾಯ ಮಸೂದೆಯಡಿ ಮೂರು ವರ್ಷಗಳ ಕಾಲ ಸಜೆಯನ್ನು ನೀಡಲಾಗಿತ್ತು.


ನಿರ್ಭಯಾಳ ಪ್ರಕರಣ ದೇಶದಾದ್ಯಂತ ಆಕ್ರೋಶವನ್ನು ಹೊಮ್ಮಿಸಿದ್ದರೂ, ಅತ್ಯಾಚಾರ ಹೇಯಕೃತ್ಯ ಎಂಬ ಅರಿವನ್ನು ಮೂಡಿಸಿದ್ದರೂ, ಅಂತಹ ಅಪರಾಧಕ್ಕೆ ಗಲ್ಲಿಗೂ ಏರಬಹುದು ಎಂಬುದೂ ಗೊತ್ತಾಗಿದ್ದರೂ ದೇಶದಲ್ಲಿ ಅತ್ಯಾಚಾರ ಪ್ರಕರಣಗಳೇನು ಕಡಿಮೆ ಆಗಿಲ್ಲ. ಬದಲಾಗಿ ನ್ಯಾಷನಲ್ ಕ್ರೈಮ್ ಬ್ಯೂರೋದ ಅಂಕಿಅಂಶಗಳ ಪ್ರಕಾರ ಅತ್ಯಾಚಾರ ಪ್ರಕರಣಗಳು ಹೆಚ್ಚಾಗುತ್ತಿವೆ. ಹಾಗೆಯೇ ಕೇಂದ್ರ ಸರ್ಕಾರವೇ ಸಂಸತ್ತಿನಲ್ಲಿ ಇತ್ತೀಚೆಗೆ ಹೇಳಿರುವಂತೆ ಯಾವ ರಾಜಧಾನಿಯಲ್ಲಿ ನಿರ್ಭಯ ಬಲಿಯಾಗಿದ್ದಳೋ ಅದೇ ದೆಹಲಿಯಲ್ಲಿ ಈ ವರ್ಷ ಅಕ್ಟೋಬರ್ ತನಕ 824 ಅಪ್ರಾಪ್ತ ಬಾಲಕಿಯರ ಮೇಲೆ ಅತ್ಯಾಚಾರ ನಡೆದಿದೆ.

ಈಗ ನಿರ್ಭಯಾ ಪ್ರಕರಣ ಮತ್ತೊಂದು ಮಸೂದೆ ಅಂಗೀಕರಣಗೊಳ್ಳಲು ಕಾರಣವಾಗಿದೆ. ಮೊನ್ನೆ ನಿರ್ಭಯಾ ಪ್ರಕರಣದಲ್ಲಿ ಮೂರು ವರ್ಷ ಸಜೆಗೆ ಗುರಿಯಾಗಿದ್ದ ಬಾಲಾಪರಾಧಿ ಬಿಡುಗಡೆ ಪಡೆದಿದ್ದಾನೆ. ಕಳೆದ ಕೆಲವು ದಿನಗಳಿಂದ ಆತನ ಬಿಡುಗಡೆಯನ್ನು ವಿರೋಧಿಸಿ ಪ್ರತಿಭಟನೆಗಳು ನಡೆದಿದ್ದವು. ಈಗ ಆತನಿಗೆ 21 ವರ್ಷ ವಯಸ್ಸಾಗಿರುವುದರಿಂದ ಆತನನ್ನು ಇನ್ನು ಹೆಚ್ಚುಕಾಲ ಬಂಧನದಲ್ಲಿರಿಸಬೇಕೆಂದು ಕೆಲವರು ನ್ಯಾಯಾಲಯದ ಮೊರೆ ಹೋಗಿದ್ದರು. ನಿರ್ಭಯಾಳ ಮೇಲೆ ದೈಹಿಕ ದಾಳಿ ನಡೆಸಿದವರಲ್ಲಿ ಆಗ 'ಬಾಲಕ'ನಾಗಿದ್ದ ಈತ ಹೆಚ್ಚು ಕ್ರೂರಿ ಆಗಿದ್ದ ಎಂದೂ, ಈತ ಸಜೆಯಲ್ಲಿದ್ದಾಗ ಕಾಶ್ಮೀರದ ಮುಸಲ್ಮಾನನೊಬ್ಬನ ಸ್ನೇಹದಿಂದಾಗಿ ಈಗ 'ಉಗ್ರ'ನಾಗಿದ್ದಾನೆ ಎಂದೂ ಅವರು ನ್ಯಾಯಾಲಯದ ಮುಂದೆ ಆರೋಪಿಸಿದ್ದರು. ಆದರೆ ಅತ್ಯಾಚಾರಿಗಳಲ್ಲಿ ಈತನೇ ಹೆಚ್ಚು ಕ್ರೂರಿ ಆಗಿದ್ದ ಎಂಬುದಕ್ಕೆ ಯಾವ ಸಾಕ್ಷಿಯೂ ಇರಲಿಲ್ಲ ಮತ್ತು ಈತ ಈಗ 'ಉಗ್ರ'ನಾಗಿ ಪರಿವರ್ತನೆಗೊಂಡಿದ್ದಾನೆಂಬುದಕ್ಕೂ ಯಾವುದೇ ಆಧಾರಗಳಿರಲಿಲ್ಲ (ವಾಸ್ತವವಾಗಿ ಇವೆರಡೂ ಮಾಧ್ಯಮಗಳ ಸೃಷ್ಟಿ ಎಂಬುದು ಹೆಚ್ಚು ಜನರಿಗೆ ಗೊತ್ತಿಲ್ಲ). ಇದಲ್ಲದೆ ಕಾನೂನಿನಲ್ಲಿ ಆತನ ಬಂಧನವನ್ನು ಮುಂದುವರೆಸುವುದಕ್ಕೆ ಅವಕಾಶ ಇಲ್ಲದ ಕಾರಣ ಅವರ ಮೊರೆಯನ್ನು ನ್ಯಾಯಾಲಯ ತಿರಸ್ಕರಿಸಿ ಆತನನ್ನು ಬಿಡುಗಡೆ ಮಾಡಿತು.

ನಿರ್ಭಯಾ ಪ್ರಕರಣವನ್ನೇ ಆಧಾರವಾಗಿಟ್ಟುಕೊಂಡು ಮೂರು ವರ್ಷಗಳ ಹಿಂದೆ ಹೇಗೆ ಅತ್ಯಾಚಾರಿಗಳನ್ನು ಗಲ್ಲಿಗೇರಿಸಬೇಕೆಂದು ಜನ ಒತ್ತಡ ತಂದಿದ್ದರೋ ಹಾಗೆಯೇ ಈಗಲೂ ಈ ಯುವಕನನ್ನೇ ಕಾರಣವಾಗಿಟ್ಟುಕೊಂಡು ಬಾಲಾಪರಾಧಿ ನ್ಯಾಯ ಮಸೂದೆಯನ್ನೇ ತಿದ್ದುಪಡಿ ಮಾಡಬೇಕೆಂದು ಜನ ಒತ್ತಡ ತಂದರು. ಅದಕ್ಕೆ ಮಣಿದ ರಾಜ್ಯಸಭೆ ನಿನ್ನೆ ಮಸೂದೆಯನ್ನು ಅಂಗೀಕರಿಸಿದೆ. ಈ ತಿದ್ದುಪಡಿಯಿಂದಾಗಿ ಇನ್ನು ಮುಂದೆ ಹೀನಕೃತ್ಯದಲ್ಲಿ ಭಾಗಿಯಾದ 16 ರಿಂದ 18 ವರ್ಷದೊಳಗಿನ ಮಕ್ಕಳನ್ನೂ ವಯಸ್ಕರೆಂದು ಪರಿಗಣಿಸಿ ವಿಚಾರಣೆ ನಡೆಸಲಾಗುತ್ತದೆ. ಇದು ನಿಜವಾಗಲೂ ಸರಿಯಾದ ಕ್ರಮವೇ? ಇದು ಅತ್ಯಾಚಾರಗಳನ್ನು ತಡೆಯುತ್ತದೆಯೇ? ಇದರಿಂದಾಗಿ ಬಾಲಕರು ಹೀನಕೃತ್ಯಗಳಲ್ಲಿ ಭಾಗಿಯಾಗದಂತೆ ಎಚ್ಚರ ವಹಿಸುತ್ತಾರೆಯೇ? ಈಗಿನ ತಿದ್ದುಪಡಿಗಳಿಂದಾಗಿ ಜೈಲು ಸೇರುವ 'ಬಾಲಕರು' ಯಾವ ರೀತಿಯಲ್ಲಿ ಬದಲಾಗುತ್ತಾರೆ? ಇಂತಹ ಎಲ್ಲ ಪ್ರಶ್ನೆಗಳನ್ನು ಸಂಸತ್ತು ಬದಿಗೊತ್ತಿ ತಿದ್ದುಪಡಿಗಳನ್ನು ಅಂಗೀಕರಿಸಿರುವುದು ಅಪಾಯಕಾರಿ ಹೆಜ್ಜೆ ಆಗಿದೆ ಎನಿಸುತ್ತದೆ.



ನಿಜ, ಅತ್ಯಾಚಾರಿಗಳಿಗೆ ಶಿಕ್ಷೆ ಆಗಬೇಕು, ನಿರ್ಭಯಾಳಂಥವರಿಗೆ ನ್ಯಾಯ ಸಿಗಬೇಕು. ಆ ನಿಟ್ಟಿನಲ್ಲಿ ನೋಡಿದರೆ "ಅತ್ಯಾಚಾರವೆಸಗುವಷ್ಟು ವಯಸ್ಕನಾಗಿದ್ದರೆ ಗಲ್ಲಿಗೇರಲೂ ನೀನು ವಯಸ್ಕ" ಎಂದು ಬೊಬ್ಬೆಹೊಡೆದವರ ವಾದ ಸರಿ ಅನ್ನಿಸುತ್ತದೆ. ಆದರೆ ಕಾನೂನನ್ನು ಇಂತಹ ಬೊಬ್ಬೆಗಳ ಒತ್ತಡಕ್ಕೆ ಬದಲಾಯಿಸುವುದು ಎಷ್ಟು ಸರಿ? ಸಾಮಾಜಿಕ ಒತ್ತಡವೇ ಕಾನೂನಾಗುವ ಅಪಾಯಕ್ಕೆ ಇದು ದಾರಿ ಮಾಡಿಕೊಡುವುದಿಲ್ಲವೇ? ಒಂದು ಪ್ರಕರಣದ ಬೊಬ್ಬೆಯನ್ನೇ ಆಧಾರವಾಗಿಟ್ಟುಕೊಂಡು ಇಡೀ ದೇಶಕ್ಕೆ ಕಾನೂನು ರೂಪಿಸುವುದು ಸೂಕ್ತವೇ? ಇವೆಲ್ಲ ಯೋಚಿಸತಕ್ಕ ವಿಷಯಗಳಾಗಿವೆ.



ಮುಖ್ಯವಾಗಿ, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾದ ಮಾಜಿ ನಿರ್ದೇಶಕರಾದ ಜಿ.ಮೋಹನ್ ಗೋಪಾಲ್ ಅವರು ಇಂಡಿಯನ್ ಎಕ್ಸಪ್ರೆಸ್‌ಗೆ ಬರೆದ ಒಂದು ಲೇಖನದಲ್ಲಿ ಹೇಳಿರುವಂತೆ ನ್ಯಾಯವನ್ನು ಹಗೆತನದೊಂದಿಗೆ ಸಮೀಕರಿಸುವುದು ಘೋರ ತಪ್ಪಾಗುತ್ತದೆ. "ಬುದ್ಧನ ಕಾಲದಿಂದ ನ್ಯಾಯದ ಪರಿಕಲ್ಪನೆಯಲ್ಲಿ ಹಗೆಗೆ ಜಾಗವಿಲ್ಲ, ಮಹಾತ್ಮ ಗಾಂಧೀಜಿ ಕೂಡ ಕಣ್ಣಿಗೆ ಕಣ್ಣು ನೀತಿಯಿಂದಾಗಿ ಇಡೀ ಜಗತ್ತೇ ಕುರುಡಾಗುತ್ತದೆ ಎಂದಿದ್ದರು ಎಂಬುದನ್ನು ಮರೆಯದಿರೋಣ. ಈಗಿರುವ ಬಾಲಾಪರಾಧ ಕಾನೂನು ವ್ಯವಸ್ಥೆಯು ನಮ್ಮ ಬಾಲಕರಿಗೆ ತಮ್ಮ ತಪ್ಪನ್ನು ಅರಿತು, ಸುಧಾರಣೆಗೆ ಗುರಿಯಾಗಿ ತಮ್ಮ ಬದುಕನ್ನು ಬದಲಾಯಿಸಿಕೊಳ್ಳಲು ಸಣ್ಣ ಅವಕಾಶವನ್ನಾದರೂ ಕಲ್ಪಿಸುತ್ತದೆ. ಆದರೆ ಅವರನ್ನೂ ವಯಸ್ಕರೊಂದಿಗೆ ಶಿಕ್ಷಿಸಿದರೆ ನಾವು ನ್ಯಾಯದ ಬದಲು ಹಗೆಗೆ ಪ್ರಾಮುಖ್ಯತೆ ಕೊಟ್ಟಂತಾಗುತ್ತದೆ" ಎಂದಿದ್ದಾರೆ.

ಮುಂದುವರೆದು "ನಮ್ಮ ಸಂಸದರು ಯಾಕೆ ಈ ತಿದ್ದುಪಡಿಗಳಿಗೆ ತಮ್ಮ ಸಮ್ಮತವನ್ನು ಸೂಚಿಸುತ್ತಿದ್ದಾರೆ? ಯಾಕೆಂದರೆ ಈ ತಿದ್ದುಪಡಿಗಳಿಗೆ ಒತ್ತಾಯಿಸುತ್ತಿರುವವರು ಭಾರತದ ಸಕಲ ಸವಲತ್ತುಗಳನ್ನು ಹೊಂದಿರುವ ಮೇಲು ವರ್ಗದ, ಮಧ್ಯಮ ವರ್ಗದ ಜನ. ನಾಳೆ ತಾವೂ ಇಂತಹ ಕೃತ್ಯಗಳಿಗೆ ತುತ್ತಾಗಬಾರದು ಎಂಬ ಆತಂಕ ಅವರು ಈ ಒತ್ತಡವನ್ನು ಹೇರುವಂತೆ ಮಾಡುತ್ತಿದೆ. ಕಲಿಕೆ ಇಲ್ಲದ ಈ ವರ್ಗದ ಜನರ ದೃಷ್ಟಿಯಲ್ಲಿ 16-18ರ ವಯಸ್ಸಿನವರು ಅಪರಾಧವೆಸಗಿದರೆ ಅವರಿಗೆ ತೀವ್ರವಾದ ದೈಹಿಕ ನೋವು ಮತ್ತು ಮಾನಸಿಕ ಹಿಂಸೆ ಕೊಟ್ಟರೆ ಮಾತ್ರ ಅತ್ಯಾಚಾರದಂತ ಅಕ್ರಮಗಳನ್ನು ನಿರೋಧಿಸಬಹುದು. ಅದು ವಾಸ್ತವವಾಗಿದ್ದರೆ ಇವತ್ತು ಚೀನಾ, ಅಮೆರಿಕ ಮತ್ತು ಸೌದಿ ಅರೇಬಿಯಾದಂತಹ ದೇಶಗಳು ಸಂಪೂರ್ಣವಾಗಿ ಅಪರಾಧ ಮುಕ್ತ ರಾಷ್ಟ್ರಗಳಾಗಿರುತ್ತಿದ್ದವು. ನಿರ್ಭಯಾ ಪ್ರಕರಣದ ನಂತರ ಅತ್ಯಾಚಾರಿಗಳಿಗೆ ಗಲ್ಲು ಶಿಕ್ಷೆಯನ್ನು ನೀಡಲಾಗುವುದು ಎಂದು ನಿರ್ಧರಿಸಿದ ನಂತರ ಭಾರತದಲ್ಲಿ ಅತ್ಯಾಚಾರಗಳು ನಿಲ್ಲಬೇಕಿತ್ತು" ಎಂದು ಹೇಳುವ ಮೂಲಕ ಅವರು ಇಂತಹ ತಿದ್ದುಪಡಿಗಳಿಂದ ನಮ್ಮ ಸಮಾಜಕ್ಕಾಗಲಿ, ನಮ್ಮ ಬಾಲಕರಿಗಾಗಲಿ ಒಳ್ಳೆಯದಾಗುವುದಿಲ್ಲ ಎಂದು ಎಚ್ಚರಿಸಿದ್ದಾರೆ.


ಬಾಲಾಪರಾಧ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಸೂದೆಯಲ್ಲಿ ಈಗ ಮಾಡಲಾಗಿರುವ ತಿದ್ದುಪಡಿಗಳಿಂದಾಗಿ, ಇನ್ನು ಮುಂದೆ ಹೀನ ಅಪರಾಧ ಎಸಗಿ ವಯಸ್ಕರಂತೆ ಶಿಕ್ಷೆಗೆ ಗುರಿಯಾಗುವ 16-18 ವರ್ಷದ ಮಕ್ಕಳನ್ನು ವಯಸ್ಕರ ಜೈಲುಗಳಲ್ಲಿ ಇಡಲಾಗುತ್ತದೆ. ಒಂದು ಅಂದಾಜಿನ ಪ್ರಕಾರ ಪ್ರತಿ ವರ್ಷ ಸುಮಾರು ಹತ್ತು ಸಾವಿರ ಮಕ್ಕಳು ವಿಚಾರಣಾಧೀನ ಕೈದಿಗಳಾಗಿಯೋ, ಶಿಕ್ಷೆಗೆ ಗುರಿಯಾಗಿಯೋ ವಯಸ್ಕರ ಜೈಲುಗಳನ್ನು ಸೇರುತ್ತಾರೆ. ನಮ್ಮ ಸರ್ಕಾರಗಳು ಜೈಲುಗಳು ಶಿಕ್ಷಾಕೇಂದ್ರಗಳಲ್ಲ, ಬದಲಾಗಿ ಪರಿವರ್ತನೆ ತರುವ ತಾಣಗಳು ಎಂದು ಹೇಳುತ್ತವಾದರೂ, ನಿಜವಾಗಲೂ ಜೈಲುಗಳು ಎಂತಹ ಸ್ಥಳಗಳು ಎಂಬುದು ಅವುಗಳನ್ನು ಕಂಡವರಿಗೆ ಗೊತ್ತು. ನಮ್ಮ ಜೈಲುಗಳು ಒಂದು ರೀತಿಯಲ್ಲಿ ಕ್ರಿಮಿನಲ್‌ಗಳನ್ನು ಸೃಷ್ಟಿಸುವ ತಾಣಗಳಾಗಿವೆ. ನಮ್ಮ ಜೈಲುಗಳಲ್ಲಿ ಹೆಚ್ಚಾಗಿ ಅಮಾಯಕ ಬಡವರು ಜಾಮೀನು ಕೊಡಲಾಗದೆ ಕಂಬಿ ಎಣಿಸುತ್ತಿರುವುದು ನಿಜವಾದರೂ, ಅಲ್ಲಿ ಕಳ್ಳಕಾಕರು, ಕೊಲೆಗಡುಕರು, ಭೂಗತ ಜಗತ್ತಿನವರೂ ಇರುವುದು ಸುಳ್ಳಲ್ಲ. ಅದೆಷ್ಟೋ ಜನ ಜೈಲಿನಲ್ಲಿ ಸುಧಾರಣೆಗೊಳ್ಳದೆ ಕಳ್ಳರಿಂದ ತರಬೇತಿ ಪಡೆಯುತ್ತಾರೆ. ಬಲಹೀನರು ಇತರೆ ಪುರುಷ ಕೈದಿಗಳ ದೈಹಿಕ ವಾಂಛೆಗೂ ಬಲಿಯಾಗುತ್ತಾರೆ. ಬಹಳಷ್ಟು ಜನ ಜೈಲಿನಲ್ಲಿರುವ ಬಲಾಢ್ಯರ ಸೇವಕರಾಗುತ್ತಾರೆ. ಇದು ವಾಸ್ತವ. ಇಂತಹ ಜಗತ್ತಿಗೆ 16-18 ವರ್ಷ ಪ್ರಾಯದ ಬಾಲಕರು ಹೋದರೆ ಅವರಿಗೆ ಇನ್ನೆಂತಹ ಅಪಾಯ ಕಾದಿದೆ ಎಂದು ಯೋಚಿಸಿದರೆ ಗಾಬರಿ ಹುಟ್ಟಿಸುತ್ತದೆ. ಅಂತಹ ಲೋಕದಲ್ಲಿ ಬಾಲಕರು ಪರಿವರ್ತನೆಗೊಂಡು ಮುಂದೊಮ್ಮೆ ಸಮಾಜದ ಮುಖ್ಯವಾಹಿನಿಯಲ್ಲಿ ಸೂಕ್ತ ಪ್ರಜೆಗಳಾಗುವ ಬದಲು ಅವರು ಸಮಾಜಕ್ಕೆ ಕಂಟಕವಾಗುವ ಅಪಾಯವೇ ಹೆಚ್ಚಾಗುತ್ತದೆ. ಈ ಎಲ್ಲ ಕಾರಣಗಳಿಗಾಗಿ, ಈಗ ಬಾಲಾಪರಾಧಿ ನ್ಯಾಯ ಮಸೂದೆಯಲ್ಲಿ ತರಲಾಗಿರುವ ತಿದ್ದುಪಡಿಗಳಿಂದಾಗಿ ಮಹಿಳೆಯರ ರಕ್ಷಣೆಯೂ ಸಾಧ್ಯವಾಗುವುದಿಲ್ಲ, ನ್ಯಾಯವೂ ಸಿಗುವುದಿಲ್ಲ. ಅಪರಾಧ ಎಸಗುವ ಮಕ್ಕಳು ಸುಧಾರಣೆಗೊಳ್ಳುವ ಬದಲು ಪಾತಕಿಗಳಾಗಿ ರೂಪಾಂತರಗೊಳ್ಳುತ್ತಾರೆ ಎಂದೇ ಹೇಳಬಹುದು.

ಅಂದಹಾಗೆ, ಈಗ 16-18 ನಡುವಿನ ಬಾಲಕರನ್ನೂ ವಯಸ್ಕರಂತೆ ಪರಿಗಣಿಸುವುದಾಗಿ ಮಸೂದೆ ಹೇಳುತ್ತದೆ. ನಾಳೆ ಆಕಸ್ಮಾತ್ 14 ಅಥವಾ 15 ವರ್ಷದ ಬಾಲಕನೊಬ್ಬ ಹೀನಕೃತ್ಯದಲ್ಲಿ ಭಾಗಿಯಾದರೆ ಏನು ಮಾಡುವುದು? ಅವನನ್ನೂ ಈ ಮಸೂದೆ ಅಡಿ ತರಲು ಮತ್ತೊಮ್ಮೆ ಸಂಸತ್ತು ತಿದ್ದುಪಡಿ ತರುತ್ತದೆಯೇ? ಯಾವ ವೈಜ್ಞಾನಿಕ ಸಂಶೋಧನೆಯ ಮೇಲೆ 16 ವಯಸ್ಸಿನ ಬಾಲಕರನ್ನು ವಯಸ್ಕರಿಗೆ ಸಮನಾಗಿ ಪರಿಗಣಿಸಲು ನಿರ್ಧರಿಸಲಾಗಿದೆ? ಈ ಹಿಂದೆ ಬಾಲಕಿಯರು 14-15 ವಯಸ್ಸಿಗೆ ಮೈನೆರೆಯುತ್ತಿದ್ದರು. ಈಗ 11-12 ವಯಸ್ಸಿಗೆ ಮೈನೆರೆಯುತ್ತಿದ್ದಾರೆ. ಹಾಗೆಯೇ ಬಾಲಕರೂ ಹಿಂದಿಗಿಂತ ಈಗ ಬೇಗನೆ ದೈಹಿಕವಾಗಿ ಬೆಳೆಯುತ್ತಿದ್ದಾರೆ. ಆದರೆ ದೈಹಿಕ ಬೆಳವಣಿಗೆಯನ್ನು ಮಾನಸಿಕ ಪರಿಪಕ್ವತೆಯೊಂದಿಗೆ ಸಮೀಕರಿಸುವುದು ಸರಿಯೇ? ಇದನ್ನೆಲ್ಲ ಯೋಚಿಸಿದ್ದಾರೆಯೇ ತಿದ್ದುಪಡಿಗೆ ಒತ್ತಾಯಿಸಿದ ಜನ ಮತ್ತು ಆ ಒತ್ತಡಕ್ಕೆ ಮಣಿದ ಸಂಸದರು?

ಗಲ್ಲುಶಿಕ್ಷೆಯ ಬೆದರಿಕೆ ಅತ್ಯಾಚಾರಗಳನ್ನು ತಡೆಯುವುದಿಲ್ಲ; ಬಾಲಾಪರಾಧ ಮಸೂದೆ ತಿದ್ದುಪಡಿಯು ಮಕ್ಕಳಲ್ಲಿ ಜಾಗ್ರತೆಯನ್ನು ಮೂಡಿಸುವುದಿಲ್ಲ. ನಿಜವಾಗಲೂ ಅತ್ಯಾಚಾರವನ್ನು ನಿಲ್ಲಿಸಬೇಕೆಂದರೆ ನಾವು ಮಹಿಳೆಯರನ್ನು ಹೇಗೆ ಪರಿಗಣಿಸುತ್ತೇವೆ ಎಂಬ ಮನೋಭಾವವೇ ಬದಲಾಗಬೇಕಿದೆ. ಎಲ್ಲಿಯತನಕ ಹೆಣ್ಣುಮಕ್ಕಳನ್ನು ತುಚ್ಛರಂತೆ, ಮಹಿಳೆಯರನ್ನು ಕಾಮುಕ ವಸ್ತುಗಳಂತೆ, ಹೆಂಗಸರನ್ನು ಎರಡನೆ ದರ್ಜೆಯ ಪ್ರಜೆಗಳಂತೆ ನೋಡುವ ದೃಷ್ಟಿಕೋನ ಬದಲಾಗುವುದಿಲ್ಲವೋ ಅಲ್ಲಿಯತನಕ ಮಹಿಳೆಯರ ಮೇಲಿನ ದಮನ, ಶೋಷಣೆ, ಅತ್ಯಾಚಾರದಂತಹ ಅನ್ಯಾಯಗಳು ನಿಲ್ಲುವುದಿಲ್ಲ. ಇದು ವಾಸ್ತವ. ಮಹಿಳಾ ವಿರೋಧಿ ಮನೋಭಾವವನ್ನು ಬದಲಾಯಿಸದೇ ಹೊಸ ಕಾನೂನುಗಳಿಂದಾಗಿ, ತಿದ್ದುಪಡಿಗಳಿಂದಾಗಿ ಯಾವ ಬದಲಾವಣೆಯೂ ಸಾಧ್ಯವಿಲ್ಲ. ■

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ದಕ್ಷಿಣ ಕನ್ನಡ-ಉಡುಪಿ: ಆಸ್ಕರ್ ಆಣತಿ ಸುತ್ತ ಕಾಂಗ್ರೆಸ್ಸಿಗರ ಪರಿಷತ್ ಫೈಟಿಂಗ್!!


ಆಸ್ಕರ್ ಫರ್ನಾಂಡಿಸ್

ದಕ್ಷಿಣ ಕನ್ನಡ-ಉಡುಪಿ ದ್ವಿಸದಸ್ಯ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆ ಚಿತ್ರ-ವಿಚಿತ್ರ ಕದನ ಕುತೂಹಲ ಕೆರಳಿಸಿಬಿಟ್ಟಿದೆ! ಎಐಸಿಸಿ ಮಾಂಡಲೀಕ ಆಸ್ಕರ್ ಫರ್ನಾಂಡಿಸ್‌ರ 'ಹೆಡ್ಡ' ಮಾಸ್ತರಿಕೆ ವಿರುದ್ಧ ಇಬ್ಬಬ್ಬರು ಕಾಂಗ್ರೆಸಿಗರು ಬಂಡಾಯವೆದ್ದಿರುವುದು ಅವಿರೋಧದ ಯುದ್ಧಾಂಗಣಕ್ಕೆ ಜಿದ್ದಾಜಿದ್ದಿನ ಖದರು ತಂದಿದೆ!! ಉಡುಪಿ ಜಿಲ್ಲೆಯಲ್ಲಿ ಒಂದಿಷ್ಟು ಬೇರುಗಳನ್ನು ಇಳಿಸಿರುವ ಮಾಜಿ ಮಂತ್ರಿ ಜಯಪ್ರಕಾಶ್ ಹೆಗ್ಡೆ ಹಾಗು ಮಧ್ಯ ದಕ್ಷಿಣ ಕನ್ನಡದ ಬಿಲ್ಲವರ ಪರಿಚಿತನಾದ ಹರಿಕೃಷ್ಣ ಬಂಟ್ವಾಳ್ ಅಧಿಕೃತ ಕಾಂಗ್ರೆಸ್ ಕ್ಯಾಂಡಿಡೇಟ್ ವಿರುದ್ಧ ತೊಡೆ ತಟ್ಟುತ್ತಿದ್ದಂತೆಯೇ ಬಿಜೆಪಿ ಭೂಪರು ಬೆಚ್ಚಿಬಿದ್ದರು.


ಈ ಕಾಂಗ್ರೆಸ್ ರೆಬೆಲ್‌ಗಳ ರಗಳೆ ಜೋರಾದರೆ ತಮ್ಮ ಅಧಿಕೃತ ಕ್ಯಾಂಡಿಡೇಟ್ 'ಹಾಪ' ಇಮೇಜಿನ ಕೋಟ ಶ್ರೀನಿವಾಸ್ ಪೂಜಾರಿ ಲಗಾಟಿ ಹೊಡೆಯುವ ಪರಿಸ್ಥಿತಿ ಬರಬಹುದೆಂಬ ಭಯದಿಂದ ಸಂಘ ಪರಿವಾರದಲ್ಲಿ ಪರಿತಾಪ ಶುರುವಿಟ್ಟುಕೊಂಡಿತ್ತು. ಆದರೆ ಯಾವಾಗ ಖುದ್ದು ಆಸ್ಕರ್ ಫರ್ನಾಂಡಿಸರೇ ಕಾಂಗ್ರೆಸ್ ಅಭ್ಯರ್ಥಿಯೂ ತನ್ನ ಪುರಾತನ ಕಾಲದ ಕಷ್ಟ-ಸುಖದ ಸಖನೂ ಆಗಿರುವ ಪ್ರತಾಪ್ ಚಂದ್ರಶೆಟ್ಟಿಯನ್ನು ಗೆಲ್ಲಿಸಿಕೊಳ್ಳುವ ಅನಿವಾರ್ಯತೆಗೆ ಬಿದ್ದು ಸ್ವಪಕ್ಷದ ಆರು ಶಾಸಕರು-ನಾಲ್ಕು ಮಂತ್ರಿಗಳಿಗೆ ಕ್ಲಾಸು ತೆಗೆದುಕೊಳ್ಳಲು ಆರಂಭಿಸಿದರೋ ಆಗ ಚಡ್ಡಿಗಳು ದೊಡ್ಡ ನಿಟ್ಟುಸಿರು ಬಿಟ್ಟರು.

ಬಂಡಾಯ ಅಭ್ಯರ್ಥಿಗಳಿಗೆ ಎಲ್ಲಿ ಜಾಸ್ತಿ ಮತ ಸಿಗುತ್ತದೋ ಅಲ್ಲಿಯ ಮಂತ್ರಿ-ಶಾಸಕನಿಗೆ ಕರಿ ನೀರಿನ ಶಿಕ್ಷೆ ಖಂಡಿತ ಎಂಬ ಕಟ್ಟಪ್ಪಣೆ ಹೊರಡಿಸಿದ್ದಾರೆ. ಎಐಸಿಸಿಯಲ್ಲಿ ಶಕ್ತಿಶಾಲಿಯಾಗಿರುವ ಆಸ್ಕರ್‌ರ ಈ ಅಶರೀರವಾಣಿ ಕೇಳಿದ್ದೇ ತಡ, ಕಾಂಗ್ರೆಸ್‌ನ ಅಷ್ಟೂ ಶಾಸಕ-ಮಂತ್ರಿಗಳು ತಡಬಡಾಯಿಸಿ ಸಮರ ಶುರು ಮಾಡಿದ್ದಾರೆ. ಕಾಂಗ್ರೆಸ್‌ನ 'ವೇಸ್ಟ್ ಬಾಡಿ' ಎಂದೇ ಕಾರ್ಯಕರ್ತರಿಂದ ಬಿರುದು ಪಡೆದಿರುವ ಪ್ರತಾಪ್‌ಚಂದ್ರ ಶೆಟ್ಟಿ ಬಗೆಗಿನ ಬೇಸರ-ತಾತ್ಸಾರ ಎಲ್ಲ ಮರೆತು ಮಂತ್ರಿ-ಶಾಸಕರೀಗ ಆತನ ಗೆಲುವಿಗೆ ಗುದುಮುರಿಗೆ ನಡೆಸಿದ್ದಾರೆ. ಅಲ್ಲಿಗೆ ಬಿಜೆಪಿಯವರಿಗೆ ತಮ್ಮದೊಂದು ಸ್ಥಾನ ಸಲೀಸಾಗಿ ಗೆಲ್ಲುವ ಧೈರ್ಯ ಬಂದುಬಿಟ್ಟಿದೆ. ಕಾಂಗ್ರೆಸ್‌ನಲ್ಲಿ ಮಾತ್ರ ದಿನಕ್ಕೊಂದು ಕಂಪನ-ಕಲ್ಲೋಲ ಏಳುತ್ತಲೇ ಇದೆ....

ಕರಾವಳಿಯಲ್ಲಿ ಕಾಂಗ್ರೆಸನ್ನು ಪೊಕ್ಕು ಪಾರ್ಟಿ ಮಾಡಿದ ಕೀರ್ತಿ ಆಸ್ಕರ್ ಫರ್ನಾಂಡಿಸ್‌ರದು. ಜನಾರ್ದನ ಪೂಜಾರಿ ಇಂದಿರಾ ಗಾಂಧಿಗೆ ಹತ್ತಿರವಾಗಿದ್ದರೆ, ಆಸ್ಕರ್ ಪ್ರವರ್ಧಮಾನಕ್ಕೆ ಬಂದಿದ್ದು ರಾಜೀವ್ ಯುಗದಲ್ಲಿ. ಸೋನಿಯಾ ಪರಿವಾರಕ್ಕಂತೂ ಆಸ್ಕರಣ್ಣ ಅಚ್ಚುಮೆಚ್ಚಿನ ನಿಷ್ಠಾವಂತ ಬಂಟ. ಹೀಗಾಗಿ ದಕ್ಷಿಣ ಕರಾವಳಿ ಕಾಂಗ್ರೆಸ್‌ನಲ್ಲಿ ಕೆಲವು ದಶಕದಿಂದ ಆಸ್ಕರಣ್ಣ ತೀರ್ಮಾನವೇ ಕೊನೆಯದು. ಇಂತಿಪ್ಪ ಆಸ್ಕರ್‌ರ ಯೋಚನಾ ಲಹರಿ ಮಾತ್ರ ನಿಗೂಢ. ನಾಯಕತ್ವ ಗುಣ ರಾಹುಗನ್ನಡಿ ಹಿಡಿದು ಹುಡುಕಿದರೂ ಆತನಲ್ಲಿ ಸಿಗದು; ಸಂಘಟನೆಯ ಗಂಧವಂತೂ ಕೇಳಲೇ ಬಾರದು. ಕರಾವಳಿ ಕಾಂಗ್ರೆಸ್ ಮೇಲೆ ಆಸ್ಕರ್ ಹಿಡಿತ ಹೆಚ್ಚಾಗುತ್ತ ಹೋದಂತೆ ಪಾರ್ಟಿ ಎಂಬುದು ಬಿಜೆಪಿಗೆ ಶರಣಾಗುತ್ತ ಸಾಗಿತು. ಪಾರ್ಟಿಗೆ ಅದೆಂಥ ಡ್ಯಾಮೇಜಾದರೂ ಪರವಾಗಿಲ್ಲ; ತನ್ನ ಆಜ್ಞಾನುಧಾರಿ ಗುಲಾಮ ಪ್ರತಾಪ ಚಂದ್ರ ಶೆಟ್ಟಿಯಂಥವರಿಗೆ ತೊಂದರೆ ಆಗಬಾರದೆಂಬುದೊಂದೇ ಗುರಿ. ಅರ್ಥಾತ್ ತನ್ನ ದೊಣ್ಣೆ ನಾಯಕತ್ವಕ್ಕೆ ಸವಾಲಾಗುವ ಜಯಪ್ರಕಾಶ್ ಹೆಗ್ಡೆ, ಹರಿಕೃಷ್ಣ ಬಂಟ್ವಾಳರಂಥವರು ಬೆಳೆಯಬಾರದೆಂಬ ತಂತ್ರಗಾರಿಕೆ.


ನಾಲ್ಕು ಸಲ ಎಮ್ಮೆಲ್ಸಿ ಎರಡು ಬಾರಿ ಎಮ್ಮೆಲ್ಸಿ ಆಗಿದ್ದೇನೆ; ಮತ್ತೆ ಎಲೆಕ್ಷನ್‌ಗೆ ನಿಲ್ಲುವ ಉಮೇದು ನಂಗಿಲ್ಲ ಎಂದಿದ್ದ ಪ್ರತಾಪ್‌ರನ್ನು ಈ ವಾನಪ್ರಸ್ಥದ ಕಾಲದಲ್ಲಿ ಎಳೆದು ತಂದು ಯುದ್ಧಭೂಮಿಯಲ್ಲಿ ನಿಲ್ಲಿಸಿರುವ ಆಸ್ಕರ್ ಗಣಿತದಲ್ಲಿ ಆತ್ಮರಕ್ಷಣಾತ್ಮಕ ಲೆಕ್ಕಾಚಾರವೇ ಹೆಚ್ಚು. ಪ್ರತಾಪ್‌ಗೆ ಟಿಕೆಟ್ ತಪ್ಪಿಸಿದರೆ ಮತ್ತೊಬ್ಬ ಬಂಟನಿಗೇ ಅವಕಾಶ ಕೊಡಬೇಕಾಗುತ್ತದೆ. ಆಗ ರಾಹುಲ್ ಬ್ರಿಗೇಡ್‌ನಲ್ಲಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ಮೋಹನ್ ಪ್ರಕಾಶ್-ಜಯಪಾಲ ರೆಡ್ಡಿ ಮೂಲಕ ಟಿಕೆಟ್ ಮಾಡಿಸುತ್ತಾರೆಂಬುದು ಆಸ್ಕರ್‌ಗೆ ಖಾತ್ರಿಯಾಗಿತ್ತು. ಅಂಥದೊಂದು ಖತರ್‌ನಾಕ್ 'ಆಟ' ಜೆಪಿ ದಿಲ್ಲಿಯಲ್ಲಿ ಆಡಿದ್ದರು. ಈ ತಂತ್ರ-ಪ್ರತಿತಂತ್ರದ ಪೈಪೋಟಿಯಲ್ಲಿ ನಾನೊಲ್ಲೆ ಎನ್ನುತ್ತಿದ್ದ ಪ್ರತಾಪ್‌ಗೆ ಟಿಕೆಟ್ ಭಾಗ್ಯ ಒದ್ದುಕೊಂಡು ಬಂದಿದೆ.


ದಕ್ಷಿಣ ಕನ್ನಡ ಕಾಂಗ್ರೆಸ್‌ನ ಮತ್ತೊಬ್ಬ ಹಿರಿತಲೆ ಜನಾರ್ದನ ಪೂಜಾರಿಯ ನಿಷ್ಠಾವಂತ ಶಿಷ್ಯೋತ್ತಮ ಹರಿಕೃಷ್ಣ ಬಂಟ್ವಾಳ್ ಈ ಬಾರಿ ತನಗೆ ಟಿಕೆಟ್ ಕೊಡುವಂತೆ ಆಸ್ಕರ್ ಪಾದದ ಮೇಲೆ ಬಿದ್ದು ಪರಿ-ಪರಿಯಾಗಿ ಬೇಡಿದ್ದರು. ಹಿಂದೆ ಹಲವು ಸಲ ಬಂಟ್ವಾಳದ ಟಿಕೆಟ್ ಕೇಳಿದ್ದ ಹರಿಕೃಷ್ಣರ



ರಮಾನಂದ


ಮೂಗಿಗೆ ತುಪ್ಪ ಸವರುವ ಕೆಲಸ ದೊಡ್ಡವರಿಂದ ಆಗಿತ್ತು; ಆತ ಬಂಡೇಳದಂತೆ ನೋಡಿಕೊಳ್ಳಲಾಗಿತ್ತು. ಹಾಗೆಯೇ ಪೂಜಾರಿ ಹಾಕಿದ ಗೆರೆಯನ್ನೆಂದೂ ಹರಿಕೃಷ್ಣ ದಾಟದೆ ಎಲ್ಲ ನೋವು ನುಂಗಿಕೊಂಡು ಬಂದಿದ್ದರು. ಇಂಥ ನಿಷ್ಠಾವಂತರು ಆಸ್ಕರ್‌ಗೆ ಎಂದೂ ಲೆಕ್ಕಕ್ಕೇ ಇಲ್ಲ. ಹರಿಕೃಷ್ಣ ಪೂಜಾರಿ ಹಿಂಬಾಲಕನೆಂಬುದೇ ಆತನ ದುರಂತಕ್ಕೆಲ್ಲ ಕಾರಣವೆಂಬಂತೆ ಆಸ್ಕರ್ ಸಂಕೇತ ಬಿತ್ತರಿಸುತ್ತ ಬಂದಿದ್ದಾರೆ. ಈ ಬಾರಿ ಹರಿಕೃಷ್ಣ ಸಿಡಿದೆದ್ದಿದ್ದಾರೆ. ಪೂಜಾರಿ ಮಾತಿಗೂ ಮನ್ನಣೆ ಕೊಡದೆ ಬಂಡಾಯದ ಬಾವುಟ ಹಾರಿಸಿದ್ದಾರೆ.


ಜಯಪ್ರಕಾಶ್‌ಗೆ ಟಿಕೆಟ್ ಕೊಡದಿರುವ ಬಗ್ಗೆ ಪಾರ್ಟಿಯಲ್ಲಿ ಯಾರ ಆಕ್ಷೇಪವೂ ಇಲ್ಲ; ಆದರೆ ಹರಿಕೃಷ್ಣ, ಕಾರ್ಕಳದ ಗೋಪಾಲ ಭಂಡಾರಿ, ಬ್ರಹ್ಮಾವರದ ಭುಜಂಗ ಶೆಟ್ಟಿಯಂಥ ನಿಷ್ಠಾವಂತ-ಪ್ರಾಮಾಣಿಕರಿಗೆ ಆಸ್ಕರ್ ಅನ್ಯಾಯ


ಕೋಟ ಶ್ರೀನಿವಾಸ ಪೂಜಾರಿ


ಪ್ರತಾಪಚಂದ್ರ ಶೆಟ್ಟಿ




ಜಯಪ್ರಕಾಶ್ ಹೆಗ್ಡೆ


ವಿನಯಕುಮಾರ್ ಸೊರಕೆ

ಉತ್ತರ ಕನ್ನಡ: ಪ್ರತಿಷ್ಠೆ ಪಣಕ್ಕಿಟ್ಟಿರುವ ಡಾನ್ ದೇಶಪಾಂಡೆ!!

ಉತ್ತರ ಕನ್ನಡದ ಏಕಮೇವಾದ್ವಿತೀಯ ದೊರೆ ತಾನೆಂದು ಧಿಮಾಕಿಂದ ಮೆರೆಯುತ್ತಿರುವ ಮಂತ್ರಿ ಆರ್.ವಿ. ದೇಶಪಾಂಡೆಗೆ ಪರಿಷತ್ ಯುದ್ಧಭೂಮಿಯಲ್ಲಿ ಮತ್ತೊಂದು ಸೋಲು ಕಾದಿದೆಯಾ? ಸ್ವಪಕ್ಷದ ಇಬ್ಬರು ಶಾಸಕರು, ಮತ್ತಿಬ್ಬರು ಸಹ ಶಾಸಕರು ಮತ್ತು ಮೂವತ್ತು ವರ್ಷದಿಂದ ಕಟ್ಟಿಕೊಂಡಿದ್ದ ಹಿಂಬಾಲಕರ ದಂಡು ನಂಬಿ ಲೋಕಸಭೆ ಚುನಾವಣೆ ಚಕ್ರವ್ಯೂಹದಲ್ಲಿ ಮಗನನ್ನು ಬಲಿಕೊಟ್ಟಿದ್ದ ದೇಶಪಾಂಡೆ ಈ ಬಾರಿ ಪ್ರತಿಷ್ಠೆ ಉಳಿಸಿಕೊಳ್ಳುವರಾ? ಇಂಥದೊಂದು ಜಿಜ್ಞಾಸೆ ಈಗ ಜಿಲ್ಲೆಯ ಉದ್ದಗಲಕ್ಕೆ ಬಿರುಬೀಸಾಗಿ ನಡೆದಿದೆ.


ಆರಂಭದಲ್ಲಿ ಬಂಡಾಯ ಕಾಂಗ್ರೆಸ್ ಕ್ಯಾಂಡಿಡೇಟ್ ರವೀಂದ್ರನಾಯ್ಕ ಪರ ಜಿಲ್ಲೆಯ ಅಷ್ಟೂ ಕಾಂಗ್ರೆಸ್ ಶಾಸಕರು ಒಳಗೊಳಗೇ ಕರಾಮತ್ತು ನಡೆಸುತ್ತ ದೇಶಪಾಂಡೆಗೆ ಪಾಠ ಕಲಿಸಲು ಹವಣಿಸುತ್ತಿದ್ದಾರೆಂಬಂತೆ ಪರಿಷತ್ ಫೈಟಿಂಗ್‌ನ ದೃಶ್ಯಗಳು ಮೂಡತೊಡಗಿತ್ತು. ಕೆಡಿಸಿಸಿ ಬ್ಯಾಂಕಿನ ಅಧ್ಯಕ್ಷರ ಆಯ್ಕೆ ಹೊತ್ತಲ್ಲಿ ತಮ್ಮ ಟೀಮಿನ ಮುಖಂಡನನ್ನಾಗಿ ಎಮ್ಮೆಲ್ಸಿ ಘೋಟ ನೇಕರ್‌ನನ್ನು ಮುಂದಿಟ್ಟುಕೊಂಡಿದ್ದ ದೇಶಪಾಂಡೆ ವಿರೋಧಿ ಸಕಲ ಶಾಸಕರು ಪರಿಷತ್ ಅಖಾಡದಲ್ಲಿ ಅದೇ ಘೋಟನೇಕರ್‌ನ ಹಣಿದು ಹಾಕುತ್ತರೆಂಬ ಲೆಕ್ಕಾಚಾರಗಳು ನಡೆದಿತ್ತು. ಕುಮಟಾದ ಶಾಸಕಿ ಶಾರದಾ ಶೆಟ್ಟಿ, ಯಲ್ಲಾಪುರದ ಶಿವರಾಮ್ ಹೆಬ್ಬಾರ್ ಎಂಬ ಪಕ್ಕಾಗಿ ಬಣದವರು ನೇರಾನೇರ ಬಂಡು ಅಭ್ಯರ್ಥಿ ರವಿನಾಯ್ಕನಿಗೇ ಬೆಂಬಲಿಸುತ್ತಾರೆಂದೂ ಎಲ್ಲರೂ ಭಾವಿಸಿದ್ದರು. ಕಾರವಾರ ಸತೀಶ್ ಸೈಲಂತೂ ರವಿನಾಯ್ಕನ್ನ ಬಹಿರಂಗ ವಾಗೇ ಅಪ್ಪಿ ಮುದ್ದಾಡಿ ತಾನು ಘೋಟನೇಕರ್ ವಿರೋಧಿ ಎಂದು ಪರೋಕ್ಷವಾಗಿ ತೋರಿಸಿಕೊಂಡಿದ್ದರು. ಭಟ್ಕಳದ ಮಂಕಾಳ ವೈದ್ಯ ಶೇಕಡಾವಾರು ಲೆಕ್ಕದಲ್ಲಿ ಸ್ವಜಾತಿ ಬಿಜೆಪಿಯ ಅಭ್ಯರ್ಥಿ ಗಣಪತಿ ಉಳ್ವೇಕರ್, ಬಂಡುಗಾರ ರವಿನಾಯ್ಕ ಮತ್ತು ಕಾಂಗ್ರೆಸ್ ಕ್ಯಾಂಡಿಡೇಟ್ ಘೋಟನೇಕರ್‌ಗೆ ಓಟು ಹಾಕಿಸುವ ವ್ಯವಹಾರಿಕ ಸ್ಕೆಚ್ ಹೆಣೆದಿದ್ದರು.


ಲೋಕಸಭೆ ಎಲೆಕ್ಷನ್ ವೇಳೆ ನಡೆದಂಥದೇ ಸಂಚೊಂದು ತನ್ನ ವಿರುದ್ಧ ಈ ಬಾರಿಯೂ ಸ್ವಪಕ್ಷದ ಪರಾಕ್ರಮಿಗಳು ಸಿದ್ಧ ಮಾಡಿರುವುದರ ವಾಸನೆ ಹಳೆ ಹುಲಿ ದೇಶಪಾಂಡೆ ಮೂಗಿಗೆ ಬಡಿಯುವುದಕ್ಕೇನೂ ತಡವಾಗಲಿಲ್ಲ. ಆಗ ಹಳೆ ಸೇಡನ್ನೆಲ್ಲಾ ಒಟ್ಟುಗೂಡಿಸಿಕೊಂಡು ಎದ್ದು ಕುಂತರು ದೇಶಪಾಂಡೆ ಡಾನ್‌ಜೀ!! ಗೆದ್ದರೆ ಶಾಸಕರಿಂದ ಗೆದ್ದೆ, ಸೋತರೆ ದೇಶಪಾಂಡೆಯಿಂದಲೇ ಸೋಲಾಯ್ತೆಂದು ಘೋಟನೇಕರ್ ಹೇಳುತ್ತ ಹಳಿಯಾಳದಲ್ಲಿ ಅಸ್ತಿತ್ವಕ್ಕೆ ಆತ ಹೊಡೆತ ಕೊಡುತ್ತಾನೆಂಬ ಭಯದಲ್ಲಿರುವ ದೇಶಪಾಂಡೆಗೆ ಈಗ ಗೆಲ್ಲುವುದು ಅನಿವಾರ್ಯವಾಗಿದೆ. ಅತ್ತ ದಿಲ್ಲಿ, ಬೆಂಗಳೂರು ಮಟ್ಟದಲ್ಲಿ ಬೆಳೆಸಿಕೊಂಡಿರುವ ಪ್ರತಿಷ್ಠೆ ಪತನವಾಗದಂತೆ ಕಾಪಾಡಿಕೊಳ್ಳಲಿಕ್ಕೂ ದೇಶಪಾಂಡೆಗೆ ಅನಿವಾರ್ಯ ಅನಿಷ್ಟ ಘೋಟನೇಕರ್ ಸೋಲದಂತೆ ನೋಡಿಕೊಳ್ಳಬೇಕಾಗಿದೆ.


ಹೀಗಾಗಿ ದೇಶಪಾಂಡೆ ಪ್ರತಿ ಶಾಸಕನನ್ನು ಪ್ರತ್ಯೇಕವಾಗಿ ಕರೆದು "ಬಂಡುಗಾರ ರವಿನಾಯ್ಕ ಪರ ಕೆಲಸ ಮಾಡಿದರೆ ಮುಂಬರುವ ಜಿಪಂ-ತಾಪಂ ಎಲೆಕ್ಷನ್‌ನಲ್ಲಿ ನಿಮ್ಮ ಬಾಲ ಕಟ್ ಮಾಡದೇ ಬಿಡಲಾರೆ. ಒಬ್ಬನೇ ಒಬ್ಬ ನಿಮ್ಮ ಹಿಂಬಾಲಕ ಗೆಲ್ಲದಂತೆ ಮಾಡುತ್ತೇನೆ; ಟಿಕೆಟ್ಟೇ ಸಿಗದಂತೆ ಮಾಡುತ್ತೇನೆ. ಹುಷಾರ್...!!" ಎಂದು ವಾರ್ನಿಂಗ್ ನೀಡಿ ಕಳಿಸಿದ್ದಾರೆ. ದೇಶಪಾಂಡೆಯ ರುದ್ರಾವತಾರ ಕಂಡು ಕಂಗಾಲು ಬಿದ್ದಿರುವ ಶಾಸಕರು ಘೋಟನೇಕರ್ ಪರ ಒಲ್ಲದ ಮನಸ್ಸಿನಿಂದಲೇ ಬೆವರು ಹರಿಸತೊಡಗಿದ್ದಾರೆ. ಶಾಸಕರು ಉಲ್ಟಾ ಹೊಡೆಯುತ್ತಿದ್ದಂತೆಯೇ ಗೆಲ್ಲುವ ಉಮೇದಿಯಲ್ಲಿದ್ದ ರವಿ ನಾಯ್ಕ ದಿಕ್ಕೆಟ್ಟುಹೋಗಿದ್ದಾನೆ. ಇಡೀ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಘೋಟನೇಕರ್ ಬಗ್ಗೆ ಅಸಮಾಧಾನ ಇದೆಯಾದರೂ ದೇಶಪಾಂಡೆಯ ಹಣ ಮತ್ತು ಬೆದರಿಕೆ ತಂತ್ರಗಾರಿಕೆಯಿಂದಾಗಿ ನಿಧಾನಕ್ಕೆ ವಾತಾವರಣ ಆತನ ಪರವಾಗಿ ಮಾರ್ಪಾಡಾಗುತ್ತಿದೆ.

ಬೃಹತ್ ಕೈಗಾರಿಕಾ ಖಾತೆ ಮಂತ್ರಿಯಾಗಿರುವ ದೇಶಪಾಂಡೆಗೆ ಹಣದ ಕೊರತೆ ಕಾಡಿದ್ದೇ ಇಲ್ಲ. ಈಗಾತ ಬರೋಬ್ಬರಿ 5 ಕೋಟಿ ಬೆಂಗಳೂರಿನ ಉದ್ಯಮಿಯೊಬ್ಬರಿಂದ ತಂದು ಪ್ರತಿಷ್ಠೆಯ ಸಮರದಲ್ಲಿ ಚೆಲ್ಲಾಡಲು ಮುಂದಾಗಿದ್ದಾರೆಂಬ ಸುದ್ದಿ ರಾಜಕೀಯ ಪಡಸಾಲೆಯಲ್ಲಿ ಹಬ್ಬಿದೆ. ಘೋಟನೇಕರ್‌ನ ಗೆಲ್ಲಿಸುವ ಹಠಕ್ಕೆ ಬಿದ್ದಿರುವ ದೇಶಪಾಂಡೆ ಕಾಲಿಗೆ ಚಕ್ರ ಕಟ್ಟಿಕೊಂಡಂತೆ ಇಡೀ ಜಿಲ್ಲೆಯಲ್ಲಿ ಗಿರಗಿಟ್ಲೆ ಹಾಕುತ್ತಿದ್ದಾರೆ. ಘೋಟನೇಕರ್ ತಲೆ ಬಿಸಿ ಮಾಡಿಕೊಳ್ಳದೇ ಹಾಯಾಗಿದ್ದಾರೆ. ತನಗಿಲ್ಲದ ಹೊಣೆ ಸರ್ವಶಕ್ತ ದೇಶಪಾಂಡೆ ಹೆಗಲೇರಿರುವ ಪರಿಸ್ಥಿತಿಯು ಪವಾಡ ಘೋಟನೇಕರ್‌ನ ನಿರಾಳವಾಗಿಸಿಬಿಟ್ಟಿದೆ.

ಒಂದೆಡೆ ದೇಶಪಾಂಡೆ ಮತ್ತೊಂದೆಡೆ ಶಾಸಕರು ಕಾಂಗ್ರೆಸ್ ಗೆಲುವಿಗೆ ಟೊಂಕ ಕಟ್ಟಿ ನಿಂತಿದ್ದರೆ, ಅತ್ತ ಬಿಜೆಪಿಯ ಗೆಲ್ಲಿಸುವ ಜವಾಬ್ದಾರಿಗೆ ಬಿದ್ದಿರುವ ಕಾಗೇರಿಯ ಕಳೆಯೇ ಕುಂದಿಹೋಗಿದೆ. ಶಾಸಕರ ಬಲದಿಂದ ಬಂಡುಗಾರ ರವಿನಾಯ್ಕ ಬಲಿತಂತೆ ತನ್ನ ಪೆದ್ದು ಅಭ್ಯರ್ಥಿ ಗಣಪತಿ ಉಳ್ವೇಕರ್ ಗೆಲ್ಲುವ ಅವಕಾಶ ಹೆಚ್ಚಾಗುತ್ತದೆ ಎಂದು ಕಾಗೇರಿ ಕನಸು ಕಾಣುತ್ತಿದ್ದರು. ಯಾವಾಗ ದೇಶಪಾಂಡೆಯೇ ಖುದ್ದು ತಂತ್ರಗಾರಿಕೆಗೆ ಇಳಿದು ಸ್ವಪಕ್ಷದ ಶಾಸಕರ ಹದ್ದುಬಸ್ತಿನಲ್ಲಿಟ್ಟುಕೊಂಡರೋ ಆಗ ಬಿಜೆಪಿಯ 1040 ಮತದಲ್ಲಿ ಸೋತಾ ಆಗುವ ಭಯ




ಗಣಪತಿ ಉಳ್ವೇಕರ್



ಮಾಡಿರುವ ಬಗ್ಗೆ ಬೇಸರವಿದೆ ಪಾರ್ಟಿ ಕಾರ್ಯಕರ್ತರಲ್ಲಿ. ಆದರೆ ಆಸ್ಕರ್‌ನ ಎದುರು ಹಾಕಿಕೊಳ್ಳುವ ತಾಕತ್ತು ಯಾರಿಗೂ ಇಲ್ಲ. ಎಐಸಿಸಿಯಲ್ಲಿ ಸೈತಾನನಂತೆ ಬೆಳೆದಿರುವ ಈತ ತಮ್ಮ ತಿಥಿ ಮಾಡುತ್ತಾನೆಂಬ ಭಯದಲ್ಲಿ ಎಲ್ಲರೂ ಉಸಿರು ಬಿಗಿಹಿಡಿದುಕೊಂಡಿದ್ದಾರೆ. ಹೆಡ್‌ಮಾಸ್ಟರ್ ಆಸ್ಕರ್ ಸರ್ ಎದುರು ಕಾಂಗ್ರೆಸ್‌ನ ಶಾಸಕ, ಮಂತ್ರಿಗಳಂತೂ ಅಕ್ಷರಶಃ ವಿಧೇಯ ವಿದ್ಯಾರ್ಥಿಗಳಂತೆ ಕೈಕಟ್ಟಿಕೊಂಡು ನಿಂತಿದ್ದಾರೆ!

ಆರಂಭದಲ್ಲಿ ಜಯಪ್ರಕಾಶ್ ಹೆಗ್ಡೆ ಹಾಗು ಹರಿಕೃಷ್ಣ ಬಂಟ್ವಾಳದ ಬಂಡಾಯ ಕಾಂಗ್ರೆಸ್ ಬುಡಕ್ಕೆ ಬಿಸಿನೀರು ತರುವ ಭಾವನೆ ಮೂಡಿಸಿದ್ದೇನೋ ಖರೆ. ಆದರೆ ಆಸ್ಕರ್ ಖುದ್ದು ತಾನೇ ಕ್ಯಾಂಡಿಡೇಟ್ ಪ್ರತಾಪ್‌ರ ಎಲೆಕ್ಷನ್ ಮ್ಯಾನೇಜರಿಕೆ ವಹಿಸಿಕೊಳ್ಳುತ್ತಿದ್ದಂತೆಯೇ ಮಂತ್ರಿ-ಶಾಸಕರೆಲ್ಲ ಎಚ್ಚೆತ್ತುಕೊಂಡುಬಿಟ್ಟರು. ಕುಂದಾಪುರ, ಕಾರ್ಕಳ ಮತ್ತು ಉಡುಪಿಯ ಕೆಲವು ಭಾಗ ಬಿಟ್ಟರೆ ಉಳಿದೆಡೆ ಬಂಡಾಯ ಕ್ಯಾಂಡಿಡೇಟ್ ಜೆಪಿಗೆ ಕಾರ್ಯಕರ್ತರ ಕೊರತೆ ಕಾಡುತ್ತಿದೆ. ಅದೇ ರೀತಿ ಉಡುಪಿ ದಿಕ್ಕಿನಲ್ಲಿ ಹರಿಕೃಷ್ಣರ ಪರಿಚಯ ಆತನ ಜಾತಿಬಂಧುಗಳಾದ ಬಿಲ್ಲವರಲ್ಲೇ ಇಲ್ಲ. ಇನ್ನು ಜಾತಿ ಲೆಕ್ಕಾಚಾರದಲ್ಲಿ ಜೆಪಿಗೆ ಎದುರಾಳಿ ಪ್ರತಾಪರೂ ಸ್ವಜಾತಿ ಬಂಧುವೇ. ಹೀಗಾಗಿ ಸಾರಾಸಗಟಾಗಿ ಬಂಟರ ಮತ ಪಡೆಯುವುದು ಕಷ್ಟಕರವಾಗಿದೆ.

ಇವೆಲ್ಲಕ್ಕಿಂತ ಹೆಚ್ಚಾಗಿ ಅವಳಿ ಜಿಲ್ಲೆಯ ಹತ್ತೂ ಕಾಂಗ್ರೆಸ್ ಎಮ್ಮೆಲ್ಲೆಗಳಿಗೆ (ಇವರಲ್ಲಿ ನಾಲ್ವರು ಮಂತ್ರಿಗಳು, ಇಬ್ಬರು ಸಂಸದೀಯ ಕಾರ್ಯದರ್ಶಿಗಳು) ಒಬ್ಬರಿಗೂ ಜೆಪಿ ಕಂಡರಾಗದು. ಆತನ ಸಂಸದೀಯ ಪಟುತ್ವ, ಡೈನಮಿಕ್ ಜಾಯಮಾನದ ಎದುರು ತಾವು ಸಪ್ಪೆಯಾಗಿ ಕಾಣಿಸುವ ಭಯ ಒಂದೆಡೆಯಾದರೆ, ಮಹತ್ವಾಕಾಂಕ್ಷಿ ರಾಜಕಾರಣಿಯಾದ ಜೆಪಿ ಬೆಳೆದರೆ ಗಂಡಾಂತರ ಖಂಡಿತ ಎಂಬ ಆತಂಕ ಈ ಮಂತ್ರಿ ಶಾಸಕರಿಗೆ. ಹೀಗಾಗಿ 'ಓವರ್ ಆ್ಯಕ್ಟೀವ್' ಜೆಪಿಗಿಂತ ಕೆಲಸಕ್ಕೆ ಬಾರದ ನಿರುಪದ್ರವಿ ಪ್ರತಾಪ್‌ರೇ ಬೆಟರ್ ಎಂಬ ತೀರ್ಮಾನಕ್ಕೂ ಕಾಂಗ್ರೆಸಿನ ಎರಡೇ ಲೆವೆಲ್ ಲೀಡರ್‌ಗಳು ಬಂದಿದ್ದಾರೆ.

ಹಾಗಂತ ಜೆಪಿ-ಹರಿಕೃಷ್ಣ ಸುಮ್ಮನೇನೂ ಕುಂತಿಲ್ಲ. ಜೆಪಿಗೆ ಅಬುದಾಬಿಯಲ್ಲಿ ಭರ್ಜರಿ ಉದ್ಯಮಿಯಾಗಿರುವ ಬಿ.ಆರ್. ಶೆಟ್ಟಿ, ಉಡುಪಿಯ ಕಂಟ್ರಾಕ್ಟರ್ ಜಿ. ಶಂಕರ್‌ನಂಥವರು ಫೈನಾನ್ಸ್ ಮಾಡುತ್ತಿದ್ದಾರೆ. ಜಿ.ಶಂಕರ್ ಬೆಂಬಲದ ಹಿಂದೆ ವಾರಾಹಿ ಪವರ್ ಪ್ರಾಜೆಕ್ಟ್ ರಾಜಕೀಯ ಅಡಗಿದೆ. ಈ ಪವರ್ ಪ್ರಾಜೆಕ್ಟ್ ವಿರೋಧಿಸಿ ಶಂಕರ್‌ರ ಪಳಗಿಸಲು ಪ್ರತಾಪ್ ಕಿತಾಪತಿ ಮಾಡಿದಾಗ ಆತನನ್ನು ದಳದ ಕಾಲದಲ್ಲಿ ಮಂತ್ರಿಯಾಗಿದ್ದಾಗಿನಿಂದಲೂ ಒಳ್ಳೆಯ ಸಂಬಂಧ ಸಾಧಿಸಿರುವ ಜೆಪಿ ರಕ್ಷಿಸಲು ಹವಣಿಸಿದ್ದರು. ಇದರಲ್ಲಿ ಯಾರಿಗೂ ಬಡ ರೈತರ ಬಗ್ಗೆ ನೈಜ ಕಳಕಳಿ ಇರಲಿಲ್ಲ, ಎಲ್ಲರಿಗೂ ಅವರವರದೇ ಅಡಚಣೆ!!

ಇನ್ನು ಸೋಲು-ಗೆಲುವಿನ ಲೆಕ್ಕಾಚಾರ ನೋಡೋಣ. ಬಿಲ್ಲವ ಧನಿಕರಿಂದ ಹಣ ತಂದಿರುವ ಹರಿಕೃಷ್ಣ ಬಂಟ್ವಾಳ್‌ಗೆ ಜಾತಿ ಓಟುಗಳು ದಂಡಿಯಾಗಿ ಬರುವ ಲಕ್ಷಣಗಳೇನಿಲ್ಲ. ಸಾಕ್ಷಾತ್ ಪೂಜಾರಿಯಂಥ ಪೂಜಾರಿಯನ್ನೇ ಸೋಲಿಸಿರುವ ಬಿಲ್ಲವರಿಗೆ ಆತನ ಪೆದ್ದು ಶಿಷ್ಯ ಹರಿಕೃಷ್ಣ ಅದ್ಯಾವ ಲೆಕ್ಕ? ಈ ಬಿಲ್ಲವರು ಬಿಜೆಪಿಯ ಕೋಟ ಶ್ರೀನಿವಾಸ್ ಪೂಜಾರಿಗೆ ಸಿಂಗಲ್ ಓಟ್ ಮಾಡುವ ಮೂಡಲ್ಲಿದ್ದಾರೆ. ಹರಿ ಕಟ್ ಮಾಡುವ ಮತಗಳು ಕಾಂಗ್ರೆಸಿನದೇ ಹೊರತು ಬಿಜೆಪಿಯದಾಗಲು ಸಾಧ್ಯವಿಲ್ಲ. ಜೆಪಿಯೂ ಅಷ್ಟೇ ಬ್ರಹ್ಮಾವರ ಸುತ್ತಲಲ್ಲಿ ಒಂದಿಷ್ಟು ಮತ ಪಡೆಯಬಹುದು. ಬಂಟರಿಗೆ ಈಗೀಗ ಪ್ರತಾಪನೇ ಗೆಲ್ಲಲಿ ಎಂಬ ಆಸೆ ಬಂದಿದೆ. ಜೆಪಿಗೆ ಓಟು ಮಾಡಿದರೆ ಬಿಲ್ಲವರ ಹರಿಕೃಷ್ಣನಿಗೆ ಅನುಕೂಲವಾಗುತ್ತದೆಂಬ ಜಾತಿ ರಾಜಕಾರಣವಿದು.

ಉಡುಪಿ ಜಿಲ್ಲಾ ಉಸ್ತುವಾರಿ ಮಂತ್ರಿ ಸೊರಕೆ, ಉಡುಪಿ ಶಾಸಕ ಕಂ ಸಂಸದೀಯ ಕಾರ್ಯದರ್ಶಿ ಪ್ರಮೋದ್ ಮಧ್ವರಾಜ್ ಮತ್ತು ದ.ಕನ್ನಡ ಜಿಲ್ಲಾ ಮಂತ್ರಿ ರಮಾನಾಥ ರೈಗೆ ಜೆಪಿ ಬಗ್ಗೆ ಬದ್ಧ ವೈರತ್ವವಿದೆ. ಇವರೆಲ್ಲ ಒಟ್ಟಾಗಿ ಅಖಾಡಕ್ಕೆ ಇಳಿದಿದ್ದಾರೆ. ಹೀಗಾಗಿ ಎತ್ತಿಂದೆತ್ತ ತಾಳೆ ಹಾಕಿ ನೋಡಿದರೂ ದೇವಪಿತೃ ಆಸ್ಕರ್‌ರ ಆಣತಿ ಸುತ್ತ ಗಿರಕಿ ಹೊಡೆಯುತ್ತಿರುವ ಕಾಂಗ್ರೆಸ್‌ನ ಮಂತ್ರಿ-ಶಾಸಕರು ಅನಿವಾರ್ಯವಾಗಿ ಪ್ರತಾಪ್‌ರನ್ನು ಗೆಲ್ಲಿಸಿಕೊಳ್ಳಬೇಕಾಗಿದೆ ಎಂಬುದು ಕಣ್ಣಿಗೆ ರಾಚುತ್ತದೆ. ಅಂತಿಮವಾಗಿ ಹೋಪ್‌ಲೆಸ್ ಪ್ರತಾಪ್ ಗೆಲ್ಲುವ ಸಾಧ್ಯತೆಯೇ ಹೆಚ್ಚು; ಚುನಾವಣೆಗಳನ್ನು ಎದುರಿಸುವ ತಂತ್ರಗಾರಿಕೆಯಲ್ಲಿ ಪಳಗಿರುವ ಜೆಪಿ ಗೆದ್ದರೆ ಪವಾಡ.


ಹಾಗಂತ ಚುನಾವಣಾ ಜಾಣರು ವಿಶ್ಲೇಷಿಸುತ್ತಿದ್ದಾರೆ. ಒಟ್ಟು **6,568** ಮತದಲ್ಲಿ ಕಾಂಗ್ರೆಸ್ ಪಾಲು **2,700**ರಷ್ಟಿದೆ. ಇದರಲ್ಲಿ ಜೆಪಿ ಮತ್ತು ಹರಿ ಕೈಲಿ ಮೊದಲ ಸುತ್ತಿನಲ್ಲಿ ಗೆಲ್ಲಲು ಬೇಕಾದ ಮೊದಲ ಪ್ರಾಶಸ್ತ್ಯದ **1,700** ಮತ ಪಡೆಯಲು ಸಾಧ್ಯವಿಲ್ಲ. ಅಷ್ಟು ಫೀಲಿಂಗ್ ಆಸ್ಕರ್ ಟೀಮು ಮಾಡುತ್ತಿದೆ. ಪ್ರತಾಪ್‌ರನ್ನು ಗೆಲ್ಲಿಸುವುದು ಎಐಸಿಸಿ ತುಂಡರಸ ಆಸ್ಕರ್‌ಗೆ ಪ್ರತಿಷ್ಠೆಯ ಪ್ರಶ್ನೆಯಾಗಿದೆ. ಬಹುಶಃ ರಾಜಕೀಯ ಜೀವಮಾನದಲ್ಲೇ ಇಂಥ ರಿಸ್ಕ್ ಆತ ಮಾಡಿಲ್ಲ. ಹಾಗೆಯೇ 'ಗುರು'ವಿನ ಮರ್ಯಾದೆ ಕಾಪಾಡಲು ಪ್ರತಾಪ್ ಕಳೆದ ಹನ್ನೆರಡು ವರ್ಷದಲ್ಲಿ ಮಾಡದ ಓಡಾಟ ಒಮ್ಮೆಗೇ ಮಾಡುತ್ತಿದ್ದಾರೆ. ಅವಳಿ ಜಿಲ್ಲೆಯ ಪ್ರತಿ ಪಂಚಾಯತ್‌ನ ಬಾಗಿಲು ಪ್ರತಾಪ್ ತಟ್ಟುತ್ತಿರುವುದು ತಮಾಷೆಯಾಗಿದೆ. ಮನಸ್ಸು ಬಿಜೆಪಿಯಲ್ಲಿಟ್ಟು ದೇಹ ಹೊರಗಿಟ್ಟಿರುವ ಕುಂದಾಪುರದ ಪಕ್ಷೇತರ ಶಾಸಕ ಹಾಲಾಡಿ ಶ್ರೀನಿವಾಸ್ ಶೆಟ್ಟಿ ಕೂಡ ಹಳೆ ವೈರತ್ವ ಮರೆತು ಪ್ರತಾಪ್‌ಗೆ ರಹಸ್ಯ ನೆರವು ಕೊಡುತ್ತಿದ್ದಾರೆ. ಈ ಹಾಲಾಡಿಗೂ ಜೆಪಿ ಕಂಡರೆ ಒಂಥರಾ ಉರಿ!

ಅಖಾಡದಲ್ಲಿ ಆಸ್ಕರ್ ಗ್ಯಾಂಗ್ ಹರಿಸುತ್ತಿರುವ ಹಣ, ಬೆವರು ಮತ್ತು ಚೆಡ್ಡಿಗಳ ಸಿಂಗಲ್ ಓಟ್ ಟ್ಯಾಕ್ಟೀಸ್ ಸೂಕ್ಷ್ಮವಾಗಿ ಗಮನಿಸಿದರೆ ಬಿಜೆಪಿಯ ಪೂಜಾರಿ ನಿರಾಯಾಸವಾಗಿ ಗೆದ್ದರೆ, ಕಾಂಗ್ರೆಸ್‌ನ ಪ್ರತಾಪ್ ಪ್ರಯಾಸದಲ್ಲಿ ಪಾರಾಗುತ್ತಾರೆ ಅನ್ನಿಸುತ್ತದೆ!!

■ ವರದಿಗಾರ

ಧಾರವಾಡ: ಶೆಟ್ಟರ್ ಸೋದರರಿಗೆ ಹೊಸ ಸಂಕಟ

ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ಅವಿಭಜಿತ ಧಾರವಾಡ ಜಿಲ್ಲೆಯ ಎರಡು ಸ್ಥಾನಗಳಿಗೆ ನಡೆದಿರುವ ಚುನಾವಣೆ ಕ್ಲೈಮ್ಯಾಕ್ಸ್ ಹಂತಕ್ಕೆ ತಲುಪಿದೆ. ಇನ್ನೇನು ತಮ್ಮತಮ್ಮ ಸ್ಥಾನ ಖಾತ್ರಿಯೆಂದು ಕೈಚೆಲ್ಲಿ ಕುಳಿತಿದ್ದ ಬಿಜೆಪಿಯ ಪ್ರದೀಪ್ ಶೆಟ್ಟರ್ ಹಾಗೂ ಕಾಂಗ್ರೆಸ್‌ನ ಶ್ರೀನಿವಾಸ ಮಾನೆ ನಿದ್ರೆಯಿಂದ ಎಚ್ಚೆತ್ತುಕೊಂಡು ತಿರುಗಾಡುವಂತಾಗಿದೆ. ಇದಕ್ಕೆ ಕಾರಣ ಬಿಜೆಪಿಯ ಬಂಡಾಯ ಅಭ್ಯರ್ಥಿ ಜಯಶ್ರೀ ಜಡಿ ಮತ್ತು ಕಳಸಾ-ಬಂಡೂರಿ ಹೋರಾಟದಲ್ಲಿ ಗುರುತಿಸಿಕೊಂಡಿದ್ದ ರೈತಸಂಘ ಹಾಗೂ ಹಸಿರು ಸೇನೆಯ ಅಭ್ಯರ್ಥಿ ಸಿದ್ದು ತೇಜಿ.




ಪ್ರದೀಪ್ ಶೆಟ್ಟರ್

ಸರ್ವೋದಯ ಪಕ್ಷಗಳೊಂದಿಗೆ ಎಡಪಕ್ಷಗಳಾದ ಸಿಪಿಐ, ಸಿಪಿಎಂ ಬಹಿರಂಗವಾಗಿ ಸಿದ್ದು ತೇಜಿಯ ಬೆಂಬಲಕ್ಕೆ ನಿಂತಿವೆ. ಇನ್ನು ಜಾತಿಯಲ್ಲಿ ಸಿದ್ದು ತೇಜಿ ಕುರುಬನಾಗಿರುವ ಕಾರಣಕ್ಕೆ ಹಾಲುಮತ ಮಹಾಸಭೆ ಬೆಂಬಲಿಸಿ ಕ್ಷೇತ್ರದ ತುಂಬ ತಿರುಗಾಡುತ್ತಿದೆ. ಹಾವೇರಿ ಜಿಲ್ಲೆಯಲ್ಲಿ ಕುರುಬ ಸಮಾಜದ ಮತಗಳು ನಿರ್ಣಾಯಕವಾಗಿವೆ. ಏಕೆಂದರೆ ಸರಿಸುಮಾರು **3000** ಮತಗಳು ಈ ಜಾತಿಯ ಜೋಳಿಗೆಯಲ್ಲಿವೆ. ಸಿಎಂ ಸಿದ್ದರಾಮಯ್ಯ ದಡಬಡಾಯಿಸಿ ಬಂದು ಹಾವೇರಿಯಲ್ಲಿ ಬಹಿರಂಗ ಸಭೆ ನಡೆಸಿದ್ದು ಕೂಡಾ ಇದೇ ಕಾರಣಕ್ಕೆ. ಸಿದ್ದು ತೇಜಿಯ ಸ್ಪರ್ಧೆ, ಕಾಂಗ್ರೆಸ್ ಪಾರ್ಟಿಯ ಚಟುವಟಿಕೆಯನ್ನು ಚುರುಕುಗೊಳಿಸುವಂತೆ ಮಾಡಿರುವುದಲ್ಲದೇ ಬಿಜೆಪಿಯ ಪ್ರದೀಪ್ ಶೆಟ್ಟರ್‌ಗೆ ಸೋಲಿನ ಸೂತಕ ಅಡರುವಂತೆ ಮಾಡಿದೆ.



ಶ್ರೀನಿವಾಸ್ ಮಾನೆ

ಹಾವೇರಿ ಜಿಲ್ಲೆಯಲ್ಲಿ ರೈತ ಸಂಘ, ಹಸಿರು ಸೇನೆ ಪ್ರತಿಯೊಂದು ಗ್ರಾಮದಲ್ಲಿ ನೆಲೆಯೂರಿದೆ. ರೈತ ಸಂಘದ ಕಾರ್ಯಕರ್ತರು ನೇರವಾಗಿ ಸಿದ್ದು ತೇಜಿ ಪರವಾಗಿ ಸದಸ್ಯರ ಬಾಗಿಲು ತಟ್ಟಿ ರೈತ ಪ್ರತಿನಿಧಿಗೊಂದು ಮತ ಎಂದು ಬೇಡುತ್ತಿದ್ದಾರೆ. ಗದಗ ಜಿಲ್ಲೆಯಲ್ಲಿ ಎಚ್ಕೆ ಪಾಟೀಲರ ಪ್ರಭಾವ ಇರುವುದು ನಿಜವಾದರೂ ರೈತ ಸಂಘದ ಕಾರ್ಯಕರ್ತರ ಜೊತೆಗೆ ಎಡಪಕ್ಷಗಳ ಕಾರ್ಯಕರ್ತರೂ ಪ್ರಚಾರದಲ್ಲಿ ತೊಡಗಿಕೊಂಡಿರುವುದು ಗೆಲುವಿನ ಸಮೀಕರಣವನ್ನು ಕುತೂಹಲವಾಗಿಸಿದೆ. ಕಾಂಗ್ರೆಸ್‌ನಿಂದ ಟಿಕೆಟ್ ವಂಚಿತನಾಗಿ ರುವ ಕುರುಬ ಜಾತಿಯ ರವಿ ದಂಡಿನ ಎಂಬ ಯುವಕ ತನ್ನ ಜನಾಂಗದ ಅಭ್ಯರ್ಥಿ ಸಿದ್ದು ತೇಜಿ ಪರವಾಗಿ ಒಳಗೊಳಗೇ ಪ್ರಚಾರದಲ್ಲಿ ತೊಡಗಿಕೊಂಡಿರೋದು ಮಾನೆಗೆ ಮೈನಸ್ ಆಗುವ ವಿಚಾರವಾದರೂ ತೀರಾ ಸೋಲಿನ ದವಡೆಗೆ ತಳ್ಳುವಷ್ಟು ವಿಪರೀತಕ್ಕೇನೂ ಹೋಗದು.



ಸಿದ್ದು ತೇಜಿ

ಬಿಜೆಪಿ ಜೊತೆಗಿನ ಜೆಡಿಎಸ್ ಒಳಒಪ್ಪಂದ ಅಪವಾದ ದಿನೇದಿನೇ ದೊಡ್ಡದಾಗುತ್ತಿರುವುದನ್ನು ಕಂಡ ಹೊರಟ್ಟಿ-ಕುಮಾರಸ್ವಾಮಿ ಆ ಕಳಂಕದಿಂದ ಪಾರಾಗಲು ಡಮ್ಮಿ ಕ್ಯಾಂಡಿಡೇಟ್ ವಾಗೀಶ್ ಪ್ರಸಾದನನ್ನೇ ಕರೆದುಕೊಂಡು ತಿರುಗಾಡುತ್ತಿದ್ದಾರೆ. ಹಾವೇರಿ ಜಿಲ್ಲೆಯ ಮತದಾರರಿಗೆ ಬೆಳ್ಳಿ ತಗಡಿನ ತುಂಡನ್ನು ರವಾನಿಸಿದ್ದ ಪ್ರಸಾದನ ಮುಖಕ್ಕೆ 'ಕೊಟ್ಟರೆ ಬಂಗಾರದ್ದು ಕೊಡು, ಈ ಬೆಳ್ಳಿ ತಗಡು ನೀನೇ ಇಟ್ಟುಕೋ' ಅಂತಾ ಉಗಿದಿದ್ದಾರೆ.



ಜಯಶ್ರೀ ಜಡಿ

ತಾನು ಸ್ಪರ್ಧಿಸುವುದು ಖಾತ್ರಿ ಎಂಬುದನ್ನು ಅರ್ಥಮಾಡಿಕೊಂಡಿದ್ದ ಪ್ರದೀಪ ಶೆಟ್ಟರ್ ಚುನಾವಣೆ ನೀತಿಸಂಹಿತೆಯ ಕಷ್ಟವನ್ನು ಅರಿತು ಕಳೆದ ದೀಪಾವಳಿ ಹಬ್ಬದಲ್ಲೇ ಸ್ಥಳೀಯ ಜನಪ್ರತಿನಿಧಿ ಮತದಾರರಿಗೆ ವಾಚ್‌ಗಳನ್ನು ಉಡುಗೊರೆಯಾಗಿ ತಲುಪಿಸಿದ್ದ. 'ನೀನು ಕೊಟ್ಟ ವಾಚು ಈಗಾಗಲೇ ಕೆಟ್ಟು ನಿಂತಿದೆ. ಅದನ್ನು ರಿಪೇರಿ ಮಾಡಿಸಲು ಹಣ ಬೇಕು ಅರ್ಜೆಂಟಾಗಿ **10** ಸಾವಿರ ಕಳಿಸು' ಅಂತಾ ಆತನಿಗೂ ಅಹವಾಲುಗಳು ಹೋಗುತ್ತಿವೆಯಂತೆ. ಮತದಾರರ ಕಾಂಚಾಣ ಬಿಸಿ ಕೈ ಪಾರ್ಟಿಯ ಶ್ರೀನಿವಾಸ್ ಮಾನೆಗೂ ತಟ್ಟಿದೆ. 'ನೀನು ಕಳಿಸಿದ ಸ್ವೀಟ್ ತಿಂದಾಯಿತು. ಬಟ್ಟೆ ಹೊಲಿಸಿಕೊಂಡಾಯಿತು, ಸೀರೆ ಹಾಕ್ಕೊಂಡಿ ದ್ದೇವೆ. ಇನ್ನು ದೇವರ ದರ್ಶನಕ್ಕೆ ತೆರಳಬೇಕು. ಹಣ ಕಳಿಸು' ಅನ್ನೋ ಮೆಸೇಜುಗಳು ಕಾಂಗ್ರೆಸ್ ಕಾರ್ಯಕರ್ತರ ಮೂಲಕ ಪಾಸಾಗುತ್ತಿವೆ.

ನಾಗರಾಜ್ ಛಬ್ಬಿಯನ್ನು ಕಣದಿಂದ ನಿವೃತ್ತಿಗೊಳಿಸಿದ ಕಾಂಗ್ರೆಸ್ ಒಂದಷ್ಟು ಬಂಡಾಯವನ್ನೂ ಎದುರಿಸುವಂತಾಗಿದೆ. ಇದೇ ಕಾರಣಕ್ಕೆ ಹಾವೇರಿಯಲ್ಲಿ ಶಿವರಾಜ್ ಸಜ್ಜನ್, ಮಾನೆ ವಿರುದ್ಧ ಮಸಲತ್ತು ಮಾಡುತ್ತಿದ್ದಾನೆ. ಛಬ್ಬಿ ಎಫೆಕ್ಟ್‌ನಿಂದ ಪಕ್ಷದ ಅಭ್ಯರ್ಥಿಯನ್ನು ಪಾರು ಮಾಡಲು ಸ್ವತಃ ಸಿಎಂ ಸಿದ್ದರಾಮಯ್ಯನೇ ನಾಗರಾಜ್ ಛಬ್ಬಿ ಮನೆ ಬಾಗಿಲಿಗೆ ಬರಬೇಕಾಯಿತು. ಹಾವೇರಿಯಲ್ಲಿ ನಡೆದ ಬಹಿರಂಗ ಸಭೆಗೆ ಆಗಮಿಸಿದ್ದ ಸಿದ್ದು ಹುಬ್ಬಳ್ಳಿಯಿಂದ ಇದೇ ನಾಗರಾಜ ಛಬ್ಬಿ ಕಾರಿನಲ್ಲಿ ಹೋಗಿಬಂದರಲ್ಲದೆ ಛಬ್ಬಿ ಮನೆಯಲ್ಲಿ ಮಸಾಲೆ ದೋಸೆ ತಿಂದು 'ನಮ್ಮೊಳಗೆ ಎಲ್ಲವೂ ನೆಟ್ಟಗಿದೆ' ಎಂಬ ಸಂದೇಶವನ್ನು ತಲುಪಿಸಿ ಹೋಗಿದ್ದಾರೆ. ಜೊತೆಗೆ ನಾಗರಾಜ್ ಛಬ್ಬಿಯ ಮೂಗಿಗೆ ನಿಗಮ ಮಂಡಳಿ ಅಧ್ಯಕ್ಷ ಸ್ಥಾನದ ತುಪ್ಪವನ್ನೂ ಸವರಲಾಗಿದೆ ಎಂಬ ವರ್ತಮಾನಗಳು ಕೇಳಿಬರುತ್ತಿವೆ.


ಶೆಟ್ಟರ್‌ಗೆ ಜೋರಾದ ಸಂಕಟ

ಜೆಡಿಎಸ್ ಹೊರಟ್ಟಿಯೊಂದಿಗೆ ಮಾಡಿಕೊಂಡ ಡೀಲ್ ನಿಂದಾಗಿ ಅನಾಯಾಸವಾಗಿ ಗೆದ್ದುಬಿಡುತ್ತೇವೆಂಬ ಭ್ರಮೆಯ ಲ್ಲಿದ್ದ ಶೆಟ್ಟರ್ ಸೋದರರಿಗೆ ದಿನಕ್ಕೊಂದು ಸವಾಲುಗಳು ಹುಟ್ಟಿಕೊಳ್ಳುತ್ತಿವೆ. ಯಡ್ಡಿಯ ಗೇಮ್‌ಪ್ಲಾನ್ ಪ್ರಕಾರ ಆತನ ಖಾಸಾ ಶಿಷ್ಯ ಮಾಜಿ ಶಾಸಕ ಅಶೋಕ್ ಕಾಟವೆ ಮುಖಾಂತರ ಪಾಲಿಕೆಯ ಮಾಜಿ ಸದಸ್ಯೆ ಜಯಶ್ರೀ ಜಡಿ ಎಂಬ ಮಹಿಳೆ ಬಂಡಾಯ ಅಭ್ಯರ್ಥಿಯಾಗಿ ಕಣದಲ್ಲಿ ಉಳಿದಿರೋದು ಮಾಮು ಜಗದೀಶ ಶೆಟ್ಟರ್‌ನ ನಿದ್ದೆ ಕೆಡಿಸಿದೆ.

ಹಿಂದೆ ಬಿಜೆಪಿ ಅಧಿಕಾರಕ್ಕೆ ಬರಲು ಉತ್ತರ ಕರ್ನಾಟಕದ ಲಿಂಗಾಯತರು ಸಾಲಿಡ್ಡಾಗಿ ಯಡ್ಡಿಯ ಬೆನ್ನಿಗೆ ನಿಂತದ್ದು ಕಾರಣ. ಯಡ್ಡಿಯ ಅಂತಹ ಏಕಸ್ವಾಮ್ಯಕ್ಕೆ ಕಂಟಕನಾದದ್ದು ಇದೇ ಜಗದೀಶ ಶೆಟ್ಟರ್. ಈ ಚುನಾವಣೆಯಲ್ಲಿ ಶೆಟ್ಟರ್ ಸಹೋದರ ಪ್ರದೀಪ್ ಗೆದ್ದರೆ ತನಗೆ ಉಳಿಗಾಲವಿಲ್ಲ ಎಂಬುದನ್ನು ಅರಿತಿರುವ ಯಡ್ಡಿ, ಹೆಚ್ಚು ಮತಗಳಿರುವ ಹಾವೇರಿ ಜಿಲ್ಲೆಯಲ್ಲಿ ಮಾಜಿ ಸಚಿವ ಸಿಎಂ ಉದಾಸಿಯ ಮೂಲಕ ಶೆಟ್ಟರ್ ವಿರುದ್ಧ ಮತ ಬೀಳುವಂತ ಕಾರ್ಯತಂತ್ರ ಹೆಣೆದಿದ್ದಾನೆ. ಜೊತೆಗೆ ರೈತಸಂಘ ಪ್ರಬಲವಾಗಿರುವ ಹಾವೇರಿ ಜಿಲ್ಲೆಯಲ್ಲಿ ರೈತಸಂಘದ ಪ್ರತಿನಿಧಿ ಸಿದ್ದು ತೇಜಿಗೆ ಮತ ನೀಡುವಂತೆ ತನ್ನ ಹಿಂಬಾಲಕರಿಗೆ ಫರ್ಮಾನು ಹೊರಡಿಸಿದ್ದಾನೆ. ರೈತ ಸಂಘದಲ್ಲಿರುವ ಪ್ರಮುಖ ನಾಯಕರು ಸಿಎಂ ಉದಾಸಿ ಮಾತಿಗೆ ಬೆಲೆ ಕೊಡುತ್ತಾರೆ. ಇದು ಸಿದ್ದು ತೇಜಿಗೆ ಮತಗಳಿಕೆಗೆ ದಾರಿ ಮಾಡಿಕೊಟ್ಟಿದೆ. ಧಾರವಾಡ, ಗದಗ ಜಿಲ್ಲೆಯ ಹಿರಿಯ ಕಾಂಗ್ರೆಸ್ ಸಚಿವ ಎಚ್ಕೆ ಪಾಟೀಲ್ ಕೂಡಾ ಮೊದಲ ಪ್ರಾಶಸ್ತ್ಯದ ಮತವನ್ನು ಕೈ ಪಾರ್ಟಿಯ ಮಾನೆಗೆ ನೀಡಿ, ಎರಡನೆಯದ್ದನ್ನು ರೈತ ಸಂಘಕ್ಕೆ ನೀಡಿ ಎಂದು ಪ್ರಚಾರ ನಡೆಸಿರೋದು ಶೆಟ್ಟರ್ ಗೆಲುವಿಗೆ ದುಬಾರಿ ಎನಿಸಿದೆ.

ಮೊನ್ನೆ ಹಾವೇರಿಯಲ್ಲಿ ನಡೆದ ಕಾಂಗ್ರೆಸ್ ಬಹಿರಂಗ ಸಭೆಯ ಬಳಿಕ ಒಂದು ಮತವನ್ನು ಕಾಂಗ್ರೆಸ್‌ನ ಮಾನೆಗೆ ನೀಡಿ, ಇನ್ನೊಂದು ಮತವನ್ನು ಸಿದ್ದು ತೇಜಿಗೆ ನೀಡಿ ಅಂತ ಸಿಎಂ ಸಿದ್ದರಾಮಯ್ಯ ಕುಲಬಾಂಧವರಿಗೆ ಫರ್ಮಾನು ಹೊರಡಿಸಿದ್ದಾರೆನ್ನುವ ಮಾತುಗಳೂ ಕೇಳಿಬರುತ್ತಿವೆ. ಹಾವೇರಿಯಲ್ಲಿ ಕುರುಬ ಮತಗಳು ಗಣನೀಯ ಸಂಖ್ಯೆಯಲ್ಲಿರುವುದನ್ನು ಮರೆಯುವಂತಿಲ್ಲ. ಹೀಗಾಗಿ ನಿರಾಯಾಸ ಗೆಲುವಿನ ಕನವರಿಕೆಯಲ್ಲಿದ್ದ ಶೆಟ್ಟರ ಸಹೋದರರ ಲೆಕ್ಕಾಚಾರಕ್ಕೆ ಬ್ರೇಕ್ ಬಿದ್ದಿದೆ. ರೈತ ಸಂಘದ ಸಿದ್ದು ತೇಜಿ ಹೆಚ್ಚಿನ ಸಂಖ್ಯೆಯಲ್ಲಿ 2ನೇ ಪ್ರಾಶಸ್ತ್ಯದ ಮತಗಳಿಸುವ ಲಕ್ಷಣ ದಟ್ಟಗೊಳ್ಳುತ್ತಿವೆ.

■ ಹುಬ್ಬಳ್ಳಿಯಾಂವ



ತೇಲಾಡುತ್ತಿರುವ ರವಿಗೆ ಎರಡೂ ಕಡೆಯಿರುವ ಕಾಮನ್ ಓಟರ್ಸ್ ಎಷ್ಟೆಂದು ಕೇಳಿದರೆ ಉತ್ತರವಿಲ್ಲ. ಸದ್ಯದ ಸ್ಥಿತಿಯಲ್ಲಿ ರವಿ ನಾಯ್ಕ್‌ನ ಆವಾಜು ಶಿರಸಿ-ಸಿದ್ಧಾಪುರ ತಾಲೂಕಿನಲ್ಲೇ ಡುರುಕಿ ಹೊಡೆಯುತ್ತಿದೆ. ದೇಶಪಾಂಡೆಯಂತೂ ತನ್ನೆಲ್ಲ ತಾಕತ್ತು ಬಳಸಿ ರವಿಯನ್ನು ಮಕಾಡೆ ಮಲಗಿಸುವ ಪಣ ತೊಟ್ಟುಬಿಟ್ಟಿದ್ದಾರೆ. ನಂಬಿದ ಕಾಂಗ್ರೆಸ್ ಶಾಸಕರು ಕೈಕೊಟ್ಟ ನಂತರ ರವಿ ಹತಾಶನಾಗಿ ಹೋಗಿದ್ದಾರೆ. **18** ವರ್ಷದ ಹಿಂದೆ ರವಿ ಇದೇ ಕ್ಷೇತ್ರದಲ್ಲಿ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಕ್ಕಿಂತ ದೊಡ್ಡ ಅನಾಹುತ ಮಾಡಿಕೊಂಡಿದ್ದಾರೆಂದು ಆತನ ಹಿತೈಷಿಗಳೇ ಬಾಯ್ಬಾಯಿ ಬಡಿದುಕೊಳ್ಳುತ್ತಿದ್ದಾರೆ.

ಮೇಲುನೋಟಕ್ಕೆ ಕ್ಷೇತ್ರದಲ್ಲಿ ಕಾಂಗ್ರೆಸ್ V/s ಬಿಜೆಪಿ ಪೈಪೋಟಿ ನಡೆದಿರುವುದು ಕಾಣಿಸುತ್ತದೆ. ಜೆಡಿಎಸ್‌ನ ಕಳ್ಳ ಉದ್ಯಮಿ ರವಿಕುಮಾರ್‌ಗೆ ಸೋಲುವುದು ಗ್ಯಾರಂಟಿ ಎಂದು ಗೊತ್ತಾಗಿದೆ. ಹೀಗಾಗಿ ಕಳೆದ ಬಾರಿ ತಮ್ಮ ನಿಂತಾಗ ಹರಿಸಿದ ಪ್ರಮಾಣದಲ್ಲಿ ಆತ ಹಣ ಖರ್ಚು ಮಾಡುತ್ತಿಲ್ಲ. ಸ್ವ-ಜಾತಿ ನಾಮಧಾರಿಗಳು ಮಲೆಯಾಳಿ ಅಲಿಯಾಸ್ (ಈಡಿಗ) ಪಂಗಡ ತನಗಿಂತ ಹೆಚ್ಚು ಸ್ಥಳೀಯ ದೀವರ ಕೋಮಿನ ರವಿಗೇ ಒಲಿಯುತ್ತಾರೆಂಬ ಸತ್ಯವೂ ಆತನಿಗೆ ಸಾಕ್ಷಾತ್ಕಾರವಾಗಿದೆ. ಮಧು ಬಂ, ಕುಮ್ಮಿ ಪ್ರಚಾರವೂ ವ್ಯರ್ಥವೇ.

ಪ್ರತಿಷ್ಠೆ ಪಣಕ್ಕಿಟ್ಟು ಸೆಣಸಾಡುತ್ತಿರುವ ದೇಶಪಾಂಡೆ ನಾಲಾಯಕ್ ಘೋಟನೇಕರ್‌ನನ್ನು ಮತ್ತೆ ಎಮ್ಮೆಲ್ಸಿ ಮಾಡುವ ದುರಂತವೇ ಧಾವಿಸಿ ಬರುತ್ತಿದೆ! ದೇಶಪಾಂಡೆಯ ಹಣದ ಹಣಾಹಣಿ ಎದುರು ಆಸ್ತಿ ಮಾರಿ ಕಣಕ್ಕಿಳಿದಿರುವ ಬಿಜೆಪಿ ಉಳ್ವೇಕರ್ ಮತ್ತು ಸಾಲ ಮಾಡಿ ಪ್ರಚಾರ ನಡೆಸಿರುವ ರವಿನಾಯ್ಕ್, ಯಾವ ಲೆಕ್ಕವೂ ಇಲ್ಲ. ಹೋರಾಟ ಮತ್ತು ದುಡ್ಡಿನ ದರ್ಪದ ಮತ ರಾಜಕೀಯದ ನಡುವಿನ ಭ್ರಮೆ-ವಾಸ್ತವದ ನೆರಳು-ಬೆಳಕಿನ ಆಟ ಉತ್ತರ ಕನ್ನಡ ಅಖಾಡದಲ್ಲಿ ನಡೆದಿದೆ.


■ ನಹುಷ

...ಂಗೇರಿಗೆ ಕಾಡುತ್ತಿದೆ.

ಒಟ್ಟು **3175** ಮತದಲ್ಲಿ ಕಾಂಗ್ರೆಸ್ ಪಾಲು **1670**. ಇದರಲ್ಲಿ ರವಿ ನಾಯ್ಕ ಅಬ್ಬಬ್ಬಾ ಅಂದರೆ **200-250** ಮತ ಸೆಳೆದಾರಷ್ಟೇ! ಸ್ವ-ಜಾತಿ ದೀವರ ಬಿಟ್ಟು ಬೇರೆ ಜಾತಿ ಮತಗಳನ್ನು ಪಡೆಯುವುದು ಕಷ್ಟವಾಗಿದೆ. ವ್ಯಾಟ್ಸ್‌ಆ್ಯಪ್, ಫೇಸ್‌ಬುಕ್, ಮೆಸೇಜ್ ಮೂಲಕ ಆತ ...ರಳಿಸಿದ ಜಾತಿಯತೆ ಉಲ್ಟಾ ಹೊಡೆದಿದೆ. ದೀವರೇತರರು ಜಾತಿವಾದಿ ರವಿ ಬಗ್ಗೆ ಹೆದರಿಕೊಳ್ಳುವಂತಾಗಿದೆ. ಕಳೆದ ...0 ವರ್ಷದಿಂದ ಹೋರಾಟ, ಹಾರಾಟ ಮಾಡಿದ್ದೇ ...ರಿಷತ್ ಚುನಾವಣೆ ಕಣಕ್ಕಿಳಿದು ಜೀವನ ಪಾವನ ಮಾಡಿಕೊಳ್ಳಲು ಎಂಬಂತೆ ಆರ್ಭಟಿಸಿದ ರವಿ ಈಗ ಬರಿ ...ತ್ರಿಕೆಗಳ ಹಾಹಾಕಾರಕ್ಕೆ ಸೀಮಿತ ಆಗಿಹೋಗಿದ್ದು ದುರಂತ!


ಅರಗ, ಅತಿಕ್ರಮಣದಾರರು ಅಷ್ಟಿದ್ದಾರೆ, ಸ್ವಜಾತಿ ...ಗರು ಇಷ್ಟಿದ್ದಾರೆಂದು ಭ್ರಮೆಯ ಲೆಕ್ಕಾಚಾರದಲ್ಲೇ

ಮಂಡ್ಯ: ಕಾಂಗ್ರೆಸ್-ಜೆಡಿಎಸ್‌ಗೆ 'ಒಳೇಟು' ಭೀತಿ




ಮಂಡ್ಯದ ವಿಧಾನಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್-ಜೆಡಿಎಸ್ ನಡುವೆಯೇ ನೇರ ಹಣಾಹಣಿ. ಅಂಬಿ ಬಣದ ಎಲ್.ಆರ್.ಶಿವರಾಮೇಗೌಡ ಕಾಂಗ್ರೆಸ್‌ನ ಅಭ್ಯರ್ಥಿಯಾಗಿದ್ದರೆ, ಜೆಡಿಎಸ್‌ನಿಂದ ಬೆಂಗಳೂರು ವಿ.ವಿ. ಸಿಂಡಿಕೇಟ್ ಸದಸ್ಯ ಎನ್.ಅಪ್ಪಾಜಿಗೌಡ ಸ್ಪರ್ಧಿಸಿದ್ದಾರೆ. ಜೆಡಿಎಸ್ ಬಂಡಾಯದ ಲಾಭ ಮಾಡಿಕೊಳ್ಳಲು ಸ್ವತಃ ಪವರ್ ಮಿನಿಸ್ಟ್ರು ಡಿ.ಕೆ.ಶಿವಕುಮಾರ್ ಮಂಡ್ಯದ ಉಸ್ತುವಾರಿ ಹೆಗಲಿಗೇರಿಸಿಕೊಂಡಿರೋದು ಕಾಂಗ್ರೆಸ್‌ನಲ್ಲಿ ಹೊಸ ಹುಮ್ಮಸ್ಸು ತುಂಬಿದೆ.

ಪರಿಸ್ಥಿತಿ ಹೀಗಿದ್ದರೂ ಕಾಂಗ್ರೆಸ್ ಹಾಗೂ ಜೆಡಿಎಸ್ ಅಭ್ಯರ್ಥಿಗಳಿಗೆ ಒಳೇಟಿನ ಭಯ ಕಾಡುತ್ತಿದೆ. ಅಂಬಿ ಬಣದ ಶಿವರಾಮೇಗೌಡರನ್ನು ಕಂಡರಾಗದ ಎಸ್.ಎಂ.ಕೃಷ್ಣ ಬಣದವರು ಡಿ.ಕೆ.ಶಿವಕುಮಾರ್ ಕಾರಣಕ್ಕೆ ಒಂದಾಗಿದ್ದರೂ ಒಳಗೊಳಗೆ ಕೈಕೊಡುವ ಸೂಚನೆಗಳು ಕಾಣುತ್ತಿವೆ. ಇನ್ನು ದೇವೇಗೌಡರು ಜೆಡಿಎಸ್ ಟಿಕೆಟ್‌ನ್ನು ಚಲುವರಾಯಸ್ವಾಮಿ ಆಪ್ತ ಹಾಲಿ ಸದಸ್ಯ ಬಿ.ರಾಮಕೃಷ್ಣರಿಗೆ ನೀಡದೆ ರಿಯಲ್ ಎಸ್ಟೇಟ್ ಕುಳ ಅಪ್ಪಾಜಿಗೌಡನ ಕಾಸಿಗೆ ಮಾರಿಕೊಂಡಿದ್ದಾರೆಂದು ಸಿಟ್ಟಾಗಿರುವ 'ದಳ'ಪತಿಗಳು ಒಳೇಟು ಕೊಟ್ಟೇ ಕೊಡುತ್ತಾರೆಂಬ ರೂಮರ್ರೂ ಕೇಳಿಬರುತ್ತಿದೆ. ಒಟ್ಟಾರೆ ಎರಡು ಪಕ್ಷಗಳಲ್ಲಿ ಒಳೇಟಿನ ಭೀತಿ ಆವರಿಸಿದ್ದು, ಒಳೇಟಿನ ಜೋರು ಯಾವ ಪಕ್ಷದಲ್ಲಿ ಜಾಸ್ತಿಯೋ ಆ ಪಕ್ಷದ ಅಭ್ಯರ್ಥಿ ಗಂಟುಮೂಟೆ ಕಟ್ಟುವುದು ಗ್ಯಾರಂಟಿ. ಎನ್‌ಜಿಓ ಅಡ್ಡೆ ತೆರೆದು ಭರ್ತಿಯಾಗಿ ದುಡ್ಡು ಮಾಡಿರುವ ಕಾಡೇನಹಳ್ಳಿ ನಾಗಣ್ಣಗೌಡ ಬಿಜೆಪಿಯ ಕ್ಯಾಂಡಿಡೇಟು. ಹೊಳಲು ಪಟ್ಟಲದಮ್ಮನ ದೇವಸ್ಥಾನದಲ್ಲಿ ಜನಪ್ರತಿನಿಧಿಗಳಿಗೆ ಮದ್ಯ-ಬಾಡೂಟದ ಭರ್ಜರಿ ಪಾರ್ಟಿ ಕೊಡಿಸಿರುವ ಈತ ಎರಡನೇ ಪ್ರಾಶಸ್ತ್ಯದ ಮತ ಕೊಡಿ ಅದಕ್ಕಾಗಿ 10 ಸಾವಿರ ಕೊಡ್ತೇನೆ ಅಂತ ಗಾಳಿ ಗುದ್ದುವ ಸಾಹಸಕ್ಕೆ ಕೈಹಾಕಿದ್ದಾನೆ.




ಏಳು ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿರುವ ಜಿಲ್ಲೆಯಲ್ಲಿ ಕಾಂಗ್ರೆಸ್‌ನ ಇಬ್ಬರು ಶಾಸಕರು, ಸರ್ವೋದಯ ಪಕ್ಷದ ಓರ್ವ ಶಾಸಕ, ಜೆಡಿಎಸ್‌ನ ನಾಲ್ವರು ಶಾಸಕರು ಇದ್ದಾರೆ. ಇದರ ಜೊತೆಗೆ ಇಬ್ಬರು ವಿಧಾನಪರಿಷತ್ ಸದಸ್ಯರು ಹಾಗೂ ಸಂಸದ ಜೆಡಿಎಸ್ ಪಕ್ಷದವರೇ ಆಗಿರುವುದರಿಂದ ದಳದ ಅಭ್ಯರ್ಥಿ ಅಪ್ಪಾಜಿಗೌಡರಿಗೆ ಹೆಚ್ಚಿನ ಬಲ ಇರುವಂತೆ ಕಂಡುಬರುತ್ತೆ, ಆದರೆ ಅಸಲಿಯತ್ತ ಬೇರೆಯೇ ಇದೆ. ನನ್ನನ್ನು ಮಟ್ಟಹಾಕುವ ಉದ್ದೇಶದಿಂದಲೇ ಬಿ.ರಾಮಕೃಷ್ಣರಿಗೆ ಟಿಕೆಟ್ ತಪ್ಪಿಸಿ ಅಪ್ಪಾಜಿಗೌಡನಿಗೆ ನೀಡಿದ್ದಾರೆ ಎಂದು ದೇವೇಗೌಡ ಹಾಗೂ ಕುಮಾರಸ್ವಾಮಿ ಮೇಲೆ ಚೆಲುವರಾಯಸ್ವಾಮಿ ಸಿಟ್ಟಾಗಿದ್ದಾರೆ. ಆದರೆ ತಮ್ಮ ಸಿಟ್ಟನ್ನು ವಿಷಕಂಠನಂತೆ ನುಂಗಿಕೊಂಡು ಅಭ್ಯರ್ಥಿಯ ಪರ ಪ್ರಚಾರ ನಡೆಸುತ್ತಿದ್ದಾರೆ.

ಮಂಡ್ಯದಲ್ಲಿ 40 ಜಿಲ್ಲಾ ಪಂಚಾಯತಿ ಸದಸ್ಯರು, 152 ತಾಲ್ಲೂಕು ಪಂಚಾಯತಿ ಸದಸ್ಯರು, 3866 ಗ್ರಾಮ ಪಂಚಾಯತಿ ಸದಸ್ಯರು, 160 ನಗರಸಭೆ, ಪುರಸಭೆ ಸದಸ್ಯರು, 33 ನಾಮ ನಿರ್ದೇಶಿತ ಸದಸ್ಯರು, ಸಂಸದ ಮತ್ತು ಶಾಸಕರುಗಳು 10 ಮಂದಿ ಸೇರಿ ಒಟ್ಟಾರೆ 4261 ಮಂದಿ ಮತದಾರರಿದ್ದಾರೆ. ಪಕ್ಷಗಳ ಬಲಾಬಲ ಹೇಳುವುದಾದರೆ ಜಿಲ್ಲೆಯಲ್ಲಿ ಕಾಂಗ್ರೆಸ್‌ಗಿಂತ 350ಕ್ಕೂ ಹೆಚ್ಚು ಜೆಡಿಎಸ್ ಜನಪ್ರತಿನಿಧಿಗಳು ಆರಿಸಿ ಬಂದಿದ್ದಾರೆ. ಜಿಲ್ಲೆಯಲ್ಲಿ ಜೆಡಿಎಸ್ ಪ್ರಾಬಲ್ಯವಿದೆ. ಆದರೆ ದೇವೇಗೌಡರ ಕುಟುಂಬ ರಾಜಕಾರಣಕ್ಕೆ ಪ್ರತಿ ಚುನಾವಣೆಯಲ್ಲೂ ಒಬ್ಬೊಬ್ಬ ಜೆಡಿಎಸ್ ನಾಯಕರು ಬಲಿಯಾಗುತ್ತಿರುವುದು ಜೆಡಿಎಸ್ ಕಾರ್ಯಕರ್ತರಿಗೆ ಸರಿಕಾಣುತ್ತಿಲ್ಲ. ಜಿಲ್ಲೆಯ ನಾಯಕರಾದ ಕೆ.ಎನ್.ನಾಗೇಗೌಡ, ಬಿ.ಸಿದ್ದರಾಜು, ಕಲ್ಪನಾ ಸಿದ್ದರಾಜು, ಈಗ ಹಾಲಿ ಎಂಎಲ್ಸಿ ಬಿ.ರಾಮಕೃಷ್ಣ ಹೀಗೆ ಅಪ್ಪ-ಮಗನ ಜೋಡಿಯ ಕುತಂತ್ರಕ್ಕೆ ಬಲಿಯಾಗಿದ್ದಾರೆ. ಮುಂದಿನ ಚುನಾವಣೆಯಲ್ಲಿ ಯಾರನ್ನು ಬಲಿಪಡೆಯುತ್ತಾರೆ ಎಂಬುದು ಈಗಾಗಲೇ ಜೆಡಿಎಸ್ ಕಾರ್ಯಕರ್ತರಿಗೆ ಸ್ಪಷ್ಟವಾಗಿಯೇ ಗೊತ್ತಾಗಿದೆ. ಕಳೆದ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಜಿಲ್ಲೆಯ ಪ್ರತಿ ತಾಲ್ಲೂಕಿಗೂ ಹಣ ನೀಡಿದ ಬಿ.ರಾಮಕೃಷ್ಣರಿಗೆ ಎಂಎಲ್ಸಿ ಟಿಕೆಟ್ ಕನ್‌ಫರ್ಮ್ ಎಂದಿದ್ದ ದೇವೇಗೌಡ ಹಾಗೂ ಕುಮಾರಸ್ವಾಮಿ ಕಡೇ ಗಳಿಗೆಯಲ್ಲಿ ಟಿಕೆಟ್ ಕೊಡದೆ ಕಣ್ಣೀರು ಹಾಕಿಸಿದ್ದು ಕಾರ್ಯಕರ್ತರಲ್ಲಿ ಸ್ವಲ್ಪ



ಮಟ್ಟಿನ ಅಸಮಾಧಾನ ಮೂಡಿಸಿದ್ದಂತೂ ಸತ್ಯ.

ಮಂಡ್ಯ ತಾಲ್ಲೂಕೊಂದರಲ್ಲೇ 787 ಸದಸ್ಯರಿದ್ದಾರೆ. ಜಿಲ್ಲಾ ಉಸ್ತುವಾರಿ ಹಾಗೂ ವಸತಿ ಸಚಿವ ಅಂಬರೀಶ್ ಜಿಲ್ಲೆಗೆ ಭೇಟಿ ನೀಡುವುದೇ ಅಪರೂಪ. ಬಂದರೂ ತನ್ನ ಶಿಷ್ಯ ಅಮರಾವತಿ ಚಂದ್ರನ ಮನೆಯಲ್ಲಿ ಅಧಿಕಾರಿಗಳು ಹಾಗೂ ಬೆಂಬಲಿಗರ ಸಭೆ ನಡೆಸಿ ಬೆಂಗಳೂರು ಸೇರಿಕೊಳ್ಳುವ ಅಂಬಿಯನ್ನು ಕಂಡರೆ ಮಂಡ್ಯ ಕ್ಷೇತ್ರದ ಜನ ಮೂಗು ಮುರಿಯುತ್ತಾರೆ. ಅಂಬಿಯ ದುರಾಡಳಿತಕ್ಕೆ ಬೇಸತ್ತ ಜನರು 24 ಗ್ರಾಮ ಪಂಚಾಯತಿಗಳಲ್ಲಿ ಬಹುತೇಕ ಕಡೆ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದಾರೆ. ನಗರಸಭೆಯಲ್ಲಿ ಕಾಂಗ್ರೆಸ್ ಆಡಳಿತವಿದ್ದರೂ





ಮಾರಿಕೊಳ್ಳಲು ಸಿದ್ಧವಾಗಿರುವ ಅವರು ಕಾಂಗ್ರೆಸ್ ಅಭ್ಯರ್ಥಿ ಶಿವರಾಮೇಗೌಡನಿಗೆ ಮತ ನೀಡುತ್ತಾರೆಂಬ ವಿಶ್ವಾಸವಿಲ್ಲ. ತಾ.ಪಂ. ಹಾಗೂ ಬಹುತೇಕ ಗ್ರಾಮ ಪಂಚಾಯತಿಗಳಲ್ಲಿ ಮಾಜಿ ಶಾಸಕ ಎಂ.ಶ್ರೀನಿವಾಸ್ ಹಾಗೂ ಚಲುವರಾಯಸ್ವಾಮಿ ಬೆಂಬಲಿಗರು ಅತಿಹೆಚ್ಚಿನ ಸಂಖ್ಯೆಯಲ್ಲಿದ್ದು, ಜೆಡಿಎಸ್ ಅಭ್ಯರ್ಥಿ ಅಪ್ಪಾಜಿಗೌಡನಿಗೆ ವರದಾನವಾಗಿದೆ. ಇನ್ನು ಡಿಕೆಶಿ ಆಗಮನದಿಂದ ಎಸ್.ಎಂ.ಕೃಷ್ಣ ಹಾಗೂ ಅಂಬಿ ಬಣಗಳು ಒಂದಾಗಿರೋದು ಶಿವರಾಮೇಗೌಡನಿಗೆ ಪ್ಲಸ್ ಪಾಯಿಂಟ್. ಜಿಲ್ಲೆಯಾದ್ಯಂತ ಗರಗರ ಸುತ್ತುತ್ತಿರುವ ಶಿವರಾಮೇಗೌಡನಿಗೆ ಜಿಲ್ಲಾಧ್ಯಕ್ಷ ಆತ್ಮಾನಂದ ಸಾಥ್ ನೀಡುತ್ತಿದ್ದಾನೆ. ಕಾಂಗ್ರೆಸ್ ಮುಖಂಡರಾದ ಎಚ್.ಪಿ.ಮಹೇಶ್, ಗಣಿಗ ರವಿಕುಮಾರ್ ಕೂಡಾ ಶಿವರಾಮೇಗೌಡನ ಪರ ಉತ್ಸಾಹದಲ್ಲೇ ಪ್ರಚಾರ ನಡೆಸುತ್ತಿದ್ದಾರೆ.

ಮದ್ದೂರು ತಾಲ್ಲೂಕಿನಲ್ಲಿ ದೇವೇಗೌಡರ ಬೀಗ ಶಾಸಕ ಡಿ.ಸಿ.ತಮ್ಮಣ್ಣನದ್ದೇ ಪಾರುಪತ್ಯ. ಹಾಲಿ ಎಂಎಲ್ಸಿ ಬಿ.ರಾಮಕೃಷ್ಣ ಮದ್ದೂರಿನ ಹೊನ್ನಲಗೆರೆಯವರಾಗಿದ್ದು, ಅವರಿಗೆ ಟಿಕೆಟ್ ನೀಡದಿರುವುದು ಸ್ಥಳೀಯ ದಳಪತಿಗಳ ಆಕ್ರೋಶಕ್ಕೆ ಕಾರಣವಾಗಿದೆ. ಬಂಡಾಯ ಕಣದಿಂದ ಹಿಂದೆ ಸರಿದಿರುವ ಬಿ.ರಾಮಕೃಷ್ಣ 3-4 ಬಹಿರಂಗ ಸಭೆಗಳಲ್ಲಿ ಅಪ್ಪಾಜಿಗೌಡನ ಜೊತೆ ಕಾಣಿಸಿಕೊಂಡಿದ್ದು ಬಿಟ್ಟರೆ ಹೆಚ್ಚೇನು ಉತ್ಸಾಹ ತೋರುತ್ತಿಲ್ಲ, ನನ್ನನ್ನು ಪಕ್ಷ ಎಷ್ಟರಮಟ್ಟಿಗೆ ಬಳಸಿಕೊಳ್ಳುತ್ತದೋ ಅಷ್ಟರಮಟ್ಟಿಗೆ ಕೆಲಸ ಮಾಡುತ್ತೇನೆ ಎಂದಿರುವ ರಾಮಕೃಷ್ಣ ಪರೋಕ್ಷ ಎಚ್ಚರಿಕೆಯನ್ನು ರವಾನಿಸಿಯಾಗಿದೆ. ತಾಲ್ಲೂಕಿನಲ್ಲಿ ಜೆಡಿಎಸ್ ಪ್ರಬಲವಾಗಿದ್ದು, ಬಿ.ರಾಮಕೃಷ್ಣರಿಗೆ ಟಿಕೆಟ್ ನೀಡಿದ್ದರೆ ಪಕ್ಷಕ್ಕೆ ಹೆಚ್ಚಿನ ಬಲ ಸಿಗುತ್ತಿತ್ತು ಎಂಬುದರಲ್ಲಿ ಡೌಟೇ ಇರಲಿಲ್ಲ, ಈಗಲೂ ಬಿ.ರಾಮಕೃಷ್ಣ ನೋವು ನುಂಗಿಕೊಂಡು ಚುನಾವಣೆ ಮಾಡಿದರೆ ದಳಕ್ಕೆ ಕಾಂಗ್ರೆಸ್‌ಗಿಂತ ಹೆಚ್ಚು ಮತಗಳು ದೊರಕುತ್ತವೆ. ಇನ್ನು ಕಾಂಗ್ರೆಸ್‌ನಲ್ಲಿ ಕಲ್ಪನಾ ಸಿದ್ದರಾಜು, ಮಧು ಮಾದೇಗೌಡ, ಗುರುಚರಣ್ ಮೊದಲಾದವರಿದ್ದಾರೆ. ಕಲ್ಪನಾ ಸಿದ್ದರಾಜು ತಮ್ಮದೇ ಆದ 100ಕ್ಕೂ ಹೆಚ್ಚು ಮತದಾರರನ್ನು ಹೊಂದಿದ್ದಾರೆ. ಪತಿ ಸಿದ್ದರಾಜು ಅನುಯಾಯಿಗಳು ಜೆಡಿಎಸ್‌ನಲ್ಲಿರುವುದರಿಂದ ಅಲ್ಲಿಂದಲೂ ಒಂದಷ್ಟು ಮತಗಳನ್ನು ಸೆಳೆಯುವ ತಾಕತ್ತು ಅವರಿಗಿದೆ.




ಎಸ್.ಎಂ.ಕೃಷ್ಣ ಸಹೋದರ ಎಸ್.ಎಂ.ಶಂಕರ್‌ರ ಪುತ್ರ ಗುರುಚರಣ್ ಯಾವತ್ತೂ ತಾನಿರುವ ಪಕ್ಷಕ್ಕಾಗಲಿ, ನಂಬಿರುವ ನಾಯಕರಿಗಾಗಲೀ ಗಟ್ಟಿ ನಿಷ್ಠೆಯನ್ನು ಪ್ರದರ್ಶಿಸಿದವರಲ್ಲ. ಡಿ.ಸಿ.ತಮ್ಮಣ್ಣನ ಪಾಲಿನ ಆಪತ್ಬಾಂಧವನಂತೆ ಕಾರ್ಯನಿರ್ವಹಿಸುತ್ತಿದ್ದ ಗುರುಚರಣ್ ಈ ಬಾರಿ ಡಿ.ಕೆ.ಶಿವಕುಮಾರ್ ಆಣತಿಯಂತೆ ಶಿವರಾಮೇಗೌಡನ ಪರ ಬ್ಯಾಟ್ ಬೀಸುತ್ತಿದ್ದಾನಷ್ಟೆ. ಬುಕ್ಕಿಂಗ್ ಕ್ಯಾಂಡಿಡೇಟ್ ಮಧು ಮಾದೇಗೌಡನಿಗೆ ಮುಂದಿನ ಪರಿಷತ್ ಚುನಾವಣೆಯ ಪದವೀಧರ ಕ್ಷೇತ್ರದ ಟಿಕೆಟ್ ಕೊಡುವ ಭರವಸೆ ಡಿ.ಕೆ.ಶಿವಕುಮಾರ್ ನೀಡಿದ್ದು, ಈ ಹಿನ್ನೆಲೆಯಲ್ಲಿ ಭಾರತೀನಗರ ಹಾಗೂ ಚಿಕ್ಕರಸಿನಕೆರೆ ಭಾಗದಲ್ಲಿ






ಒಂದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಮತ ಹಾಕಿಸಬಹುದು.

ಮಳವಳ್ಳಿಯಲ್ಲಿ ಕೈ ಪಾರ್ಟಿಯ ಶಿವರಾಮೇಗೌಡನಿಗೆ ಬೇರೆಲ್ಲಾ ತಾಲ್ಲೂಕಿಗಿಂತ ಅತಿ ಹೆಚ್ಚಿನ ಲೀಡ್ ಸಿಗುವುದು ಖಚಿತ. 689 ಮತದಾರರಿರುವ ಮಳವಳ್ಳಿಯ 39 ಪಂಚಾಯತಿಗಳಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರ ಹಿಡಿದಿದೆ. ಕಳೆದ ಎರಡು ಲೋಕಸಭಾ ಚುನಾವಣೆಗಳಲ್ಲಿ ಮಂಡ್ಯದ ಕಾಂಗ್ರೆಸ್ ಅಭ್ಯರ್ಥಿ ರಮ್ಯಾಗೆ ಭರ್ಜರಿ ಲೀಡ್ ಲಭಿಸಿದ್ದೇ ಮಳವಳ್ಳಿಯಿಂದ. ಇದಕ್ಕೆ ಇಲ್ಲಿನ ಶಾಸಕ ಪಿ.ಎಂ.ನರೇಂದ್ರಸ್ವಾಮಿಯ ವರ್ಚಸ್ಸು ಕಾರಣವೆನ್ನುವುದನ್ನು ಬಿಡಿಸಿಹೇಳುವ ಅಗತ್ಯವಿಲ್ಲ. ಸಿಎಂ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರುಗಳಿಗೆ ಆಪ್ತರಾಗಿರುವ ನರೇಂದ್ರಸ್ವಾಮಿ ಈ ಚುನಾವಣೆಯನ್ನೂ ಗಂಭೀರವಾಗಿ ಪರಿಗಣಿಸಿದ್ದಾರೆ. ಜೆಡಿಎಸ್‌ನ ಮಾಜಿ ಶಾಸಕ ಕೆ.ಅನ್ನದಾನಿ ಸವಕಲು ನಾಣ್ಯದಂತಾಗಿದ್ದು ಅವರಿಂದಾಗಿ ಜೆಡಿಎಸ್ ಅಭ್ಯರ್ಥಿಗೆ ಮತ ಹರಿದುಬರುವುದು ಕಷ್ಟ. ಹೆಚ್ಚೆಂದರೆ ಹಲಗೂರು ಹೋಬಳಿಯಲ್ಲಿ ದೇವೇಗೌಡ,




ಕುಮಾರಸ್ವಾಮಿ ಅಭಿಮಾನಿಗಳು ಅಪ್ಪಾಜಿಗೌಡನಿಗೆ ಮತ ಹಾಕಬಹುದಷ್ಟೆ.

ನಾಗಮಂಗಲ ತಾಲ್ಲೂಕಿನಲ್ಲಿ 480 ಮತಗಳಿದ್ದು, ಕಾಂಗ್ರೆಸ್-ಜೆಡಿಎಸ್ ಅಭ್ಯರ್ಥಿಗಳಿಬ್ಬರೂ ಇದೇ ತಾಲ್ಲೂಕಿನವರಾಗಿದ್ದಾರೆ. ಶಾಸಕ ಎನ್.ಚಲುವರಾಯಸ್ವಾಮಿ ನೋವು ನುಂಗಿಕೊಂಡು ಜೆಡಿಎಸ್ ಅಭ್ಯರ್ಥಿ ಅಪ್ಪಾಜಿಗೌಡನ ಪರ ಕೆಲಸ



ಮಾಡುತ್ತಿದ್ದಾರೆ. ಆದರೆ ಒಳೇಟಿನ ಚರ್ಚೆ ಬಿಸಿಯೇರುತ್ತಿರುವುದರಿಂದ ಅವರ ಪ್ರಚಾರವನ್ನು ಜೆಡಿಎಸ್ ಮತಗಳಾಗಿ ಕೌಂಟ್ ಮಾಡುವುದು ಕಷ್ಟ. ಇನ್ನು ಕಾಂಗ್ರೆಸ್‌ನ ಶಿವರಾಮೇಗೌಡನ ಪರ ಪತ್ನಿ ಸುಧಾ, ಮಗ ಚೇತನ್ ತಾಲ್ಲೂಕನ್ನು ಸುತ್ತಿ ಮತಯಾಚಿಸುತ್ತಿದ್ದಾರೆ. ಮಾಜಿ ಶಾಸಕ ಸುರೇಶ್‌ಗೌಡ ಸೌಮ್ಯಕೇಶವ ದೇವಸ್ಥಾನದಲ್ಲಿ ನಿಮ್ಮ ಪರ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆಂದು ಶಿವರಾಮೇಗೌಡರ ಮುಂದೆ ಪ್ರಮಾಣ ಮಾಡಿ ಪ್ರಚಾರದಲ್ಲಿ ತೊಡಗಿದ್ದಾರೆ.

ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಜೆಡಿಎಸ್ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ಪ್ರಶ್ನಾತೀತ ನಾಯಕ.



ಚುನಾವಣೆ ಮಾಡೋದರಲ್ಲಿ ನಿಸ್ಸೀಮ ಎಂಬ ಬಿರುದು ಪಡೆದಿರುವ ರಮೇಶ್‌ಬಾಬುಗೆ ಮಾತಲ್ಲಿ ಮರಳು ಮಾಡುವ ಕಲೆ ಕರಗತವಾಗಿದೆ. 443 . ಮತದಾರರಿರುವ ಶ್ರೀರಂಗಪಟ್ಟಣದಲ್ಲೂ ಜೆಡಿಎಸ್ ಹಾಗೂ ವಿರೋಧ ಪಕ್ಷಗಳ ಬಲಾಬಲವೂ ಹೆಚ್ಚು ಕಡಿಮೆ ಸಮಪ್ರಮಾಣದಲ್ಲಿದೆ. ಪ್ರಭಾವಿ ಕಾಂಗ್ರೆಸ್ ಮುಖಂಡ ರವೀಂದ್ರ ಶ್ರೀಕಂಠಯ್ಯ, ಎಲ್.ಆರ್.ಶಿವರಾಮೇಗೌಡ ಪರ ಕೆಲಸ ಮಾಡುತ್ತಿದ್ದಾರೆ. ಇದುವರೆಗೂ ಜೆಡಿಎಸ್ ಹಿಡಿತದಲ್ಲಿದ್ದ ಚಿಕ್ಕ ಅಂಕನಹಳ್ಳಿ ಹಾಗೂ ಕೆಆರ್‌ಎಸ್ ಪಂಚಾಯತಿ ಈಗ ರವೀಂದ್ರ ಶ್ರೀಕಂಠಯ್ಯನ ಹಿಡಿತದಲ್ಲಿದೆ. ಇದು ಕಾಂಗ್ರೆಸ್ ಅಭ್ಯರ್ಥಿಗೆ ಅನುಕೂಲ. ಆದರೆ ಅಂಬಿ ಬಂಟರಾದ ಸಚ್ಚಿದಾನಂದ ಹಾಗೂ ಅವನ ಮಾವ ಶೆಟ್ಟಿಹಳ್ಳಿ ಲಿಂಗರಾಜು ಇದುವರೆಗೂ ಪ್ರಚಾರ ಕಣದಲ್ಲಿ ಕಾಣಿಸಿಕೊಂಡಿರಲಿಲ್ಲ, ಅಂಬಿ ಆಪ್ತ ವಲಯದಲ್ಲಿದ್ದ ಮಾವ-ಅಳಿಯ ಜೋಡಿ ಇತ್ತೀಚಿನ ದಿನಗಳಲ್ಲಿ ಅಂಬಿ ಜೊತೆ ಕಾಣಿಸಿಕೊಳ್ಳುತ್ತಿಲ್ಲ, ನೈಸ್ ಸಂಸ್ಥೆಯ ಅಶೋಕ್ ಖೇಣಿ ಹಿಡಿದುಕೊಂಡು ದುಂಡಗಾದ ಸಚ್ಚಿದಾನಂದ ಅಂಬಿ ಬಿಟ್ಟು ಸಚಿವರಾದ ಎಂ.ಬಿ.ಪಾಟೀಲ್,

ಮಹದೇವಪ್ಪ ಮೊದಲಾದವರ ಸುಳ್ಳಿನಲ್ಲಿದ್ದು ವರ್ಗಾವಣೆ ದಂಧೆಯಲ್ಲಿ ಮುಳುಗಿದ್ದಾರೆ. ಅಂಬಿ ಹೇಳಿದನಂತರ ಈಗಷ್ಟೆ ಮಾವ-ಅಳಿಯ ಜೋಡಿ ಪ್ರಚಾರ ಕಾರ್ಯಕ್ಕೆ ಚಾಲನೆ ಕೊಟ್ಟಿದೆ. ಪಿಎಸ್‌ಎಸ್‌ಕೆ ಅಧ್ಯಕ್ಷ ನಂಜುಂಡೇಗೌಡರು ರೈತ ಸಂಘದ ನಾಯಕರಾಗಿದ್ದು ತಮ್ಮ ಪಕ್ಷದ ಮತಗಳನ್ನು ಕಾಂಗ್ರೆಸ್ ಅಭ್ಯರ್ಥಿಗೆ ಹಾಕಿಸಲಿದ್ದಾರೆ. ಬಿಜೆಪಿಗೂ ಬೆರಳೆಣಿಕೆ ಮತಗಳು ಈ ಕ್ಷೇತ್ರದಲ್ಲಿ ಸಿಗಬಹುದು.

ಪಾಂಡವಪುರ ತಾಲ್ಲೂಕಿನ ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಸರ್ವೋದಯ ಪಕ್ಷದ ಕೆ.ಎಸ್.ಪುಟ್ಟಣ್ಣಯ್ಯ ಇದ್ದರೂ ಜೆಡಿಎಸ್ ಸಂಸದ ಸಿ.ಎಸ್.ಪುಟ್ಟರಾಜು ಪ್ರಾಬಲ್ಯವೇ ಹೆಚ್ಚು. ಇಲ್ಲಿ ಪುಟ್ಟರಾಜುಗೆ ಕಾಂಗ್ರೆಸ್, ರೈತಸಂಘದಿಂದ ಯಾವುದೇ ಅಡ್ಡಿ ಇಲ್ಲ. ಒಂದು ಕಾಲದಲ್ಲಿ ತಾಲ್ಲೂಕಿನಲ್ಲಿ ಬಲಿಷ್ಠವಾಗಿದ್ದ ಕಾಂಗ್ರೆಸ್ ಈಗ ನಾಮಾವಶೇಷ ಆಗಿದೆ. ಎಂಎಲ್‌ಎ ಚುನಾವಣೆಯಲ್ಲಿ ರೈತಸಂಘದ ಪುಟ್ಟಣ್ಣಯ್ಯನವರಿಗೆ ಮತ ಹಾಕಿದ್ದರೂ ಜೆಡಿಎಸ್‌ನ ಜನಪ್ರತಿನಿಧಿಗಳು ಪಟ್ಟಣ ಪಂಚಾಯತಿ, ತಾಲ್ಲೂಕು ಪಂಚಾಯತಿ, ಗ್ರಾಮ ಪಂಚಾಯತಿಗಳಲ್ಲಿ ಹೆಚ್ಚಿದ್ದಾರೆ. ದುದ್ದ ಹೋಬಳಿಯಲ್ಲೂ ಜೆಡಿಎಸ್ ಅಬ್ಬರವಿದ್ದು, ಇಲ್ಲಿ ಮಾಜಿ ಶಾಸಕ ಎಚ್.ಬಿ.ರಾಮು, ಜಿ.ಪಂ. ಮಾಜಿ ಸದಸ್ಯ ಸಿ.ಡಿ.ಗಂಗಾಧರ್ ಒಂದಷ್ಟು ಮತಗಳನ್ನು ಕಾಂಗ್ರೆಸ್ ಅಭ್ಯರ್ಥಿ ಶಿವರಾಮೇಗೌಡನಿಗೆ ಹಾಕಿಸಬಹುದು. 462 ಮತದಾರರಿರುವ ಈ ಕ್ಷೇತ್ರದಲ್ಲಿ ರೈತಸಂಘದ 90ಕ್ಕೂ ಹೆಚ್ಚು ಮತಗಳನ್ನು ಶಾಸಕ ಪುಟ್ಟಣ್ಣಯ್ಯ ಕಾಂಗ್ರೆಸ್ ಅಭ್ಯರ್ಥಿಗೆ ಸಿಗುವಂತೆ ನೋಡಿಕೊಳ್ಳುವ ಸಾಧ್ಯತೆಯಿದೆ. ಎಲ್.ಡಿ.ರವಿ, ಜಿ.ಪಂ. ಮಾಜಿ ಸದಸ್ಯ ಎಚ್.ಮಂಜುನಾಥರಿಂದಾಗಿ ಬೆರಳೆಣಿಕೆಯಷ್ಟು ಮತಗಳು ಕಾಂಗ್ರೆಸ್ ಅಭ್ಯರ್ಥಿಗೆ ಹರಿದುಹೋಗಬಹುದು. ಆದರೂ ಇಲ್ಲಿ ಜೆಡಿಎಸ್ ಅಭ್ಯರ್ಥಿಯನ್ನು ಓವರ್‌ಟೇಕ್ ಮಾಡುವುದು ಕಷ್ಟದ ಮಾತು.

ಕೆ.ಆರ್.ಪೇಟೆ ಶಾಸಕರಾಗಿ ಜೆಡಿಎಸ್‌ನ ಕೆ.ಸಿ.ನಾರಾಯಣಗೌಡನಿದ್ದರೂ ಇಲ್ಲಿ ಕಾಂಗ್ರೆಸ್‌ನ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ ಹಾಗೂ ಅವನ ದುಷ್ಟ ಸಹೋದರರ ಅಬ್ಬರವೇ ಹೆಚ್ಚು. ಈಗಾಗಲೇ ಕಾಂಗ್ರೆಸ್ ಅಭ್ಯರ್ಥಿ ಪರ ಮಾಜಿ ಸ್ಪೀಕರ್ ಕೃಷ್ಣ ಹಾಗೂ ಅವರ ಬೆಂಬಲಿಗ ಜಿ.ಪಂ. ಮಾಜಿ ಅಧ್ಯಕ್ಷ ಶೀಳನೆರೆ ಅಂಬರೀಶ್, ಮನ್‌ಮುಲ್ ನಿರ್ದೇಶಕ ಡಾಲು ರವಿ ಮೊದಲಾದವರು ಪಂಚಾಯತಿವಾರು ಮತದಾರರನ್ನು ಭೇಟಿ ಮಾಡಿ ಪ್ರಚಾರ ನಡೆಸಿ ಬಂದಿದ್ದಾರೆ. ಜೆಡಿಎಸ್ ಪಕ್ಷಕ್ಕೂ ಕೆ.ಆರ್.ಪೇಟೆಯಲ್ಲಿ ಸಾಕಷ್ಟು ಹಿಡಿತವಿದೆ. ದೇವೇಗೌಡ ಹಾಗೂ ಕುಮಾರಸ್ವಾಮಿ ಈ ಭಾಗದಲ್ಲಿ ತಮ್ಮದೇ ಆದ ಮತಬ್ಯಾಂಕ್ ಹೊಂದಿದ್ದಾರೆ. ಹಾಗಾಗಿಯೇ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೆ.ಆರ್.ಪೇಟೆ ಕೃಷ್ಣ ಬಂಡಾಯ ಎದ್ದರೂ ಕೆ.ಸಿ.ನಾರಾಯಣಗೌಡನಿಗೆ ಟಿಕೆಟ್ ಕೊಟ್ಟು ಗೆಲ್ಲಿಸಿಕೊಂಡಿದ್ದರು. ಈಗಲೂ ಅದೇ ಹಿಡಿತ ದೇವೇಗೌಡರ ಕುಟುಂಬಕ್ಕಿದೆ. ಒಟ್ಟಾರೆ ಕ್ಷೇತ್ರದಲ್ಲಿ ಕಾಂಗ್ರೆಸ್-ಜೆಡಿಎಸ್ ನಡುವೆ ಪೈಪೋಟಿ ಫಿಫ್ಟಿ-ಫಿಫ್ಟಿ ಎನ್ನುವಂತಿದೆ.


ಸಮಗ್ರವಾಗಿ ನೋಡುವುದಾದರೆ ಕಾಂಗ್ರೆಸ್-ಜೆಡಿಎಸ್ ನಡುವೆ ನೆಕ್‌ಟುನೆಕ್ ಸೆಣೆಸಾಟ ಕಂಡುಬರುತ್ತೆ. ಮುಂಬರುವ ವಿಧಾನಸಭೆ ಚುನಾವಣೆ, ಜಿ.ಪಂ., ತಾ.ಪಂ. ಟಿಕೆಟ್ ಬೇಕು ಅನ್ನುವವರು ಅಪ್ಪಾಜಿಗೌಡನನ್ನು ಗೆಲ್ಲಿಸಿಕೊಂಡು ಬರಬೇಕು ಅಂತ ಜೆಡಿಎಸ್ ವರಿಷ್ಠ ದೇವೇಗೌಡ ಬೆದರಿಕೆ-ಕಂ-ಆಸೆ ಹುಟ್ಟಿಸಿರುವುದರಿಂದ ಜೆಡಿಎಸ್ ಮುಖಂಡರು ಸಾಕಷ್ಟು ಬೆವರು ಹರಿಸುತ್ತಿದ್ದಾರೆ. ಮುಂಬರುವ ತಾ.ಪಂ., ಜಿ.ಪಂ. ಚುನಾವಣೆಯಲ್ಲಿ ತಮ್ಮ ಬೆಂಬಲಿಗರಿಗೆ ಟಿಕೆಟ್ ಕೊಡಿಸುವ ಜವಾಬ್ದಾರಿ ಇರುವುದರಿಂದ ಚಲುವರಾಯಸ್ವಾಮಿ ಕೂಡಾ ತನ್ನ ಬಂಡಾಯವನ್ನು ಬಹಿರಂಗವಾಗಿ ತೋರ್ಗೊಡದೆ ಪ್ರಚಾರದಲ್ಲಿ ಭಾಗಿಯಾಗಿದ್ದಾರೆ. ಇನ್ನು ಶಿವರಾಮೇಗೌಡ ಚಾಲಾಕಿ ರಾಜಕಾರಣಿ ಆಗಿರುವುದರಿಂದ ಒಂದುವೇಳೆ ಗೆದ್ದು ಬಿಟ್ಟರೆ ಸಿಎಂ ಸಿದ್ದರಾಮಯ್ಯನವರಿಗೆ ಬಹಳ ಕ್ಲೋಸ್ ಆಗುತ್ತಾರೆಂಬ ದೂರಾಲೋಚನೆಯು ಕೆಲ ಕಾಂಗ್ರೆಸ್ ಮುಖಂಡರನ್ನು ಬಾಧಿಸುತ್ತಿದೆ. ಹೀಗಾಗಿ ಎರಡೂ ಪಕ್ಷಗಳಿಗೆ ಒಳೇಟಿನ ಭೀತಿ ಇದ್ದೇಇದೆ.

ಕಾಂಗ್ರೆಸ್ ಮತ್ತು ಜೆಡಿಎಸ್ ಒಂದು ಓಟಿಗೆ 25,000 ರೂ. ಫಿಕ್ಸ್ ಮಾಡಿದ್ದಾರೆ ಎನ್ನಲಾಗುತ್ತಿದ್ದು ಈ ಹೊತ್ತಿನವರೆಗೂ ಕಾಂಗ್ರೆಸ್-ಜೆಡಿಎಸ್ ಅಭ್ಯರ್ಥಿಗಳು ಇನ್ನು ಹಣ ಹಂಚಿಲ್ಲವಂತೆ. ಯಾರು ಮೊದಲು ಹಣ ನೀಡುತ್ತಾರೋ ಅವರಿಗಿಂತ 5 ಸಾವಿರ ಹೆಚ್ಚು ಹಣ ನೀಡುವ ಯೋಜನೆ ಹಾಕಿಕೊಂಡೇ ಇಂತಹ ವಿಳಂಬ ನೀತಿ ಅನುಸರಿಸಲಾಗುತ್ತಿದೆ ಎಂಬ ಅಶಾವಾದ ಜನಪ್ರತಿನಿಧಿ ಮತದಾರರಲ್ಲಿ ಹರಿದಾಡುತ್ತಿರೋದು ಹಾಸ್ಯಾಸ್ಪದ.

■ ವರದಿಗಾರ

ದುರ್ಗ-ದಾವಣಗೆರೆ

ಕೈಗೆ ಆಚಾರಿಯ ಬಲ; ಕಮಲ ವಿಲವಿಲ!



ರಘು ಆಚಾರ್

ಎಂಎಲ್ಸಿ ಎಲೆಕ್ಷನ್ ಕಾವು ದುರ್ಗ- ದಾವಣಗೆರೆಯಲ್ಲೂ ಜೋರಾಗಿದೆ. ಕೈ ಪಾರ್ಟಿಯಿಂದ ಹಾಲಿ ಪರಿಷತ್ ಸದಸ್ಯ ರಘು ಆಚಾರಿ ಅಖಾಡಕ್ಕಿಳಿದಿದ್ದರೆ, ಬಿಜೆಪಿ ತನ್ನ ಹಳೆಯ ಸೋಲುಮೋರೆ ನವೀನನನ್ನು ಕಣಕ್ಕಿಳಿಸಿದೆ. ನಾಯಕ ಜನಾಂಗದ ಓಟುಗಳಿಗೆ ಲಗ್ಗೆ ಹಾಕಿ ಕಾಂಗ್ರೆಸ್‌ನ ರಘು ಆಚಾರಿಗೆ ಟಾಂಗ್ ಕೊಡಬೇಕೆಂದು ಜೆಡಿಎಸ್ ಮೈಸೂರು ಕಡೆಯ ಎಲ್.ಸೋಮಣ್ಣ ಎಂಬ ಕ್ಯಾಂಡಿಡೇಟನ್ನು ಅಭ್ಯರ್ಥಿಯನ್ನಾಗಿಸಿದೆ. ಇದು ಬಿಜೆಪಿ- ಜೆಡಿಎಸ್ ಒಳಮೈತ್ರಿಯ 'ಪೊಲಿಟಿಕಲ್ ಸ್ಟ್ರಾಟಜಿ' ಎಂಬ ಮಾತುಗಳು ಕೇಳಿಬರುತ್ತಿವೆ. ಅದೇನೇ ಇರಲಿ, ಪರಿಷತ್ ರೇಸ್‌ನಲ್ಲಿ ಸದ್ಯದ ಮಟ್ಟಿಗೆ ಕಾಂಗ್ರೆಸ್ ಕುದುರೆಯೇ ಮುಂಚೂಣಿಯಲ್ಲಿದ್ದು, ಇದೇ ಹವಾ ಎಲೆಕ್ಷನ್ ದಿನದವರೆಗೂ ಕಾಯ್ದುಕೊಂಡರೆ ಕೈ ಪಾರ್ಟಿ ಅಜಮಾಸು ಮೂವತ್ತು ವರ್ಷಗಳ ಸೋಲಿನ ಛಾಯೆಯಿಂದ ಹೊರಬರುವುದರಲ್ಲಿ ಡೌಟೇ ಇಲ್ಲ.

ರುದ್ರಮ್ಮನ ಖಾಸಗಿ ದರ್ಬಾರ್!

ಅಸಲಿಗೆ ಅವಿಭಜಿತ ಚಿತ್ರದುರ್ಗ ಜಿಲ್ಲೆಯಲ್ಲಿ ಕಾಂಗ್ರೆಸ್ ಪಾರ್ಟಿ ಎಂಎಲ್‌ಎ, ಎಂಪಿ ಎಲೆಕ್ಷನ್‌ಗಳೆರಡರಲ್ಲೂ ದಿಗ್ವಿಜಯ ಸಾಧಿಸುತ್ತಾ ಬಂದಿದ್ದರೂ ಎಂಎಲ್ಸಿ ಚುನಾವಣೆಯಲ್ಲಿ ಸತತ ಮೂವತ್ತು ವರ್ಷಗಳಿಂದ ಗೆದ್ದ ಕುರುಹೇ ಇಲ್ಲ. ಇತ್ತ ದಾವಣಗೆರೆಯಲ್ಲಿ ಶಾಮನೂರು ಧಣಿಗಳ ಹಾಗೂ ಅತ್ತ ದುರ್ಗದಲ್ಲಿ ಕೆ.ಎಚ್.ರಂಗನಾಥ್, ಸಿ.ಪಿ.ಮೂಡಲಗಿರಿಯಪ್ಪ, ಮಾಜಿ ಜಡ್ಜ್ ಎನ್.ವೈ. ಹನುಮಂತಪ್ಪನಂತಹ ನಾಯಕರ ಪ್ರಭಾವ ಇದ್ದಾಗಲೂ ಕಾಂಗ್ರೆಸ್ ಮೂರು ದಶಕಗಳ ಕಾಲ ಪರಿಷತ್ ಚುನಾವಣೆಯಲ್ಲಿ ಮುಗ್ಗರಿಸುತ್ತಾ ಬಂದದ್ದು ಸೋಜಿಗವೆನಿಸುತ್ತದೆ. ಅದಕ್ಕೆ ಮುಖ್ಯ ಕಾರಣ ಜನತಾ ಪರಿವಾರದ ಭೀಮಸಮುದ್ರ ಬಿ.ಟಿ.ರುದ್ರಮ್ಮನ ಬಿಗಿಹಿಡಿತ. ದುರ್ಗದ ಪಾಲಿಗೆ ಜನತಾ ಪಾರ್ಟಿಯ ದೊರೆಸಾನಿಯಂತಿದ್ದ ಬಿ.ಟಿ.ರುದ್ರಮ್ಮ ಸತತ ಮೂರು ಬಾರಿ ಹಾಗೂ ಮಗ ಬಿ.ಟಿ.ಚನ್ನಬಸಪ್ಪ ಎರಡು ಬಾರಿ ಎಂಎಲ್ಸಿ ಎಲೆಕ್ಷನ್‌ನಲ್ಲಿ ನಿರಂತರವಾಗಿ ಗೆಲ್ಲುವ ಮೂಲಕ ಇಲ್ಲಿ ಕಾಂಗ್ರೆಸ್-ಬಿಜೆಪಿ ಪಾರ್ಟಿಗಳು ಲೆಕ್ಕಕ್ಕಿಲ್ಲದಂತಾಗಿದ್ದವು. ಜನತಾ ಪರಿವಾರ ಇಬ್ಭಾಗವಾದ ನಂತರ ಗೌಡರ ಜೆಡಿಎಸ್ ಪಾಳಯದಲ್ಲಿ ಗುರುತಿಸಿಕೊಂಡಿದ್ದ ಬಿ.ಟಿ.ಚನ್ನಬಸಪ್ಪ ದಿವಂಗತನಾದ ನಂತರವಷ್ಟೇ ಇಲ್ಲಿ ಬೇರೆ ಪಾರ್ಟಿಗಳು ಗೆಲ್ಲಬಹುದೆನ್ನುವ ಸಾಧ್ಯತೆ ಶುರುವಾದದ್ದು.

2007ರ ಪರಿಷತ್ ಚುನಾವಣೆಯ ವೇಳೆಗಾಗಲೇ ಚೆನ್ನಬಸಪ್ಪ ಗತಿಸಿಹೋಗಿದ್ದರಿಂದ ರುದ್ರಮ್ಮನ ಮತ್ತೊಬ್ಬ ಮಗ ಬಿ.ಟಿ.ಸಿದ್ದೇಶ್ ಮನೆತನದ ವಂಶಾಡಳಿತದ ಪರಂಪರೆಯನ್ನು ಮುಂದುವರೆಸುವಂತೆ ಜೆಡಿಎಸ್‌ನಿಂದ ಕಣಕ್ಕಿಳಿದಿದ್ದ ಅಷ್ಟೊತ್ತಿಗಾಗಲೇ ಎರಡೂ ಜಿಲ್ಲೆಗಳ ಪರಿಷತ್ ಚುನಾವಣೆಯ ರಾಜಕೀಯ ವಾತಾವರಣವೇ ಬದಲಾಗಿ ಹೋಗಿತ್ತು. ರುದ್ರಮ್ಮ ಮತ್ತು ಚನ್ನಬಸಪ್ಪ ಒಗ್ಗಿದಂತೆ ರುದ್ರೇಶ್ ಒಗ್ಗಿಕೊಳ್ಳಲಿಲ್ಲ. ತಾಯಿ, ಅಣ್ಣನ ನಾಮಬಲದ ಮೇಲೇ ಗೆದ್ದು ಬರುವ ಭರವಸೆಯಿಂದ ಸ್ಪರ್ಧಿಸಿದ್ದ ಸಿದ್ದೇಶ್‌ಗೆ ಭರ್ಜರಿ ಆಘಾತ ನೀಡಿದ್ದು ಬಿಜೆಪಿಯ ತಿಪ್ಪಾರೆಡ್ಡಿ.

ಆ ಚುನಾವಣೆಯಲ್ಲಿ ಸಮರ್ಥ ಅಭ್ಯರ್ಥಿಯನ್ನು ಕಣಕ್ಕಿಳಿಸುವಲ್ಲೇ ಎಡವಿದ ಕಾಂಗ್ರೆಸ್ ಸುಖಾಸುಮ್ಮನೆ ಸೋಲನ್ನು ತಮ್ಮ ಮೈಮೇಲೆ ಎಳೆದುಕೊಂಡಿತ್ತು. ಬಿಜೆಪಿಯಿಂದ ಪರಮ ಪಿತೂರಿ ರಾಜಕಾರಣಿ ತಿಪ್ಪಾರೆಡ್ಡಿ ಸ್ಪರ್ಧಿಸುವುದು ಖಾತ್ರಿಯಾದ ಮೇಲೂ ಒಬ್ಬ ಗಟ್ಟಿ ಸ್ಪರ್ಧಿಯನ್ನು ಕಣಕ್ಕಿಳಿಸುವ ಬದಲು ಮಾಜಿ ರೈಲು ಮಂತ್ರಿ ಜಾಫರ್ ಶರೀಫರ ಅಳಿಯ ಎನ್ನುವ ಒಂದೇ ಕಾರಣಕ್ಕೆ ಮೆಹಬೂಬ್ ಪಾಷಾನನ್ನು ಕಣಕ್ಕಿಳಿಸಿ ಕೈತೊಳೆದುಕೊಂಡಿತ್ತು. ಆರ್.ಎಸ್.ಎಸ್, ಭಜರಂಗದಳ, ಎಬಿವಿಪಿ ಅಂತಾ ಕೋಮು ವಾದಿಗಳೊಂದಿಗೆ ಹಿಂದೂ ರಾಜಕಾರಣದ ಮಂತ್ರ ಜಪಿಸಿದ್ದ ಮತೀಯವಾದಿ ರಾಜಕಾರಣಿ ತಿಪ್ಪಾರೆಡ್ಡಿಗೆ ಅದು ಮತ್ತಷ್ಟು ಸಲೀಸಾಗಿತ್ತು. ಮತೀಯ ರಾಜಕಾರಣದ ಅಸ್ತ್ರದೊಂದಿಗೆ ಕೋಟಿಕೋಟಿ ರೂಪಾಯಿಯ ಹೊಳೆಹರಿಸಿದ ತಿಪ್ಪಾರೆಡ್ಡಿ 5600 ಮತಗಳನ್ನು ಖರೀದಿಸಿ ಗೆಲುವಿನ ಕೇಕೆ ಹಾಕಿದ್ದ.

ಬೈ ಎಲೆಕ್ಷನ್‌ನಲ್ಲಿ ಆಚಾರಿಯ ಶಾಕ್!


ಅಧಿಕಾರ ಚಪಲದ ತಿಪ್ಪಾರೆಡ್ಡಿ ತನ್ನ ಗೆಲುವನ್ನು ಬಹಳ ದಿನ ಉಳಿಸಿಕೊಳ್ಳಲಿಲ್ಲ. 2013ರಲ್ಲಿ ವಿಧಾನಸಭಾ ಚುನಾವಣೆ ಎದುರಾಗುತ್ತಿದ್ದಂತೆಯೇ ಚಿತ್ರದುರ್ಗ ಕ್ಷೇತ್ರದಿಂದ ಬಿಜೆಪಿ ಹುರಿಯಾಳಾಗಿ ಸ್ಪರ್ಧಿಸಿದ್ದ. ಒನ್ಸ್ ಎಗೇನ್, ಹಣ-ಕೋಮುವಾದ-ಕುತಂತ್ರ ರಾಜಕಾರಣಗಳು ತಿಪ್ಪಾರೆಡ್ಡಿಯ ಕೈ ಹಿಡಿದಿದ್ದವು. ಕೂಡಲೇ ಎಂಎಲ್ಸಿ ಸ್ಥಾನಕ್ಕೆ ರಾಜೀನಾಮೆ ಗೀಚಿದ ರೆಡ್ಡಿ ಅನಗತ್ಯವಾಗಿ ದುರ್ಗ-ದಾವಣಗೆರೆ ಪಾಲಿಗೆ ಬೈಎಲೆಕ್ಷನ್ ಹೊರೆ ಹೊರಿಸಿದ್ದ.

2013ರ ಆ ಉಪಚುನಾವಣೆ ರಘು ಆಚಾರಿಯೆಂಬ ಅನಾಮಿಕನೊಬ್ಬನನ್ನು ದಿಢೀರ್ ರಾಜಕಾರಣಿಯನ್ನಾಗಿಸಿತ್ತು. ಬಾರ್ಡರ್‌ಲೈನ್ ಬಿಜೆಪಿ ಸರ್ಕಾರಕ್ಕೆ ಬೆಂಬಲಕೊಟ್ಟು, ಕೊನೆಗೆ ಹೀನಾಯವಾಗಿ ಮಂತ್ರಿಗಿರಿಯಿಂದ ಹೊರದಬ್ಬಿಸಿಕೊಂಡಿದ್ದ ಪಕ್ಷೇತರ ಶಾಸಕರಲ್ಲಿ ಒಬ್ಬನಾದ ಗೂಳಿಹಟ್ಟಿ ಶೇಖರ್‌ನ ಮಾಸ್ಟರ್ ಪ್ಲಾನ್ ಫಲವೇ ಈ ರಘು ಆಚಾರಿ!

ಅಸಲಿಗೆ ಅಷ್ಟೊತ್ತಿಗಾಗಲೇ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೇರಿತ್ತು, ಸ್ಥಳೀಯ ರಾಜಕಾರಣಿ ಎಚ್.ಆಂಜನೇಯ ಪ್ರಭಾವಿ ಖಾತೆಯ ಮಂತ್ರಿಯಾಗಿದ್ದರು, ಸಾಲದ್ದಕ್ಕೆ ಚಿತ್ರದುರ್ಗ ಜಿಲ್ಲೆಯ 6 ವಿಧಾನಸಭಾ ಕ್ಷೇತ್ರಗಳ ಪೈಕಿ 4ರಲ್ಲಿ ಮತ್ತು ದಾವಣಗೆರೆ ಜಿಲ್ಲೆಯ 7 ಕ್ಷೇತ್ರಗಳಲ್ಲಿ 6 ಕ್ಷೇತ್ರ ಕೈ ಪಾರ್ಟಿಯ ಶಾಸಕರು ಗೆದ್ದು ಅಧಿಕಾರ ಹಿಡಿದಿದ್ದರು. ಉಪಚುನಾವಣೆಯನ್ನು ಕಾಂಗ್ರೆಸ್ ಚೂರೇಚೂರು ಗಂಭೀರವಾಗಿ ಪರಿಗಣಿಸಿದ್ದರೂ ಸೋಲಿನ ಸರಪಳಿಯನ್ನು ಕಳೆದ ಬಾರಿಯೇ ಕಡಿದುಕೊಳ್ಳಬಹುದಿತ್ತು. ಆದರೆ ಕೈ ಪಾರ್ಟಿ ಮತ್ತೊಮ್ಮೆ ಗೆಲುವನ್ನು ಕೈಚೆಲ್ಲಿ ಕೂತಿತ್ತು. ಚಿತ್ರದುರ್ಗ ಜಿಲ್ಲೆ ಕಾಂಗ್ರೆ ಪಾರ್ಟಿಯ ಅಧ್ಯಕ್ಷ ಸೀತಾರಾಂನನ್ನು ಕಣಕ್ಕಿಳಿಸುವ ಮೂಲಕ ಆರಂಭದಲ್ಲೇ ತನ್ನ ಸೋಲನ್ನು ಶಿರಸಾವಹಿಸಿ ಸ್ವೀಕರಿಸಿತ್ತು. ಅತ್ತ ಬಿಜೆಪಿ ನವೀನನನ್ನು ಅಭ್ಯರ್ಥಿಯನ್ನಾಗಿಸಿತ್ತು. ಜೆಡಿಎಸ್ ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವಂತಾಗಿತ್ತು. ಇದೆಲ್ಲವನ್ನೂ ಅಳೆದುತೂಗಿದ ಗೂಳಿಹಟ್ಟಿ ಶೇಖರ್, ಬೆಂಗಳೂರಿನ ರಿಯಲ್ ಎಸ್ಟೇಟ್ ಉದ್ಯಮಿ ರಘು ಆಚಾರಿಯನ್ನು ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಸಿದ್ದ. ಚುನಾವಣಾ ಪ್ರಚಾರದಲ್ಲಿ ರಘು ಆಚಾರಿಯ ಮುಖ ಪರಿಚಯವಾಗುವ ಮೊದಲೇ ಆತನ ಶ್ರೀಮಂತಿಕೆಯ ಬಗ್ಗೆ ಅಂತೆಕಂತೆಗಳ ಕತೆ ಎರಡೂ ಜಿಲ್ಲೆಗಳಲ್ಲಿ ರಂಗುಪಡೆದುಕೊಂಡಿದ್ದವು. ಅದಕ್ಕೆ ತಕ್ಕಂತೆ ರಘು ಆಚಾರಿ ಚೆಲ್ಲಾಡಿದ ದುಡ್ಡು ಸ್ಥಳೀಯ ಜನಪ್ರತಿನಿಧಿಗಳ ಜೇಬಲ್ಲಿ ತಕಥೈ ಅಂತ ನೃತ್ಯ ಮಾಡಲಾರಂಭಿಸಿತ್ತು. ಒಂದುಕಡೆ ಕೈ ಪಾರ್ಟಿ ಕ್ಯಾಂಡಿಡೇಟ್ ಆಯ್ಕೆಯಲ್ಲಿ ಎಡವಿದ್ದು, ಮತ್ತೊಂದು ಕಡೆ ಬಿಜೆಪಿಯ ನವೀನನ ಕ್ರಿಮಿನಲ್ ಕೃತ್ಯದ ಹಳೆಯ ನೆನಪು ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳ ನಡುವೆ ಗುಪ್ತಗಾಮಿನಿಯಾಗಿ ಹರಿದಾಡಿದ್ದು ರಘು ಆಚಾರಿಯ ಪಾಲಿಗೆ ವರವಾಗಿ ಪರಿಣಮಿಸಿತ್ತು. ಆಸ್ ಎ ರಿಸಲ್ಟ್, ರಘು ಆಚಾರಿ ವಿಜಯ ಪತಾಕೆ ಹಾರಿಸಿದ್ದ.

ಬಿಜೆಪಿಗೆ ನವೀನನೇ ಕಂಟಕ!

ಕಳೆದ ಅಷ್ಟೂ ಎಂಎಲ್ಸಿ ಎಲೆಕ್ಷನ್‌ನಲ್ಲಿ ಮಾಡಿದ ತಪ್ಪುಗಳನ್ನು ಈ ಸಲ ಕಾಂಗ್ರೆಸ್ ಸರಿಮಾಡಿಕೊಂಡಿದೆ. ಅಸಲಿಗೆ ಅಧಿಕಾರಕ್ಕೇರಿ ಅರ್ಧ ಹಾದಿಯನ್ನು ಸವೆಸಿರುವ ಕಾಂಗ್ರೆಸ್ ಸರ್ಕಾರಕ್ಕೆ ಈ ಚುನಾವಣೆ ಒಂಥರಾ ಮಾರ್ಕ್ಸ್‌ಕಾರ್ಡ್ ಇದ್ದಂತೆ. ಹಾಗಾಗಿಯೇ ರಾಜ್ಯ ನಾಯಕರು ಈ ಚುನಾವಣೆಯನ್ನು ಬಲು ಗಂಭೀರವಾಗಿ ಪರಿಗಣಿಸಿದ್ದಾರೆ. ಶತಾಯಗತಾಯ ಹೆಚ್ಚು ಸ್ಥಾನಗಳಲ್ಲಿ ಗೆಲ್ಲುವ ಮೂಲಕ ಜನ ತಮ್ಮ ಸರ್ಕಾರದ ಪರವಾಗಿ ತೀರ್ಪು ನೀಡಿದ್ದಾರೆ ಅಂತ ಎದೆಯುಬ್ಬಿಸಿ ಹೇಳಿಕೊಳ್ಳುವ ಜರೂರು ಎಲ್ಲಾ ನಾಯಕರ ಮುಂದಿದೆ. ಹಾಗಾಗಿ ಹೆಚ್ಚು ಕಡೆ ಸಮರ್ಥ ಅಭ್ಯರ್ಥಿಗಳನ್ನೇ ಕಣಕ್ಕಿಳಿಸಿ ಪೈಪೋಟಿ ನೀಡಲಾಗುತ್ತಿದೆ. ಆ ಲೆಕ್ಕಾಚಾರವನ್ನು ದುರ್ಗದಲ್ಲೂ ಕಾಣಬಹುದು. ಕಳೆದ ಉಪಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಗೆದ್ದಿದ್ದ ರಘು ಆಚಾರಿಗೇ ಟಿಕೆಟ್ ನೀಡುವ ಮೂಲಕ ಕಾಂಗ್ರೆಸ್ ಅರ್ಧ ಗೆದ್ದಂತಾಗಿದೆ. ಯಾಕೆಂದರೆ ರಘು ಆಚಾರಿ ಕೇವಲ 2 ವರ್ಷದ ಅವಧಿಯಲ್ಲೇ ಲೋಕಲ್ ಪೊಲಿಟಿಕ್ಸ್ ಮೇಲೆ ಬಿಗಿಹಿಡಿತವನ್ನು ಸಾಧಿಸಿಕೊಂಡಿದ್ದಾನೆ. ಅದೂ ತನ್ನ ಪರಮಾಪ್ತ ಗೂಳಿಹಟ್ಟಿ ಶೇಖರನನ್ನು ಹೊರಗಿಟ್ಟು ಎನ್ನುವುದು ವಿಶೇಷ. ನಾಲ್ಕು ಕೋಟಿ ಅನುದಾನ ತಂದು ಒಂದಷ್ಟು ಕೆಲಸವನ್ನೂ ಮಾಡಿಸಿದ್ದಾನೆ. ಒಟ್ಟಿನಲ್ಲಿ ಹೊರಗಿನ ಅಭ್ಯರ್ಥಿ ಎಷ್ಟು ದಿನ ತಾನೆ ಉಳಿದಾನು, ಏನು ತಾನೆ ಕೆಲಸ ಮಾಡಿಯಾನು ಎಂದವರೆಲ್ಲ ಅಚ್ಚರಿಪಡುವಂತೆ ಮಾಡಿದ್ದಾನೆ. ಮೂವತ್ತು ವರ್ಷಗಳ ಸೋಲಿನ ಸರಪಳಿಯನ್ನು ಕಡಿದುಕೊಳ್ಳಬೇಕೆಂದರೆ ಕಾಂಗ್ರೆಸ್‌ಗೆ ಬೇರೆ ಆಯ್ಕೆಯೇ ಇರಲಿಲ್ಲ. ಜೊತೆಗೆ ಗೂಳಿಹಟ್ಟಿಯನ್ನು ದೂರ ಮಾಡಿಕೊಂಡ ನಂತರ ಸಿಎಂ ಸಿದ್ದರಾಮಯ್ಯನಿಗೆ ಆಪ್ತನಾಗುವ ಹಾದಿಯಲ್ಲಿದ್ದದ್ದು, ಅದಕ್ಕಿಂತಲೂ ಹೆಚ್ಚಾಗಿ ಬಿಬಿಎಂಪಿ ಮೇಯರ್ ಚುನಾವಣೆಯಲ್ಲಿ ಬೆಂಗಳೂರು ಮತದಾರ ಪಟ್ಟಿಯ ಜನಪ್ರತಿನಿಧಿಯಾಗಿದ್ದುಕೊಂಡು ಕಾಂಗ್ರೆಸ್ ಪರವಾಗಿ ನಿಂತದ್ದು ರಘು ಆಚಾರಿಗೆ ಬಂಪರ್ ಬೆಳೆಯನ್ನೇ ತಂದುಕೊಟ್ಟಿವೆ.



ನವೀನ್


ರಘು ಆಚಾರಿಗೆ ಪ್ರಬಲ ಪೈಪೋಟಿ ಒಡ್ಡುವ ಸಾಧ್ಯತೆ ಇದ್ದ ಬಿಜೆಪಿಗೆ ಇಲ್ಲಿ ತನ್ನ ಅಭ್ಯರ್ಥಿಯೇ ಕಂಟಕನಾಗಿರುವುದು ಕುಚೋದ್ಯದ ವಿಷಯವಾಗಿದೆ. ಕಳೆದ ಉಪಚುನಾವಣೆಯಲ್ಲಿ ಸ್ಪರ್ಧಿಸಿ ಇದೇ ರಘು ಆಚಾರಿಯ ವಿರುದ್ಧವೇ ಸೋತಿದ್ದ ನವೀನ್ ಎಂಬಾತನನ್ನೇ ಬಿಜೆಪಿ ಮತ್ತೆ ಕಣಕ್ಕಿಳಿಸಿದೆ. ಯಾಕೆಂದರೆ ನವೀನನದು ಜನಸಾಮಾನ್ಯರಿಗೆ ಸ್ಪಂದಿಸುವ ರಾಜಕಾರಣವಲ್ಲ; ಹೈಟೆಕ್ ಶ್ರೀಮಂತಿಕೆಯ ರಾಜಕಾರಣ. ಹೊಸದುರ್ಗ ಮೂಲದ ನವೀನನಿಗೆ ಗಟ್ಟಿ ರಾಜಕೀಯ ಹಿನ್ನೆಲೆಯೂ ಇಲ್ಲ. ಇವನ ತಂದೆ ಶಿವಪ್ರಕಾಶ್ ರಾಜಕೀಯದಲ್ಲಿ ಇದ್ದವರೇ ಅಲ್ಲ. ಆದರೆ ದಿವಂಗತ ಮಾಜಿ ಮುಖ್ಯಮಂತ್ರಿ ನಿಜಲಿಂಗಪ್ಪನವರು ಕುಲಸ್ಥ ಮತ್ತು ಆಪ್ತ ಎಂಬ ಕಾರಣಕ್ಕೆ ನವೀನನ ಅಜ್ಜ ರಂಗಪ್ಪನನ್ನು ಒಮ್ಮೆ ನಾಮಿನೇಟೆಡ್ ಎಂ.ಎಲ್.ಸಿ. ಮಾಡಿದ್ದರು. ಜಾತಿ ಪ್ರಭಾವದಿಂದ ನವೀನನ ಅಜ್ಜ ರಂಗಪ್ಪ ಬೇಕಾಬಿಟ್ಟಿ ಆಸ್ತಿ ಮಾಡಿದ್ದು ಬಿಟ್ಟರೆ ಗಟ್ಟಿ ರಾಜಕಾರಣಿಯಾಗುವ ಯಾವ ಜನಸೇವೆಗೂ ಮುಂದಾಗಲಿಲ್ಲ. ಆಗಿನ ಕಾಲಕ್ಕೆ ಹೆಸರುವಾಸಿಯಾಗಿದ್ದ ಜಯಪದ್ಮ ಬಸ್‌ಗಳು ಕೂಡಾ ನಿಜಲಿಂಗಪ್ಪನ ಕೃಪಾಕಟಾಕ್ಷವಾಗಿದ್ದವು.

ನಿಜಲಿಂಗಪ್ಪ ಗತಿಸಿದ ತರುವಾಯ 60ರ ದಶಕದಿಂದ ರಾಜಕೀಯದಿಂದ ದೂರಗುಳಿದ ರಂಗಪ್ಪನ ಕುಟುಂಬ ನವೀನನ ಹೊಸ ತಲೆಮಾರಿನವರೆಗೆ ಇತ್ತ ತಲೆ ಹಾಕಿರಲಿಲ್ಲ. ಆದರೆ ಬಿಜೆಪಿಯ ಯಡ್ಡಿಯ ಮಗ, ಮಾಜಿ ಸಂಸದ ರಾಘವೇಂದ್ರ ಮದುವೆಯಾದ ಮನೆತನದಲ್ಲೇ ನವೀನನ ದೊಡ್ಡಪ್ಪನ ಮಗನೂ ಮದುವೆಯಾಗಿರುವ ಎಳೆಯನ್ನೇ ಇಟ್ಟುಕೊಂಡು ನವೀನ ಇತ್ತೀಚಿನ ದಿನಗಳಲ್ಲಿ ಯಡ್ಡಿಯ ಬಾಲಬಡುಕನಂತೆ ಪ್ರವರ್ಧಮಾನಕ್ಕೆ ಬರುತ್ತಿದ್ದಾನೆ.

ನವೀನನನ್ನು ಬಿಟ್ಟು ಬೇರೊಬ್ಬರಿಗೆ ಟಿಕೆಟು ನೀಡಿದ್ದರೂ ಬಿಜೆಪಿಯ ಗೆಲುವಿನ ಕನಸು ಒಂದಡಿ ಕದಲಾಡುತ್ತಿತ್ತೇನೊ. ಆದರೆ ಈಗ ಅದು 2013ರ ಉಪಚುನಾವಣೆಯಲ್ಲಿ ಬಿದ್ದಿದ್ದ ಗಟಾರದಲ್ಲೇ ಬಿದ್ದುಕೊಂಡಿದೆ. ಇನ್ನು ಮೈಸೂರು ಕಡೆಯ ಎಲ್. ಸೋಮಣ್ಣ ಎಂಬಾತನನ್ನು ಜೆಡಿಎಸ್ ಆಮದು ಮಾಡಿ ತಂದು ಅಖಾಡಕ್ಕಿಳಿಸಿದೆ. ಈತ ನಾಯಕ ಜನಾಂಗಕ್ಕೆ ಸೇರಿದವ. ಚಿತ್ರದುರ್ಗದಲ್ಲಿ ನಾಯಕ ಜನಪ್ರತಿನಿಧಿ ಮತಗಳು ಗಣನೀಯ ಸಂಖ್ಯೆಯಲ್ಲಿದ್ದು ಜಾತಿಯ ಕಾರಣಕ್ಕೆ ಅವೆಲ್ಲಾ ಕಾಂಗ್ರೆಸ್ ಬಿಟ್ಟು ಜೆಡಿಎಸ್‌ನತ್ತ ಹೊರಳಲಿ ಎನ್ನುವುದಷ್ಟೇ ಈತನ ಸ್ಪರ್ಧೆಯ ಉದ್ದೇಶ. ಈತನನ್ನು ಬಿಜೆಪಿಯವರೇ ಜೆಡಿಎಸ್ ಪರವಾಗಿ ಕಣಕ್ಕಿಳಿಸಿದ್ದಾರೆ ಎಂಬ ಗುಲ್ಲು ಹಬ್ಬಿರುವುದು ಕೂಡಾ ಇದೇ ಕಾರಣಕ್ಕೆ. ಬಿಜೆಪಿಯ ಈ ಸ್ಟ್ರಾಟಜಿ ಕೆಲಸ ಮಾಡುವುದು ಡೌಟು. ಯಾಕೆಂದರೆ ಎರಡೂ ಜಿಲ್ಲೆಯಿಂದ ಒಟ್ಟು ಇಬ್ಬರು ಸಚಿವರು, ಒಬ್ಬರು ಎಂಪಿ, ಹತ್ತು ಮಂದಿ ಕಾಂಗ್ರೆಸ್ ಎಂಎಲ್‌ಎಗಳು ರಘು ಆಚಾರಿಯ ಗೆಲುವಿಗೆ ಟೊಂಕಕಟ್ಟಿ ನಿಂತಿದ್ದಾರೆ. ಅತ್ತ ಎಚ್.ಆಂಜನೇಯ ದುರ್ಗದ ಓಟುಗಳನ್ನು ಖಾತ್ರಿ ಮಾಡಿಕೊಳ್ಳುತ್ತಿದ್ದರೆ, ಇತ್ತ ಶಾಮನೂರು ಶಿವಶಂಕರಪ್ಪನವರ ಪರವಾಗಿ ಮಗ ಎಸ್.ಎಸ್.ಮಲ್ಲಿಕಾರ್ಜುನ್ ದಾವಣಗೆರೆಯ ಓಟುಗಳನ್ನು ಭದ್ರ ಮಾಡಿಕೊಳ್ಳುತ್ತಿದ್ದಾರೆ. ಎಲ್ಲಕ್ಕೂ ಮುಖ್ಯವಾಗಿ ಮೂವತ್ತು ವರ್ಷಗಳ ಸೋಲಿನ ಕಳಂಕದಿಂದ ಹೊರಬರುವ ಹುಮ್ಮಸ್ಸೇ ಕಾಂಗ್ರೆಸ್ಸಿಗರನ್ನು ಒಂದುಗೂಡಿಸಿದೆ.

■ ಟಿ.ಎನ್.ಷಣ್ಮುಖ

ಹೆಚ್‌ಡಿಎಫ್‌ಸಿ ಭಟ್ಟಮ್ಮ ದೋಚಿದ ದುಡ್ಡು ಎಲ್ಲಮ್ಮ?


ವಂಚಕಿ ವಿಶಾಲಾಕ್ಷಿ ಭಟ್



ಹೆಚ್‌ಡಿಎಫ್‌ಸಿ ಬಿಟಿಎಂ ಘಟಕ

ವಿನಿವಿಂಕ್ ಶಾಸ್ತ್ರಿಯನ್ನು ಇನ್ನಿಲ್ಲದಂತೆ ಬೇಟೆಯಾಡಿ ಜೈಲಿಗಟ್ಟಿದ ಬೆಂಗಳೂರು ಪೊಲೀಸರಿಗೆ ಹೆಚ್‌ಡಿಎಫ್‌ಸಿ ಮ್ಯಾನೇಜರ್ ವಿಶಾಲಾಕ್ಷಿ ಭಟ್ ಯಾವ ಮಹಾ? ಅಷ್ಟಕ್ಕೂ ವಿನಿವಿಂಕ್ ಶಾಸ್ತ್ರಿ ಮುಂಡಾಯಿಸಿದ್ದು ಹೆಚ್ಚೆಂದರೆ 30 ಕೋಟಿಯಿದ್ದೀತು. ಆದರೆ ಭಟ್ಟಮ್ಮ ಐವತ್ತು ಕೋಟಿಗೂ ದೊಡ್ಡ ಮೊತ್ತದ ಟೋಪಿಯಿಕ್ಕಿದ್ದಾಳೆ. ಅದೂ ಪ್ರತಿಷ್ಠಿತ ಹೆಚ್‌ಡಿಎಫ್‌ಸಿಯಂಥ ಅಂತಾರಾಷ್ಟ್ರೀಯ ಹಣಕಾಸು ಕಂಪೆನಿಯ ಮೂಲಕ. ವಸತಿ ಮಂತ್ರಿ ಅಂಬರೀಶ್ ಪತ್ನಿ ನಟಿ ಸುಮಲತಾರ ಅಕ್ಕ ರೇಣುಕಾದೇವಿ, ಅಂಬಿ ಬಲಗೈ ಬಂಟ ಶ್ರೀನಿವಾಸ್ ಸೇರಿದಂತೆ ಬೆಂಗಳೂರಿನ ಬನಶಂಕರಿ, ಸುಬ್ರಹ್ಮಣ್ಯಪುರ, ಜೆ.ಪಿ. ನಗರ, ಜಯನಗರ, ಮಡಿವಾಳ ಸೇರಿದಂತೆ ಅರ್ಧ ಡಜನ್ ಪೊಲೀಸ್ ಠಾಣೆಗಳಲ್ಲಿ ಆಕೆಯ ವಂಚನೆ ವಿರುದ್ಧ ದಾಖಲಾದ ಒಟ್ಟೂ ಪ್ರಕರಣಗಳ ಸಂಖ್ಯೆ ಐವತ್ತಕ್ಕೂ ಅಧಿಕ.

ವಿನಿವಿಂಕ್ ಶಾಸ್ತ್ರಿಗೆ ಹೋಲಿಸಿದರೆ ವಂಚಿತರ ಸಂಖ್ಯೆ ಕಮ್ಮಿಯಿರಬಹುದು. ವಂಚನೆಯ ಮೊತ್ತ ದುಪ್ಪಟ್ಟು. ಶಾಸ್ತ್ರಿಯ ಬಲಿಪಶುಗಳೆಂದರೆ ಬಸವನಗುಡಿ, ಜಯನಗರ, ಗಿರಿನಗರ, ವಿದ್ಯಾಪೀಠ ಏರಿಯಾಗಳ ಸಾಮಾನ್ಯ ಬ್ರಾಹ್ಮಣರಷ್ಟೆ. ಆದರೆ ವಿಶಾಲಾಕ್ಷಿ ಭಟ್ ಪ್ರಭಾವಿ, ರೊಕ್ಕಸ್ಥ ಬಿಜಿನೆಸ್‌ಮನ್‌ಗಳನ್ನೇ ಹುಡುಕುಡುಕಿ ಟೋಪಿ ಹಾಕಿದ್ದಾಳೆ. ಅರ್ಧಡಜನ್ ಪೊಲೀಸ್ ಅಧಿಕಾರಿಗಳು, ಆಯ್ದ ರಿಯಲ್ ಎಸ್ಟೇಟ್ ಖದೀಮರು, ಒಂದು ಡಜನ್ ಉದ್ದಿಮೆದಾರರು, ರಾಜಕಾರಣಿಗಳು, ಸಿನಿಮಾ ಕುಳಗಳು- ಹೀಗೆ ವಿಶಾಲಾಕ್ಷಿ ಭಟ್ ತನ್ನ ಕೈಚಳಕ ಮೆರೆಯಲು ಆಯ್ದುಕೊಂಡವರ ಪ್ರತಿಷ್ಠೆ, ಡಂಬಾಯಿಸಿದ ಮೊತ್ತ ಮತ್ತು ಬಳಸಿಕೊಂಡ ಕಂಪೆನಿಗೆ ಹೋಲಿಸಿದರೆ ವಿನಿವಿಂಕ್ ಶಾಸ್ತ್ರಿ ಥರದ ಡಬ್ಲಿಂಗ್ ದೊರೆಗಳು ಏನೇನೂ ಅಲ್ಲ. ಹಾಗಿದ್ದೂ ವಿಶಾಲಾಕ್ಷಿ ಭಟ್ಟಳನ್ನು ಬೆಂಗಳೂರು ಪೊಲೀಸರಾಗಲಿ, ಮೀಡಿಯಾಗಳಾಗಲಿ, ಖುದ್ದು ಮೋಸಹೋದ ಪ್ರತಿಷ್ಠಿತರೇ ಆಗಲಿ ಯಾರೂ ಗಂಭೀರವಾಗಿ ಪರಿಗಣಿಸಿಲ್ಲ ಏಕೆ?

ಸದ್ಯ ಜೆ.ಪಿ. ನಗರ ಪೊಲೀಸ್ ಠಾಣೆಯಲ್ಲಿ ಇಂಟರಾಗೇಷನ್ ಎದುರಿಸುತ್ತಿರುವ ವಿಶಾಲಾಕ್ಷಿ ಭಟ್ಟಳ ಖಾಸಾ ಅಕ್ಕ ರೇಣುಕಾ ತಾನೊಬ್ಬಳು ಕ್ರಿಮಿನಲ್ ವಕೀಲೆ ಎಂದುಕೊಂಡೇ ಪೊಲೀಸರಿಗೆ 'ದೌಲು' ಹೊಡೆಯುತ್ತಾಳೆ. ವಿಶಾಲಾಕ್ಷಿಯ ಗಂಡ ಶ್ರೀಕಾಂತ್ ಹೆಗಡೆ ತಾನೊಬ್ಬ ಏರೋಸ್ಪೇಸ್ ಇಂಜಿನಿಯರ್ ಎಂದು ಪೊಲೀಸರನ್ನೂ ಲೆಕ್ಕಿಸದೆ ಗಂಟೆಗೊಮ್ಮೆ ಬಿಸಿಬಿಸಿ ಕಾಫಿ ತಂದುಕೊಡುತ್ತಾನೆ. ಆಕೆಯ ತಂದೆತಾಯಂದಿರ ಪಾಲಿಗಂತೂ ಜೆ.ಪಿ.ನಗರ ಪೊಲೀಸ್ ಠಾಣೆಯೇ ಅತಿಥಿಗೃಹದಂತಾಗಿ ಹೋಗಿದೆ. ಜೆ.ಪಿ. ನಗರದ ಇನ್ಸ್‌ಪೆಕ್ಟರ್ ಸಂಜೀವ್ ಕುಮಾರ್ ಮಹಾಜನ್ ಸಾಹೇಬರಂತೂ "ಏನ್ ಸಾರ್ ಮಾಡೋದು, ಏನೇ ಮಾಡಿದ್ರೂ ಈಯಮ್ಮ ದುಡ್ಡು ಎಲ್ಲಿಟ್ಟಿದೀನಿ ಎಂದು ಬಾಯಿ ಬಿಡುತ್ತಿಲ್ಲ, ಮಾತೆತ್ತಿದರೆ ತಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ನಮಗೇ ಧಮಕಿ ಹಾಕುತ್ತಾಳೆ...!" ಎನ್ನುತ್ತಾರೆ. ಠಾಣೆಯ ಸುತ್ತ ಕಾಸು ಕೊಟ್ಟು ಮೋಸ ಹೋದವರ ಅದೇ ಬೊಬ್ಬೆ ಅದೇ ಗೋಳಾಟ. ವಿಚಿತ್ರವೆಂದರೆ ಹೀಗೆ ಯಾರೆಲ್ಲ ಠಾಣೆಯ ಸುತ್ತ ಹಿಡಿಶಾಪ ಹಾಕುತ್ತಾ ಓಡಾಡಿಕೊಂಡಿದ್ದಾರೋ ಅಂಥವರನ್ನೆಲ್ಲ ಸಂಭಾಳಿಸುತ್ತಿರುವುದು ವಸತಿ ಸಚಿವ ಅಂಬರೀಶ್ ಸಾಹೇಬರ ನಾದಿನಿ ರೇಣುಕಾ ದೇವಿ!

ವಿಶಾಲಾಕ್ಷಿ ಭಟ್‌ಳ ಲಾಯರ್ ಸಹೋದರಿಯ ಜೊತೆ ಸೇರಿಕೊಂಡು ವಸತಿ ಸಚಿವರ ನಾದಿನಿ ದೂರುಕೊಟ್ಟವರನ್ನು ಸಂಭಾಳಿಸುವುದೇ ಇಡೀ ವೃತ್ತಾಂತದ ಮರ್ಮವೊಂದನ್ನು ತೆರೆದಿಡುತ್ತದೆ. ಅಂದರೆ ವಿಶಾಲಾಕ್ಷಿ ವಂಚಿಸಿದ ಐವತ್ತು ಕೋಟಿಯ ಪೈಕಿ ಅರ್ಧಕ್ಕರ್ಧ ರೇಣುಕಾದೇವಿಯ ಮೂಲಕ ಗಾಂಧಿನಗರದ ಬಲಾಢ್ಯ ನಿರ್ಮಾಪಕನೊಬ್ಬನ ಕೈ ಸೇರಿದೆಯೆ? ತೀರ ಇತ್ತೀಚೆಗೆ ಬಾಲಿವುಡ್‌ನ ಸೂಪರ್‌ಸ್ಟಾರ್ ಒಬ್ಬನ ಹಿಟ್ ಚಿತ್ರಕ್ಕೊಂದು ಗಾಂಧಿನಗರದ ನಿರ್ಮಾಪಕ


ವಸತಿ ಮಂತ್ರಿ ಅಂಬಿ


ಸುಮಲತಾ


ಅಂಬಿ ನಾದಿನಿ ರೇಣುಕಾದೇವಿ

ರೊಬ್ಬರು ಹಾಕಿದ್ದ ಬಂಡವಾಳದಲ್ಲಿ 30 ಪರ್ಸೆಂಟ್ ದುಡ್ಡು ರೇಣುಕಾದೇವಿಯ ಮೂಲಕ ಸಂದಾಯವಾಗಿದ್ದು ಹೆಚ್‌ಡಿಎಫ್‌ಸಿ ವಂಚನೆಯ ದುಡ್ಡೆ? ಅಂಬಿಗೆ ಆಪ್ತರಾದ ಈ ಬಲಾಢ್ಯ ನಿರ್ಮಾಪಕನ ಮೂಲಕ ಭಟ್‌ಳನ್ನು ಜೋಪಾನ ಮಾಡಲು ಪೊಲೀಸ್ ಇಲಾಖೆಯನ್ನೇ ಮೆತ್ತಗಾಗಿಸಲಾಯಿತೆ? ಅಥವಾ ಅದು ವಿಶಾಲಾಕ್ಷಿ ಆಡುತ್ತಿರುವ ಕಿಲಾಡಿ ಆಟವೆ?

ಸದ್ಯ ಹೆಚ್‌ಡಿಎಫ್‌ಸಿ ಮ್ಯಾನೇಜರ್ ವಿಶಾಲಾಕ್ಷಿ ಭಟ್ ಬಹುಕೋಟಿ ವಂಚನೆಗೆ ಸಂಬಂಧಪಟ್ಟಂತೆ ಪುಕಾರೆದ್ದ ಪ್ರಶ್ನೆಗಳ ಪೈಕಿ ಅಂಬಿ ನಾದಿನಿ ರೇಣುಕಾ ದೇವಿ ಮತ್ತು ಅವರ ತಂಗಿ ಸುಮಲತಾರ ಹೆಸರೇ ಪ್ರಮುಖವಾಗಿ ಕೇಳಿಬರುವುದಕ್ಕೂ ಕಾರಣವಿದೆ. ಅದು ವಿಶಾಲಾಕ್ಷಿ ಮತ್ತು ರೇಣುಕಾದೇವಿ ನಡುವಿದ್ದ ಆತ್ಮೀಯತೆ. ವಿಶಾಲಾಕ್ಷಿಯಿಂದ ಯಾರಿಗೆಲ್ಲ ಟೋಪಿ ಬಿದ್ದಿದೆಯೋ ಅವರಲ್ಲಿ ಬಹುತೇಕರನ್ನು ಆಕೆಗೆ ಪರಿಚಯಿಸಿಕೊಟ್ಟಿದ್ದೇ ಅಂಬಿ ನಾದಿನಿ ರೇಣುಕಾದೇವಿ. ಮೂಲತಃ ಉತ್ತರ ಕನ್ನಡ ಜಿಲ್ಲೆ ಶಿರಸಿಯ ವಿಶಾಲಾಕ್ಷಿ ಭಟ್ ಬಿಟಿಎಂ ಲೇಔಟ್ ಶಾಖೆಯ ಹೆಚ್‌ಡಿಎಫ್‌ಸಿ ಬ್ಯಾಂಕಿಗೆ ಮ್ಯಾನೇಜರ್ ಆಗಿ ನೇಮಕಗೊಂಡಿದ್ದು ಇಲ್ಲಿಗೆ ಎರಡು ವರ್ಷದ ಹಿಂದೆ. ಈಕೆಯ ಗಂಡ ಶ್ರೀಕಾಂತ್ ಹೆಗಡೆ ತಾನು ಏರೋಸ್ಪೇಸ್ ಇಂಜಿನಿಯರ್ ಎಂದು ಹೇಳಿಕೊಳ್ಳುತ್ತಾನಾದರೂ ಯಾವ ಕಂಪೆನಿ, ಯಾವ ವಿಮಾನ ಸಂಸ್ಥೆ ಎಲ್ಲಿ ಕೆಲಸ ಮಾಡುತ್ತಾನೆ ಏನೊಂದೂ ಗೊತ್ತಿಲ್ಲ. ಬೆಂಗಳೂರಿನಲ್ಲಿ ಹೆಚ್ಚು ಒಡನಾಟವಿಲ್ಲದ ಭಟ್ಟಳನ್ನು ಬೆಂಗಳೂರಿನ ಜೆ.ಪಿ. ನಗರ, ಬನಶಂಕರಿ, ಬಿಟಿಎಂ ಲೇಔಟ್, ಜಯನಗರ ಬಡಾವಣೆಗಳ ಪ್ರತಿಷ್ಠಿತರು, ಅನುಕೂಲಸ್ಥರಿಗೆ ಪರಿಚಯಿಸಿಕೊಟ್ಟಿದ್ದೇ ಅಂಬಿ ನಾದಿನಿ ರೇಣುಕಾದೇವಿ.

ಹೆಚ್‌ಡಿಎಫ್‌ಸಿ ಬ್ಯಾಂಕಿನ ಬಿಟಿಎಂ ಲೇಔಟ್ ಶಾಖೆಗೆ ಎರಡನೇ ಅತ್ಯುನ್ನತ ವ್ಯವಸ್ಥಾಪಕಿಯಾಗಿ ಬಂದ ವಿಶಾಲಾಕ್ಷಿ ಭಟ್ ಮೊದಮೊದಲು ನಿಯತ್ತಾಗೇ ಬಡ್ಡಿ ಪಾವತಿಸುತ್ತಿದ್ದರು. ಹೆಚ್‌ಡಿಎಫ್‌ಸಿಯ ಇನ್ಶೂರೆನ್ಸ್ ವಿಭಾಗದಲ್ಲಿ ತರಹೇವಾರಿ ಪ್ಯಾಕೇಜುಗಳನ್ನು ಸೃಷ್ಟಿಸಿ ಗಿರಾಕಿಗಳನ್ನು ಆಕರ್ಷಿಸುವುದು ಈಕೆಯ ಹೊಣೆಯಾಗಿತ್ತು. ಜೆ.ಪಿ. ನಗರದ ಎಂಟನೇ ಹಂತದ ಶ್ರೇಯಸ್ ಕಾಲೋನಿಯ 12ನೇ ಕ್ರಾಸಿನಲ್ಲಿದ್ದ ಈಕೆಯ ಮನೆಯ ಎದುರಿಗೇ ರೇಣುಕಾದೇವಿಯ ಮನೆಯಿತ್ತು. ಹೇಗೋ ರೇಣುಕಾದೇವಿಯನ್ನು ಪರಿಚಯಿಸಿಕೊಂಡು ಪದೇಪದೇ ವಸತಿ ಸಚಿವ ಅಂಬಿ ಮನೆಗೆ ಬರಲಾರಂಭಿಸಿದ ವಿಶಾಲಾಕ್ಷಿಗೆ ಅಂಬಿ ಪತ್ನಿ ಸುಮಲತಾ ಮಣೆ ಹಾಕಿದ್ದೇ ಹಾಕಿದ್ದು. ಸುಮಲತಾ ಅಕ್ಕ ರೇಣುಕಾ ದೇವಿ ಸೇರಿದಂತೆ ಅಂಬಿ ಆಪ್ತರು, ಸುಮಲತಾರ ಆಂಧ್ರಾ ಮೂಲದ ಸಂಬಂಧಿಗಳು, ಅವರ ಪರಿಚಿತರು ಹೀಗೆ ಹೆಚ್‌ಡಿಎಫ್‌ಸಿ ಬಡ್ಡಿಯ ಆಸೆಗೆ ಬಿದ್ದ ಅನುಕೂಲಸ್ಥರ ಹಿಂದೇ ಭಟ್ಟಳ ಸುತ್ತ ಸುತ್ತಲಾರಂಭಿಸಿತು.

ಇಷ್ಟೆಲ್ಲಕ್ಕೂ ಕಾರಣವಾದದ್ದು ವಿಶಾಲಾಕ್ಷಿ ಭಟ್ ತೋರಿಸಿದ್ದ ಅತೀ ಬಡ್ಡಿಯ ಆಮಿಷ. ಹೆಚ್‌ಡಿಎಫ್‌ಸಿ ಬ್ಯಾಂಕ್ ವಿಶೇಷವಾಗಿ ಕೈಗಾರಿಕೋದ್ಯಮಿಗಳಿಗೆಂದೇ ತ್ರೈಮಾಸಿಕ ಬಡ್ಡಿಯ ರಹಸ್ಯ ಪ್ಯಾಕೇಜೊಂದನ್ನು ಜಾರಿಗೆ ತಂದಿದೆಯೆಂದೂ ಇದು ಮಾಮೂಲಿನ ಗ್ರಾಹಕರಿಗಾಗಲಿ, ಖಾತೆದಾರರಿಗಾಗಲಿ ಅಲ್ಲ, ದುರ್ಲಭವಾದ ಕೇವಲ ಬಿಜಿನೆಸ್ ಮನ್‌ಗಳು ಇಂಡಸ್ಟ್ರಿಯಲಿಸ್ಟ್‌ಗಳಿಗೆ ಮಾತ್ರವೇ ಹೆಚ್‌ಡಿಎಫ್‌ಸಿ ಕೊಡುತ್ತಿರುವ ಅತ್ಯಂತ ಕಾನ್ಫಿಡೆನ್ಷಿಯಲ್ ಪ್ಯಾಕೇಜೆಂದು, ನೀವೆಲ್ಲ ಅಮೆರಿಕನ್ ಪ್ರಾಜೆಕ್ಟಿಗೆ ಇಲ್ಲಿಂದಲೇ ಡೈರೆಕ್ಟಾಗಿ ಇನ್‌ವೆಸ್ಟ್ ಮಾಡಿದಂತೆ ನಾನು ನಿಮಗೆ ಡಾಲರ್ ಲೆಕ್ಕದಲ್ಲಿ ಕೊಡಿಸೋ ತ್ರೈಮಾಸಿಕ ಬಡ್ಡಿ ಇಲ್ಲಿಗೆ ಹೋಲಿಸಿದರೆ ಅದು ಮೂರು ತಿಂಗಳಿಗೊಮ್ಮೆ 25 ಪರ್ಸೆಂಟಿನಷ್ಟು ಬಡ್ಡಿಯಾಗುತ್ತದೆ. ಕೇವಲ ಒಂದೇ ವರ್ಷಕ್ಕೆ ಹಾಕಿದ ಅಸಲಿನಷ್ಟು ಬಡ್ಡಿ ಬಂದುಬಿಡುತ್ತದೆ. ಅದನ್ನೇ ಮತ್ತೆ ಇನ್‌ವೆಸ್ಟ್ ಮಾಡಿಬಿಟ್ಟರೆ ಎರಡೇ ವರ್ಷಕ್ಕದು


ಪೊಲೀಸ್ ಠಾಣೆಯೆದುರು ವಂಚಿತರ ಗೋಳಾಟ

ಉಲ್ಟಾ ಹೊಡೆದ ಹೆಚ್‌ಡಿಎಫ್‌ಸಿ

ಕೆಎಸ್ಸಾರ್ಟಿಸಿ ಬಸ್ಸಿನ ಡ್ರೈವರ್ ಮಾಡಿದ ಅಪಘಾತಕ್ಕೆ ಪರಿಹಾರ ಕಟ್ಟಿಕೊಡುವುದು ಆ ಸಂಸ್ಥೆ ತಾನೆ? ಹಾಗೇ ಹೋಟೇಲೊಂದರ ಅಡಿಗೆ ಭಟ್ಟನ ತಪ್ಪಿಗೆ ಅದರ ಮಾಲಿಕ ಹೊಣೆ ಹೊರಲೇಬೇಕು. ಯಾವುದೇ ಕಂಪೆನಿ, ಕಾರ್ಖಾನೆ, ಸಂಸ್ಥೆಗಳ ಯಾರೇ ಅಧಿಕಾರಿಯೊಬ್ಬನ ಅಧಿಕಾರ ದುರುಪಯೋಗಕ್ಕೆ ಅದರ ಆಡಳಿತ ವರ್ಗ ಹೇಗೆ ಹೊಣೆಯಾಗುತ್ತೋ ಹಾಗೆಯೇ ಹೆಚ್‌ಡಿಎಫ್‌ಸಿ ಬ್ಯಾಂಕಿನ ವಿಚಾರದಲ್ಲೂ ಆಗಬೇಕಲ್ಲವೇ?


ಆದರೆ ವಿಶಾಲಾಕ್ಷಿ ಭಟ್ ವಿಷಯದಲ್ಲಿ ಹೆಚ್‌ಡಿಎಫ್‌ಸಿ ಬ್ಯಾಂಕಿನದ್ದು ವಿತಂಡವಾದ. ಭಟ್ ಮಾಡಿದ್ದು ಆಕೆಯ ವೈಯಕ್ತಿಕ ವ್ಯವಹಾರ ಅದಕ್ಕೂ ನಮಗೂ ಸಂಬಂಧವೇ ಇಲ್ಲ ಎನ್ನುತ್ತದೆ ಹೆಚ್‌ಡಿಎಫ್‌ಸಿ ಆಡಳಿತ ವರ್ಗ. ವಾಸ್ತವವೆಂದರೆ ಜನ ದುಡ್ಡು ಹಾಕಿದ್ದು ಹೆಚ್‌ಡಿಎಫ್‌ಸಿ ಸಂಸ್ಥೆಯನ್ನು ನಂಬಿ. ಹೆಚ್‌ಡಿಎಫ್‌ಸಿಯ ಅಧಿಕೃತ ಲೆಟರ್‌ಹೆಡ್ ಮತ್ತು ಛೇಂಬರನ್ನು ತನ್ನ ವಂಚನೆಗೆ ಬಳಸಿಕೊಳ್ಳಲು ಭಟ್ಟಳಿಗೆ ಅವಕಾಶ ಮಾಡಿಕೊಟ್ಟಿದ್ದೇ ಬ್ಯಾಂಕಿನ ಮೊದಲ ತಪ್ಪು. ಈಗ ತನಗೂ ಅದಕ್ಕೂ ಸಂಬಂಧವಿಲ್ಲ ಎಂದರೆ ಯಾವ ನ್ಯಾಯ? ಅಷ್ಟಕ್ಕೂ ಈ ಪಾಟ ವಂಚನೆಯನ್ನು ವಿಶಾಲಾಕ್ಷಿ ಮಾಡಿದ್ದು ಬ್ಯಾಂಕ್ ಮೂಲಕವೇ ಮತ್ತು ವಂಚನೆ ನಡೆದಾಗ ವಿಶಾಲಾಕ್ಷಿ ಬ್ಯಾಂಕಿನ ಉನ್ನತ ಹುದ್ದೆಯಲ್ಲಿದ್ದಳು.


ಹೆಚ್‌ಡಿಎಫ್‌ಸಿಯಂಥ ಪ್ರತಿಷ್ಠಿತ ಬ್ಯಾಂಕೇ ತನ್ನ ಹೊಣೆಗಾರಿಕೆಯಿಂದ ಉಲ್ಟಾ ಹೊಡೆದರೆ ಇನ್ನು ಯಾವ ಬ್ಯಾಂಕನ್ನು ತಾನೇ ಜನ ನಂಬಲು ಸಾಧ್ಯ!

ಅಂಬಿ ನಾದಿನಿಯೋ ರಾಘವೇಶ್ವರನ ಖಜಾನೆಯೋ?

ಅಂಬಿ ನಾದಿನಿ ರೇಣುಕಾದೇವಿಯನ್ನು ಮುಂದಿಟ್ಟುಕೊಂಡೇ ವಿಶಾಲಾಕ್ಷಿ ಬೆಂಗಳೂರಿನ ಐನಾತಿ ಮಿಕಗಳನ್ನು ಬುಟ್ಟಿಗೆ ಬೀಳಿಸಿಕೊಂಡಿರಬಹುದು. ಹಾಗಂತ ರೇಣುಕಾದೇವಿ ವಂಚನೆಯಲ್ಲಿ ಕೈಜೋಡಿಸಿದ್ದಕ್ಕೆ ನಿರ್ದಿಷ್ಟ ಪುರಾವೆಗಳಿಲ್ಲ. ಸುಮಲತಾರ ತಂಗಿ ರೇಣುಕಾದೇವಿ ಗಾಂಧಿನಗರದ ಕೆಲ ನಿರ್ಮಾಪಕರಿಗೆ ಫೈನಾನ್ಸ್ ಮಾಡಿಲ್ಲವೆಂದಲ್ಲ. ಈಕೆಯ ಗಂಡ ಅಜಯ್ ವಿನ್ಸೆಂಟ್ ಈ ಹಿಂದೆ ಕೆ. ಮಂಜು ನಿರ್ಮಿಸಿದ್ದ 'ಒಲವೇ ಜೀವನ ಲೆಕ್ಕಾಚಾರ' ಚಿತ್ರಕ್ಕೆ ಕ್ಯಾಮರಾಮನ್ ಆಗಿದ್ದ. ತೆಲುಗು, ತಮಿಳು ಮಾತ್ರವಲ್ಲದೆ ಕನ್ನಡದ ಮೂರ್‍ನಾಲ್ಕು ಚಿತ್ರಗಳಿಗೆ ಅಜಯ್ ವಿನ್ಸೆಂಟ್ ಛಾಯಾಗ್ರಹಣ ಮಾಡಿದ್ದಾರೆ. ಜೆ.ಪಿ. ನಗರದ ಪುಟ್ಟೇನಹಳ್ಳಿ ಅಂದರೆ ವಿಶಾಲಾಕ್ಷಿ ಭಟ್ ಮನೆ ಪಕ್ಕದಲ್ಲೆ ರೇಣುಕಾರ ಮನೆಯಿದೆ.


ರಾಘವೇಶ್ವರ


ಕೋಬ್ರ ಮಂಜು


ರಾಕ್‌ಲೈನ್

ಈ ಹಿಂದೆ ವಾಣಿಜ್ಯ ಮಂಡಳಿ ಅಧ್ಯಕ್ಷರಾಗಿದ್ದ ವಿಜಯ್‌ಕುಮಾರ್‌ಗೆ ರೇಣುಕಾ ಕೊಟ್ಟ ಫೈನಾನ್ಸ್‌ನ ವಸೂಲಿಗೆ ಸುಮಲತಾರೇ ಕಂಡಕಂಡವರಿಗೆ ದುಂಬಾಲು ಬಿದ್ದಿದ್ದುಂಟು.

ತನಗೆ ರೇಣುಕಾ ಮತ್ತು ಸುಮಲತಾರ ಜೊತೆ ಆತ್ಮೀಯತೆ ಇದೆ ನಿಜ. ಆದರೆ ಯಾವತ್ತೂ ಫೈನಾನ್ಸ್ ವ್ಯವಹಾರ ನಡೆಸಿದ್ದಿಲ್ಲ. ರೇಣುಕಾರ ಪತಿ ಅಜಯ್ ನನ್ನ ಚಿತ್ರಕ್ಕೆ ಕ್ಯಾಮರಾಮನ್ ಆಗಿದ್ದಾಗಲೂ ಅದು ಸುಮಲತಾರ ಮೇಲಿನ ಗೌರವಕ್ಕೇ ಹೊರತು ಮತ್ತೇನಿಲ್ಲ ಎನ್ನುತ್ತಾರೆ ಕೆ. ಮಂಜು.

ಕೆ. ಮಂಜುಗಿಂತಲೂ ಅಂಬಿ ಕುಟುಂಬದ ಜೊತೆ ಹೆಚ್ಚಿನ ವ್ಯಾವಹಾರಿಕ ಸಂಬಂಧವಿರುವುದು ರಾಕ್‌ಲೈನ್‌ಗೇ. ಅಂಬಿ ಬಲಗೈ ಬಂಟ ಶ್ರೀನಿವಾಸ್ ಈ ಬಗ್ಗೆ ಏನೇನೂ ಬಾಯಿಬಿಡುತ್ತಿಲ್ಲ. ಇದರ ಹೊರತಾಗಿ ವಿಶಾಲಾಕ್ಷಿ ಭಟ್ಟಳ ಸಂಬಂಧವಿರುವುದು ರಾಮಚಂದ್ರಾಪುರ ಮಠದ ಮತ್ತದರ ಅಧಿಪತಿ ರಾಘವೇಶ್ವರ ಸ್ವಾಮಿ ಜೊತೆಗೇ. ನಿಖರವಾಗಿ ವಿಶಾಲಾಕ್ಷಿಯ ರೊಕ್ಕ ಈಗ ಯಾವ ಅಡ್ಡೆಗಳಲ್ಲಿ ಜೋಪಾನವಾಗಿದೆಯೋ ಬಾಯಿ ಬಿಡಿಸುವವರ್‍ಯಾರು?

...ಶಿದ ದುಡ್ಡಿನ ನಾಲ್ಕು ಪಟ್ಟಾಗುತ್ತದೆ ಎಂದು ಭಟ್ಟಮ್ಮ ...ಂಬಿಸಿಬಿಟ್ಟಳು.

ವಿಶಾಲಾಕ್ಷಿಯ ಬಡ್ಡಿ ಆಮಿಷವನ್ನು ಆಕೆಯ ಗಿರಾಕಿಗಳು ...ಂಬುವುದಕ್ಕೂ ಕಾರಣವಿತ್ತು. ಆ ಹೊತ್ತಿಗೆ ವಿಶಾಲಾಕ್ಷಿ ...ಚ್‌ಡಿಎಫ್‌ಸಿಯ ಬಿಟಿಎಂ ಶಾಖೆಯ ಮ್ಯಾನೇಜರ್ ...ಗಿದ್ದಳು. ಬಹುತೇಕ ಗಿರಾಕಿಗಳನ್ನೆಲ್ಲ ಬ್ಯಾಂಕಿನ ತನ್ನ ...ಂಬರಿಗೇ ಕರೆಸಿಕೊಂಡು ಆಮಿಷವೊಡ್ಡಿದ್ದಳು. ಅಷ್ಟೇ ...ಲ್ಲ, ತನ್ನ ಕಂಪ್ಯೂಟರ್‌ನಲ್ಲಿ ಹೆಚ್‌ಡಿಎಫ್‌ಸಿಯ ...ಟರ್‌ಹೆಡ್ ಮತ್ತು ಲಾಂಛನವನ್ನು ಬಳಸಿ ಅಧಿಕೃತವಾಗಿ ...ಯಾಂಕೇ ಇಂಥದೊಂದು ಆಫರ್ ಕೊಟ್ಟಂತೆ ದಾಖಲೆಗಳನ್ನೂ ...ಷ್ಟಿಸಿದ್ದಳು. ಮೊದಲೇ ಬ್ಯಾಂಕ್ ಅಧಿಕಾರಿ. ಹೆಚ್‌ಡಿಎಫ್‌ಸಿ ...ಯಂಥ ಪ್ರತಿಷ್ಠಿತ ಬ್ಯಾಂಕ್ ತಾನೇ ಹೇಗೆ ವಂಚಿಸಲು ...ಧ್ಯ? ಹಾಗೊಮ್ಮೆ ವಂಚಿಸಿತೆಂದರೆ ಕೋರ್ಟ್ ದಾರಿ ...ಡಿದರಾಯ್ತು ಎಂದು ನಂಬಿದ ಗಿರಾಕಿಗಳು ಇದ್ದಬದ್ದ ...ಡ್ಡನ್ನೆಲ್ಲ ತಂದು ಸುರಿದದ್ದೇ ಸುರಿದದ್ದು.

ಹೀಗೆ ವಿಶಾಲಾಕ್ಷಿಯ ಕೈಗೆ ತಂದು ದುಡ್ಡು ಸುರಿದ ...ಹುತೇಕರನ್ನು ಆಕೆಗೆ ಪರಿಚಯಿಸಿದ್ದು ಸುಮಲತಾ ಅಕ್ಕ ...ಣುಕಾದೇವಿಯೇ. ಒಂದೆಡೆ ವಸತಿ ಸಚಿವರ ನಾದಿನಿ ...ತ್ತೊಂದೆಡೆ ಹೆಚ್‌ಡಿಎಫ್‌ಸಿ ಬ್ಯಾಂಕು. ಖುದ್ದು ...ಣುಕಾದೇವಿಯೇ 72 ಲಕ್ಷ ರೂಪಾಯಿಗಳನ್ನು ತಂದು ...ಟ್ಟಳ ಕೈಗಿತ್ತಳು. ಇದೇ ಬಿಟಿಎಂ ಬಡಾವಣೆಯಲ್ಲಿ ಸ್ವಂತ ...ನೆಯಿದ್ದ ಪುರುಷೋತ್ತಮ ರಾವ್ ಎಂಬ ಆಂಧ್ರಾ ...ಮೂಲದ ಆಸಾಮಿ ರೇಣುಕಾದೇವಿ ಮೂಲಕವೇ ಐವತ್ತು ...ಕ್ಷ ತಂದು ಕೊಟ್ಟ. ತಮಾಷೆಯೆಂದರೆ ಈತ ಕೆನರಾ ...ಬ್ಯಾಂಕಿನ ನಿವೃತ್ತ ಸೀನಿಯರ್ ಮ್ಯಾನೇಜರ್!

ಈ ಮೊತ್ತದ ಬಡ್ಡಿಯನ್ನು ಯಾವ ಬ್ಯಾಂಕಾದರೂ ...ಗೆ ತಾನೇ ಕೊಡಲು ಸಾಧ್ಯ? ಎಂಬ ಕನಿಷ್ಠ ಪ್ರಜ್ಞೆಯೂ ...ನಿಗಿರಲಿಲ್ಲ. ಎರಡೇ ವರ್ಷಕ್ಕದು ಎರಡು ಕೋಟಿಯಾಗಿ ...ೂರನೇ ವರ್ಷಕ್ಕೆ ನಾಲ್ಕು ಕೋಟಿ ನಾಲ್ಕನೇ ವರ್ಷಕ್ಕೆ ...ಟು ಕೋಟಿ ಐದನೇ ವರ್ಷಕ್ಕೆ 16 ಕೋಟಿ 6ನೇ ...ರ್ಷಕ್ಕೆ 32 ಕೋಟಿ ಎಂದು ಪುರುಷೋತ್ತಮರಾವ್ ...ಟ್ಟೆ ಹಾಕಿದ್ದೇ ಹಾಕಿದ್ದು!

ಒಬ್ಬ ನಿವೃತ್ತ ಬ್ಯಾಂಕ್ ಅಧಿಕಾರಿಯಾಗಿದ್ದೂ ...ಯಾಂಕೊಂದು ಹೇಗೆ ತಾನೇ ಈ ಪಾಟಿ ಬಡ್ಡಿ ನೀಡಲು ...ಧ್ಯ ಎಂಬ ತರ್ಕ ಆತನಿಗೆ ಹೊಳೆಯಲೇ ಇಲ್ಲ. ಸಾಲದ್ದಕ್ಕೆ ...ಕ್ಷ ತಂಗಿ ಹೇಮಾವತಿಯನ್ನೂ ವಿಶಾಲಾಕ್ಷಿಗೆ ...ಚಯಿಸಿಕೊಟ್ಟ. ಹೇಮಾವತಿಯ ಮಗ ರಾಜಾರಾಮ್ ...ಮೆರಿಕದಲ್ಲಿದ್ದಾನೆ. ಈತ ಅಲ್ಲಿ ದುಡಿದು ಸಂಪಾದಿಸಿದ್ದನ್ನೆಲ್ಲ ... ತಾಯಿಯ ಮಾತು ನಂಬಿ ಹೆಚ್‌ಡಿಎಫ್‌ಸಿಯ ಭಟ್ಟಳಿಗೆ ...ಟ್ಟ. ಪುರುಷೋತ್ತಮ ರಾವ್‌ನ ಹೊರತುಪಡಿಸಿ ...ಮಾವತಿ ಮತ್ತಾಕೆಯ ಮಗ ಸೇರಿಕೊಂಡು ಒಂದೂ ...ು ಕೋಟಿಯಷ್ಟು ಕೊಟ್ಟರು. ಜಯನಗರದ ರಿಯಲ್ ...ಸ್ಟೇಟ್ ಕುಳ ವರಪ್ರಸಾದ್ ರೆಡ್ಡಿ, ಬನಶಂಕರಿಯ ಕಟ್ಟಾ ...ಯ್ಯು ಸಂಬಂಧಿ ಮಾರ್ಕಂಡ ನಾಯ್ಡು ರೇಣುಕಾದೇವಿಯ ...ಯ ಸಂಬಂಧಿ ಜಗನ್ ಮೋಹನ್, ಹೈದ್ರಾಬಾದ್ ಮೂಲದ ಡೆವಲಪರ್ ತಿರುಮಲರಾಜು, ಚಿತ್ತೂರು ಮೂಲದ ಲ್ಯಾಂಡ್ ಡೀಲರ್ ರಾಜಬಾಬು, ಪದ್ಮನಾಭ ನಗರದ ರಿಯಲೇಟರ್ ರಂಗರಾವ್, ಇಟ್ಟಮಡು ವಾಸಿ ಮಧುಬಾಲು, ಜೆಪಿ ನಗರದ ಎರ್ರಂನಾಯ್ಡು- ಹೀಗೆ ಬೆಂಗಳೂರಿನ ರೊಕ್ಕಸ್ಥರ ಒಂದು ಗುಂಪೇ ಹೆಚ್‌ಡಿಎಫ್‌ಡಿ ಬ್ಯಾಂಕನ್ನು ನಂಬಿ ವಿಶಾಲಾಕ್ಷಿಯ ಉಡಿಗೆ ತಂದು ಸುರಿದದ್ದೇ ಸುರಿದದ್ದು.

ಯಾರೆಲ್ಲ ಈ ರೀತಿ ಲಕ್ಷ ಲಕ್ಷ, ಕೋಟಿ ಲೆಕ್ಕದಲ್ಲಿ ತಂದುಕೊಟ್ಟರೋ ಅವರದ್ದೇ ದುಡ್ಡಲ್ಲಿ ತ್ರೈಮಾಸಿಕ ಬಡ್ಡಿಯೆಂದು 25 ಪರ್ಸೆಂಟನ್ನು ವಿಶಾಲಾಕ್ಷಿ ನಿಯತ್ತಾಗೇ ಎತ್ತುಕೊಟ್ಟಳು. ಒಮ್ಮೆ ಬಡ್ಡಿಯ ರುಚಿ ಕಂಡವರು ತಮ್ಮ ಪರಿಚಿತರು, ನೆಂಟರಿಷ್ಟರನ್ನೆಲ್ಲ ಕರೆತಂದು ಭಟ್ಟಳಿಗೆ ಪರಿಚಯಿಸಿಕೊಟ್ಟರು. ತ್ರೈಮಾಸಿಕ 25 ಪರ್ಸೆಂಟೆಂದು ಬರುವ ದುಡ್ಡು ತಾವೇ ಕೊಟ್ಟ ಅಸಲಿನ ಮೋಸದ ಬಾಬತ್ತೆಂದು ಹೇಗೆ ತಾನೇ ಅವರಿಗರ್ಥವಾಗಲು ಸಾಧ್ಯ? 2015ರ ಆಗಸ್ಟ್‌ವರೆಗೂ ಇದು ಹೀಗೇ ಮುಂದುವರಿಯಿತು. ಕೊಟ್ಟ ದುಡ್ಡಿನ ಅರ್ಧರಷ್ಟನ್ನು ಈಗಾಗಲೇ ಬಡ್ಡಿಯೆಂದು ನಂಬಿಸಿ ಕೊಟ್ಟಾಗಿತ್ತು. ಆದರೆ ತಮ್ಮ ಅಸಲಿನ್ನೂ ಹಾಗೇ ಇದೆಯೆಂಬ ನಂಬಿಕೆ ಕೊಟ್ಟವರದ್ದು. ಯಾವತ್ತು ಇದ್ದಕ್ಕಿದ್ದಂತೆ ವಿಶಾಲಾಕ್ಷಿ ನಾಪತ್ತೆಯಾದಳೋ ಕೊಟ್ಟು ಕೆಟ್ಟವರ ಹೊಟ್ಟೆಗೆ ಬೆಂಕಿ ಇಟ್ಟಂತಾಯಿತು. ಸಿಕ್ಕಸಿಕ್ಕ ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟರು.

ವಿಶೇಷವೆಂದರೆ ಈ ರೀತಿ ಆಯಾ ಪೊಲೀಸ್ ಠಾಣೆಗಳಲ್ಲಿ ದೂರು ಕೊಟ್ಟವರೆಲ್ಲ ಬಹುತೇಕರು ಹೆಚ್‌ಡಿಎಫ್‌ಸಿ ಬ್ಯಾಂಕಿಗೆ ಹೋಗಿ ಅಲ್ಲಿನ ಅಧಿಕಾರಿಗಳ ಜೊತೆ ಗುದ್ದಾಡಿ ಬಂದವರೆ. 'ಅಲ್ರೀ ನಿಮ್ಮ ಬ್ಯಾಂಕಿನ ಮ್ಯಾನೇಜರ್, ನಿಮ್ಮ ಬ್ಯಾಂಕನ್ನು ಬಳಸಿಕೊಂಡೇ ಮಾಡಿದ ಮೋಸಕ್ಕೆ ಈಗ ಬ್ಯಾಂಕು ಹೊಣೆಯಲ್ಲ ಅಂದರೆ ಏನ್ರೀ ಅರ್ಥ?' ಎಂದು ವಂಚಿತರು ಕೇಳಿದ್ದರಲ್ಲಿ ನ್ಯಾಯವೂ ಇತ್ತು. ಆದರೆ ಹೆಚ್‌ಡಿಎಫ್‌ಸಿ ಅಧಿಕಾರಿಗಳು ನಮಗೂ ಅದಕ್ಕೂ ಸಂಬಂಧವೇ ಇಲ್ಲ ಎಂದು ಮೊಂಡಾಟಕ್ಕಿಳಿದರು. ಈಗ ದೂರದ ಉತ್ತರ ಪ್ರದೇಶದಿಂದ ಭಟ್ಟಳನ್ನೇನೋ ಸಿಸಿಬಿ ಪೊಲೀಸರು ಹಿಡಿದು ತಂದಾಗಿದೆ. ಮುಂಡಾ ಮೋಚಿದ ಒಟ್ಟು ಮೊತ್ತ ಐವತ್ತು ಕೋಟಿಗೂ ಅಧಿಕ. ಕೊಟ್ಟ ದುಡ್ಡಲ್ಲೇ ಬಡ್ಡಿಯೆಂದು ಒಂದಷ್ಟನ್ನು ವಿಶಾಲಾಕ್ಷಿ ವಾಪಸ್ಸು ಮಾಡಿದರೂ ಉಳಿಕೆ 30 ಕೋಟಿಗೆ ಲೆಕ್ಕ ಸಿಗುತ್ತಿಲ್ಲ. ವಿಶಾಲಾಕ್ಷಿ ಜಪ್ಪಯ್ಯ ಎಂದರೂ ಈ ಬಗ್ಗೆ ಬಾಯಿ ಬಿಡುತ್ತಿಲ್ಲ. ಅಂಬಿ ನಾದಿನಿ ರೇಣುಕಾದೇವಿ ಮಾತ್ರ ಮೋಸ ಹೋದವರನ್ನು ಹಿಡಿಹಿಡಿದು ಸಂಭಾಳಿಸುತ್ತಿದ್ದಾರೆ. ಅಂಬಿ ಬಲಗೈ ಬಂಟ ಶ್ರೀನಿವಾಸ್ ಈ ಬಗ್ಗೆ ಬಾಯಿ ಬಿಡುತ್ತಿಲ್ಲ. ಹಾಗಾದರೆ 30 ಕೋಟಿ ಏನಾಯಿತು? ಬಾಯಿ ಬಿಡಿಸುವವರ್‍ಯಾರು? ಪೊಲೀಸರೇಕೆ ಈ ವಿಷಯದಲ್ಲಿ ಮುಗುಮ್ಮಾಗಿದ್ದಾರೆ? ನಿಷ್ಠೂರ ತನಿಖೆಗೆ ಏನು ಅಡ್ಡಿ? ಇತ್ಯಾದಿ ಏನೊಂದೂ ಯಾರಿಗೂ ಅರ್ಥವಾಗುತ್ತಿಲ್ಲ.

■ ರಾ. ಸೋಮನಾಥ್

ಈಗ ಇರಬೇಕಿತ್ತು ಲಂಕೇಶ್

ಥೂತ್ತೇರಿ

▶ ಯಾಹೂ

"ಈಗ ಇರಬೇಕಿತ್ತು ಲಂಕೇಶ್." ಇದು ಲಂಕೇಶರಿಂದ ಪ್ರಭಾವಿತಗೊಂಡ ಮನಸ್ಸುಗಳ ಉದ್ಗಾರ. ಬೆಂಗಳೂರಿನ ಜನ ಸಂಸ್ಕೃತಿ, ಅವಿರತ ಪುಸ್ತಕ ಮತ್ತು ಆರ್ಟ್ ಫೌಂಡೇಷನ್‌ನವರು ಏರ್ಪಡಿಸಿದ್ದ ಸಿನಿಮಾ ಪ್ರದರ್ಶನ ಮತ್ತು ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಲಂಕೇಶ್ ಅಭಿಮಾನಿಗಳ ಪೈಕಿ ಕೊಂಡಜ್ಜಿ ಮೋಹನ್ "ಲಂಕೇಶ್ ಈಗ ಇದ್ದಿದ್ದರೆ ಎಲ್ಲವೂ ಈಗಿನಂತೆಯೇ ನಡೆಯುತ್ತಿತ್ತು, ಯಾವ ಬದಲಾವಣೆಯೂ ಆಗುತ್ತಿರಲಿಲ್ಲ" ಎಂದರಂತಲ್ಲಾ. ಮೋಹನ್ ಭಾಗಕ್ಕೆ ಇದಂತೂ ನಿಜ. ಪಾಪ ಕಾಂಗ್ರೆಸ್ ಪಾರ್ಟಿಯ ಪಡಸಾಲೆಯಲ್ಲಿದ್ದು ಯಾವ ಸವಲತ್ತನ್ನು ಪಡೆಯಲಾಗದ ಮೋಹನ್ "ಯಾರಿದ್ದರೂ ಕೂಡ ಇಲ್ಲಿ ನಮಗೇನೂ ಆಗುವುದಿಲ್ಲ, ಪಟೇಲರು ಬಂದರೂ ಅಷ್ಟೆ, ಸಿದ್ಧರಾಮಯ್ಯ ಬಂದರೂ ಅಷ್ಟೆ. ಕನಿಷ್ಠ ಎಂಎಲ್‌ಸಿಯೂ ಆಗುವುದಿಲ್ಲ" ಎಂದು ಹತಾಶೆಯಿಂದ ಇಲ್ಲೀಗ ಲಂಕೇಶ್ ಇದ್ದರೂ ಏನೂ ಆಗುತ್ತಿರಲಿಲ್ಲ ಎಂದಲ್ಲವೆ ಹೇಳಿದ್ದು ಎಂಬುದು ಮೋಹನ್ ಆಪ್ತರ ಉದ್ಗಾರವಾಗಿದೆಯಲ್ಲಾ, ಥೂತ್ತೇರಿ!

*****

ಪರಿಷತ್ ಚುನಾವಣೆಗೆ ಇನ್ನು ಮೂರ್‍ನಾಲ್ಕು ದಿನವಿದೆ. ಇಷ್ಟರಲ್ಲಿ ಹಣವಿರುವ ಪಾರ್ಟಿಯಿಂದ ಮೊದಲ ಕಂತು ಬಟಾವಡೆಯಾಗಿದೆ. ಎದುರು ಪಾರ್ಟಿ ಹೆಚ್ಚು ಕೊಟ್ಟರೆಂಬ ಸುದ್ದಿಯ ಸತ್ಯಾಂಶ ದೊರಕಿದ ನಂತರ ಫೈನಲ್ ಬಟಾವಡೆಯ ದಿನವೂ ಬರಲಿದೆ. ಅಂತೂ ಕ್ಯಾಂಡಿಡೇಟ್‌ಗಳಿಗೆ ಎಮ್ಮೆಲ್ಲೆ ಚುನಾವಣೆಯಷ್ಟೇ ಖರ್ಚಾದರೂ ಒಂದು ಅಡ್ವಾಂಟೇಜ್ ಇದೆ. ಅದೇನಪ್ಪಾ ಎಂದರೆ, ಪ್ರತಿ ಮತದಾರನಿಗೆ ಒಂದು ಸಾವಿರ ಕೊಡಬೇಕಾದ ಜಾಗದಲ್ಲೀಗ ಹತ್ತು ಹದಿನೈದು ಸಾವಿರ ಕೊಡಬೇಕಷ್ಟೆ. ಅಂತೂ ಪರಿಷತ್‌ಗೆ ಓಟು ಮಾಡುವ ಅಭ್ಯರ್ಥಿಗಳಿಗೆ ಸುಗ್ಗಿಯೋ ಸುಗ್ಗಿ. ಸದರಿ ಸಂಗತಿ ಎಲ್ಲರಿಗೂ ತಿಳಿದಿದ್ದೆ. ಇದಕ್ಕಾಗಿ ತುಂಬಾ ಬೇಸರಗೊಂಡಿರುವ ಮಾಜಿ ಪ್ರಧಾನಿಗಳಾದ ದೇವೇಗೌಡರು "ರಾಷ್ಟ್ರೀಯ ಪಕ್ಷಗಳ ನಡವಳಿಕೆಯಿಂದ ನಾವು ತಲೆ ತಗ್ಗಿಸುವಂತಾಗಿದೆ" ಎಂದರಂತಲ್ಲಾ, ಥೂತ್ತೇರಿ!!

*****



ರಾಷ್ಟ್ರೀಯ ಪಕ್ಷಗಳ ನಡವಳಿಕೆಯಿಂದ ತಲೆತಗ್ಗಿಸು ವಂತಾಗಿದೆ ನಿಜ. ಆದರೆ ಯಾರು ತಲೆ ತಗ್ಗಿಸಬೇಕು? ಹಣ ಖರ್ಚು ಮಾಡಿ ಗೆಲ್ಲುವಂತಹ ಕ್ಯಾಂಡಿಡೇಟ್‌ಗಳನ್ನೇ ಹುಡುಕಿ ಹಾಕಿರುವ ಜೆಡಿಎಸ್ ಪಾರ್ಟಿಯ ರಾಷ್ಟ್ರೀಯ ಅಧ್ಯಕ್ಷರಾದ ಗೌಡರ ಪ್ರಕಾರ ತಲೆ ತಗ್ಗಿಸುವಂತಹ ಕೆಲಸ ಯಾವುದು? ಮನೆತನದ ಮರ್ಯಾದೆ ಹೋಗುವಂತಹ ಕೆಲಸ ಮಾಡಿದಾಗ, ಸಭ್ಯನಾಗಿ ಬದುಕಿ ಅಕಸ್ಮಾತ್ ಕಳ್ಳತನ ಮಾಡಿ ಸಿಕ್ಕಿಬಿದ್ದಾಗ ಅಥವಾ ವ್ಯಭಿಚಾರ ಮಾಡಿ ಸಿಕ್ಕಿಬಿದ್ದಾಗ, ಇಂತಹ ಸಾರ್ವಜನಿಕ ಜೀವನದ ನಡಾವಳಿಯಲ್ಲಿ ಏರುಪೇರಾದಾಗ ವ್ಯಕ್ತಿಗಳು ತಲೆ ತಗ್ಗಿಸುತ್ತಾರೆ. ಆದರೆ ಪೈಪೋಟಿಯಿಂದ ಹಣ ಹಂಚಿಕೆ ಮಾಡುತ್ತಿರುವ ಮೂರು ಪಾರ್ಟಿಯವರೂ ಲಾಭ ನಷ್ಟದ ವ್ಯವಹಾರದಲ್ಲಿ ಹಣ ಖರ್ಚು ಮಾಡುತ್ತಿರುವಾಗ ಯಾರು ತಲೆ ತಗ್ಗಿಸಬೇಕೆಂಬುದೇ ಅರ್ಥವಾಗುತ್ತಿಲ್ಲವಂತಲ್ಲಾ, ಥೂತ್ತೇರಿ!!

*****

"ಲಂಕೇಶ್ ಚಿತ್ರರಂಗದಲ್ಲಿ ಪ್ರಯೋಗ ಮಾಡಿದರೇ ಹೊರತು ಅಂತರರಾಷ್ಟ್ರೀಯ ಗುಣಮಟ್ಟದ ಚಿತ್ರ ತೆಗೆಯಲಿಲ್ಲ" ಎಂದು ಲಲಿತಕಲಾ ಅಕಾಡೆಮಿ ಅಧ್ಯಕ್ಷ ಎಂ.ಎಸ್. ಮೂರ್ತಿ ಹೇಳಿದ್ದಾರಲ್ಲಾ, ಇದೇ ಮೂರ್ಖರು ಲಂಕೇಶ್ ಎದುರು ಕುಳಿತು ಅವರ ಸಿನಿಮಾಗಳನ್ನು ಹಿಗ್ಗಾಮುಗ್ಗಾ ಹೊಗಳಿದ ದಾಖಲೆಗಳಿವೆ. ಅಷ್ಟಕ್ಕೂ ಲಂಕೇಶ್ ತಮ್ಮ ಚಿತ್ರಗಳ ಗುಣಮಟ್ಟ ಕುರಿತು ಮಾತನಾಡದಿದ್ದರೂ ಒಂದಲ್ಲಾ ಒಂದು ಪ್ರಶಸ್ತಿ ಪಡೆದಿವೆ. ಮೂವತ್ತೇಳು ವರ್ಷಗಳ ಹಿಂದಿನ ಚಿತ್ರ ತೆಗೆದುಕೊಂಡು ಇವತ್ತಿನ ಮಾನದಂಡದಲ್ಲಿ ಅಳೆಯುವ ಮೂರ್ತಿ ಮಾತಿನ ಮರ್ಮದ ಹಿಂದೆ ಲಂಕೇಶರು ಚಿತ್ರ ಬರೆಸಿಕೊಂಡು ಕಡಿಮೆ ಹಣ ಕೊಟ್ಟರೆಂಬ ಅಸಹನೆ ಇದೆಯಂತಲ್ಲಾ. ಜೊತೆಗೆ "ಲೈ ಸಾಧಾರಣ ಚಿತ್ರಕ್ಕೆ ಅಷ್ಟು ದುಡ್ಡು ಕೇಳ್ತೀಯಲ್ಲಯ್ಯ ಈಡಿಯಟ್" ಎಂಬ ಬೈಗುಳ ಇನ್ನೂ ನೆನಪಿರುವುದು ಅಚ್ಚರಿಯಲ್ಲವೆ, ಥೂತ್ತೇರಿ!!

*****

"ಲಂಕೇಶ್ ಈಗ ಇರಬೇಕಿತ್ತು" ಎಂದು ಹಲುಬುವವರ ಪಡೆ ಒಂದೆಡೆಯಾದರೆ, "ಸದ್ಯ ಲಂಕೇಶ್ ಈಗಿಲ್ಲವಲ್ಲ, ಅಂತೂ ಬಚಾವಾದೆವು" ಎಂದು ನಿಟ್ಟುಸಿರು ಬಿಡುವ ಪಡೆಯೂ ಇದೆಯಂತಲ್ಲಾ. ಈ ಪೈಕಿ ಕನ್ನಡ ಸಾಹಿತ್ಯ ಲೋಕ ಒಂದೆಡೆಯಾದರೆ ರಾಜಕಾರಣದಲ್ಲಿ ಸ್ಯಾನೇ ಜನಗಳಿದ್ದಾರಂತಲ್ಲಾ. ಇದೆಲ್ಲಕ್ಕಿಂತ ಕುತೂಹಲದ ಸಂಗತಿ ಎಂದರೆ "ಮನುಷ್ಯ ಮೂಲತಃ ನೀಚ. ಆದ್ದರಿಂದ ನಾವು ಎಚ್ಚರಿಕೆಯಿಂದ ಇರಬೇಕು" ಎಂದು ಹೇಳುತ್ತಿದ್ದ ಲಂಕೇಶರು ಹಲವು ನೀಚರಿಂದಲೇ ಸುತ್ತುವರಿದಿದ್ದರಂತಲ್ಲಾ, ಅವರುಗಳು ಈಗ ಮಾಡುತ್ತಿರುವ ಅವಾಂತರಗಳನ್ನು ನೋಡಿದ ಸಾರ್ವಜನಿಕರು "ಲಂಕೇಶ್ ಈಗ ಇದ್ದಿದ್ದರೆ ಇವರೆಲ್ಲಾ ಹೀಗೆ ವರ್ತಿಸುತ್ತಿರಲಿಲ್ಲ, ನಿಜಕ್ಕೂ ಈಗ ಇರಬೇಕಿತ್ತು ಲಂಕೇಶ್" ಎಂದು ಪ್ರತಿ ದಿನವೂ ಹೇಳುತ್ತಿದ್ದಾರಂತಲ್ಲಾ, ಥೂತ್ತೇರಿ!!

*****

ದೇವೇಗೌಡರ ಮಾತಿಗೆ ಇತ್ತ ಕಾಂಗ್ರೆ ಮತ್ತು ಅತ್ತ ಬಿಜೆಪಿಯಿಂದ ಶಾನೆ ತೀಕ್ಷ್ಣವಾದ ಉತ್ತರ ಬಂದಿದೆಯಂತಲ್ಲಾ. "ರಾಷ್ಟ್ರೀಯ ಪಕ್ಷದ ನಡವಳಿಕೆಯಿಂದ ತಲೆ ತಗ್ಗಿಸುವಂತಾಗಿದೆ ಎಂದು ಹೇಳುತ್ತಿರುವ ದೇವೇಗೌಡರನ್ನು ಹನ್ನೊಂದು ತಿಂಗಳು ಪ್ರಧಾನಿ ಮಾಡಿದ್ದು ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ಎಂಬುದು ನೆನಪಿನಲ್ಲಿದ್ದರೆ ಒಳ್ಳೆಯದು" ಎಂದು ಉಗ್ರಪ್ಪನ ಅಭಿಮಾನಿಗಳು ಹೇಳುತ್ತಿದ್ದಾರಂತಲ್ಲಾ. ಹಾಗೆಯೇ ಬಿಜೆಪಿಯ ಯಡ್ಡಿ ಕಡೆಯವರು "ನಮ್ಮ ಬಿಜೆಪಿಯಲ್ಲಿ ಹೆಚ್ಚಿನ ಸಂಖ್ಯೆಯ ಶಾಸಕರಿದ್ದರೂ ವಯಸ್ಸಿನಲ್ಲಿ, ಅನುಭವದಲ್ಲಿ ಮತ್ತು ಹೋರಾಟದಲ್ಲಿ ಕುಮಾರಸ್ವಾಮಿಗಿಂತಲೂ ಮಿಗಿಲಾಗಿದ್ದ ಎಡೂರಪ್ಪ ಉಪಮುಖ್ಯಮಂತ್ರಿಯಾಗಿ ಕುಮಾರಸ್ವಾಮಿಯನ್ನು ಮುಖ್ಯಮಂತ್ರಿ ಮಾಡಿದ್ದು ರಾಷ್ಟ್ರೀಯ ಪಕ್ಷವಾದ ಬಿಜೆಪಿ ಎಂಬುದು ಗೌಡರಿಗೆ ತಿಳಿದಿರಲಿ" ಎಂದರಂತಲ್ಲಾ. ರಾಷ್ಟ್ರೀಯ ಪಕ್ಷಗಳಿಲ್ಲದಿದ್ದರೆ ಗೌಡರು ಪ್ರಧಾನಿ ಮತ್ತು ಕುಮಾರಣ್ಣ ಮುಖ್ಯಮಂತ್ರಿಯಾಗುತ್ತಿರಲಿಲ್ಲ ಎಂದೂ ಜನ ಆಡಿಕೊಂಡರಂತಲ್ಲಾ, ಥೂತ್ತೇರಿ!!

*****

"ದೇಶದಲ್ಲಿ ಅಸಹಿಷ್ಣುತೆ ಇದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಸಾಹಿತ್ಯದಲ್ಲಂತೂ ಇದೆ" ಎಂದು ನಮ್ಮ ಕುಂಟ ಸಿಂಗ್ರಿಗೌಡರು ಹೇಳಿದ್ದಾರಂತಲ್ಲಾ. ವಯೋವೃದ್ಧರೂ ಜ್ಞಾನವೃದ್ಧರೂ ಆದ ಸಿಪಿಕೆಯವರು ಎಂತಹ ವಿಷಯದಲ್ಲೂ ಹಾಸ್ಯ ಹೊರಡಿಸಲು ಹೋಗಿ ಹಾಸ್ಯಾಸ್ಪದರಾದವರು. ಸಾಹಿತ್ಯದ ಅಸಹಿಷ್ಣುತೆಯಿಂದ ಒಳ್ಳೆಯ ಸಾಹಿತ್ಯ ಹುಟ್ಟುತ್ತದೆ. ಆದರೆ ದೇಶವನ್ನು ಆವರಿಸಿರುವ ಅಸಹಿಷ್ಣುತೆಯಿಂದ ಜನಾಂಗ ನೆಮ್ಮದಿ ಕಳೆದುಕೊಳ್ಳುತ್ತ, ಹಗಲು ಹೊತ್ತೆ ಕತ್ತಲೆಗೆ ಹೆದರಿದಂತೆ ಜನ ಹೆದರುತ್ತಾರೆ. ಇಂತಹ ಅಭದ್ರತೆಯೇ ಚಿಟ್ಟೆಗಳಿಗೆ ಬೇಕಿರುವುದು. ಸಮಾಜದಲ್ಲಿರುವ ಅಸಹಿಷ್ಣುತೆ ಬೇರೆ, ಸಾಹಿತ್ಯದ ಅಸಹಿಷ್ಣುತೆ ಬೇರೆ ಎಂಬ ಕನಿಷ್ಠ ಜ್ಞಾನವೂ ನಮ್ಮ ವಿದ್ವಾಂಸರಿಗಿಲ್ಲವಲ್ಲ, ಥೂತ್ತೇರಿ!!! ■

ಸಾಂಸ್ಕೃತಿಕ ಕಣ್ಣಿಗಾಗಿ ತಪಸ್ಸು ಮಾಡಬೇಕಾಗಿದೆ



ಕುವೆಂಪು ಅವರ ಒಂದು ಗೀತೆಯನ್ನು ನಮ್ಮ ಗೆಳೆಯ-ಗೆಳತಿಯರು ಹಾಡಿದ್ರು. ಅದರ ರಿದಮ್ ಇನ್ನು ನನ್ನ ಒಳಗಡೆಯೇ ಇದೆ. ಅದರ ಲಯ, ರಾಗ ತುಂಬಾ ಚೆನ್ನಾಗಿದೆ. ಈಗ ನಾವು ಯಾವುದನ್ನ ಹಾಡ್ಕೊಳ್ಬೇಕು, ನಮಗೆ ಯಾವುದರ ಅಗತ್ಯವಿದೆ ಆ ದೃಷ್ಟಿಯಿಂದ ಮಾತಾಡ್ತೀನಿ. ಆಮೇಲೆ ನಾವು ಅದನ್ನು ಹಾಡಿಕೊಂಡ್ರೆ ಇನ್ನೂ ಹೆಚ್ಚಿನದನ್ನು ಮಾಡಬಹುದೇನೋ ಅನ್ನುವ ಪ್ರೀತಿಯ ಹುಡುಕಾಟ ಇದೆ.

ನಮ್ಮ ಲಂಕೇಶ್ ಅವರ ಬಗ್ಗೆ ಒಂದು ಪ್ರಸಂಗ ಇದೆ. ಅದು ನಿಜವೋ ಸುಳ್ಳೋ ಗೊತ್ತಿಲ್ಲ. ಲಂಕೇಶ್ ಅಭಿಮಾನಿಯೊಬ್ಬರು ಹೋಟೆಲ್ಗೆ ಕರೆದುಕೊಂಡು ಹೋಗಿ ಅವರಿಗೆ ಊಟ ಕೊಡಿಸ್ತಾರೆ. ಅಲ್ಲಿ ಅವರಿಗೊಂದು ಕಾಲ್ ಬರುತ್ತೆ. ಜೊತೆಯಲ್ಲಿ ಅವರ ಹೆಂಡ್ತಿ ಕೂಡ ಇರ್ತಾರೆ. ಗಡಿಬಿಡಿಯಲ್ಲಿ ಆತ ಸಾರ್ ಅರ್ಧ ಗಂಟೇಲಿ ಬಂದುಬಿಡ್ತೀನಿ, ಯು ಪ್ಲೀಸ್ ಕ್ಯಾರಿ ಆನ್ ಅಂತಂದು ಹೊರಟುಬಿಡ್ತಾರೆ. ಆಗ ಲಂಕೇಶ್‌ಗೆ ಒಂದು ಅನುಮಾನ ಶುರು ಆಗುತ್ತೆ. ಈ ಸ್ಟುಪಿಡ್ ಫೆಲೋ ತನ್ನ ಹೆಂಡ್ತೀನ ನನ್ನ ಜೊತೆ ಬಿಟ್ಟೋಗಿದ್ದು ನನಗೆ ವಯಸ್ಸಾಗಿದೆ ಅನ್ನೋ ಕಾರಣಕ್ಕಾಗಿ ಇರಬಹುದಾ ಅಂತ. ಒಂಥರಾ ಸಂಕಟ, ತಳಮಳ, ಗಾಬರಿ ಆಗ ನಮ್ಮ ಲಂಕೇಶ್‌ಗೆ ಶುರುವಾಯ್ತಂತೆ. ಈಗ ನಂಗೂ ಹಾಗೇ ಆಗ್ತಾ ಇದೆ. ಯಾಕಂದ್ರೆ ಈ ಕಾರ್ಯಕ್ರಮಕ್ಕೆ ಬರೋದಕ್ಕೆ ದಿನೇಶ್ ಅಮೀನ್ ಮಟ್ಟು ಬೆಂಗಳೂರಿಂದ ಮೈಸೂರಿಗೆ ಬಂದು ಕಾರಲ್ಲಿ ಕರ್ಕೊಂಡೋಗ್ತೀನಿ ಅಂದ್ರು. ಸಾಮಾನ್ಯವಾಗಿ ಕಾರ್ಯಕ್ರಮಗಳಿಗೆ ನಾನೇ ಹೋಗ್ತೀನಿ. ಆದ್ರೆ ಇವ್ರು ಹಾಗಂದ್ರು. ಆಗ ನಂಗನಿಸ್ತು, ಓಹೋ ಪರವಾಗಿಲ್ಲ ನಂಗೂ ಸ್ವಲ್ಪ ಸ್ಕೋಪಿದೆ ಅಂತ. ಆದ್ರೆ ಇದು ಹೆಚ್ಚು ಕಾಲ ಉಳೀಲಿಲ್ಲ, ಅನಂತ ನಾಯಕ್ ಫೋನ್ ಮಾಡಿ ನಿಮ್ಮನ್ನ ಜೋಪಾನವಾಗಿ, ನಿಧಾನಕ್ಕೆ ಕರ್ಕೊಂಡೋಗ್ತೀವಿ ಅಂತ ಹೇಳಿದ್ರು. ಆಗ ಓಹೋ ಇವ್ರು ಈ ಥರ ಮಾಡ್ತಿರೋದು ನಂಗೂ ವಯಸಾಯ್ತು ಅಂತ ಎಚ್ಚರಿಕೆ ವಹಿಸೋಕೆ ಅಂತ. ಈಗ್ಲೂ ಈ ಬಗ್ಗೆ ತಳಮಳ ಆಗ್ತಾ ಇದೆ. ಯಾಕಂದ್ರೆ ನಾನು ಭಾರತಕ್ಕೆ ಸ್ವಾತಂತ್ರ್ಯ ಬಂದನಂತರ ಹುಟ್ಟೋನು. ಆದ್ರೂ ಕೂಡ ನನ್ನ ಮಿತ್ರರು ಇತ್ತೀಚೆಗೆ ನನ್ನನ್ನ ಸ್ವಾತಂತ್ರ್ಯ ಹೋರಾಟಗಾರನೇನೋ ಅನ್ನೋ ಥರ ಭಾವಿಸ್ತಾರೆ. ಈ ನಮ್ಮ ಎಚ್.ಎಸ್.ದೊರೆಸ್ವಾಮಿಯವರ ಪಕ್ಕದಲ್ಲಿ ನನ್ನನ್ನಿಟ್ಟು ನೋಡುವ ಪರಿಪಾಠ ಹೆಚ್ಚಾಗ್ತಾ ಇದೆ. ಇದು ಒಳ್ಳೇದಕ್ಕೋ ಕೆಟ್ಟದಕ್ಕೋ ನಂಗೊತ್ತಿಲ್ಲ. ಆದರೆ ಈ ಕಾರ್ಯಕ್ರಮದ ಪೋಸ್ಟರ್‌ಗಳಲ್ಲಿ ನಾನು ಮೈಕ್ ಹಿಡ್ಕೊಂಡು ಕೈಯೆತ್ತಿ ಭಾಷಣ ಮಾಡ್ತಾ ಇರೋ ಭಾವಚಿತ್ರ ಹಾಕ್ಬಿಟ್ಟಿದಾರೆ. ಏನೋ ಒಂದು ಅಪರೂಪಕ್ಕೆ ತಪ್ಪು ಮಾಡ್ಬಿಟ್ಟೆ ನಾನು. ಆದರೆ ನನ್ನ ಮಿತ್ರರು ಅದನ್ನ ಈ ರೀತಿ ಜಗಜ್ಜಾಹೀರು ಮಾಡಬಾರದಾಗಿತ್ತು.

ಇರಲಿ. ಇದುವರೆಗು ನಾನು ಹೇಳ್ತಾ ಇದ್ದದ್ದು ನಾನು ಹೇಳಬೇಕಾದ್ದನ್ನಲ್ಲ. ನಾವು ಸಮಾಜದಲ್ಲಿ ಒಂದು ಅಭಿರುಚಿಯನ್ನು ಉಂಟುಮಾಡುತ್ತೇವೆ ಅಂದುಕೊಂಡವರು ನಮ್ಮ ಪ್ರತಿ ಹೆಜ್ಜೆಗಳಲ್ಲಿ ಎಲ್ಲದರಲ್ಲಿ ಅದು ಪರ್ಯಾಯವಾಗಿ ಕಾಣುವಂತೆ ಇರಬೇಕು. ಅದು ಸರಳವಾಗಿ, ಸುಂದರವಾಗಿ, ಸತ್ಯವಾಗಿ ಇರಬೇಕು. ಇಲ್ಲದೆ ಇದ್ದರೆ, ನಾವು ಯಾವನ್ನ ಬೇಡ ಅನ್ನುತ್ತೇವೋ ನಮಗೆ ಅರಿವಿಲ್ಲದೇ ಅದನ್ನೇ ನಾವು ಮಾಡತೊಡಗ್ತೀವಿ. ಅದರ ನೆರಳು ಆಗಿಬಿಡ್ತೀವಿ.

ಈಗೀಗ ಎಲ್ರೂ ಚೆನಾಗಿ ಮಾತಾಡ್ತಾ ಇದಾರೆ, ಚೆನಾಗಿ ಬರೀತಾ ಇದಾರೆ. ನಾನು ಕೂಡ ಚೆನಾಗಿ ಮಾತಾಡ್ತೀನಿ. ಆದ್ರೆ ನಮ್ಮ ಆಶಯಗಳು ಏನಿವೆಯೋ ನಾವು ಎಷ್ಟೆಷ್ಟು ಚೆನ್ನಾಗಿ ಮಾತಾಡ್ತೀವೋ ಅಷ್ಟಷ್ಟು ವಿರುದ್ಧವಾದದ್ದು ಸಮಾಜದಲ್ಲಿ ಹೆಚ್ತಲೇ ಇದೆಯಲ್ಲ? ನಮ್ಮ ಮಾತಿನ ಆಶಯಗಳಿಗೆ ವಿರುದ್ಧವಾದ ವಿದ್ಯಮಾನಗಳು ಸಮಾಜದಲ್ಲಿ ಹೆಚ್ಚುತ್ತಿವೆಯಲ್ಲ? ನಾವು ತಾಳ ತಪ್ಪುತ್ತಿರುವುದೆಲ್ಲಿ? ನಾವೆಲ್ಲಾ ಮಾತಾಡುತ್ತಿರುವುದರಲ್ಲಿ ನಮ್ಮ ಹುಡುಕಾಟ ಸ್ಥಗಿತಗೊಂಡು ಪ್ರವಾಚಕರಂತೆ ರಂಜನೆ ಕೊಡ್ತಾ ಇರೋದಾಗ್ತಾ ಇದೆಯಾ? ಇದನ್ನೂ ನೋಡಿಕೊಳ್ಳಬೇಕಾಗಿದೆ. ನಮ್ಮ ಮಾತುಗಳನ್ನು ನಾವು ನೋಡಿಕೊಳ್ಳಬೇಕಾಗಿದೆ.

ಇತ್ತೀಚೆಗೆ ಸಾಂಸ್ಕೃತಿಕ ವಲಯದಲ್ಲಿ ಎರಡು ಸಂಗತಿಗಳು ಹೆಚ್ಚು ಚರ್ಚೆಯಾದವು. ಒಂದು ರಾಮಾಯಣದ ಶಂಭೂಕ, ಇನ್ನೊಂದು ಭಗವದ್ಗೀತೆ. ನಾವು ಯಾರೂ ಪ್ರಶ್ನೆ ಕೇಳ್ಕೊಳ್ಳಲಿಲ್ಲ, ಅರೆ! ವಾಲ್ಮೀಕಿ ಶೂದ್ರ. ತಾನು ಬರೆದ ಕಾವ್ಯದಲ್ಲಿ ತನ್ನ ಸಮುದಾಯದವನು ತಪಸ್ಸು ಮಾಡಬಾರದು ಅಂತ ಬರೆದ್ಕೊಳ್ಳೋಕೆ ಸಾಧ್ಯವೇ ಇಲ್ಲ. ಈ ಸಂದರ್ಭದಲ್ಲಿ ನನಗೆ 'ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ' ಲೇಖನದಲ್ಲಿ ಕುವೆಂಪು ಹೇಳಿದ್ದು ನೆನಪಾಗುತ್ತಿದೆ. ನಿಮ್ಮ ಮನೆಯಲ್ಲಿ ನಿಮ್ಮ ಅಜ್ಜಿ ಹಾಕುತ್ತಿದ್ದ ಆಭರಣಗಳನ್ನು ನಿಮ್ಮ ಹೆಂಡತಿ ಒಲೆಗೆ ಹಾಕಿದ್ರಾ? ಬಿಸಾಕಿದ್ರಾ? ಇಲ್ಲ, ಅದನ್ನು ಕರಗಿಸಿ ಅದನ್ನು ಬೇರೆ ಆಭರಣ ಮಾಡುತ್ತೇವೆ. ಆಭರಣದ ರೂಪ ಯಾವುದಾದ್ರೂ ಇರಲಿ, ಅದರ ಮೂಲ ತುಂಬಾ ಬೆಲೆಯುಳ್ಳದ್ದು, ಅದನ್ನು ಎಸೆದರೆ ಮೂರ್ಖರಾಗ್ತೇವೆ. ಹೀಗೇ ನಮ್ಮ ಪುರಾಣಗಳು-ರಾಮಾಯಣ ಮಹಾಭಾರತ ಯಾವುದೇ ಇರಲಿ ಅದನ್ನು ಸಾರಾಸಗಟಾಗಿ ಬಿಸಾಡುವುದಲ್ಲ, ಅದನ್ನು ನಮ್ಮ ಸಾಹಿತ್ಯದಲ್ಲಿ ಎರಕ ಹೊಯ್ಯಬೇಕು. ಆ ಎರಕದ ಮೂಲಕ, ಆ ಕಥಾವ್ಯಕ್ತಿಗಳ ಮೂಲಕ ನೀವು ನಿಮ್ಮ ಧ್ಯೇಯ ಗಳನ್ನು ತಲುಪೋದು, ಪ್ರಸಾರ ಮಾಡೋದು ಸುಲಭವಾಗುತ್ತೆ ಮತ್ತು ಇದು ಜನಗಳಿಗೆ ಬೇಗಬೇಗ ಮುಟ್ಟುತ್ತೆ ಅಂತ.

ಹಾಗೇ ಕುವೆಂಪು ಅವರು ಗೀತೆಯನ್ನು ಕೂಡಾ ಒಪ್ಪಿಕೊಳ್ಳುತ್ತಾರೆ. ಮನಃಶಾಸ್ತ್ರ ಪ್ರಾಕೃತಿಕ ಎಂಬಂತೆ ಇಡೀ ಜಗತ್ತಿಗೆ ಅನ್ವಯಿಸುತ್ತಾರೆ. ಹಿಂದೂಗಳ ವರ್ಣ ಜಾತಿಗಳಿಗೆ ಹುಟ್ಟನ್ನು ಅನ್ವಯಿಸಿ ಗೀತೆ ಹಾಡುವವರಿಗೆ ಕುವೆಂಪು ಹೀಗೆ ಕರೆ ಕೊಡುತ್ತಾರೆ (ಕುವೆಂಪು ಅವರ ಲೇಖನದ ಸಾಲುಗಳನ್ನು ಉಲ್ಲೇಖಿಸುತ್ತಾ) ಹಾಗಾದರೆ ನಿಮ್ಮ ಶ್ರೀಕೃಷ್ಣ ಭಗವಂತನಲ್ಲ, ಅವನೂ ಒಬ್ಬ ಬ್ರಾಹ್ಮಣಪರ ಆಚಾರ್ಯನಾಗುತ್ತಾನೆ. ಒಂದು ವೇಳೆ ನೀವು ಹೇಳಿದಂತೆ ವರ್ಣ, ಜಾತಿ, ವರ್ಗಗಳನ್ನು ನಿಮ್ಮ ಆ ದೇವರೇ ಸೃಷ್ಟಿ ಮಾಡಿದ್ದರೂ ಅವನ್ನೆಲ್ಲಾ ಇಂದು ಸರ್ವೋದಯಕ್ಕಾಗಿ ನಾವು ಧ್ವಂಸ ಮಾಡಬೇಕಾಗುತ್ತದೆ. ಕಾಲರಾ, ಪ್ಲೇಗು, ಮಲೇರಿಯಾಗಳನ್ನು ದೇವರೇ ಸೃಷ್ಟಿ ಮಾಡಿದ್ದು ಅಂತ ಹೇಳಿ ಸುಮ್ಮನಿರುವುದಕ್ಕೆ ಆದೀತೆ? ಹಾಗೆ ವರ್ಣ ಜಾತಿ ಮುಂತಾದುವನ್ನೆಲ್ಲಾ ದೇವರೇ ಸೃಷ್ಟಿ ಮಾಡಿದ್ದರೂ ಅವನ್ನೆಲ್ಲಾ ನಾಶ ಮಾಡಬೇಕಾಗುತ್ತದೆ ಎಂದು ಕುವೆಂಪು ಹೇಳುತ್ತಾರೆ.

ನಾನು ಭಗವದ್ಗೀತೆಯ ಮೇಲೆ ಕಣ್ಣಾಡಿಸಿದೆ. ಅದರೊಳಗೆ ಬುದ್ದಿಸಂನ ಅಂಶಗಳು ಬಹಳಷ್ಟಿವೆಯಲ್ಲಾ ಅಂತ ಅನ್ನಿಸಿತು. ಆದರೆ ಆಳಕ್ಕೆ ಹೋಗುವ ಪಾಂಡಿತ್ಯ ನನಗೆ ಇರಲಿಲ್ಲ. ಆದರೆ ಇಲ್ಲಿ ಏನೋ ಒಂದು ವಂಚನೆ ನಡೆದಿದೆ ಅನ್ನಿಸತೊಡಗಿತು. ಭಾರತಕ್ಕೆ ದೇವರು ಮುಖ್ಯವಲ್ಲ. ಚಾತುರ್ವರ್ಣ ಮುಖ್ಯ. ಹುಟ್ಟಿನಿಂದ ನಿರ್ಧರಿತವಾಗುವ ಚಾತುರ್ವರ್ಣವೇ ಧರ್ಮ ಅನ್ನುವುದು ತಿಳಿಯಿತು.

ಮಹಾರಾಷ್ಟ್ರದ ಲೇಖಕರೊಬ್ಬರ ಆತ್ಮಕಥೆಯಲ್ಲಿ ಒಂದು ಪ್ರಸಂಗ ಬರುತ್ತೆ. ಯಾರೋ ಒಬ್ಬ ಹುಚ್ಚ ದೇವರಿಗೆ ಚಪ್ಪಲಿಯಲ್ಲಿ ಹೊಡೆಯುತ್ತಿದ್ದರೆ ಜನ ಎಲ್ಲಾ ನಿಂತು ನೋಡ್ತಾ ಇರುತ್ತಾರೆ. ಆದರೆ ದಲಿತ ಹುಡುಗನೊಬ್ಬ ದೇವಸ್ಥಾನದ ಒಳಗೆ ಹೋದರೆ ಅವನಿಗೆ ಚಪ್ಪಲಿಯಲ್ಲಿ ಹೊಡೆಯುತ್ತಾರೆ. ಇದು ಇಂಡಿಯಾದ ಅಪ್ಪರ್ ಕಾಸ್ಟ್ ಸೈಕಾಲಜಿ. ಇವರಿಗೆ ದೇವ್ರು ಮುಖ್ಯ ಅಲ್ಲ, ಜಾತಿ, ಧರ್ಮ - ಇವು ಮುಖ್ಯ. ಬುದ್ದಿಸಂ ಇದನ್ನು ಒಪ್ತಾ ಇರಲಿಲ್ಲ, ಅದಕ್ಕೇ ಅದನ್ನು ಪರದೇಶಿ ಮಾಡಿಬಿಟ್ರು. ಜೈನ, ಲಿಂಗಾಯತಗಳು ಜಾತಿಯಾಗಿ ಹಿಡ ಮಾಡಿಸಿಕೊಂಡು ಇಲ್ಲಿ ಉಳಿದವು. ಆಮೇಲೆ ಈ ಕ್ರಿಶ್ಚಿಯನ್ಸ್ ಮೇಲೆ, ಮುಸ್ಲಿಮ್ಸ್ ಮೇಲೆ ಜಗಳ ಯಾಕೆ? ಅವು ಜಾತಿಯಾಗಿಲ್ಲ ಅನ್ನೋ ಕಾರಣಕ್ಕೆ. ಹೀಗಾಗಿ ಗೀತೆಯೊಳಗೆ ಜರುಗಿರಬಹುದಾದ ವಂಚನೆ ಏನಿರಬಹುದು ಹಾಗಾದರೆ? ಬುದ್ದಿಸಂ ಆಗ ಪ್ರಚಲಿತವಿತ್ತು, ಆಂದು ಬುದ್ದಿಸಂ ಜನಮಾನಸದಲ್ಲಿತ್ತು. ಅದನ್ನು ತೆಗೆದುಕೊಂಡು ಭಗವದ್ಗೀತೆಯಲ್ಲಿ ಜಾತಿ ವರ್ಣವನ್ನು ಕಸಿ ಮಾಡಲಾಗಿದೆಯಾ? ನಾವಿವತ್ತು ಭಗವದ್ಗೀತೆಯಲ್ಲಿನ ತಾರತಮ್ಯದ ರೋಗದ ಗಡ್ಡೆಗಳನ್ನು ಆಪರೇಷನ್ ಮಾಡಿ ಬಿಸಾಕಿ ಗೀತೆಯನ್ನು ಉಳಿಸಿಕೊಳ್ಳಬೇಕಾಗಿದೆ. ಕುವೆಂಪು ದರ್ಶನದ ಪ್ರತಿಮಾ ದೃಷ್ಟಿ ಪಡೆದರೆ ಇದು ನಮಗೆ ಸಾಧ್ಯವಾಗುತ್ತದೆ. ಆದರೆ ನಾವು ಪ್ರತಿಕೃತಿ ದೃಷ್ಟಿಗೆ ಕಟ್ಟುಬಿದ್ದು ಒದ್ದಾಡುತ್ತಿದ್ದೇವೆ. ಇಲ್ಲಿ ಕುವೆಂಪು ಅವರನ್ನೂ ಕೂಡಾ ಸಾರಾಸಗಟು ಒಪ್ಪಿಕೊಳ್ಳಬೇಕೆಂದೇನಲ್ಲ, ಪ್ರತಿಮಾ ದೃಷ್ಟಿಯನ್ನು ಉಪಯೋಗಿಸಿ. ಅಷ್ಟೇ ಮುಖ್ಯ. ನಾನು ಇದುವರೆಗೂ ನಿಮ್ಮ ಮನಸ್ಸಿನ ಕೊಳಕ್ಕೆ ನನ್ನ ಗೊಂದಲ ಕಲ್ಲುಗಳನ್ನು ಎಸೆದು ಅಲೆಗಳನ್ನು ಎಬ್ಬಿಸಲು ಪ್ರಯತ್ನಿಸ್ತಾ ಇದ್ದೇನೆ. ಅಲ್ಲಿ ಅಲೆಗಳು ಉಂಟಾದರೆ ನಾನು ಕಲ್ಲು ಎಸೆದಿದ್ದು

ಏಕರೂಪೀ ಸಂಸ್ಕೃತಿಯ ಹೇರಿಕೆದಾರರ ವಿರುದ್ಧ ಹೋರಾಡಬೇಕು

1

ಸ್ನೇಹಿತರೆ, ಎರಡು ದಿನದ ಈ ಸಮಾವೇಶದಲ್ಲಿ ಎಷ್ಟೊಂದು ಜೀವಂತಿಕೆ ಮಿಡಿಯುವ ತರುಣ-ತರುಣಿಯರು ಇಲ್ಲಿ ಭಾಗವಹಿಸಿದ್ದಾರೆ. ಕಳೆದ ಐದಾರು ವರ್ಷಗಳಲ್ಲಿ ನಾನು ಭಾಗವಹಿಸಿದ ಅರ್ಥಪೂರ್ಣವಾದ ಸಮಾವೇಶಗಳಲ್ಲಿ ಇದೊಂದು. ಕರ್ನಾಟಕದಲ್ಲಿ ನಾಲ್ಕು ಕಡೆ ವರ್ಷಕ್ಕೆ ನಾಲ್ಕು ಸಲ ಇಂತಹ ಸಮಾವೇಶಗಳು ನಡೆದರೆ, ನಾನಾ ಕಾರಣಗಳಿಂದ ಕಳೆದುಹೋಗಿರುವ ಆತ್ಮವಿಶ್ವಾಸ ನಮಗೆ ಮರಳಿ ಬರುತ್ತದೆ. ಇಂತಹ ಚಾರಿತ್ರಿಕ ಮಹತ್ವದ ಸಮಾವೇಶ ಸಂಘಟಿಸಿದ 'ಸಹಮತ'ದ ಎಲ್ಲ ಗೆಳೆಯರಿಗೆ, ಸಮಾನತೆಯ ಸಮಾಜದ ಕನಸು ಕಾಣುತ್ತಿರುವ ಎಲ್ಲರ ಪರವಾಗಿ ಕೃತಜ್ಞತೆ ಮತ್ತು ಅಭಿನಂದನೆ ಸಲ್ಲಿಸುತ್ತೇನೆ.

ಈ ಸಮಾವೇಶದಲ್ಲಿ ಕರಾವಳಿಯಲ್ಲಿ ಮತೀಯ ಶಕ್ತಿಗಳ ವಿರುದ್ಧ ಹೋರಾಡುತ್ತಿರುವ ಅನೇಕ ಸಂಗಾತಿಗಳ ಗೈರುಹಾಜರಿ ನನಗೆ ಕಾಡುತ್ತಿದೆ. ಇದಕ್ಕೆ ಕಾರಣವೇನೋ ತಿಳಿದಿಲ್ಲ, ಏನಿದ್ದರೂ, ಮುಂದಿನ ಸಮಾವೇಶದಲ್ಲಿ ಎಲ್ಲ ಸಮಾನಮನಸ್ಕರು ಕೂಡಿ ಕೆಲಸ ಮಾಡುವಂತಾಗಬೇಕು ಎಂದು ಆಸೆಪಡುತ್ತೇನೆ. ಬೆಳಗ್ಗೆ ದೇವನೂರರು ಹೇಳಿದಂತೆ, ಈ ಸಮಾವೇಶದಲ್ಲಿ ವ್ಯಕ್ತಿಹೆಸರಲ್ಲಿರುವ 'ಸುಡಿಸಿರಿ'ಗೆ ಪ್ರತಿಯಾಗಿ ಎಂಬ ಆಯಾಮವಿದೆ. 'ಸುಡಿಸಿರಿ'ಗೆ ಪ್ರತಿಯಾಗಿ ಇದು ಆರಂಭವಾಗಿದ್ದು ನಿಜ. ಆದರೆ ಎದುರಾಳಿ ಕೇಂದ್ರಿತ ಪ್ರತಿರೋಧಕ್ಕೆ ಕೆಲವೊಮ್ಮೆ ಬೇಕಾದ ಸಂಗಾತಿಗಳನ್ನು ಒಳಗೊಳ್ಳುವ ಪಾಸಿಟಿವ್ ಆಶಯಗಳು ಕಡಿಮೆಯಾಗಬಹುದು ಎಂದು ಶಂಕೆ ನನಗೆ. ಈ ಮಾತನ್ನು ಆಡುವಾಗ, ಧಾರವಾಡದಲ್ಲಿ ಇಲ್ಲದ ರಾಜಕೀಯ ಸಾಮಾಜಿಕ ಸನ್ನಿವೇಶ ಕರಾವಳಿಯಲ್ಲಿದೆ; ಇಲ್ಲಿನ ಸಂಗಾತಿಗಳು ಬಲಾಢ್ಯ ಪ್ರತಿಗಾಮಿ ಶಕ್ತಿಗಳೆದುರು ಕೆಲಸ ಮಾಡುತ್ತಿದ್ದಾರೆ ಎಂಬ ಖಬರು ನನ್ನಲ್ಲಿದೆ. ಧಾರವಾಡದಲ್ಲಿಯೂ ಸಾಹಿತ್ಯ ಸಂಭ್ರಮಕ್ಕೆ ತಾತ್ವಿಕ ಭಿನ್ನಮತದ ಭಾಗವಾಗಿ 'ಜನಸಾಹಿತ್ಯ ಸಮಾವೇಶ' ಸಂಘಟಿತವಾಯಿತು. ನಂತರ ಗೆಳೆಯರು, ಮಾತೃಭಾಷಾ ಮಾಧ್ಯಮದ ಮೇಲೆ ರಾಷ್ಟ್ರಮಟ್ಟದ ಚಿಂತಕರನ್ನು ಆಹ್ವಾನಿಸಿ ಅದ್ಭುತವಾದ ಕಾರ್ಯಕ್ರಮ ಸಂಘಟಿಸಿದರು; ಕಲಬುರ್ಗಿ ಹತ್ಯಾವಿರೋಧಿ ಸಮಾವೇಶ ಮಾಡಿದರು; ಈಚೆಗೆ ಗುಜರಾತ್, ಮಹಾರಾಷ್ಟ್ರ, ಗೋವಾ ರಾಜ್ಯಗಳ ಅಕಾಡೆಮಿ ಬಹುಮಾನ ಮರಳಿಸಿದ ಲೇಖಕರು ಹಿರಿಯ ಮರಾಠಿ ಲೇಖಕ ಜಿ.ಎನ್.ದೇವಿಯವರ ನಾಯಕತ್ವದಲ್ಲಿ ಧಾರವಾಡಕ್ಕೆ ಬಂದಾಗ 'ದಕ್ಷಿಣಾಯನ' ಕಾರ್ಯಕ್ರಮ ನೆರವೇರಿಸಿದರು. ಬರಬರುತ್ತ ಅವರ ಕಾರ್ಯಕ್ರಮಗಳಲ್ಲಿ 'ಸಂಭ್ರಮ'ದವರನ್ನು ಎದುರಾಳಿಯಾಗಿ ಉಲ್ಲೇಖಿಸುವುದು ಕಡಿಮೆಯಾಗುತ್ತ ಹೋಯಿತು. ಈಗದು ತನ್ನದೇ ಆದ ಪ್ರೊಆಕ್ಟೀವ್ ಆಶಯಗಳ ಮೂಲಕ ಕಾರ್ಯಕ್ರಮ ಮಾಡುವ ಸಂಘಟನೆಯಾಗಿದೆ.

ಚರಿತ್ರೆಯನ್ನು ನೋಡಿದರೆ, ದೊಡ್ಡದೊಡ್ಡ ಚಳವಳಿಗಳು ಮೇಲ್ನೋಟಕ್ಕೆ ಚಿಕ್ಕದೆನಿಸುವ ಕಾರಣದಿಂದ ಶುರುವಾಗಿದ್ದರೂ, ಬಳಿಕ ತಮ್ಮದೇ ಆಶೋತ್ತರಗಳ ಮೂಲಕ ದೊಡ್ಡದಾಗಿ ಬೆಳೆದಿರುವುದು ಗೊತ್ತಾಗುತ್ತದೆ. ಬಂಡಾಯ ಸಾಹಿತ್ಯ ಸಂಘಟನೆ ದಲಿತ ಸಾಹಿತ್ಯದ ಒಂದು ಗೋಷ್ಠಿಯ ಬೇಡಿಕೆಯ ನೆಪದಲ್ಲಿ ಮೂಡಿತು; ಕಾಗೋಡು ಸತ್ಯಾಗ್ರಹ ಗೇಣಿಯ ಬತ್ತ ಅಳೆಯುವ ಕೊಳಗದ ಅಳತೆಯ ನೆಪದಲ್ಲಿ ಚಿಗುರೊಡೆಯಿತು. ದಲಿತ ಚಳವಳಿ ಕನ್ನಡದ ಐದಾರು ಲೇಖಕರ ಬೈಠಕ್ಕಿನಿಂದ ಆರಂಭವಾಯಿತು. ಸ್ಥಳೀಯ ಪ್ರತಿರೋಧದ ಕಾರಣಗಳಿಂದ ಮೂಡಿರುವ 'ಸಹಮತ' ಮತ್ತು 'ಜನಸಾಹಿತ್ಯ ಸಂಘಟನೆ'ಗಳು, ದೊಡ್ಡ ಚಳವಳಿಯಾಗಿ ಬೆಳೆಯುವ ಅಗತ್ಯವಿದೆ ಎಂದು ಹಾರೈಸುವೆ.


2

ಭಾರತದಲ್ಲೀಗ ನಮ್ಮ ಬಹುರೂಪಿ ಧರ್ಮ ಮತ್ತು ಸಂಸ್ಕೃತಿಗಳನ್ನು ಏಕರೂಪೀಕರಣ ಮಾಡುವ ರಾಜಕಾರಣ ತೀವ್ರಗತಿಯಲ್ಲಿ ನಡೆಯುತ್ತಿದೆ. ಈ ಕುರಿತು ನನ್ನ ಆಲೋಚನೆಯನ್ನು ಹಂಚಿಕೊಳ್ಳಬಯಸುತ್ತೇನೆ. ಈಚೆಗೆ ಸ್ಟೂಡೆಂಟ್ ಇಸ್ಲಾಮಿಕ್ ಆರ್ಗನೈಜೇಶನ್ನಿನವರು, ಪ್ರೊ. ಬರಗೂರರ ಅಧ್ಯಕ್ಷತೆಯಲ್ಲಿ ಕೆಲಸ ಮಾಡುತ್ತಿರುವ ಪಠ್ಯಪುಸ್ತಕ ಪರಿಷ್ಕರಣ ಸಮಿತಿಗೆ ಒಂದು ಮನವಿ ಕೊಟ್ಟರು. ಅದರಲ್ಲಿ ಎರಡು ಅಂಶಗಳಿದ್ದವು. 1. ಹಸುವನ್ನು 'ಗೋಮಾತೆ' 'ದೇವರು' ಎಂದೆಲ್ಲ ಬಣ್ಣಿಸುವ ಪಾಠಗಳಿಂದ ಮಾಂಸಾಹಾರ ಮಾಡುವ ಮಕ್ಕಳಲ್ಲಿ ಕೀಳರಿಮೆ ಉಂಟಾಗುತ್ತದೆ ಎಂಬುದು; 2. ಹಿಂದೂ ಮುಸ್ಲಿಮರು ಸೇರಿ ರಥವೆಳೆಯುವ ಉಲ್ಲೇಖವು, ಇಸ್ಲಾಮಿನ ನಂಬಿಕೆಗೆ ವಿರುದ್ಧವಾಗಿರುವುದರಿಂದ ತೆಗೆಯಬೇಕು ಎಂಬುದು. ಮೊದಲನೆಯದು 'ಹಿಂದೂ ಧರ್ಮ'ದ ಹೆಸರಿನಲ್ಲಿ ಬ್ರಾಹ್ಮಣೀಕರಣದ ರಾಜಕಾರಣಕ್ಕೆ ಸಲ್ಲಿಸಲಾದ ಆಕ್ಷೇಪವಾಗಿದ್ದು ಉಚಿತವಾಗಿದೆ. ಆದರೆ ಎರಡನೆಯದು ಮೂಲ ಇಸ್ಲಾಮೊಂದನ್ನು ಹುಡುಕುವ ಉದ್ದೇಶವುಳ್ಳದ್ದಾಗಿದ್ದು, ತಾನು ಗೋವಿನ ವಿಷಯದಲ್ಲಿ ಆಕ್ಷೇಪಿಸಿದ್ದನ್ನೇ ಒಪ್ಪುವಂತಿದೆ. ಈ ಹಿನ್ನೆಲೆಯಲ್ಲಿ ಭಾರತದ ಧರ್ಮ ಮತ್ತು ಸಂಸ್ಕೃತಿಗಳಲ್ಲಿ ಮಾಡಲಾಗುತ್ತಿರುವ ಬ್ರಾಹ್ಮಣೀಕರಣ ಮತ್ತು ಅರಬೀಕರಣಗಳ ಅನಾಹುತಗಳನ್ನು ಜರೂರಾಗಿ ಚರ್ಚಿಸಬೇಕಾಗಿದೆ. ಕಾರಣ, ವ್ಯವಸ್ಥಿತವಾದ ರೀತಿಯಲ್ಲಿ ಶುರುವಾಗಿರುವ ಈ ಏಕರೂಪೀಕರಣದ ಹೇರಿಕೆಗಳು, ಸಮಾಜವನ್ನು ಧರ್ಮದ ಹೆಸರಲ್ಲಿ ವಿಭಜಿಸುತ್ತಿದೆ ಮಾತ್ರವಲ್ಲ, ಧ್ರುವೀಕರಣವನ್ನೂ ಮಾಡುತ್ತಿವೆ. ಈ ಧ್ರುವೀಕರಣವು ನಾಗರಿಕ ಅಂತಃಕಲಹಗಳಿಗೆ ಮುನ್ನುಡಿ ಬರೆಯುವಂತಿದೆ. ಗುಜರಾತಿನಲ್ಲಿ 2002ರ ಮತೀಯ ದಂಗೆಗಳ ಮುಂಚಿನ ವರ್ಷಗಳಲ್ಲಿ ಸಮಾಜವನ್ನು ಧ್ರುವೀಕರಿಸಲಾಗಿತ್ತು. ಆದ್ದರಿಂದ ಎಸ್ಓಐ ಮನವಿಯಿಂದ ಸಂಘಪರಿವಾರಕ್ಕೆ ಒಳಗೊಳಗೇ ಖುಶಿಯಾಗಿದ್ದರೆ ಆಶ್ಚರ್ಯವಿಲ್ಲ.

3

'ಸಮಸ್ತ ಹಿಂದೂ' ಧರ್ಮದ ಹೆಸರಲ್ಲಿ ಬಹುಸಂಖ್ಯಾತ ಕೆಳಜಾತಿಯ ಹಿಂದೂಗಳ ಮೇಲೆ, ಸಂಘಪರಿವಾರವು ಬ್ರಾಹ್ಮಣವಾದಿ ಮೌಲ್ಯಗಳು ಹಾಗೂ ಮೇಲ್ಜಾತಿಯ





...ರ್ಥಕವಾಗುತ್ತೆ. ಈ ಪುರಾಣ ಕಾವ್ಯಗಳಿಂದ ಅದಿರು ...ಗೆದು, ಅದರಲ್ಲಿನ ಚಿನ್ನವನ್ನು ಸೋಸಿ ಒಡವೆಗಳನ್ನು ...ಮಾಡಿಕೊಂಡು ನಾವು ಬಳಸಿಕೊಳ್ಳುತ್ತಿಲ್ಲ. ಇದರಿಂದಾಗಿ ...ನಾವು ಸಮುದಾಯಗಳನ್ನು ತಲುಪುತ್ತಿಲ್ಲ. ಈ ...ಕಾರಣದಿಂದಲೇ ನಾವು ಎಷ್ಟೆಷ್ಟೇ ಚೆನ್ನಾಗಿ ಮಾತಾಡ್ತಾ ...ದ್ರೂ ಜನರನ್ನ ಸರಿಯಾಗಿ ತಲುಪೋಕೆ ಸಾಧ್ಯ ಆಗ್ತಾ ...ಲ್ಲ. ನಮ್ಮ ಸಮುದಾಯದ ಮನಸ್ಸುಗಳ ಒಳಗೆ ಮಥಿಸಿ ...ನಮ್ಮ ವಿಚಾರಗಳು ಮರುಹುಟ್ಟು ಪಡೆಯದಿದ್ದರೆ ...ಸಮುದಾಯದಿಂದಲೇ ನಾವು ಡ್ರಾಪ್ ಔಟ್ ಆಗಬಹುದಾ?

ಈ ಪುರಾಣ ಮಹಾಕಾವ್ಯಗಳನ್ನು ಹಿಡ್ಕೊಂಡು ನಮ್ಮ ...ಪೂರ್ವ ಸೂರಿಗಳನ್ನು ಹುಡುಕಿಕೊಂಡು ಹೋದ್ರೆ; ಗಾಂಧೀಜಿ ...ಹತ್ರ ಹೋದರೆ ಅವರು ಪ್ರಾರ್ಥನೆ, ಭಜನೆ ಮಾಡುತ್ತಾರೆ. ...ಅಂಬೇಡ್ಕರ್ ಹತ್ರ ಹೋದ್ರೆ, ವಾಸ್ತವ ಎಂಬಂತೆ ವಿಶ್ಲೇಷಿಸುತ್ತಾರೆ. ...ನ್ನು ಪೆರಿಯಾರ್ ಮುರಿದು ಎಸೆದೇ ಬಿಡ್ತಾರೆ. ಕಾರ್ಲ್ ...ಮಾರ್ಕ್ಸ್ ಹತ್ರ ಹೋದ್ರೆ, ಅಯ್ಯೋ ಆತ ಮಹಾ ಮಡಿವಂತ; ...ಧರ್ಮದ ಜತೆ ಬೆರೆತ ಕಾವ್ಯ ಅಫೀಮು ಅಂತ ಆ ಕಡೆ ...ಲೆನೇ ಹಾಕೋದಿಲ್ಲ. ಈ ಗುಂಪಲ್ಲಿ ಲೋಹಿಯಾರಿಗೆ ಮಾತ್ರ ...ಪುರಾಣ ಕಾವ್ಯ ಕಾಣುವ ಕಣ್ಣಿದೆ. ಕುವೆಂಪು ಅವರಂತೂ ...ನಮ್ಮ ಸಾಂಸ್ಕೃತಿಕ ವಿವೇಕ ಅಂತ ಅನ್ನಿಸಿಬಿಡುತ್ತಾರೆ. ಈ ...ವಿವೇಕ ಅವರಿಗೆ ಇದ್ದುದರಿಂದಲೇ ಕುವೆಂಪು ಅವರು ನಾವೆಲ್ಲರೂ ...ಹುಟ್ಟೋದಕ್ಕೆ ಮೊದಲೇ, 1944ರಲ್ಲಿ ಆತ್ಮಶ್ರೀಗಾಗಿ ...ನಿರಂಕುಶಮತಿಗಳಾಗಿ ಅಂತ ಕರೆಕೊಟ್ಟಿದ್ದು (ಕುವೆಂಪು ಮಾತುಗಳ ...ಉಲ್ಲೇಖ).

ಕುವೆಂಪು ಅವರ ಈ ಮಾತಿಗೆ ಇದು 71ನೆಯ ...ವರ್ಷ. ಇಲ್ಲಿ ಸೇರಿರುವ ನಾವು ಪ್ರಗತಿಪರರು ...ಅನ್ನಿಸಿಕೊಂಡವರಿಗೆ ಈ ಗ್ರಹಿಕೆ ಇನ್ನೂ ಸಾಧ್ಯವಾಗಿಲ್ಲ. ...ಕುವೆಂಪು ಅವರ ಮಾತುಗಳನ್ನು ನಾವು ಈ ಕಾಲಕ್ಕೆ ಕಸಿ ...ಮಾಡಿಕೊಂಡ್ರೆ ನಾವು ಕೂಡ ಪ್ರಗತಿಪರರು. ಆದರೆ ಈಗ ನಾವು ಸಾಂಸ್ಕೃತಿಕವಾಗಿ ಗರೀಬರಾಗಿದ್ದೇವೆ.

ಮೊನ್ನೆ ಒಬ್ಬರು ಅಸಹಿಷ್ಣುತೆ ಬಗ್ಗೆ ಬೆಂಗಳೂರಲ್ಲಿ ಸಭೆ ಇದೆ ಬನ್ನಿ ಅಂತ ಕರೆದ್ರು. ಈಗ ಏನಪ್ಪಾ ಬೇಕು ನಿಂಗೆ ಅಂತ ಕೇಳಿದೆ. ಸಹಿಷ್ಣುತೆ ಅಂದ್ರು. ಹಾಗಾದ್ರೆ ಸಹಿಷ್ಣುತೆ ಬಗ್ಗೆ ಚರ್ಚೆ ಮಾಡದೆ ನಾವು ಅಸಹಿಷ್ಣುತೆ ಬಗ್ಗೆ ಮಾತಾಡ್ತೀವಲ್ಲ? ಅಟ್ಯಾಕ್ ಮಾಡುವುದಕ್ಕೆ ಎದುರಾಳಿಯಿದ್ದಾಗ ಮಾತ್ರ ಹೋರಾಡುವ ಹೋರಾಟಗಾರರ ಜಾಯಮಾನವಾ ಇದು? ನಮ್ಮ ಆಶಯಗಳಿಗೆ ಕ್ರಿಯಾಶೀಲರಾಗಬೇಕಾದರೆ ನಾವು ಶ್ರಮಜೀವಿಗಳಾಗಬೇಕಿದೆ. ಜನನುಡಿ ಕೂಡ ಆಳ್ವಾಸ್ ನುಡಿಸಿರಿಯ ಪ್ರತಿಕ್ರಿಯಾತ್ಮಕ ರೂಪವಾಗಿದೆ. ಅದೀಗ ಪರಿಷ್ಕರಿಸಿ ಹೊಸಹುಟ್ಟು ಪಡೆಯಬೇಕಾಗಿದೆ. ನಾವು ಸಮುದಾಯಗಳ ಮನದೊಳಕ್ಕೆ ಇಳಿಯಬೇಕಾಗಿದೆ. ಅದಕ್ಕಾಗಿ ಸಾಂಸ್ಕೃತಿಕ ಕಣ್ಣು ಪಡೆಯಬೇಕಾಗಿದೆ. ಹೌದು, ಆ ಸಾಂಸ್ಕೃತಿಕ ಕಣ್ಣಿಗಾಗಿ ನಾವೀಗ ತಪಸ್ಸು ಮಾಡಬೇಕಾಗಿದೆ.

● ದೇವನೂರ ಮಹಾದೇವ

ಡಿಸೆಂಬರ್ 19 ಮತ್ತು 20ರಂದು ಮಂಗಳೂರಿನಲ್ಲಿ ನಡೆದ 'ಜನನುಡಿ' ಕಾರ್ಯಕ್ರಮ ಕುರಿತು ಅರುಣ್ ಜೋಳದಕೂಡ್ಲಿಗಿ ಅವರ ವರದಿ, ದೇವನೂರು ಮಹಾದೇವ ಅವರ ಉದ್ಘಾಟನಾ ಭಾಷಣ ಮತ್ತು ರಹಮತ್ ತರೀಕೆರೆಯವರ ಸಮಾರೋಪ ಭಾಷಣಗಳನ್ನು ಇಲ್ಲಿ ನೀಡಿದ್ದೇವೆ.

ಅಭಿಮತ ಮಂಗಳೂರು
ಜನನುಡಿ 2015
ದೇಶಕಾಲ ಮುಖಾಮುಖಿ

ಜನನುಡಿ ಯಶಸ್ಸು ಹುಟ್ಟಿಸಿದ ಹೊಸ ಕನಸುಗಳು

ಡಿಸೆಂಬರ್ 19.20 2015 ರಂದು ಮಂಗಳೂರಿನಲ್ಲಿ ನಡೆದ ಜನನುಡಿ ನಿರೀಕ್ಷೆಯನ್ನು ಮೀರಿ ಯಶಕಂಡಿದೆ. ಹಿಂದಿನ ಎರಡೂ ಜನನುಡಿಗಳಿಗಿಂತ ಹೆಚ್ಚು ವ್ಯಾಪಕತೆಯಲ್ಲಿ ವಿಸ್ತರಿಸಿರುವುದು ಕಾಣುತ್ತಿತ್ತು. ನಿರೀಕ್ಷೆ ಮೀರಿ ಸೇರಿದ ಜನಸಂಖ್ಯೆ ಸಹಬಾಳ್ವೆಯ ಕನಸಿಗಾಗಿ ಒಟ್ಟಾದಂತಿತ್ತು. ಬಹುಪಾಲು ಜೀವಪರ ಸಂಗಾತಿಗಳ ದಾರಿ ಮಂಗಳೂರಿನೆಡೆಗೆ ಎನ್ನುವಂತೆ ವ್ಯಾಪಕ ಪ್ರಚಾರ ಮಾಡಿದ್ದೂ ಕೂಡ ಇದರ ಯಶಸ್ಸಿಗೆ ಕಾರಣವಾಗಿದ್ದಿತು. ಇದಕ್ಕಿಂತ ಮುಖ್ಯವಾಗಿ ಮಂಗಳೂರಿನ ಅಭಿಮತ ಗೆಳೆಯರ ಆಪ್ತವಾದ ಆಹ್ವಾನ ತುಂಬಾ ಜನರನ್ನು ಕಡಲೂರಿಗೆ ಕರೆತಂದಿತ್ತು. ಸಮಾನಾಸಕ್ತರ ಜತೆ ಸೇರಿ ದಿನೇಶ್ ಅಮಿನ್ ಮಟ್ಟು ಅವರು ಈ ಬಾರಿಯ ಜನನುಡಿಯ ಎರಡೂ ದಿನದ ಮಾತುಕತೆಯ ಸ್ವರೂಪವನ್ನು ರೂಪಿಸಿದ್ದರು. ಈ ಕಾಲದ ಅಗತ್ಯಕ್ಕೆ ಪೂರಕವಾಗಿ ದೇಶಕಾಲವನ್ನು ಮುಖಾಮುಖಿ ಮಾಡುವ ಚರ್ಚೆ ಸಂವಾದಗಳು ನಡೆದವು. ಜನನುಡಿಯೆಂಬ ಸಾಂಸ್ಕೃತಿಕ ವೇದಿಕೆಯು ರಾಜಕೀಯ ಹೋರಾಟದ ದಿಕ್ಕುದೆಸೆಗಳನ್ನೂ ಚರ್ಚೆಗೆ ಒಳಗುಮಾಡಿಕೊಂಡಿತು.

ಬಹಳ ಮುಖ್ಯವಾಗಿ ಮಂಗಳೂರು ಭಾಗದ ಆರೋಗ್ಯಪೂರ್ಣ ಯುವ ಸಮುದಾಯ ಕಟ್ಟದ ಜನನುಡಿಯೆಂಬ ಕನಸು ಕರ್ನಾಟಕದ ಇತರೆ ಭಾಗಗಳ ಪ್ರಜ್ಞಾವಂತ ಯುವಜನತೆಯನ್ನು ಬಡಿದೆಚ್ಚರಿಸುವಂತೆ ಮಾಡಿದೆ. ಬಳ್ಳಾರಿ ಭಾಗದ ಕೊಟ್ಟೂರಿನ ನಾವುನಮ್ಮಲ್ಲಿ ಕಾರ್ಯಕ್ರಮಕ್ಕೆ ಬಹುಪಾಲು ಯುವಮನಸ್ಸುಗಳು ಒಂದೆಡೆ ಸೇರುತ್ತಿದ್ದ ಆಯಾಮ ಈಗ ಜನನುಡಿಗೂ ವಿಸ್ತರಿಸಿಕೊಂಡಿದೆ. ಅದು ಇನ್ನಷ್ಟು ಮತ್ತಷ್ಟು ಹಬ್ಬಬೇಕಿದೆ. ಈ ಬಗೆಯ ಯುವಮನಸ್ಸುಗಳನ್ನು ಒಟ್ಟಾಗಿಸುವ ಸಂಘಟನೆಗಳು, ಆರೋಗ್ಯಕರ ಗುಂಪುಗಳು ಆಯಾ ಪ್ರಾದೇಶಿಕ ನೆಲೆಯಲ್ಲಿ ಚಿಗುರೊಡೆದು ಒಂದಕ್ಕೊಂದು ಬೆಸೆದು ಶಕ್ತಿಪರಿವಾರವೊಂದು ರೂಪುಗೊಳ್ಳಬೇಕಿದೆ. ಇದು ಈ ಕಾಲದ ಅನಿವಾರ್ಯ ಅಗತ್ಯವಾಗಿದೆ.

ಮುಖ್ಯವಾಗಿ ಜನನುಡಿ ಆಯೋಜನೆ ಬೃಹತ್ ವಿಜೃಂಭಣೆಯ ನುಡಿಸಿರಿಯನ್ನು ಇನ್ನಿಲ್ಲದ ಒದ್ದಾಟಕ್ಕೆ ಗುರಿಯಾಗುವಂತೆ ಮಾಡಿದೆ. ನುಡಿಸಿರಿಯ ಜತೆ ಗುರುತಿಸಿಕೊಳ್ಳುವುದು 'ಜಮೀನ್ದಾರ, ಶಿಕ್ಷಣ ವ್ಯಾಪಾರಿ, ಮೂಲಭೂತವಾದಿ ಶಕ್ತಿಗಳ ಒಡನಾಡಿಯ ಜೊತೆ ಸೇರಿದಂತೆ' ಎನ್ನುವ ತಾತ್ವಿಕತೆಯನ್ನು ತುಂಬಾ ಪರಿಣಾಮಕಾರಿಯಾಗಿ ಬಿಂಬಿಸಿದೆ. ಇದೀಗ ಪ್ರಜ್ಞಾವಂತ ಯಾವ ಸಾಹಿತಿಯೂ ನುಡಿಸಿರಿ ಜತೆ ಗುರುತಿಸಿಕೊಳ್ಳಲು ಮುಜುಗರ ಉಂಟಾಗುವಂತಾಗಿದೆ. ನುಡಿಸಿರಿ ಆಯೋಜಕರು ತಮ್ಮನ್ನು ಸಮರ್ಥಿಸಿಕೊಳ್ಳಲು ವಿಲವಿಲ ಒದ್ದಾಡುತ್ತಿರುವುದು ಕಸಿವಿಸಿಗೊಂಡು ಕುಸಿಯುತ್ತಿರುವುದು ಬಹಿರಂಗವಾಗಿ ಕಾಣದಿದ್ದರೂ ಅದು ವಾಸ್ತವ. ಇದು ಆನೆಯಂತೆ ಭಾವಿಸಿದ ನುಡಿಸಿರಿಯ ಮುಂದೆ ಇರುವೆ ನಡಿಗೆಯ ಜನನುಡಿ ಶಕ್ತಿಯು ದೊಡ್ಡದಾಗಿ ಕಾಣುವುದರ ಪ್ರತೀಕ. ಇಷ್ಟನ್ನು ಹೇಳುವ ಹೊತ್ತಿಗೆ ಜನನುಡಿ ನುಡಿಸಿರಿ ವಿರುದ್ಧದ ಸೀಮಿತ ಆಯಾಮವನ್ನು ದಾಟಿಕೊಂಡು ಸ್ವತಂತ್ರವಾಗಿ ಜೀವಪರ ಸಂಗಾತಿಗಳನ್ನು ಒಟ್ಟಾಗಿಸುವ ಒಂದು ಸಾಂಸ್ಕೃತಿಕ ವೇದಿಕೆಯಾಗಿ ರೂಪುಗೊಂಡಿದೆ. ಅದೀಗ ತಾತ್ವಿಕವಾಗಿ ಒಂದೇ ಕನಸಿನ ಸಾಕಾರಕ್ಕಾಗಿ ನಿರಂತರವಾಗಿ ಹೋರಾಟ ಮಾಡುತ್ತಿರುವ ರಾಜಕೀಯ ಸಂಘಟನೆಗಳ ಸಂಗಾತಿಯಾಗಿಯೂ ರೂಪುಗೊಳ್ಳಬೇಕಿದೆ. ಈ ಪ್ರಯತ್ನದಲ್ಲಿ ಜನನುಡಿ ಸಂಗಾತಿಗಳು ಸಕ್ರಿಯಗೊಳ್ಳುತ್ತಿದ್ದಾರೆ.

ಇಡೀ ಕಾರ್ಯಕ್ರಮದ ತಿಳಿವಿನ ಎಳೆ ಅಸಂವಿಧಾನಿಕ ನಡೆಗಳನ್ನು ಪ್ರಶ್ನಿಸುವ ಮತ್ತು ಸಂವಿಧಾನಿಕ ಜೀವಪರ ಸಮಸಮಾಜದ ಆಶಯಗಳನ್ನು ನೆಲೆಗೊಳಿಸುವ ಚರ್ಚೆ ಸಂವಾದಗಳು ಏರ್ಪಟ್ಟವು. ಇದು ಇಂದಿನ ಅಗತ್ಯ ಮತ್ತು ಅನಿವಾರ್ಯ. ಕಾರಣ ಅಸಂವಿಧಾನಿಕ ನಡೆಗಳು ದೊಡ್ಡಮಟ್ಟದಲ್ಲಿ ಸಂಘಟಿತ ಪ್ರಯತ್ನಗಳಾಗುತ್ತಿವೆ. ಇವುಗಳು ತಂತ್ರಜ್ಞಾನ ಅಭಿವೃದ್ಧಿಯೆಂಬ ಹುಸಿ ನಂಬಿಕೆಗಳನ್ನು, ತಲೆತುಂಬಿಕೊಂಡ ಯುವಜನತೆಯನ್ನು ನಿಯಂತ್ರಿಸುತ್ತಿವೆ.

ಇದು ಸಾಮಾಜಿಕ ಜಾಲತಾಣಗಳಲ್ಲಿ ಈ ಸಮುದಾಯಗಳ ಪ್ರತಿಕ್ರಿಯೆಗಳನ್ನು ನೋಡಿದರೆ ಅರಿವಾಗುತ್ತದೆ. ಇದರಿಂದಾಗಿ ಯುವ ಮನಸ್ಸುಗಳನ್ನು ಆರೋಗ್ಯಕರವಾಗಿ ಚಿಂತಿಸುವಂತೆ ಮಾಡುವ ಪ್ರಕ್ರಿಯೆಗಳು ವ್ಯಾಪಕವಾಗಿ ನಡೆಯಬೇಕಿದೆ. ಅಂತಹ ಪ್ರಯತ್ನದ ಪರಿಣಾಮಕಾರಿ ನಡೆಯಂತೆ ಈ ಬಾರಿಯ ಜನನುಡಿ ಬಿಂಬಿತವಾದದ್ದು ಮುಖ್ಯ ಸಂಗತಿ. ವ್ಯಕ್ತಿನಿಷ್ಠ ಅಭಿವೃದ್ಧಿಯೇ ನೈತಿಕವಾಗಿ ಸರಿಯೆಂಬುವ ನಂಬುಗೆಯನ್ನು ಹುಸಿಗೊಳಿಸಿ ಸಮಗ್ರ ಜನಸಮುದಾಯದ ಬುಡಮಟ್ಟದ ಅಭಿವೃದ್ಧಿಯ ತಿಳಿವನ್ನು ಬಲಗೊಳಿಸಬೇಕಿದೆ. ಅಂತಹ ಚರ್ಚೆಗಳಿಗೆ ಪ್ರೊ.ಚಂದ್ರಪೂಜಾರಿ ಅವರು ಚಿಂತನಾರ್ಹ ಪ್ರವೇಶಿಕೆಯನ್ನು ಒದಗಿಸಿದರು.

ಮಂಗಳೂರು ಒಳಗೊಂಡಂತೆ ದಕ್ಷಿಣ ಕನ್ನಡ ಜಿಲ್ಲೆಯು ಹಿಂದುತ್ವದ ಪ್ರಯೋಗಾಲಯ ಎನ್ನುವ ಸಂಗತಿ ಗುಟ್ಟಾಗಿರುವುದೇನಲ್ಲ. ಕರ್ನಾಟಕದ ಸಂದರ್ಭದಲ್ಲಿ ಈ ಭಾಗದ ಅಲ್ಪಸಂಖ್ಯಾತ ಸಮುದಾಯಗಳು ಉಸಿರುಗಟ್ಟಿ ಬದುಕುತ್ತಿರುವ ವಾಸ್ತವವು ದಿನದಿನದ ಸುದ್ದಿಯಾಗಿದೆ. ಇದರ ಬಹುಮುಖೀ ನೆಲೆಗಳನ್ನು ಹಿರಿಯರಾದ ಜಿ.ರಾಜಶೇಖರ್, ಕೆ.ಫಣಿರಾಜ ಮೊದಲಾದ ಹಿರಿಯ ಸಂಗಾತಿಗಳು ಕ್ರಿಯಾಶೀಲ ಚಟುವಟಿಕೆಗಳಿಂದಾಗಿ ಬಯಲುಗೊಳಿಸುತ್ತಲೇ ಇದ್ದಾರೆ. ಹೀಗಾಗಿ ಕರ್ನಾಟಕದ ಬಹುತ್ವದ ಸಂಗಾತಿಗಳು ಮಂಗಳೂರು ಒಳಗೊಂಡಂತೆ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಭಾಗಗಳಲ್ಲಿ ಮತ್ತೆ ಮತ್ತೆ ಸೇರಿ ಚರ್ಚೆ ಸಂವಾದಗಳನ್ನು ನಿಜದ ಅರಿವನ್ನು ಹರಡಬೇಕಿದೆ. ಅಂತೆಯೇ ಈ ಭಾಗದ ಲೇಖಕ ಬರಹಗಾರರು ಜೀವಪರ ಸಂಗಾತಿಗಳು ಅಲ್ಲಿನ ಮೂಲಭೂತವಾದಿ ಶಕ್ತಿಗಳ ಜೀವವಿರೋಧಿ ಚಟುವಟಿಕೆಗಳನ್ನು ಕರ್ನಾಟಕದ ಇತರೆ ಭಾಗಗಳಲ್ಲಿ ಹೇಳಬೇಕಾಗಿದೆ. ಆ ಕುರಿತು ನಿರಂತರವಾಗಿ ಬರೆಯಬೇಕಾಗಿದೆ, ಮುಖಾಮುಖಿಯಾಗಬೇಕಿದೆ. ಈ ಎರಡರ ಒಟ್ಟುಗೂಡಿಸುವಂತೆ ಈ ಬಾರಿಯ ಜನನುಡಿಯಲ್ಲಿಯೂ ಕರಾವಳಿಯ ಪ್ರಗತಿಪರರ ಜತೆ ಕರಾವಳಿಯೇತರ ಸಂಗಾತಿಗಳು ಹೆಚ್ಚು ವೇದಿಕೆಗಳಲ್ಲಿ ಕಾಣಿಸಿಕೊಂಡರು. ಇದನ್ನು ಸಕಾರಾತ್ಮಕ ಬೆಳವಣಿಗೆಯೆಂದೇ ಭಾವಿಸಬೇಕಿದೆ. ಕಾರಣ ದಕ್ಷಿಣಕನ್ನಡ ಜಿಲ್ಲೆಯ ಕೋಮುವಾದಿ ಸಮಸ್ಯೆ ಕೇವಲ ಇಲ್ಲಿಗೆ ಮಾತ್ರ ಸೀಮಿತವಲ್ಲ. ಇದು ಕರ್ನಾಟಕದ ವಿದ್ಯಮಾನ. ಹಾಗಾಗಿ ಎಲ್ಲರೂ ಒಗ್ಗೂಡಿದ ಧ್ವನಿಯ ಅಗತ್ಯವಿದೆ.

ಮುಖ್ಯಗುರಿಯೆಡೆಗಿನ ಪಯಣಕ್ಕೆ ಚಿಕ್ಕಪುಟ್ಟ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಎಲ್ಲರೂ ಸಹಪಯಣ ಮಾಡುವ ಮಾತುಗಳನ್ನು ಮತ್ತೆ ಮತ್ತೆ ಆಡುತ್ತೇವೆ. ಇದು ರಾಜಕೀಯವಾಗಿಯೂ ಶಕ್ತಸಂಚಯದ ದಾರಿ. ಸಮಾಜವನ್ನು ಒಡೆದಾಳುವ ಶಕ್ತಿಗಳು ಇದನ್ನು ತುಂಬಾ ಅಚ್ಚುಕಟ್ಟಾಗಿಯೇ ಮಾಡುತ್ತವೆ. ಅಂತೆಯೇ ಸಮಾಜವನ್ನು ಕಟ್ಟುವ ಕನಸಿನ ಸಂಗಾತಿಗಳು ಈ ನಡೆಯನ್ನು ಮತ್ತಷ್ಟು ಬಲಗೊಳಿಸಬೇಕಿದೆ. ಜನನುಡಿಯ ಮುಕ್ತಾಯದ ಮೊದಲು 2016 ರ ಜನವರಿ 30 ರಂದು ಕೋಮು ಸೌಹಾರ್ದ ವೇದಿಕೆಯು ಬೃಹತ್ತಾಗಿ ಹಮ್ಮಿಕೊಂಡ 'ಸಹಬಾಳ್ವೆ ಸಾಗರ'ಕ್ಕೆ ಎಲ್ಲರೂ ಆಗಮಿಸುವ ಬಗ್ಗೆ ಆಹ್ವಾನ ನೀಡಲಾಯಿತು. ಇದು ಒಂದಕ್ಕೊಂದು ಬೆಸೆಯಬಹುದಾದ ಸಂಬಂಧದ ಕೊಂಡಿಯಂತೆ ಕಾಣಿಸಿತು. ಅಭಿಮತದ ಸಂಗಾತಿ ಯುವಮನಸ್ಸು ಕೆಲವು ನಿಷ್ಠುರ ಪ್ರಶ್ನೆಗಳನ್ನು ಹಿರಿಯರ ಮುಂದಿಟ್ಟು ಭಿನ್ನಾಭಿಪ್ರಾಯವನ್ನು ತಾಳಿದ್ದಾರೆ. ಇವರ ಪ್ರಶ್ನೆಗಳನ್ನು ಕೇಳಿಸಿಕೊಳ್ಳುತ್ತಲೇ ಈ ಯುವಮನಸ್ಸುಗಳನ್ನೂ ಸಹಭಾಳ್ವೆಯ ಒಳಗೆ ತರಬೇಕಿದೆ. ಅಂತೆಯೇ ಅಭಿಮತದ ಗೆಳೆಯರೂ ಸಹಮತದೊಂದಿಗೆ ಹಿರಿಯರ ಜತೆ ಒಂದಾಗಬೇಕಿದೆ. ಈ ಹಿರಿಕಿರಿಯರ ಕೂಡುವಿಕೆಯ ಶಕ್ತಿಯು ಕೋಮುವಾದಿ ಶಕ್ತಿಯ ವಿರುದ್ಧ ದೊಡ್ಡ ಪರ್ಯಾಯವನ್ನು ಹುಟ್ಟಿಸಬಲ್ಲದು. ಅಂತಹ ಕನಸೊಂದನ್ನು ಚಿಗುರೊಡೆಸಿದ್ದು ಜನನುಡಿ-2015.

ಈ ಮಧ್ಯೆ ಪ್ರಖರವಾಗಿ ಬರೆಯಬಲ್ಲ ಯುವಕವಿಗಳನ್ನು ಒಟ್ಟಾಗಿಸಿದ ಕವಿಗೋಷ್ಠಿಯೊಂದು ನಡೆಯಿತು. ಬಹುಪಾಲು ಕವಿಗಳು ಎರಡೂ ದಿನವಿದ್ದು ವೈಚಾರಿಕ ಚರ್ಚೆ ಸಂವಾದಗಳನ್ನು ಆಲಿಸಿದರು. ವರ್ತಮಾನದ ಮುಸ್ಲಿಂ ತಲ್ಲಣಗಳು, ಅಭಿವೃದ್ಧಿಯ ರಾಜಕಾರಣದ ಹುನ್ನಾರಗಳು, ಮೂಢನಂಬಿಕೆ ಮತ್ತು ಮತೀಯ ಅಸಹಿಷ್ಣುತೆ ಕುರಿತ ಚರ್ಚೆ ಸಂವಾದಗಳು ಅರ್ಥಪೂರ್ಣವಾಗಿದ್ದವು. ಮುನೀರ್ ಕಾಟಿಪಳ್ಳ, ನವೀನ್ ಸೂರಿಂಜೆ, ಕಾವ್ಯ ಅವರನ್ನೊಳಗೊಂಡ ಅಭಿಮತದ ಜನನುಡಿಯ ಗೆಳೆಯಗೆಳತಿಯರು ಇಡೀ ಕಾರ್ಯಕ್ರಮವನ್ನು ತುಂಬಾ ಅಚ್ಚುಕಟ್ಟಾಗಿ ರೂಪಿಸಿದ್ದರು. ಹೊಸ ತಲೆಮಾರಿನ ಶಕ್ತಿ ಸಾಮರ್ಥ್ಯದ ಬಗ್ಗೆ ಹೊಸ ಕನಸುಗಳನ್ನು ಹುಟ್ಟಿಸುವಂತೆ ಈ ತಂಡ ಒಟ್ಟಾಗಿ ದುಡಿಯಿತು. ಈ ತಂಡ ಕರ್ನಾಟಕ ಇತರೆಲ್ಲಾ ಯುವ ಸಂಗಾತಿಗಳ ಜತೆಯೂ ತಮ್ಮ ಕನಸುಗಳನ್ನು ಹಂಚಿಕೊಳ್ಳಬೇಕಿದೆ. ಅಂತೆಯೇ 2016 ಜನವರಿ 30 ರ 'ಸಹಬಾಳ್ವೆ ಸಾಗರ'ದಲ್ಲಿ ಈ ಯುವಪಡೆ ಉತ್ಸಾಹದಿಂದ ಓಡಾಡಿ ದುಡಿಯುವ ಮುನ್ನುಗ್ಗಬೇಕಿದೆ

● ಅರುಣ್ ಜೋಳದಕೂಡ್ಲಿಗಿ

...ಸಾಂಸ್ಕೃತಿಕ ಯಜಮಾನಿಕೆಯನ್ನು ಹೇರುತ್ತ ಬಂದಿದೆ. ಈ ...ಉಪಕ್ರಮವು ಕರಾವಳಿಯ ಮಟ್ಟಿಗೆ ತನ್ನ ತರ್ಕದ ಕೊನೆ ...ಮುಟ್ಟಿಬಿಟ್ಟಿದೆ. ಕೆಳಸ್ತರದ ಜನರ ಮಾಂಸಾಹಾರಿ 'ದೈವ'ಗಳ ...ಮೇಲೆ ಸಸ್ಯಾಹಾರಿ 'ದೇವಳ' ಸಂಸ್ಕೃತಿ ಹೇರಿಕೆಯಾಗಿರುವ ...ವಿಷಯದಲ್ಲಿ ಕರಾವಳಿಯ ಗೆಳೆಯರು ಸಾಕಷ್ಟು ಬರೆದಿದ್ದಾರೆ. ...ಈ ಮೇಲ್ಜಾತಿ ಹಾಗೂ ಊಳಿಗಮಾನ್ಯ ವ್ಯವಸ್ಥೆಯ ಪರವಾದ ...ತ್ರೈಕಾಲ್ಯಪ್ರಜ್ಞೆ ಮತ್ತು ಆಲೋಚನಕ್ರಮ ಹೇರುವ ವಿಷಯದಲ್ಲಿ ...ಸಂಘಪರಿವಾರವು ದೊಡ್ಡ ಮತಾಂತರಿ ಸಂಸ್ಥೆಯೆನ್ನಬಹುದು. ...ಇದರ ಈ ಮಿಶನರಿ ಕೆಲಸವನ್ನು ಹಿಂದಿನ ಕರ್ನಾಟಕ ...ಸರ್ಕಾರವಿದ್ದ ಕಾಲದಲ್ಲಿ ಸಿದ್ಧಪಡಿಸಿರುವ ...ಕನ್ನಡ ಭಾಷಾ ಪಠ್ಯಪುಸ್ತಕಗಳಲ್ಲಿ

■ ರಹಮತ್ ತರೀಕೆರೆ

...ಸ್ಪಷ್ಟವಾಗಿ ಕಾಣುತ್ತದೆ. ಅಲ್ಲಿ ಮೂರು ಅಂಶಗಳಿವೆ. 1. ...ಮುಸ್ಲಿಮರನ್ನು ಅನಾಗರಿಕರನ್ನಾಗಿ ದುಷ್ಟರನ್ನಾಗಿ ಚಿತ್ರಿಸುವುದು; ...2. ಬಹುಸಂಖ್ಯಾತ ದುಡಿಮೆಗಾರರ, ದಲಿತರ ಮತ್ತು ...ಶೂದ್ರರ ಸಂಸ್ಕೃತಿಯನ್ನು ಬದಿಗೆ ಸರಿಸಿರುವುದು. 3. ...ಬ್ರಾಹ್ಮಣವಾದಿ ಸಂಸ್ಕೃತಿಯನ್ನು ಸಮಗ್ರ ಭಾರತದ ...ಸಂಸ್ಕೃತಿಯೆಂದು ನಂಬಿಸುವುದು.

ಪರಿಸರಕ್ಕೆ ಸಂಬಂಧಿಸಿದ ಎರಡು ಪಾಠಗಳನ್ನು ...ಗಮನಿಸಬೇಕು. ಒಂದು ಪಾಠದಲ್ಲಿ ಲುಂಗಿ-ಟೋಪಿ ಧರಿಸಿದ ...ಮುಸ್ಲಿಮನು, ಹಸಿರಾದ ಮರವನ್ನು ಅದರಲ್ಲಿದ್ದ ಪಕ್ಷಿಗಳು ...ಆರ್ತನಾದ ಮಾಡಿದರೂ, ಅಲ್ಲಿದ್ದ ಶಾಲೆಯ ಮಕ್ಕಳು ...ಬೇಡಿಕೊಂಡರೂ ಕಡಿಯುವ ಚಿತ್ರವಿದೆ. ಇನ್ನೊಂದು ...ಪಾಠದಲ್ಲಿ ರಾಮಣ್ಣನೆಂಬ ಕಟ್ಟಿಗೆಕಾರನು ಕೇವಲ ಒಣಗಿದ ...ಮರವನ್ನು ಕಡಿಯುತ್ತ ವನದೇವತೆಯ ಮೆಚ್ಚುಗೆಗೆ ...ಪಾತ್ರನಾಗುವ ಚಿತ್ರವಿದೆ. 'ಯಕ್ಷಪ್ರಶ್ನೆ' ಪಾಠದಲ್ಲಿ ...ಧರ್ಮರಾಯನು ಒಬ್ಬ ಹಾರುವನಿಗೆ ಕಳೆದುಹೋದ ಆತನ ...ಅರಣಿಯನ್ನು ಹುಡುಕಿಕೊಡುತ್ತೇನೆಂದು ಮಾಡಿದ ವಾಗ್ದಾನ ...ಪೂರೈಸುವುದು. ತನ್ನ ತಮ್ಮಂದಿರನ್ನು ಕಳೆದುಕೊಳ್ಳುವುದು ...ಸ್ವೀಕಾರಾರ್ಹ ... ಮಹತ್ವದ್ದು ಎಂಬಂತೆ ಮಾತಾಡುತ್ತಾನೆ. ಇವು ...ಮಕ್ಕಳ ಮೇಲೆ ಯಾವ ಪರಿಣಾಮ ಬೀರಬಲ್ಲವು? ಇವು ...ಪುರೋಹಿತಶಾಹಿ ಹಿಂದೂ ಧರ್ಮದ ಹೆಸರಲ್ಲಿ ಮಾಡುವ ...ಸಾಂಸ್ಕೃತಿಕ ರಾಜಕಾರಣದ ಭಾಗವಾಗಿವೆ.

ಇದು, ಹಿಂದೂ-ಮುಸ್ಲಿಮರು ಸೇರಿ ರಥ ಎಳೆಯುವ ವಾಕ್ಯವನ್ನು ತೆಗೆಯಬೇಕೆಂದು ಹೇಳುವವರಿಗೂ ಅನ್ವಯವಾಗುತ್ತದೆ. ಇವತ್ತು ಶುದ್ಧಧರ್ಮದ ಹುಡುಕಾಟ ಮಾಡುತ್ತೇನೆಂದು ಹೊರಟಿರುವ ಎಲ್ಲರೂ ಇಸ್ಲಾಮಿನ ಅರಬೀಕರಣ ಮಾಡುವವರಾಗಿದ್ದಾರೆ. ಈ ಪ್ರಕ್ರಿಯೆ ಯಾವ ಪ್ರಮಾಣದಲ್ಲಿದೆ ಎಂದರೆ, ಒಂದು ಕಾಲಕ್ಕೆ ಮುಸ್ಲಿಮರು ವಿದಾಯದ ಮಾತನ್ನು ಹೇಳುವಾಗ 'ಖುದಾಹಾಫಿಜ್' ಎನ್ನುತ್ತಿದ್ದರು. ದೇವರನ್ನು ಸೂಚಿಸುವ 'ಖುದಾ' ಫಾರಸಿ ಶಬ್ದವಾಗಿದ್ದು ಅದನ್ನು ತೆಗೆದು ಅರಬಿ ಭಾಷೆ 'ಅಲ್ಲಾ' ಹಾಕಬೇಕೆಂದು 'ಅಲ್ಲಾಹಾಫಿಜ್' ಎಂಬ ನುಡಿಗಟ್ಟನ್ನು ರೂಢಿಸಲಾಗುತ್ತಿದೆ. ಸೂಫಿಸಂ ಮತ್ತು ಮೊಹರಂ ಬಗ್ಗೆ ತಿರಸ್ಕಾರ ಬೆಳೆಸಲಾಗುತ್ತಿದೆ.

ಕರಾವಳಿಯ ಪತ್ರಿಕೆಗಳಲ್ಲಿ ಪ್ರಕಟವಾಗುವ ಮುಸ್ಲಿಂ ಧಾರ್ಮಿಕ ಇಲ್ಲವೇ ಸಾಮಾಜಿಕ ಸಭೆಗಳ ಫೋಟೊಗಳನ್ನು ನಾನು ಗಮನಿಸುತ್ತೇನೆ. ಬಹುತೇಕ ಚಿತ್ರಗಳಲ್ಲಿ ಮಹಿಳೆಯರೇ ಇರುವುದಿಲ್ಲ, ಅವನ್ನು ನೋಡುತ್ತ ಹೋದರೆ ಮುಸ್ಲಿಮರಲ್ಲಿ ಮಹಿಳೆಯರೇ ಇಲ್ಲವೇನೋ ಎಂದು ಗಾಬರಿಯಾಗುತ್ತದೆ. ಎಷ್ಟೊ ಸಮಯ, ನಾವು ಗಂಡಸರು, ನಮ್ಮ ರಾಜಕೀಯ ಆರ್ಥಿಕ ಧಾರ್ಮಿಕ ಸಮಸ್ಯೆಗಳ ಬಗ್ಗೆ ಮಾತ್ರವಲ್ಲ, ಮಹಿಳೆಯರ ಸಮಸ್ಯೆಗಳನ್ನು ಮಹಿಳೆಯರನ್ನು ಬಿಟ್ಟೇ ಮಾಡಿಬಿಡುತ್ತೇವೆ. ಅರ್ಧದಷ್ಟು ಸಂಖ್ಯೆಯ ಮಹಿಳೆಯರನ್ನು ಸಾರ್ವಜನಿಕ ಬದುಕಿನಿಂದ ಹೊರಗಿಟ್ಟು ಯಾವ ಬಗೆಯ ಸಮಾಜ ಕಟ್ಟಲು ಹೊರಟಿದ್ದೇವೆ ನಾವು? ಶಿಶುಹತ್ಯೆಯಿದ್ದ ಅರಬ್ ಸಮಾಜದಲ್ಲಿ ಹುಟ್ಟಿದ ಪೈಗಂಬರ್ ಮಹಿಳೆಯರ ವಿಷಯದಲ್ಲಿ ಉದಾರತೆ ಪ್ರಕಟಿಸಿದರು. ಮಹಿಳೆಯರಿಗೆ ಮತ್ತು ಪುರುಷರಿಗೆ ಶಿಕ್ಷಣ ಪಡೆಯುವ ಹಕ್ಕು ಸಮಾನವಾಗಿದೆ ಎಂಬ ಕುರಾನಿನಲ್ಲಿ ವಾಕ್ಯವಿದೆ. ಈ ಹಿನ್ನೆಲೆಯಲ್ಲಿ

⏭ 12

ಕೊಟ್ಟೆ ಕುದುರೆಯನ್ನೇರಲರಿಯದ ಬಾಲಗಂಗಾಧರ



"ಆನೇಕರ ದೃಷ್ಟಿಯಲ್ಲಿ ಕಲಬುರ್ಗಿ ಒಬ್ಬ ಅಸಹಿಷ್ಣು ಮನುಷ್ಯ... ಸಂಪೂರ್ಣವಾಗಿ ಇನ್ನೂ ಅರ್ಥವಾಗದಿರುವುದೇನೆಂದರೆ ಅವನ ಅಸಹಿಷ್ಣು ಧೋರಣೆಯೇ ಅವನ ಕೊಲೆಗೆ ಕಾರಣವಾಯಿತೋ ಅಥವಾ ಅವನು ನೈತಿಕ ಸಡಿಲತೆಯುಳ್ಳ ವ್ಯಕ್ತಿಯೆಂದು ಕರ್ನಾಟಕದಲ್ಲಿ ಪ್ರಚಾರವಿರುವ ಕಥೆಗಳೇ ಅವನ ಕೊಲೆಗೆ ಕಾರಣವಾಯಿತೋ ಎಂದು."

"ಯೂ.ಎಸ್. ಮತ್ತು ಯೂ.ಕೆ.ಗಳಲ್ಲಿ ಹಸು ಮತ್ತು ಕುದುರೆಗಳನ್ನು ಕದಿಯುವವರನ್ನು ಕೊಲ್ಲಲಾಗುತ್ತಿತ್ತು. ತಪ್ಪು ಮಾಡಿದವರನ್ನು ಕೊಲ್ಲುವುದು ಆಧುನಿಕ ಕಾನೂನು ವ್ಯವಸ್ಥೆಗೆ ಹಾನಿಯನ್ನುಂಟುಮಾಡುವುದು ಸತ್ಯ ಆದರೆ ಅದನ್ನು ಹೆಚ್ಚುತ್ತಿರುವ ಅಸಹಿಷ್ಣುತೆ ಎನ್ನುವವರಿಗೆ ಮಾನವ ಇತಿಹಾಸದ ಬಗ್ಗೆ ಇರುವ ಆಳವಾದ ಅಜ್ಞಾನವನ್ನು ಪ್ರದರ್ಶಿಸುತ್ತದೆ."

"ಈ ಅಂಬೇಡ್ಕರವಾದಿ ಉಗ್ರವಾದಿಗಳ ಪ್ರಚಾರ ಕಳೆದ ನಾಲ್ಕು ದಶಕಗಳಿಂದ ನಡೆಯುತ್ತಿದೆ".

ಈ ಮೇಲಿನ ಮಾತುಗಳು ಇತ್ತೀಚೆಗೆ ವಚನಗಳ ಬಗ್ಗೆ ಏನೋ ಹೊಸದಾಗಿ ಹೇಳುತ್ತಿದ್ದೇವೆ ಎಂದು ಬೊಬ್ಬೆ ಹಾಕುತ್ತಿದ್ದ, ಸ್ವಯಂ-ಘೋಷಿತ "ಸತ್ಯ-ಶೋಧಕ ಮತ್ತು ಸಂಶೋಧಕ" ಪಟಾಲಂನ ಅಧಿನಾಯಕ ಎಸ್.ಎನ್.ಬಾಲಗಂಗಾಧರ ಎಂಬ ಆಸಾಮಿಯ ಕರಗಳಿಂದ ಬರೆಯಲ್ಪಟ್ಟಿರುವಂತದ್ದು. ಇದನ್ನು 'ಡೈಲಿ ಓ' ಎಂಬ ಅಂತರ್-ಜಾಲದಲ್ಲಿ ನೋಡಬಹುದು (27-11-2015ರಂದು ಪೋಸ್ಟ್ ಮಾಡಲಾಗಿದೆ - "Which intolerance is growing in India?") ಭಾರತದಲ್ಲಿ ಈಗ "ಅಸಹಿಷ್ಣುತೆ"ಯ ಬಗ್ಗೆ ವಾದ-ವಿವಾದಗಳು ನಡೆಯುತ್ತಿರುವ ಸಂದರ್ಭದಲ್ಲಿ ದೂರ ದೇಶದ ಬೆಲ್ಜಿಯಂನಲ್ಲಿ ಕುಳಿತುಕೊಂಡು "ಅಸಹಿಷ್ಣುತೆ"ಯ ಬಗ್ಗೆ ಮಾತನಾಡುತ್ತಿರುವ ಈತ "ಅಸಹಿಷ್ಣುತೆಯ ಬಗ್ಗೆ ಮಾತನಾಡುತ್ತಿರುವ ಭಾರತೀಯ ವಿದ್ವಾಂಸರೆಲ್ಲರು ಮೂರ್ಖರು. ಅವರಿಗೆ 'ಅಸಹಿಷ್ಣುತೆ'ಯ ಅರ್ಥವೇ ಗೊತ್ತಿಲ್ಲ, ಅವರಿಗೆ ನಾನು ಪಾಠ ಹೇಳುತ್ತೇನೆ" ಎನ್ನುವ ಧಾಟಿಯಲ್ಲಿ ಅಲ್ಲಿಂದಲೇ ಶಂಖ ಊದುತ್ತಿರುವ ಬಾಲಗಂಗಾಧರನ ಊಹಾತ್ಮಕ ಮನಸ್ಸಿನಿಂದ ಹೊರಡುತ್ತಿರುವ "ಅಂತಿಮ ಸತ್ಯಗಳು" ಎಂಬಂತೆ ಈ ಮೇಲಿನ ಮಾತುಗಳು ಗೋಚರಿಸುತ್ತವೆ.

ಅಂಬೇಡ್ಕರ್ ಮತ್ತು ಅಂಬೇಡ್ಕರವಾದಿಗಳು

ಹೈದರಾಬಾದ್‌ನ ಪ್ರತಿಷ್ಠಿತ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ (English and Foreign Languages University) ಅಂಬೇಡ್ಕರರನ್ನು "ಮೂರ್ಖ" (ಈಡಿಯಟ್) ಎಂದು ಕರೆದಿದ್ದನ್ನು ಈ ಲೇಖನದಲ್ಲಿ ವಾಪಾಸು ತೆಗೆದುಕೊಂಡಿದ್ದರೂ, ಅವರನ್ನು ಚಿತ್ರನಟಿ ಆಲಿಯ ಭಟ್‌ನ "ದಡ್ಡ"ತನಕ್ಕೆ ಹೋಲಿಸುತ್ತಾನೆ. ಈ ರೀತಿಯ ಅಂಬೇಡ್ಕರ್-ವಿರೋಧಿ ನಿಲುವು ಮುಂದುವರೆಸುತ್ತಾ ಅವರ ಸಿದ್ಧಾಂತದಲ್ಲಿ ನಂಬಿಕೆ ಇಟ್ಟಿರುವ ಅಂಬೇಡ್ಕರವಾದಿಗಳನ್ನು ಉಗ್ರವಾದಿಗಳು ಎಂದು ದೂಷಿಸುವವರೆಗು ಈತನ ಬುದ್ಧಿಶಕ್ತಿ ಮುಂದುವರೆಯುತ್ತದೆ. ಇತ್ತೀಚೆಗೆ ಹುಚ್ಚ ವೆಂಕಟ್ ಎಂಬ ವ್ಯಕ್ತಿ ಅಂಬೇಡ್ಕರರನ್ನು ಹೀಯಾಳಿಸಿದಾಗ ಅವನನ್ನು ಅಂಬೇಡ್ಕರವಾದಿಗಳು ವಿರೋಧಿಸಿದ್ದನ್ನು "ಅಸಹಿಷ್ಣುತೆ"ಯ ಸಂಕೇತವೆಂದು ಘೋಷಿಸುವ ಈ ವ್ಯಕ್ತಿ ಅಂಬೇಡ್ಕರರನ್ನು ಹೊಲಸು ಮಾತುಗಳಿಂದ ಯಾಕೆ ಬಯ್ಯಬಾರದು ಎಂದು ಪ್ರಶ್ನಿಸುತ್ತಾನೆ. ದೇವರನ್ನೇ ದೂಷಿಸುವ ಭಾರತದಲ್ಲಿ ಅಂಬೇಡ್ಕರರನ್ನು ದೂಷಿಸಬಾರದೆಂದರೆ ಅವರೇನು ಭಾರತೀಯ ದೇವರುಗಳಿಗಿಂತ ದೊಡ್ಡವರೆ ಎಂದು ತನ್ನ ಮಾತಿನ ವೈಖರಿಯಿಂದ ಪ್ರಚೋದಿಸುವ ಭಂಡತನವನ್ನು ತೋರಿಸುತ್ತಾನೆ. ಅಂಬೇಡ್ಕರವಾದಿಗಳಿಗೆ ಉಣಿಸಿ, ಕೊಬ್ಬಿಸಿ ಮತ್ತು ಅವರನ್ನು ಅಸಹಿಷ್ಣುತಾ ವ್ಯಕ್ತಿಗಳಂತೆ ತಯಾರು ಮಾಡುವುದಕ್ಕೆ ಶುರು ಮಾಡಿದ್ದು ಇಂದಿರಾ ಗಾಂಧಿಯ ಕಾಲದಿಂದ ಎಂದು ತನ್ನ ಇತಿಹಾಸ ಪ್ರಜ್ಞೆಯನ್ನು ಅತ್ಯಂತ ಬಾಲಿಶವಾಗಿ ಮತ್ತು ದ್ವೇಷದಿಂದ ಪ್ರದರ್ಶಿಸುತ್ತಾನೆ. ಇದಕ್ಕೆ ಆಧಾರವಾಗಿ ಅವನು ಯಾವುದಾದರು ಸಂಶೋಧನೆಯನ್ನು ಮಾಡಿದ್ದಾನೆಯೇ ಎಂಬ ಗುಮಾನಿ ನಮ್ಮ ಮನಸ್ಸಿನಲ್ಲಿ ಬರುತ್ತದೆ. ಭಾವೋದ್ವೇಗದಿಂದ ವರ್ತಿಸುವ ಈತ ಯಾವ ರೀತಿಯ ಸಂಶೋಧನೆ ಮತ್ತು ಸಂಶೋಧಕರನ್ನು ಸೃಷ್ಟಿಸುತ್ತಿದ್ದಾನೆಂದು ಯಾವುದೇ ದಾರಿಹೋಕ ಕೂಡ ಅಂದಾಜು ಮಾಡಬಹುದು. ಈತನ ಸಂಗಡಿಗ- ಸಂಶೋಧಕರು ಕೂಡ ಇವನ ಹಾಗೆಯೇ ಇರಬಹುದೇ? ಅವರೆಲ್ಲರ ಒಟ್ಟು-ವಾದ ವೈಖರಿಯನ್ನು ಇದುವರೆಗು ಗಮನಿಸಿದವರಿಗೆ ನಮ್ಮ ಅನುಮಾನ ನಿಜವೆನಿಸಬಹುದು. ಮೇಲೆ ಉಲ್ಲೇಖಿಸಲ್ಪಟ್ಟ ವಿಶ್ವವಿದ್ಯಾಲಯದಲ್ಲಿ ಈತ ಅಂಬೇಡ್ಕರ್, ಮುಸ್ಲಿಂ ಮತ್ತು ಕ್ರಿಶ್ಚಿಯನ್ನರ ಬಗ್ಗೆ ವ್ಯತಿರಿಕ್ತವಾಗಿ ಮತ್ತು ಪ್ರಚೋದನಾಕಾರಿಯಾಗಿ ಮಾತನಾಡಿದನೆಂದು ಅವನ ವಿರುದ್ಧ ವಿಶ್ವವಿದ್ಯಾಲಯದ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ದೂರನ್ನು ನೀಡಿರುವುದಕ್ಕೆ ಪ್ರತೀಕಾರವಾಗಿ ಈತ ಅಂಬೇಡ್ಕರ್ ಮತ್ತು ಅಂಬೇಡ್ಕರವಾದಿಗಳ ವಿರುದ್ಧ ಈ ಲೇಖನವನ್ನು ಬರೆದಿದ್ದಾನೆಯೆ? ಈತನ ವಾದ ವೈಖರಿ ಮತ್ತು ವಿಚಾರಗಳನ್ನು ಗಮನಿಸಿದವರಿಗೆ ಹೌದು ಎನಿಸಬಹುದು.

ಕಲಬುರ್ಗಿಯವರ ಹತ್ಯೆ ಮತ್ತು ಅಸಹಿಷ್ಣುತೆ

ಕಲಬುರ್ಗಿಯ ಹತ್ಯೆಯ ವಿರೋಧಿಗಳನ್ನು "ನಿಜವಾದ ಅಸಹಿಷ್ಣುವಾದಿ"ಗಳು ಎಂದು ಅರ್ಥ ಬರುವ ಹಾಗೆ ತನ್ನ ಮಾತುಗಳ ವರಸೆಯನ್ನು ಈತ ಪ್ರದರ್ಶಿಸುತ್ತಾನೆ. ಇಂತಹ "ಒಂದೆರಡು" ಕೊಲೆಗಳನ್ನು "ಅಸಹಿಷ್ಣುತೆ"ಯ ಪರಮಾವಧಿ ಎಂದು ತಲೆಕೆಡಿಸಿಕೊಳ್ಳುವ ವಿದ್ವಾಂಸರು ಭಾರತದಲ್ಲಿ ಹೆಚ್ಚುತ್ತಿರುವ ಇತರ ಅಪರಾಧಗಳ ಬಗ್ಗೆ



ಯಾಕೆ ದನಿಯೆತ್ತುತ್ತಿಲ್ಲ ಎಂದು ಬಾಲಿಶತನ ಮತ್ತು ಅಜ್ಞಾನದಿಂದ ಈತ ಬರೆಯುತ್ತಾನೆ. ಇತ್ತೀಚೆಗೆ ಭಾರತದಲ್ಲಿ ಸ್ತ್ರೀಯರ ಮೇಲೆ ಆಗುತ್ತಿರುವ ಅತ್ಯಾಚಾರಗಳು; ದಲಿತರ ಮೇಲೆ ಆಗುತ್ತಿರುವ ದಾಳಿಗಳು ಮತ್ತು ಕ್ರಿಶ್ಚಿಯನ್/ಮುಸ್ಲಿಂರ ಮೇಲೆ ಆಗುತ್ತಿರುವ ಆಕ್ರಮಣಗಳನ್ನು ಸಹಸ್ರಾರು ಭಾರತೀಯರು ವಿರೋಧಿಸುತ್ತಿರುವುದು ಈ "ಅಧಿನಾಯಕ"ನಿಗೆ ಕಾಣಿಸದೇ ಇರುವುದು ಕುರುಡು ಜಾಣತನವೇ ಸರಿ. ಪ್ರತಿಭಟನೆಗಳು/ವಿರೋಧಗಳು ನಡೆಯುತ್ತಿಲ್ಲವೆಂದು ಸುಳ್ಳು ಹೇಳುವ ಜಾತಿಗೆ ಸೇರಿದವನು ಈ ಬೆಲ್ಜಿಯಂ ವಿದ್ವಾಂಸ. ಡಾ.ಕಲಬುರ್ಗಿಯವರು ಈತ ವಚನಗಳ ಬಗ್ಗೆ ತನ್ನ ಶಿಷ್ಯಂದಿರು ಮತ್ತು ಸಂಗಡಿಗರ ಜೊತೆಗೂಡಿ ಬಾಲಿಶವಾದ ವಾದಗಳನ್ನು ಮಂಡಿಸುತ್ತಿದ್ದಾನೆಂದು ಅವರ ವಚನ-ಸಂಶೋಧನೆಯ ವಿರುದ್ಧ ಮಾತನಾಡಿದ್ದೇ ಈತನಿಗೆ ತಪ್ಪಾಗಿ ಕಾಣಿಸುತ್ತಿದೆ. ಕಲಬುರ್ಗಿಯವರ ಸಂಶೋಧನೆಯ ಬಗ್ಗೆ ಮಾತನಾಡುವುದರ ಬದಲು, ಅವರ ಚಾರಿತ್ರ್ಯವಧೆ ಮಾಡುವ ಪ್ರಯತ್ನವನ್ನು ಈ ಬೆಲ್ಜಿಯಂ ವಿದ್ವಾಂಸ ತನ್ನ ಲೇಖನದಲ್ಲಿ ಮಾಡಿದ್ದಾನೆಂದು ಅನಿಸುತ್ತದೆ. ಉದಾಹರಣೆಗೆ, ಕಲಬುರ್ಗಿಯವರ ಚಟುವಟಿಕೆಗಳು ಛೋಟಾ ರಾಜನ್‌ನನ್ನು ಮೀರಿಸುವಂತದ್ದು ಎಂದು ತನ್ನ ಸಡಿಲ ನಾಲಗೆಯನ್ನು ಹರಿಬಿಡುತ್ತಾನೆ. ಕಲಬುರ್ಗಿಯವರು ಈತನ/ಸಂಗಡಿಗರ ಸಂಶೋಧನೆಯ ವಿರುದ್ಧ ಮಾತನಾಡಿದುದೆ ಅಸಹಿಷ್ಣುತೆಯಂತೆ ಕಾಣಿಸುತ್ತದೆ. "ಕಲಬುರ್ಗಿಯಂತಹ ಅಸಹಿಷ್ಣುವಾದಿಗಳನ್ನು ಕೊಲ್ಲುವುದು ಅಸಹಿಷ್ಣುತೆ ವೃದ್ಧಿಯ ಸೂಚಕವಾದರೆ, ನಾವು ಏನನ್ನು ನಿಖರವಾಗಿ ಕೇಳುತ್ತಿದ್ದೇವೆ? ಸಹಿಷ್ಣುವಾದಿಗಳ ಕೊಲೆಗಳನ್ನೇ?" ಎಂದು ಪ್ರಶ್ನೆ ಕೇಳುವ ಈ ಬೆಲ್ಜಿಯಂ ವಿದ್ವಾಂಸ ಕೊಲೆಪಾತವನ್ನು ಸಮರ್ಥಿಸಿಕೊಳ್ಳುತ್ತಿದ್ದಾನೆಯೆ ಎಂಬ ದಟ್ಟ ಗುಮಾನಿ ನಮ್ಮ ಮನಸ್ಸಲ್ಲಿ ಬರದೇ ಬಿಡದು.

ದಾದ್ರಿ ಹತ್ಯೆ

ದಾದ್ರಿ ಘಟನೆಯನ್ನು ಖಂಡಿಸುವವರ ಬಗ್ಗೆ ಕೋಪ ಕಾರುವ ಈ ವ್ಯಕ್ತಿ ಕಳ್ಳತನಕ್ಕೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿರುವ ಕೊಲ್ಲುವ ಶಿಕ್ಷೆಯ ಬಗ್ಗೆ ಇತಿಹಾಸ ಗೊತ್ತಿರಬೇಕೆಂದು ಉಪದೇಶಿಸುತ್ತಾನೆ. ಹಸು ಅಥವಾ ಕುದುರೆಗಳನ್ನು ಕಳ್ಳತನ ಮಾಡುವವರನ್ನು (ದಾದ್ರಿಯಲ್ಲಿ ಕೊಲೆಯಾದ ವ್ಯಕ್ತಿ ಹಸುವನ್ನು ಕದ್ದಿದುದನ್ನು ಯಾರು ಪ್ರಕಟಿಸಲಿಲ್ಲ ಎಂದು ಈತ ರೋದಿಸುತ್ತಾನೆ) ಹಿಂದೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕೊಲ್ಲುವ ಸಂಪ್ರದಾಯವಿತ್ತು ಎಂದು "ಸತ್ಯ" ಬಿಚ್ಚಿಡುವ ಈ ವ್ಯಕ್ತಿ, ಭಾರತದಲ್ಲಿ ಈ ತರಹದ ಕೊಲೆಗಳನ್ನು ವೃದ್ಧಿಯಾಗುತ್ತಿರುವ ಅಸಹಿಷ್ಣುತೆ ಎಂದು ತಿಳಿಯುವುದು ಇತಿಹಾಸ ಬಗ್ಗೆ ಆಳವಾದ ಅಜ್ಞಾನವನ್ನು ಪ್ರದರ್ಶಿಸಿದ ಹಾಗೆ ಎಂದು ಈತ ನಿರ್ಣಯಿಸುತ್ತಾನೆ. ಅಂದರೆ ನಮ್ಮ ಕಣ್ಣ ಮುಂದೆ "ಕಳ್ಳತನ"ಕ್ಕೆ ಕೊಲೆಗಳಾಗುತ್ತಿದ್ದರೆ, ಅದನ್ನು ಗಮನಿಸದೆ ಅಥವಾ ಕಾನೂನಾತ್ಮಕವಾಗಿ ಅಥವಾ ಪ್ರಜಾತಾಂತ್ರಿಕವಾಗಿ ಪ್ರತಿಭಟಿಸದೆ, ಮೊದಲು ಇತಿಹಾಸವನ್ನು ತಿಳಿದುಕೊಳ್ಳಬೇಕು ಎಂದು ಈತ ಬುದ್ಧಿವಾದ ಹೇಳುತ್ತಿದ್ದಾನೆಯೆ? ಈತನ ಬುದ್ಧಿವಾದದ ಅವಶ್ಯಕತೆ ನಮಗೆ ಬೇಕೆ? ಭಾರತೀಯ ಸಂವಿಧಾನ ಮತ್ತು ಕಾನೂನನ್ನು ಮೀರುವ ಚಿಂತನೆಯನ್ನು ಈತ ನಮ್ಮ ಮುಂದಿಡುತ್ತಿದ್ದಾನೆಯೆ?

ಇತ್ತೀಚೆಗೆ ಈತ ಮತ್ತು ಇತನ ಸಹಚರರು, ಶಿಷ್ಯರು ಮತ್ತು ಹೊಗಳು ಭಟ್ಟರು ವಚನಗಳ ಬಗ್ಗೆ ಏನೋ ಸಂಶೋಧನೆ ಮಾಡಲು ಹೋಗಿ ಹಾಸ್ಯಾಸ್ಪದವಾಗಿರುವ ವಿಷಯ ಪ್ರಾಯಶಃ ಅನೇಕರಿಗೆ ಗೊತ್ತಿರಬಹುದು. ಬ್ರಿಟಿಷರ ಕಾಲದಲ್ಲಿ ವಚನಗಳ ಬಗ್ಗೆ ಆಗಿರುವ ಅಧ್ಯಯನ, ಪ್ರಕಟನೆ, ಲೇಖನಗಳು ಮತ್ತು ವಿಚಾರಗಳನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡದೇ ಪೂರ್ವಾಗ್ರಹ ಪೀಡಿತದಿಂದ ತಮ್ಮದೇ "ಅಂತಿಮ ಸತ್ಯ"ವೆಂದು ಸ್ಥಾಪಿಸಲು ಹರ ಸಾಹಸ ಪಡುತ್ತಿರುವ ಈ ಗುಂಪಿನ ಜೊತೆ ಬೌದ್ಧಿಕವಾಗಿ ತೊಡಗಿಸಿಕೊಳ್ಳುವುದು ಮೂರ್ಖತನವೆಂದು ಸಾಮಾನ್ಯ ಜನರಿಗೂ ಗೊತ್ತಾಗಿಹೋಗಿದೆ. ವಚನಗಳ ಆಧುನಿಕ ಇತಿಹಾಸದ ಬಗ್ಗೆ ಅಧ್ಯಯನ ಮಾಡಿದ್ದೇವೆಂದು ಬೀಗುವ ಇವರು, ಅವರ ಸಂಶೋಧನೆಯನ್ನು ತಿರುವಿ ಹಾಕಿದರೆ ನಮಗೆ ಹೊಸ ಒಳನೋಟಗಳು ಏನೂ ಸಿಗುವುದಿಲ್ಲ. ಒಂದು ಸಣ್ಣ ಉದಾಹರಣೆ ಕೊಡುವುದಾದರೆ ಸುಮಾರು ನೂರು-ನೂರಿಪ್ಪತ್ತೈದು ವರ್ಷಗಳ ಹಿಂದೆ ಆದ ವಚನ-ಪ್ರಕಟನೆಗಳ ಬಗ್ಗೆ ಕನಿಷ್ಠ ಜ್ಞಾನವೂ ಇಲ್ಲದ ಈ ಗುಂಪಿಗೆ ವಚನಗಳ ಆಧುನಿಕ ಇತಿಹಾಸದ ಬಗ್ಗೆ ಯಾವ ರೀತಿಯ ಸಂಶೋಧನೆ ಮಾಡಿದ್ದಾರೆಂದು ಗುಮಾನಿ ಹುಟ್ಟುತ್ತದೆ. ಇವರ ಸಂಶೋಧನೆಗಳನ್ನು ಕರ್ನಾಟಕದ ವಿದ್ವಾಂಸರು ತಿರಸ್ಕರಿಸಿದುದು ಈಗ ಹಳೆಯ ಮಾತು. ಇದಕ್ಕಾಗಿ ಕನ್ನಡಿಗರನ್ನು ನಾವು ಮೆಚ್ಚಬೇಕು.

ಪ್ರಸ್ತುತ ಅಸಹಿಷ್ಣುತೆಯ ಬಗ್ಗೆ ಮಾತನಾಡುತ್ತಿರುವ ಈ ಬೆಲ್ಜಿಯಂ ವಿದ್ವಾಂಸನಿಗೆ ಅವನ ಜೊತೆಗಿರುವ ಹೊಗಳುಭಟ್ಟರು ಮತ್ತು ವೈದಿಕ ಸಂಪ್ರದಾಯವಾದಿಗಳು ಬೆಂಬಲ ಸೂಚಿಸಿದರೆ ಆಶ್ಚರ್ಯಪಡಬೇಕಾಗಿಲ್ಲ. ಬಲಪಂಥೀಯ ವಿಚಾರವಾದಿಗಳಿಗೆ ಪ್ರಿಯವಾದುದನ್ನು ಉವಾಚಿಸುವ ಈ ವ್ಯಕ್ತಿಯ "ಸತ್ಯ-ಶೋಧಕ ಸಂಶೋಧನೆ"ಯ ಬಗ್ಗೆ ಅನೇಕರಿಗೆ ಜಿಗುಪ್ಸೆ ಉಂಟಾಗುವ ಹಾಗೆ ಇದೆ. ಈತನ ಮತ್ತು ಇತನ ಸಹಚರರ ಸಂಶೋಧನೆ ನಮ್ಮ ಸಮಾಜಕ್ಕೆ ಬೇಕಾಗಿದೆಯೆ? ತಾವು ಹೇಳಿದ್ದೆ ಸತ್ಯ ಎಂದು ಘಂಟಾಘೋಷವಾಗಿ ಕಿರಿಚುವ ಈತ ಮತ್ತು ಇತನ ಹೊಗಳುಭಟ್ಟರ ಭಟ್ಟಂಗಿತನ ಎಷ್ಟರಮಟ್ಟಿಗೆ ಇದೆ ಎಂದು ಎಲ್ಲರಿಗೂ ಸ್ಪಷ್ಟವಾಗಿ ಗೊತ್ತಾಗಿದೆ. ಒಟ್ಟಾರೆಯಾಗಿ ಈ ಬೆಲ್ಜಿಯಂ ವಿದ್ವಾಂಸನ ಲೇಖನವನ್ನು ಓದಿದವರಿಗೆ ಆತನೊಬ್ಬ ದಲಿತ-ವಿರೋಧಿ, ಮುಸ್ಲಿಂ-ವಿರೋಧಿ, ಕ್ರಿಶ್ಚಿಯನ್-ವಿರೋಧಿಯೆಂದು ನಮ್ಮಲ್ಲಿ ದಟ್ಟವಾದ ಅನುಮಾನ ಮೂಡುತ್ತದೆ.

■ ಡಾ. ವಿಜಯಕುಮಾರ್ ಎಂ ಬೋರಟ್ಟಿ

---

11 ◀◀ ಮಹಿಳೆಯರು ಕಲಿಯುವುದನ್ನು ಅಥವಾ ಸಾರ್ವಜನಿಕ ಬದುಕಲ್ಲಿ ಬಾರದಂತೆ ನಿರ್ಬಂಧಿಸುವುದನ್ನು ಇಸ್ಲಾಂ ವಿರೋಧಿ, ಮಹಿಳಾ ವಿರೋಧಿ ಮಾತ್ರವಲ್ಲ, ಮನುಷ್ಯತ್ವ ವಿರೋಧಿ ಕೃತ್ಯ ಎನ್ನಬೇಕಾಗಿದೆ. ಅರಬ್ ಮಹಿಳೆ ಜಗತ್ತಿನಲ್ಲೇ ಅತ್ಯಂತ ಹೆಚ್ಚು ಸ್ವಾತಂತ್ರ್ಯರಹಿತ ಪ್ರಜೆಯಾಗಿದ್ದಾಳೆ. ಭಾರತದ ಇಸ್ಲಾಮನ್ನು ಅರಬೀಕರಣ ಮಾಡುವವರು ಇಂತಹ ಸಮಾಜವನ್ನು ಸೃಷ್ಟಿಸಬೇಕೆಂದಿದ್ದಾರೆಯೇ?

■

ಮೂಲಭೂತವಾದ-ಕೋಮುವಾದಗಳಲ್ಲಿ ಪರಸ್ಪರ ಬಹಳಷ್ಟು ವಿರೋಧಗಳಿದ್ದರೂ ಸಾಮಾಜಿಕವಾಗಿ ಕೆಲವು ಅಂಶಗಳಲ್ಲಿ ವಿಚಿತ್ರ ಸಮಾನತೆಯಿದೆ. ಇದರಲ್ಲಿ ಮಹಿಳೆಯರನ್ನು ಕುರಿತ ಆಳವಾದ ತಿರಸ್ಕಾರ ಮತ್ತು ಬಡತನವನ್ನು ನಾನ್ ಇಶ್ಯೂ ಮಾಡುವುದು ಮುಖ್ಯ. ಕೆಲವು ತಿಂಗಳ ಹಿಂದೆ ಆರ್‌ಎಸ್‌ಎಸ್ ಸರಸಂಚಾಲಕರಾದ ಶ್ರೀ ಮೋಹನ್ ಭಾಗವತ್ ಅವರು ಮಹಿಳೆಯರು ಮನೆಯ ನಿರ್ವಹಣೆಗೆ ತಮ್ಮನ್ನು ಸೀಮಿತಗೊಳಿಸಿಕೊಳ್ಳಬೇಕೆಂದು ಹೇಳಿಕೆ ಮಾಡಿದರು. ಈಚೆಗೆ ಕೇರಳದ ಅಬೂಬಕರ್ ಮುಸ್ಲಿಯಾರ್ ಎಂಬ ಧರ್ಮಪಂಡಿತರು ಮಹಿಳೆಯರ ಸಾರ್ವಜನಿಕ ಬದುಕಿನ ಪ್ರವೇಶವನ್ನು ನಿಷೇಧಿಸುವ ಆಶಯದ ಮಾತಾಡಿದರು. ನಾವು ಸಂಘಪರಿವಾರವು ದಲಿತರ ಬಗ್ಗೆ ಮಾಂಸಾಹಾರದ ಬಗ್ಗೆ ಮುಸ್ಲಿಮರ ಬಗ್ಗೆ ಅಂಬೇಡ್ಕರ್ ಬಗ್ಗೆ ಹುಟ್ಟಿಸುತ್ತಿರುವ ಅಸಹನೆಯ ಬಗ್ಗೆ ಚರ್ಚಿಸುತ್ತಿದ್ದೇವೆ. ಮುಸ್ಲಿಂ ಮೂಲಭೂತವಾದವು ಉದಾರವಾದಿಗಳ ಬಗ್ಗೆ, ಸ್ವತಂತ್ರ ಮನೋಭಾವದ ಚಿಂತಕರ ಬಗ್ಗೆ, ನಾಸ್ತಿಕರ ಬಗ್ಗೆ ತೋರುತ್ತಿರುವ ಅಸಹನೆಯನ್ನೂ ಚರ್ಚಿಸಬೇಕಿದೆ. ಇದಕ್ಕೆ ಬಾಂಗ್ಲಾದಲ್ಲಿ ನಡೆಯುತ್ತಿರುವ ನಾಸ್ತಿಕ ಬ್ಲಾಗರುಗಳ ಹತ್ಯೆ ಅಥವಾ ಪಾಕಿಸ್ತಾನದಲ್ಲಿ ನಡೆಯುತ್ತಿರುವ ಶಿಯಾಗಳ ಹತ್ಯೆ ಸಾಕ್ಷಿ. ಇವು ಭಾರತದಲ್ಲಿ ನಡೆದವಲ್ಲ. ಆದರೆ ಭಾರತದ ಮುಸ್ಲಿಮರ ಪ್ರತಿಕ್ರಿಯೆ ಏನು ಇದಕ್ಕೆ? ಸದ್ಯ ಈಚೆಗೆ ಭಾರತದ ಧರ್ಮಗುರುಗಳು ಐಎಸ್‌ಐಎಸ್ ಧರ್ಮ ವಿರೋಧಿ ಎಂದು ಫತ್ವಾ ಹೊರಡಿಸಿರುವುದು ಒಳ್ಳೆಯ ಸಂಗತಿ. ಹಿಂದೂ ಕೋಮುವಾದ ಮತ್ತು ಮುಸ್ಲಿಂ ಮೂಲಭೂತವಾದಗಳ ಪರಿಣಾಮವೆಂದರೆ, ಭಾರತದ ಬಹುತ್ವದ ಬಗ್ಗೆ ಇರಬೇಕಾದ ಸಾಂಸ್ಕೃತಿಕ ತಿಳಿವನ್ನು ನಾಶಮಾಡುವುದು. ಭಾರತೀಯ ಸಂಸ್ಕೃತಿಯ ಮೇಲೆ ಬಹಳ ಮಾತಾಡುವ ಸಂಘಪರಿವಾರದ ಕಲ್ಪನೆಯಲ್ಲಿ ಕಬೀರ ಬಸವಣ್ಣ ರಾಮಕೃಷ್ಣ ಪರಮಹಂಸ ಕುವೆಂಪು ಶಿಶುನಾಳ ಅಬ್ದುಲ್ ಕರೀಂಖಾನ್ ಎರಡನೇ ಇಬ್ರಾಹಿಂ ಬೇಂದ್ರೆ, ಶಂಬಾ ಅಂಬೇಡ್ಕರ್ ಮೊದಲಾದವರೇ ಇಲ್ಲ. ಹಾಗಿದ್ದಿದ್ದರೆ ಅಂಬೇಡ್ಕರ್ ಅವರನ್ನು 'ಈಡಿಯಟ್' ಎಂದು ಹೀನವಾಗಿ ನಿಂದಿಸಿರುವ ವ್ಯಕ್ತಿಯ ವಿರುದ್ಧ ಅದು ಪ್ರತಿಭಟನೆ ಮಾಡಬೇಕಿತ್ತು. ಅದಕ್ಕೆ ಭಾರತ ಸೃಷ್ಟಿಮಾಡಿರುವ ಚಿಂತನಶೀಲ ವಿದ್ವತ್ ಪರಂಪರೆಯ ಬಗ್ಗೆ ಆದರವಿಲ್ಲ; ಇದ್ದಿದ್ದರೆ, ಅದು ಕಲಬುರ್ಗಿ, ಧಾಬೋಲ್ಕರ್, ಪನ್ಸಾರೆ ಕೊಲೆಯ ವಿರುದ್ಧ ಆಂದೋಲನ ರೂಪಿಸಬೇಕಿತ್ತು. ಅದಕ್ಕೆ ಭಾರತದ ಪ್ರತಿಭಾವಂತ ಮನಸ್ಸುಗಳು ಸೃಷ್ಟಿಸಿರುವ ಸಾಹಿತ್ಯ ಸಂಗೀತ ಚಿತ್ರಕಲಾ ಚಲನಚಿತ್ರ ರಂಗಭೂಮಿ ಪರಂಪರೆಗಳ ಅರಿವಿಲ್ಲ ಅಥವಾ ಆ ಅರಿವು ಬೇಕಾಗಿಲ್ಲ. ಸಂಘಪರಿವಾರದವರು ಬೇರೊಂದು ಕಾರಣಕ್ಕೆ ಇಷ್ಟಪಡುವ ಅಡಿಗರ ಕವಿತೆ ಅರ್ಥವಾಗಬೇಕಾದರೆ; ಅವರು ವಿರೋಧಿಸುವ ಜಿ. ರಾಜಶೇಖರ್ ಅವರೇ ನೆರವಾಗಬೇಕು. ಇದು ದೇಶದ ಸಂಸ್ಕೃತಿಯ ಬಗ್ಗೆ ಹಕ್ಕುದಾರಿಕೆಯಿಂದ ಮಾತಾಡುವವರ, ಸದಾ ಇನ್ನೊಬ್ಬರ ದೇಶಭಕ್ತಿ ಪ್ರಶ್ನಿಸುವವರ ಸಾಂಸ್ಕೃತಿಕ ಅನಕ್ಷರತೆ. ಈ ಘೋರ ಅನಕ್ಷರತೆಯು ಅದರ ಬೆಂಬಲಿಗರ ಮೂಲಕ ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟವಾಗುತ್ತಿದೆ. ಮುಸ್ಲಿಂ ಮೂಲಭೂತವಾದದ್ದೂ ಇದೇ ಸಮಸ್ಯೆ. ಅದಕ್ಕೆ ಜಗತ್ತಿನ ಬೇರೆಬೇರೆ ದೇಶಗಳ ಇಸ್ಲಾಂ ಸೃಷ್ಟಿಸಿರುವ ಅನೇಕ ಮಹತ್ವದ ಕೊಡುಗೆಗಳ ಅರಿವಿಲ್ಲ ಅಥವಾ ಅರಿವಿದ್ದರೂ ಒಪ್ಪುವ ಮನಸ್ಸಿಲ್ಲ. ಗಾಲಿಬ್ ರೂಮಿ ಇಕ್ಬಾಲ್ ಅವರ ಕಾವ್ಯದ ಅರಿವಿಲ್ಲ. ದಾರಾಶುಕೊನ ಉಪನಿಷತ್ತುಗಳ ಅನುವಾದ ಬೇಕಾಗಿಲ್ಲ. ಭಾರತ ಇಸ್ಲಾಂ ಸ್ಥಳೀಯ ಸಂಸ್ಕೃತಿ ಧರ್ಮಗಳ ಜತೆ ಒಡನಾಡಿ ಹುಟ್ಟಿಸಿರುವ ಯಾವ ಅಪೂರ್ವವಾದ ಫಲವೂ ಅದಕ್ಕೆ ಬೇಡ. ಅವುಗಳ ಗುರುತುಗಳನ್ನು ಅದು ನಾಶಮಾಡುತ್ತಿದೆ.

ಆದರೆ ಭಾರತದ ಜನ ತಮ್ಮ ಧರ್ಮಗಳ ಶ್ರದ್ಧೆಯನ್ನು ಬಿಡದೆ ಇತರೆ ಧರ್ಮಗಳ ಜತೆ ಆದರ-ಪ್ರೀತಿ, ಕೊಡುಕೊಳ್ಳುವಿಕೆ ಇರಿಸಿಕೊಂಡಿದ್ದಾರೆ. ಇದನ್ನು 'ಸೀಮೋಲ್ಲಂಘನ' ಎಂದು ಕರೆಯುವುದಾದರೆ, ಈ ಸೀಮೋಲ್ಲಂಘನೆಯ ಪ್ರಕ್ರಿಯೆಯಲ್ಲಿ ದೇಶದ ಬಹುರೂಪಿ ಸಂಸ್ಕೃತಿ ನಿರ್ಮಾಣವಾಗಿದೆ. ಕರ್ನಾಟಕದಲ್ಲಿ ಮುಸ್ಲಿಮರು ಐದು ಭಾಷೆಗಳಲ್ಲಿ ಮಾತಾಡುತ್ತಾರೆ. ಕರಾವಳಿಯಲ್ಲಿ ಏಳೆಂಟು ಭಾಷೆಗಳಿವೆ. ಹಿರಿಯ ವಿದ್ವಾಂಸ ಅಸ್ಘರಲಿ ಇಂಜಿನಿಯರ್ ಒಮ್ಮೆ ಹೇಳುತ್ತಿದ್ದರು. ಅವರು ಬಾಂಗ್ಲಾದೇಶದಲ್ಲಿದ್ದಾಗ ಕೆಲವು ಮಹಿಳೆಯರು 'ಇವನಿಗೆ ಬಾಂಗ್ಲಾ ಬರುವುದಿಲ್ಲ, ಇವನೆಂತಹ ಮುಸ್ಲಿಂ?' ಎಂದು ಸೋಜಿಗ ಪಡುತ್ತಿದ್ದರಂತೆ. ಜಗತ್ತಿನ ಎಲ್ಲ ಮುಸ್ಲಿಮರು ಬಂಗಾಳಿ ಮಾತಾಡುತ್ತಾರೆ ಎಂದು ನಂಬಿರುವಷ್ಟು ಅವರ ಜಗತ್ತು ಸ್ಥಳೀಕರಣಗೊಂಡಿದೆ.

ಇಸ್ಲಾಂಪೂರ್ವದ ಬೌದ್ಧ ಮತ್ತು ಹಿಂದೂ ಸಾಂಸ್ಕೃತಿಕ ಗುರುತುಗಳನ್ನು ಉಳಿಸಿಕೊಂಡಿರುವ ಇಂಡೋನೇಶಿಯನ್ ಮುಸ್ಲಿಮರಿಗೆ ಅಲ್ಲಿನ ಒಬ್ಬ ಧರ್ಮಗುರು ಕರೆಗೊಟ್ಟರು- ನಿಮ್ಮ ಹೆಸರಲ್ಲಿರುವ ಅಡ್ಡಹೆಸರುಗಳನ್ನು ಕೈಬಿಡಿ ಎಂದರು. ಅದಕ್ಕೆ 'ನಾವು ಮುಸ್ಲಿಮರಾಗಿದ್ದೇವೆ ಅದಕ್ಕೆ ಹೆಮ್ಮೆಯಿದೆ. ಆದರೆ ಈ ಅಡ್ಡಹೆಸರುಗಳು ನಮ್ಮ ಪೂರ್ವಜರ ಗುರುತುಗಳು. ನಾವು ಅವನ್ನು ಕೈಬಿಡುವುದಿಲ್ಲ' ಎಂದು ಜನ ನಿರಾಕರಿಸಿದರು. ಕಾಶ್ಮೀರಿ ಮುಸ್ಲಿಮರು ಮೂಲತಃ ಪಂಡಿತರಾಗಿದ್ದವರು, ಅವರಲ್ಲಿ ಈಗಲೂ ಬಹಳಷ್ಟು ಮಂದಿ 'ಭಟ್' ಅಡ್ಡಹೆಸರನ್ನು ಕೈಬಿಟ್ಟಿಲ್ಲ.

ಮುಸ್ಲಿಮರು ಧಾರ್ಮಿಕ ಭಾವನೆಗಳಿಗೆ ಬೆಲೆಗೊಟ್ಟು ರಥ ಎಳೆಯುವುದರಿಂದ ನಷ್ಟವಾಗುವಷ್ಟು ಇಸ್ಲಾಂ ದುರ್ಬಲವಾಗಿದೆ ಎಂದು ನನಗೆ ಅನಿಸುವುದಿಲ್ಲ. ಐದು ಹೊತ್ತು ನಮಾಜು ಮಾಡುವವರು ಮಾತ್ರ ಏರೇಏರೇ


ಪ್ರಜಾತಾಂತ್ರಿಕ ಮಾರ್ಗದಲ್ಲಿ ಶಿಕ್ಷಣ ಕ್ಷೇತ್ರದ ಕೇಸರೀಕರಣ!

ಕೇಂದ್ರದಲ್ಲಿ ಮೋದಿ ಸರ್ಕಾರ ಅಧಿಕಾರಕ್ಕೆ ಬಂದದ್ದೇ ತಡ, ಆರೆಸ್ಸೆಸ್‌ಗೆ ಆನೆಬಲ ಬಂದಂತಾಗಿದೆ. ಅದರ 'ಹಿಂದೂ ರಾಷ್ಟ್ರ' ಸ್ಥಾಪನೆಗೆ ಪೂರ್ವಭಾವಿಯಾಗಿ ಏನೆಲ್ಲ ಸಿದ್ಧತೆಗಳಾಗಬೇಕೋ ಅವೆಲ್ಲವಕ್ಕೂ ಹಸಿರು ನಿಶಾನೆ ದೊರೆತಿದೆ. ಇವುಗಳಲ್ಲಿ ಅತ್ಯಂತ ಪ್ರಮುಖವಾದುದೆ ಶಿಕ್ಷಣ ಕ್ಷೇತ್ರದ ಕೇಸರೀಕರಣ. ನಮೋಭಕ್ತೆಯೂ ಕಟ್ಟರ್ ಸ್ವಯಂಸೇವಿಕೆಯೂ ಆಗಿರುವ ಸ್ಮೃತಿ ಇರಾನಿ ಕೇಂದ್ರ ಮಾನವ ಸಂಪನ್ಮೂಲಾಭಿವೃದ್ಧಿ ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮಾಡಿದ ಮೊತ್ತಮೊದಲ ಕೆಲಸವೆಂದರೆ ಹೊಸ ಶಿಕ್ಷಣ ನೀತಿಯನ್ನು ರೂಪಿಸುವ ಪ್ರಕ್ರಿಯೆಗೆ ಚಾಲನೆ ನೀಡುವಿಕೆ. ಪರಿಣಾಮವಾಗಿ ಶಿಕ್ಷಣ ನೀತಿಯ ಬಗ್ಗೆ ಸಾರ್ವಜನಿಕರ ಸಲಹೆಸೂಚನೆಗಳನ್ನು ಪಡೆಯುವ ಕಾರ್ಯ ದೇಶಾದ್ಯಂತ ಗ್ರಾಮ, ಬ್ಲಾಕ್, ವಲಯ ಮತ್ತು ರಾಜ್ಯ ಮಟ್ಟಗಳಲ್ಲಿ ಪ್ರಾರಂಭವಾಗಿದೆ. ಇದೆಲ್ಲವೂ ಪ್ರಜಾತಾಂತ್ರಿಕ ವ್ಯವಸ್ಥೆಯ ಚೌಕಟ್ಟಿನೊಳಗೇ ಇರುವಂತೆ ತೋರಬಹುದು. ಆದರೆ ವಾಸ್ತವವಾಗಿ ಇದರ ಹಿಂದೆ ಪಠ್ಯಪುಸ್ತಕಗಳಲ್ಲಿ ಸಂಘ ಪರಿವಾರದ ಕೋಮುವಾದವನ್ನು ತುರುಕಿಸುವ ಪ್ರಯತ್ನವಿದ್ದು ಇದರ ಸುಳಿವನ್ನು ನೀಡುವ ಹಲವಾರು ಅಂಶಗಳನ್ನು ಗುರುತಿಸಬಹುದಾಗಿದೆ. ಹೊಸ ನೀತಿಯನ್ನು ರೂಪಿಸಲು ನಿಗದಿಪಡಿಸಿರುವ ಅವಧಿ ಇವುಗಳಲ್ಲೊಂದು.

ಹೊಸ ಶಿಕ್ಷಣ ನೀತಿಯ ಕರಡಿನ ರಚನೆಗಾಗಿ ಸಮಿತಿಯೊಂದನ್ನು ನೇಮಿಸಲಾಗಿದ್ದು ಅದರ ಐವರು ಸದಸ್ಯರ ಪೈಕಿ ನಾಲ್ಕು ಮಂದಿ ಶಿಕ್ಷಣ ನಿರ್ವಹಣಾಧಿಕಾರಿಗಳಾದರೆ ಒಬ್ಬರು ಅಕಾಡೆಮಿ ಸದಸ್ಯ. ಸಮಿತಿಗೆ ತನ್ನ ಕಾರ್ಯವನ್ನು ಪೂರ್ಣಗೊಳಿಸಲು ಡಿಸೆಂಬರ್‌ನ ಗಡುವನ್ನು ವಿಧಿಸಲಾಗಿದೆ. ಅಂದರೆ ಇಡೀ ಪ್ರಕ್ರಿಯೆಯನ್ನು ಕೇವಲ 8 ತಿಂಗಳುಗಳಲ್ಲಿ ಮುಗಿಸಬೇಕಾಗಿದೆ! ಸಚಿವೆಯ ಲೆಕ್ಕಾಚಾರದಂತೆ ಆಗಸ್ಟ್ ಒಳಗಾಗಿ 2.5 ಲಕ್ಷ ಸಲಹೆಗಳನ್ನು ಸಂಗ್ರಹಿಸಬೇಕಾಗಿತ್ತು, ಆದರೆ ಅಕ್ಟೋಬರ್‌ತನಕ ಬರೀ 30 ಪ್ರತಿಶತ ಕೆಲಸವಷ್ಟೆ ಮುಗಿದಿದೆ. ಮಾನವ ಸಂಪನ್ಮೂಲಾಭಿವೃದ್ಧಿ ಇಲಾಖೆಯ ಜಾಲತಾಣವೆ ಹೇಳುವಂತೆ ನಿಗದಿತ ಸಮಯದೊಳಗೆ ಪೂರ್ಣಗೊಂಡಿರುವ ಕೆಲಸದ ಪ್ರಮಾಣ ಕೇವಲ ಶೇಕಡಾ 1. ಎಲ್ಲಾ ಮಟ್ಟಗಳಲ್ಲೂ ಸಲಹಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಿರುವುದು ಕೇವಲ 3 ರಾಜ್ಯಗಳು ಮಾತ್ರ. ನವೆಂಬರ್ ತಿಂಗಳಲ್ಲಿ ಆತುರಾತುರವಾಗಿ ಅದೇನೊ ಕಸರತ್ತು ನಡೆದಿದೆ. ನವಂಬರ್ 19ರಿಂದ 23ರ ತನಕದ 4 ದಿನಗಳ ಅವಧಿಯಲ್ಲಿ (ವಾರಾಂತ್ಯವನ್ನು ಪರಿಗಣಿಸಿದರೆ 2 ದಿನ) 1 ರಾಜ್ಯ, 27 ಜಿಲ್ಲೆಗಳು ಮತ್ತು 100 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಲಹಾ ಪ್ರಕ್ರಿಯೆ ಪೂರ್ಣಗೊಂಡಿದೆ ಎಂದು ಇಲಾಖೆಯ ಜಾಲತಾಣ ಪ್ರಕಟಣೆ ಹೇಳುತ್ತದೆ.

ಪ್ರಸಕ್ತ ಸಲಹಾ ಪ್ರಕ್ರಿಯೆ ನಿಜಕ್ಕೂ ಒಂದು ಪ್ರಹಸನವಾಗಿದ್ದು ಇದೆಲ್ಲವೂ ಬರೀ ತೋರಿಕೆಗೋಸ್ಕರ ನಡೆಯುತ್ತಿದೆ ಎಂಬುದಕ್ಕೆ ಇನ್ನೂ ಒಂದು ನಿದರ್ಶನ ಇಲ್ಲಿದೆ. ಹೊಸ ಶಿಕ್ಷಣ ನೀತಿಯ ಸ್ವರೂಪ ಹೇಗಿರಬೇಕೆಂದು ಈಗಾಗಲೆ ತೀರ್ಮಾನವಾಗಿದ್ದು ಅದನ್ನು ಕೆಲವು ಆಯ್ದ ಅಧಿಕಾರಿಗಳು ಮತ್ತು ರಾಜಕಾರಣಿಗಳು ಸೇರಿಕೊಂಡು ಮಾಡಿದ್ದಾರೆಂದು ತಿಳಿದುಬಂದಿದೆ. ಈ ಆತಂಕಕಾರಿ ಮಾಹಿತಿಯನ್ನು ಹೊರಹಾಕಿರುವ ಮಾನವಾಭಿವೃದ್ಧಿ ಸಚಿವಾಲಯದ ಹಿರಿಯ ಅಧಿಕಾರಿಗಳ ಪ್ರಕಾರ ಪ್ರಸ್ತುತ ಸಲಹಾ ಪ್ರಕ್ರಿಯೆಯ ಉದ್ದೇಶ ಇಷ್ಟೇ: ಭವಿಷ್ಯದಲ್ಲಿ ಬೇಕಾಗಲಿರುವ ಸಮರ್ಥನೆಯೊಂದನ್ನು ತಯಾರಿಸಿಟ್ಟುಕೊಳ್ಳುವುದು. ಸಲಹೆಗಳ ಸಂಗ್ರಹವನ್ನು ಸಚಿವಾಲಯ ಸೂಚಿಸಿರುವ ಕೇವಲ 23 ವಿಷಯಗಳಿಗೆ ಸೀಮಿತಗೊಳಿಸಲಾಗಿದೆ. ಅವುಗಳಲ್ಲಿ 13 ಶಾಲಾ ಶಿಕ್ಷಣಕ್ಕೆ ಸಂಬಂಧಪಟ್ಟಿರುವುದಾದರೆ ಇನ್ನುಳಿದ 10 ಉನ್ನತ ಶಿಕ್ಷಣಕ್ಕೆ ಸಂಬಂಧಪಟ್ಟವೆ. ಕಡ್ಡಾಯ ಶಿಕ್ಷಣ ಹಕ್ಕು, ಅದರ ಅನುಷ್ಠಾನ, ಶಿಕ್ಷಣಕ್ಷೇತ್ರದಲ್ಲಿ ಖಾಸಗಿ-ಸಾರ್ವಜನಿಕ ಜಂಟಿ ಸಹಭಾಗಿತ್ವದಂತಹ ಪ್ರಮುಖ ವಿಷಯಗಳನ್ನು ಸಲಹಾ ಪ್ರಕ್ರಿಯೆಯಿಂದ ಹೊರಗಿಡಲಾಗಿದೆ. ಪ್ರಸಕ್ತವಾಗಿ ಶಾಲಾ ಶಿಕ್ಷಣ ಮಂಡಳಿಗಳ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಸದೃಢ ನೀತಿ ಇಲ್ಲದಿರುವ ವಿಷಯವನ್ನು ಕೂಡ ಸೇರಿಸಬೇಕಿತ್ತಾದರೂ ಅದನ್ನು ಕೈಬಿಡಲಾಗಿದೆ.

ರಾಜ್ಯ ಮಟ್ಟದ ಪ್ರಕ್ರಿಯೆಗಳ ಮೇಲೆ ಕಣ್ಣು ಹಾಯಿಸಿದರೆ ಬಹುತೇಕ ಸಭೆಗಳಲ್ಲಿ ಸರ್ಕಾರಿ ಶಿಕ್ಷಣಾಧಿಕಾರಿಗಳು, ಸಚಿವಾಲಯದ ಅಧಿಕಾರಿಗಳು, ಕಾರ್ಯದರ್ಶಿಗಳು ಮತ್ತು ಕೆಲವು ಶಿಕ್ಷಕರಷ್ಟೆ ಭಾಗವಹಿಸುವುದು ಕಂಡುಬರುತ್ತದೆ ಹೊರತು ಸಾರ್ವಜನಿಕರಾರೂ ಕಾಣಸಿಗುವುದಿಲ್ಲ. ಇಂತಹ ಸರ್ಕಾರಿ ಪ್ರಾಯೋಜಿತ ಸಭೆಗಳಲ್ಲಿ ಸರಕಾರದ ಪರವಾಗಿರುವ ಸಲಹೆಗಳನ್ನು ಸರಕಾರದ ಪರತ್ತಿಗೆ ಅನುಸಾರವಾಗಿ ಸರಕಾರವೇ ಮಂಡಿಸುತ್ತದೆ. ಅನೇಕ ವಿಶ್ವವಿದ್ಯಾನಿಲಯಗಳು, ಶಿಕ್ಷಕರು, ವಿದ್ವಾಂಸರು, ವಿದ್ಯಾರ್ಥಿ ಸಂಘಗಳು ಮುಂತಾದವರನ್ನು ಸಲಹಾ ಪ್ರಕ್ರಿಯೆಯಿಂದ ಹೊರಗಿಡಲಾಗಿದೆ. ಹರಿಯಾಣಾ ರಾಜ್ಯದಲ್ಲಿ ನಡೆದ ಸಲಹಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದವರಲ್ಲಿ ಆರೆಸ್ಸೆಸ್‌ನ ಅಂಗಸಂಸ್ಥೆಯಾದ



ವಿದ್ಯಾಭಾರತಿಯ ಮಾಜಿ ಕಾರ್ಯದರ್ಶಿ ದೀನನಾಥ ಬಾತ್ರಾ ಕೂಡ ಒಬ್ಬ. ಈತ ಬರೆದಿರುವ ನೀತಿಬೋಧೆಯ ಪುಸ್ತಕಗಳನ್ನು ಇನ್ನು ಮುಂದೆ ರಾಜ್ಯದ ಎಲ್ಲಾ ಶಾಲೆಗಳಲ್ಲಿ ಕಲಿಸಲಾಗುವುದಂತೆ. ಬಾತ್ರಾ ಮಹಾಶಯ ಇದರೊಂದಿಗೆ ಗೀತಾಪಾಠ ಕೂಡ ನಡೆಯುವಂತೆ ನೋಡಿಕೊಳ್ಳಲಿದ್ದಾನಂತೆ. ಉತ್ತರ ವಲಯದ ರಾಜ್ಯಗಳಲ್ಲಂತೂ ತಳಮಟ್ಟದ ಸಲಹಾ ಪ್ರಕ್ರಿಯೆಯನ್ನು ಕೈಬಿಟ್ಟು ನೇರವಾಗಿ ವಲಯ ಮಟ್ಟದ ಸಭೆಗಳನ್ನು ನಡೆಸಲಾಗಿದೆ. ಸಚಿವೆಯ ಒತ್ತಡದಿಂದಾಗಿ ಅರೆಬರೆ, ಕಳಪೆ ಕೆಲಸ ಆಗುತ್ತಿದೆ ಎಂಬುದಕ್ಕೆ ಅತ್ಯುತ್ತಮ ಉದಾಹರಣೆ ಇದಾಗಿದೆ.

ಸಲಹಾ ಪ್ರಕ್ರಿಯೆಯ ಮೇಲ್ವಿಚಾರಣೆಗಾಗಿ ಪ್ರತ್ಯೇಕ ಕಾರ್ಯತಂಡವೊಂದನ್ನು ರಚಿಸಲಾಗಿದೆ ಎಂದು ಹೇಳಲಾಗುತ್ತಿದೆ. ಆದರೆ ಸದರಿ ಕಾರ್ಯತಂಡದ ಚಟುವಟಿಕೆಗಳು ಅತ್ಯಂತ ನಿಗೂಢವಾಗಿವೆ. ಇದು ಹೇಗೆ ಕೆಲಸ ಮಾಡುತ್ತಿದೆ ಎಂದು ಕೇಳಿದರೆ ಸಚಿವಾಲಯದಲ್ಲಿ ಯಾರೊಬ್ಬರೂ ತುಟಿ ಬಿಚ್ಚುತ್ತಿಲ್ಲ. ಆರಂಭದಲ್ಲಿ ಕರಡು ನೀತಿಯ ಸ್ವರೂಪವನ್ನು ತಯಾರಿಸುವ ಕೆಲಸವನ್ನು ಇದೇ ಕಾರ್ಯತಂಡಕ್ಕೆ ವಹಿಸಲಾಗಿತ್ತು, ಆದರೆ ಅದೀಗ ಬದಲಾಗಿದೆ. ಈಗ ಆ ಕೆಲಸವನ್ನು ಕರಡು ರಚನಾ ಸಮಿತಿಗೆ ಒಪ್ಪಿಸಲಾಗಿದೆ.


ಇಷ್ಟರತನಕ ಬಂದಿರುವ ಸಲಹೆಗಳನ್ನು ಇನ್ನೂ ಬಹಿರಂಗಪಡಿಸದಿರುವುದು. ಸಚಿವಾಲಯದ ಉದ್ದೇಶಗಳ ಬಗೆಗಿನ ಸಂಶಯವನ್ನು ಇನ್ನಷ್ಟು ದೃಢಪಡಿಸುವಂತಿದೆ. ಇಲಾಖೆಯ ಜಾಲತಾಣದಲ್ಲಿ ಒಂದಿಷ್ಟು ನಾಗರಿಕರ ಸಲಹೆಗಳಷ್ಟೆ ಕಾಣಸಿಗುತ್ತವೆ. ಆದರೆ ಕೆಲವೊಂದು ಆಂತರಿಕ ಗೋಪ್ಯ ಸಭೆಗಳೂ ನಡೆದಿದ್ದು ಅದರ ವಿವರಗಳು ಯಾರಿಗೂ ಲಭ್ಯವಿಲ್ಲ, ಯುಜಿಸಿ ಮತ್ತು ಎನ್‌ಸಿಇಆರ್‌ಟಿಗಳು ಇತರ ರಾಷ್ಟ್ರೀಯ ಶಿಕ್ಷಣಸಂಸ್ಥೆಗಳ ಜೊತೆ ನಡೆಸಿರುವ ಪ್ರಾದೇಶಿಕ ಸಭೆಗಳ ವಿಚಾರದಲ್ಲಿಯೂ ಪಾರದರ್ಶಕತೆಯ ಕೊರತೆ ಇದೆ. ಸಚಿವಾಲಯಕ್ಕೆ ಯಾವುದೇ ರೀತಿಯ ಉತ್ತರದಾಯಿತ್ವ ಇಲ್ಲದುದರಿಂದ ಸಲಹೆ ಇತ್ತವರಿಗೆ ಉತ್ತರಿಸಬೇಕಾದ ದರ್ದು ಅದಕ್ಕಿಲ್ಲ. ಆದುದರಿಂದಲೆ ಮಾಹಿತಿ ಹಕ್ಕು ಕಾಯ್ದೆಯಡಿ ಪ್ರಶ್ನಿಸಿದವರಿಗೆಲ್ಲ 'ನಿಮ್ಮ ಸಲಹೆಗಳನ್ನು ಗಮನಕ್ಕೆ ತೆಗೆದುಕೊಳ್ಳಲಾಗಿದೆ' ಎಂಬ ಉತ್ತರಗಳನ್ನು ನೀಡಲಾಗುತ್ತಿದೆ.

ಶಿಕ್ಷಣದಲ್ಲಿ ಸಮಾನತೆ ಮತ್ತು ಗುಣಮಟ್ಟದ ಖಾತರಿಗಳು ಮುಖ್ಯ. ಆದರೆ ಇಲ್ಲಿ ಹೊಸ ಶಿಕ್ಷಣ ನೀತಿಯ ಗುರಿಯನ್ನಾಗಲಿ ದೂರದೃಷ್ಟಿಯನ್ನಾಗಲಿ ಅಥವಾ ಉದ್ದೇಶಗಳನ್ನಾಗಲಿ ಎಲ್ಲೂ ಸ್ಪಷ್ಟಪಡಿಸಲಾಗಿಲ್ಲ. ಸಹಜವಾಗಿಯೆ ಇದು ಸಂಶಯಕ್ಕೆ ಎಡೆಮಾಡಿಕೊಡುತ್ತಿದೆ. ಪ್ರಸಕ್ತ ಶಿಕ್ಷಣ ವ್ಯವಸ್ಥೆಯನ್ನು ಪ್ರಭಾವಿಸಿರುವ ಹಿಂದಿನ ಕಾರ್ಯನೀತಿ ಮತ್ತು ಯೋಜನೆಗಳ ವಿಶ್ಲೇಷಣೆ ನಡೆಸುವ ಬಗ್ಗೆ ಕೂಡ ಯಾರೂ ಮಾತಾಡುತ್ತಿಲ್ಲ. ವಿದ್ವಾಂಸರ ಅಭಿಮತದಲ್ಲಿ ಹಿಂದಿನ ನೀತಿಗಳಲ್ಲಿರುವ ಋಣಾತ್ಮಕ ಅಂಶಗಳನ್ನು ಮತ್ತು ಇಂದಿನ ಸವಾಲುಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ ಹೊಸ ನೀತಿಯ ರಚನೆ ಸಾಧ್ಯವಿಲ್ಲ. ಪ್ರಸಕ್ತವಾಗಿ ಜಾರಿಯಲ್ಲಿರುವ 1986ರ ಶಿಕ್ಷಣ ನೀತಿ ಮತ್ತು ತದನಂತರ ಹುಟ್ಟುಹಾಕಲಾದ ಯೋಜನೆಗಳು ಮತ್ತು ಸಂಸ್ಥೆಗಳ ವ್ಯವಸ್ಥಿತ ಮೌಲ್ಯಮಾಪನ ನಡೆದಿಲ್ಲ. ಹಿಂದಾದರೆ ಈ ಕೆಲಸವನ್ನು ಯೋಜನಾ ಆಯೋಗ ಮಾಡುತ್ತಿತ್ತು, ಆದರೆ ಮೋದಿ ಸರ್ಕಾರದ ನೀತಿ ಆಯೋಗದಲ್ಲಿ ಇದಕ್ಕೆ ಸಂಬಂಧಪಟ್ಟ ವಿಷಯತಜ್ಞರಿಲ್ಲ. ಕಡ್ಡಾಯ ಶಿಕ್ಷಣ ಹಕ್ಕು ವೇದಿಕೆ ತನ್ನದೇ ಆದ ಹಲವಾರು ಸಲಹೆಗಳನ್ನು ಪ್ರಕಟಿಸಿದೆಯಾದರೂ ಅವನ್ನೆಲ್ಲ ಎಷ್ಟರ ಮಟ್ಟಿಗೆ ಪರಿಗಣಿಸಲಾಗುವುದು ಎಂಬ ಪ್ರಶ್ನೆಯಿದೆ.

ಸಮಿತಿ ತನ್ನ ಕೆಲಸವನ್ನು ಬೇಗನೆ ಮಾಡಿಮುಗಿಸಬೇಕೆಂದು ಸಚಿವೆ ತಾಕೀತು ಮಾಡಿದ್ದಾಳೆ. ಹೀಗಾಗಿ ಸಮಿತಿಗೆ ಕೇವಲ ಇದುವರೆಗೆ ರಾಶಿ ಬಿದ್ದಿರುವ ಸಲಹೆಗಳನ್ನಷ್ಟೆ ಪರಿಶೀಲಿಸಲು ಸಾಧ್ಯವಾಗಬಹುದು. ಒಂದು ವೇಳೆ ಕೊನೆಯ ದಿನಾಂಕವನ್ನು ಅನಿರ್ದಿಷ್ಟವಾಗಿ ಮುಂದುವರಿಸುವ ಮೂಲಕ ಶೇಕಡಾ 50ರಷ್ಟು ಸಂಗ್ರಹ ಕಾರ್ಯವನ್ನು ಮುಗಿಸಬಹುದೆಂದು ಇಟ್ಟುಕೊಂಡರೂ ಅದರಿಂದೇನೂ ಉಪಯೋಗವಿಲ್ಲ. ಏಕೆಂದರೆ ಹೊಸ ಸಲಹೆಗಳನ್ನು ಪರಿಗಣಿಸುವಷ್ಟು ಸಮಯವೆ ಇಲ್ಲ. ಕರಡನ್ನು ಹೇಗೆ ಸಿದ್ಧಪಡಿಸಬೇಕು, ಅದನ್ನು ಯಾವ ವಿಧಾನದಲ್ಲಿ ತಯಾರಿಸಬೇಕೆಂದು ಇನ್ನೂ ನಿರ್ಧಾರವಾಗಿಲ್ಲ. ಸಾಲದ್ದಕ್ಕೆ ಶಿಕ್ಷಣ ನೀತಿಯ ಅನುಷ್ಠಾನಕ್ಕೆ ಬೇಕಾದ ಕ್ರಿಯಾ ಯೋಜನೆಯನ್ನು ತಯಾರಿಸುವ ಕೆಲಸವನ್ನೂ ಕರಡು ಸಮಿತಿಯ ಹೆಗಲಿಗೆ ಏರಿಸಲಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಎಂತಹ ನೀತಿ ತಯಾರಾಗಬಹುದೆಂದು ಊಹಿಸಲು ಕಷ್ಟವಿಲ್ಲ.

ಮೇಲೆ ಪ್ರಸ್ತಾಪಿಸಲಾಗಿರುವ ಎಲ್ಲಾ ಅಂಶಗಳ ಬೆಳಕಿನಲ್ಲಿ ನೋಡಿದಾಗ ಮೋದಿ ಸರ್ಕಾರದ ನೂತನ ಶಿಕ್ಷಣ ನೀತಿ ಸಂಘಪರಿವಾರದ ಹಿಂದೂತ್ವ ಸಿದ್ಧಾಂತದ ಕಡೆ ವಾಲಿಕೊಳ್ಳುತ್ತಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಆದುದರಿಂದಲೆ ಈ ಹೊಸ ಶಿಕ್ಷಣ ನೀತಿಯ ಬಗ್ಗೆ ಎಲ್ಲೆಡೆಗಳಿಂದ ಆತಂಕ ವ್ಯಕ್ತವಾಗುತ್ತಿದೆ. ಪ್ರಚಾರದಲ್ಲಿ ಮೋದಿ ಸರ್ಕಾರವನ್ನು ಮೀರಿಸಿದವರಿಲ್ಲ ಎಂಬುದನ್ನು ನಾವು ಈಗಾಗಲೆ ಕಂಡಿದ್ದೇವೆ. ಇದೀಗ ಅದೇ ಪ್ರಚಾರತಂತ್ರದ ಮೂಲಕ ಎಲ್ಲವೂ ವ್ಯಾಪಕ ಪ್ರಜಾತಾಂತ್ರಿಕ ಪ್ರಕ್ರಿಯೆ ಪ್ರಕಾರವೆ ನಡೆದಿದೆ, ಜನಾಭಿಪ್ರಾಯ ಸಂಗ್ರಹದ ಕಾರ್ಯವನ್ನು ತಳಮಟ್ಟದಿಂದಲೆ ಮಾಡಲಾಗಿದೆ ಎಂದು ಟಾಂ ಟಾಂ ಮಾಡಲಾಗುತ್ತಿದೆ. ಇದು ಭವಿಷ್ಯದಲ್ಲಿ ತನ್ನ ಜನವಿರೋಧಿ ಹೊಸ ನೀತಿಯ ಸಮರ್ಥನೆಗೆ ಪೂರ್ವಸಿದ್ಧತೆಯಲ್ಲದೆ ಬೇರೇನೂ ಅಲ್ಲ. ಪ್ರಜಾಪ್ರಭುತ್ವದಲ್ಲಿ ಇದಕ್ಕಿಂತ ದೊಡ್ಡ ದುರಂತ ಏನಿದೆ?

(ಆಧಾರ: 7.12.2015ರ ಔಟ್‌ಲುಕ್ ನಲ್ಲಿ ಪವಿತ್ರ ರಂಗನ್‌ರ ಲೇಖನ)



ಮುಸ್ಲಿಂ ಎನ್ನುವುದಾದರೆ ಭಾರತದಲ್ಲಿ ಎಷ್ಟು ಜನ ಮುಸ್ಲಿಮರು ಉಳಿದಾರು? ಭಾರತದ ಜನ ಅರಬಸ್ಥಾನದಿಂದ ಬಂದ ಧರ್ಮವನ್ನು ಪರ್ಶಿಯಾದಿಂದ ಬಂದ ಸಾಹಿತ್ಯ ಆಡಳಿತ ಸೂಫಿಸಂ ಸ್ವೀಕರಿಸಿದರು. ಆದರೆ ಅವರ ಸಾಮಾಜಿಕ ನಡಾವಳಿಗಳು ಸ್ಥಳೀಯವಾಗಿದ್ದು, ಅವುಗಳ ಮೂಲಕ ಸಂಕರ ಸಂಸ್ಕೃತಿ ರೂಪುಗೊಂಡಿತು. ಬ್ಯಾರಿ ಮಾಪ್ಳಾಗಳಲ್ಲಿರುವ 'ಪಕ್ಷಿಪಾಟ್ಟು' ಹಾಡಿಕೆ ಸಂಪ್ರದಾಯ ಇಂತಹುದು; ಕರ್ನಾಟಕದ ಮೊಹರಂ ಹಾಡುಗಳು ಇಂತಹವು; ಶಿಶುನಾಳರ ಆರೂಢ ಇಂತಹುದು. ಇವು ಭಾರತದ ಇಲ್ಲವೇ ಜಾಗತಿಕ ಇಸ್ಲಾಮಿಗೆ ಕರ್ನಾಟಕ ಮತ್ತು ಕೇರಳದ ಕೊಡುಗೆ.

'ಭಾರತೀಯ' ಇಸ್ಲಾಮಿಕ್ ಅಂಶಗಳನ್ನು ಕೈಬಿಡಬೇಕೆಂದು ಒಪ್ಪಿಕೊಂಡರೆ ಏನೆಲ್ಲವನ್ನು ಕೈಬಿಡಬೇಕಾಗಬಹುದು? ನೆನೆದರೆ ಗಾಬರಿಯಾಗುತ್ತದೆ. ಮಹಮದ್ ರಫಿ ಹಾಡುಗಳನ್ನು, ಶಬಾನ ಆಜ್ಮಿ ಸಿನಿಮಾಗಳನ್ನು, ಬಿಸ್ಮಿಲ್ಲಾಖಾನರ ಸಂಗೀತವನ್ನು, ಸುಲ್ತಾನ ಎರಡನೇ ಇಬ್ರಾಹಿಂ ಆದಿಲಶಾಹಿಯ 'ಕಿತಾಬೆ ನವರಸ'ವನ್ನು ಕೈಬಿಡಬೇಕು. ಯಾಕೆಂದರೆ ಸಂಗೀತವನ್ನು ಸಾಂಪ್ರದಾಯಿಕ ಇಸ್ಲಾಂ ಮಾನ್ಯಮಾಡುವುದಿಲ್ಲ, ಕಬೀರ ಹಾಗೂ ಶಿಶುನಾಳರನ್ನು ನಿರಾಕರಿಸಬೇಕು-ಕಾರಣ, ಅವರು ರಾಮ ಹಾಗೂ ದೇವಿಯ ಸ್ತುತಿ ರಚಿಸಿದವರು. ಇಕ್ಬಾಲರ ಕಾವ್ಯ ನಿರಾಕರಿಸಬೇಕು-ಅವರು ನಿರಂಕುಶಮತಿತ್ವಕ್ಕೆ ಸಮೀಪವಾಗಿರುವ 'ಖುದಿ'ಯ ಪರಿಕಲ್ಪನೆ ಪ್ರತಿಪಾದಿಸಿದವರು. ಸೂಫಿಗಳನ್ನು, ಶಿಯಾಗಳನ್ನು, ಅಹಮದೀಯಂಗಳನ್ನು [illegible] ಮಾಡಬೇಕಾಗುವುದು-ಯಾಕೆಂದರೆ ಅವರು ಅರಬ್‌ಬ್ಯಾಂಡಿನ ವಹಾಬಿ/ಸುನ್ನಿ ಇಸ್ಲಾಮನ್ನು ಒಪ್ಪುವವರಲ್ಲ. ನಿಸಾರ್ ಅಹಮದ್ ಕಾಫಿರರಾಗುತ್ತಾರೆ- ಯಾಕೆಂದರೆ ಅವರ 'ನಿತ್ಯೋತ್ಸವ' ಕವಿತೆಯಲ್ಲಿ ನಾಡದೇವಿಯ ಕೀರ್ತನೆಯಿದೆ. ಹೀಗೆ ಎಲ್ಲವನ್ನೂ ಇಸ್ಲಾಮಿಕ್-ಅನ್‌ಇಸ್ಲಾಮಿಕ್ ಎಂದು ವಿಂಗಡಣೆ ಮಾಡುತ್ತ ಹೋದರೆ, ಕೊನೆಗೆ ಬಮಿಯಾನ್ ಬುದ್ಧನನ್ನು ನಾಶಮಾಡಿದ ತಾಲಿಬಾನ್ ಇಲ್ಲವೇ ಇಸ್ಲಾಮಿಕೇತರ ಸ್ಮಾರಕಗಳನ್ನು ನಾಶಮಾಡುತ್ತಿರುವ ಐಎಸ್‌ಐಎಸ್ ಮನೋಧರ್ಮಕ್ಕೆ ಅದು ಕರೆದೊಯ್ಯಬಹುದು. 'ಜನನುಡಿ' ಎಂದರೆ ಜನ ಆಡುವ ಭಾಷೆ ಮಾತ್ರವಲ್ಲ, ತಮ್ಮ ಲೋಕದ ಬಗ್ಗೆ ಧರ್ಮ ಫಿಲಾಸಫಿ ಬಗ್ಗೆ ಮಾಡುವ ಚಿಂತನೆಯ ನುಡಿಗಟ್ಟು ಸಹ. ಇಲ್ಲಿ ಸೇರಿರುವ ನಾವು ಈ ಜನನುಡಿಗಟ್ಟಿನ ಆರಾಧಕರು. ಅದನ್ನು ಹುಡುಕುವವರು. ಅದರ ನಿಜವಾದ ವಾರಸುದಾರರು. ನಾನು ಸೂಫಿ, ನಾಥ, ಶಾಕ್ತ, ಆರೂಢ ಪಂಥಗಳ ಮೇಲೆ ಕೆಲಸ ತುಸು ಮಾಡಿರುವೆ. ಇಲ್ಲಿಗೆ ಸಮೀಪವಿರುವ ಕದ್ರಿಗುಡ್ಡೆಗೆ ಹಲವಾರು ಬಾರಿ ಬಂದಿರುವೆ. ಇವತ್ತು ಬೆಳಗ್ಗೆ ಕೂಡ ಹೋಗಿಬಂದೆ. ಅಲ್ಲಿರುವ ಒಬ್ಬ ನಾಥಯೋಗಿಯ ಹೆಸರಿನಲ್ಲಿ 'ಪೀರ್' ಎಂಬ ಅಂಕಿತವಿದೆ. ಸೂಫಿಗುರುವಿನ ಈ ಅಂಕಿತ ಎಲ್ಲಿಂದ ಬಂತು? ಈ ಪಂಥಗಳು ನನ್ನ ಧರ್ಮಕ್ಕೆ ಸಂಬಂಧಿಸಿದವೊ ಅಲ್ಲವೊ ಎಂಬ ಪ್ರಶ್ನೆಯನ್ನು ಹುಟ್ಟಿಸಲಿಲ್ಲ, ಇವು ನಾನು ಬದುಕುತ್ತಿರುವ ಸಮಾಜದ ಪರಂಪರೆಗಳು. ಅವುಗಳ ಸಹಜ ವಾರಸುದಾರ ನಾನು ಎಂಬ ಭಾವದಿಂದ ನಾನವನ್ನು ಅಧ್ಯಯನ ಮಾಡಿದೆ. ಕರ್ನಾಟಕದ ಮೊಹರಂ ಪರಂಪರೆಯಲ್ಲಿ, ಹಸನ್ ಹುಸೇನರ ಮೇಲೆ ಹಾಡುವ ಸಾವಿರಾರು ಶಾಹಿರರಲ್ಲಿ ಅರ್ಧಕ್ಕಿಂತಲೂ ಹೆಚ್ಚಿನವರು ಮುಸ್ಲಿಮರಲ್ಲ. ಇದು ನಮ್ಮ ಜನಸಾಮಾನ್ಯರು ಕೂಡಿ ಬದುಕುತ್ತ ಹುಟ್ಟಿಸಿರುವ ಜನಸಂಸ್ಕೃತಿ.


ಮೂಲಭೂತವಾದ ಮತೀಯವಾದಗಳ ಸುಳಿಗೆ ಸಿಕ್ಕ ತರುಣ ತರುಣಿಯರಲ್ಲಿ ನಮ್ಮ ಜನಸಂಸ್ಕೃತಿ ಸೃಷ್ಟಿಸಿರುವ ಅತ್ಯುತ್ತಮ ಹಾಡು, ಕಲೆ, ಚಿಂತನೆಗಳ ಸಂವೇದನೆಯೇ ನಾಶವಾಗಿದೆ. ಇಂತಹವರೆ ಕಲಬುರ್ಗಿ ಕೊಲೆಗೆ, ಅನಂತಮೂರ್ತಿಯವರ ಸಾವಿಗೆ ಸಂಭ್ರಮಿಸಿದವರು. ನಮ್ಮ ಸಾಂಸ್ಕೃತಿಕ ಬಹುತ್ವದ ಬಗ್ಗೆ ಅವರಲ್ಲಿ ಅರಿವಿದ್ದಿದ್ದರೆ ಈ ಸಂಭ್ರಮ ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಸಂಘಪರಿವಾರ ಸಿದ್ಧಪಡಿಸುವ ಪಠ್ಯಪುಸ್ತಕಗಳಲ್ಲಿ ಭಾರತದ ಬಹುತ್ವದ ವ್ಯವಸ್ಥಿತ ನಾಶವಿರುತ್ತದೆ. 'ಸಬ್‌ಕಾ ಸಾಥ್ ಸಬಕಾ ವಿಕಾಸ್' ಎಂದು ನಮ್ಮ ಪ್ರಧಾನಮಂತ್ರಿ ಹೇಳುತ್ತಾರೆ. ಆದರೆ ಅವರ ಪರಿವಾರದವರು ತಮಗಿಷ್ಟವಿಲ್ಲದ ಎಲ್ಲವನ್ನೂ ದ್ವೇಷಿಸಲು ನಾಶಮಾಡಲು ಪ್ರಚೋದಿಸುತ್ತಿದ್ದಾರೆ. ಎಲ್ಲ ಧರ್ಮದ ಜನರು ಹೋಗುತ್ತಿದ್ದ ಸೂಫಿಪಂಥದ ಜಾಗವಾಗಿದ್ದ ಬಾಬಾಬುಡನಗಿರಿಯನ್ನು ದತ್ತಪೀಠ ಮಾಡಿ ಬ್ರಾಹ್ಮಣ ಪುರೋಹಿತರನ್ನು ನೇಮಕ ಮಾಡಬೇಕೆಂದು ಕೇಳುತ್ತಿರುವುದು ಒಂದು ನಿದರ್ಶನವಷ್ಟೆ. ಮತ-ಧರ್ಮದ ಹೆಸರಲ್ಲಿ ಜನರನ್ನು ವಿಭಜಿಸಿ, ದ್ವೇಷ ಹರಡುವುದರಿಂದ ಬಲಿಷ್ಠ ಭಾರತ ಕಟ್ಟುವುದಕ್ಕೆ ಸಾಧ್ಯವೇ? ದೇಹದ ಒಂದಂಗ ವಿಕಲವಾದರೆ ದೇಹವು ಆರೋಗ್ಯವಾಗಿರುವುದು ಸಾಧ್ಯವೇ? ನೆಮ್ಮದಿಯ ಸಮಾಜ ಕಟ್ಟುವುದು ಎಂದರೆ, ಸಾಂಸ್ಕೃತಿಕ ವೈವಿಧ್ಯದ ನಡುವೆ ಪರಸ್ಪರ ಕೊಡುಕೊಳುವ ಸಹನಶೀಲತೆಯನ್ನು ಮೌಲ್ಯವಾಗಿಸುವುದು; ಅದೇಹೊತ್ತಿಗೆ ನೋವಿಗೆ ಅನ್ಯಾಯಕ್ಕೆ ಒಳಗಾದವರು ಸಮಾನತೆಯ ಸಮಾಜಕ್ಕಾಗಿ ಸಂಘರ್ಷವನ್ನು ಮೌಲ್ಯವಾಗಿಸುವುದು.


5

ಕೊನೆಯದಾಗಿ, ಎರಡು ಸಂಗತಿ ಹೇಳಿ ಮಾತು ಮುಗಿಸುತ್ತೇನೆ. ಜನವರಿ ತಿಂಗಳ ಮೂವತ್ತರಂದು, ತಾತ್ವಿಕ ಭಿನ್ನಮತಕ್ಕಾಗಿ ಜೀವತೆಗೆಯಬಹುದು ಎಂಬ ಕ್ರೌರ್ಯದ ಪರಂಪರೆ ಹಾಕಿದ ಗೋಡ್ಸೆ ಗಾಂಧಿಯವರನ್ನು ಗುಂಡಿಟ್ಟು ಕೊಂದ ದಿನ. ಆ ದಿನದಂದು ಮಂಗಳೂರಿನಲ್ಲಿ 'ಸೌಹಾರ್ದ ಸಾಗರ' ಕಾರ್ಯಕ್ರಮ ಕೋಮುಸೌಹಾರ್ದ ವೇದಿಕೆಯಿಂದ ಹಮ್ಮಿಕೊಳ್ಳಲಾಗಿದೆ.. ಅದರಲ್ಲಿ ನಾಡಿನ ಬಹುಸಂಸ್ಕೃತಿಯ ಪ್ರತಿನಿಧಿಗಳಂತಿರುವ ಕಲಾಭಿವ್ಯಕ್ತಿಗಳ ಪ್ರದರ್ಶನವಿದೆ. ಇದೇ ದಿನ ಜಿ.ಎನ್.ದೇವಿಯವರು ಗಾಂಧೀಜಿ ಉಪ್ಪಿನ ಸತ್ಯಾಗ್ರಹ ಆರಂಭಿಸಿದ ಗುಜರಾತಿನ ದಂಡಿಯಲ್ಲಿ, ಅಸಹನೆಯ ಸಂಸ್ಕೃತಿಯ ವಿರುದ್ಧ ಬಹುತ್ವದ ಸಂಸ್ಕೃತಿಯ ಪರವಾಗಿ, ಭಾರತದ ಎಲ್ಲ ಲೇಖಕರು ಕಲಾವಿದರು ಚಿತ್ರಕಲಾವಿದರು ವಿಜ್ಞಾನಿಗಳು ಸೇರುತ್ತಿರುವ ಕಾರ್ಯಕ್ರಮವಿದೆ. ನಾವು ನೂರು ಗೆಳೆಯರು. ದಂಡಿಗೆ ಹೋಗುತ್ತಿದ್ದೇವೆ. ಈ ಎರಡೂ ಕಾರ್ಯಕ್ರಮಗಳಲ್ಲಿ ಕನ್ನಡದ [illegible] ಭಾಗವಹಿಸಬೇಕೆಂದು ಕೋರುತ್ತೇನೆ. ನಮಸ್ಕಾರ. ■

ಎಲ್ಲರ ಉನ್ನತ ಶಿಕ್ಷಣದ ಹಕ್ಕನ್ನು ಎತ್ತಿಹಿಡಿಯುವ ಚಳವಳಿಯಾಗಿ ರೂಪುಗೊಳ್ಳುತ್ತಿರುವ

Occupy UGC ಚಳವಳಿ





ಕಳೆದ ಕೆಲವು ವಾರಗಳಲ್ಲಿ ದೇಶದ ರಾಜಧಾನಿಯು ಒಂದು ಅತಿದೊಡ್ಡ ವಿದ್ಯಾರ್ಥಿ ಹೋರಾಟವನ್ನು ಕಂಡಿದೆ. ಬೋಧನಾ ಶುಲ್ಕ ಮತ್ತು ಒಟ್ಟಾರೆ ಶಿಕ್ಷಣದ ವೆಚ್ಚದಲ್ಲಿ ಹೆಚ್ಚಳ, ಪದವಿಯಲ್ಲಿ ಅರ್ಥಹೀನ ಸೆಮಿಸ್ಟರೀಕರಣಗಳು ಮತ್ತು ಸಾರ್ವಜನಿಕ ಉನ್ನತ ಶಿಕ್ಷಣದಲ್ಲಿ ಕ್ಷೀಣಿಸುತ್ತಿರುವ ಗುಣಮಟ್ಟ ಹಾಗೂ ಕೆಲಸದ ಅಭದ್ರತೆಯ ಲಾಭ ಪಡೆಯುತ್ತಿರುವ ಮಾರುಕಟ್ಟೆ ಅವಲಂಬಿತ ಕೋರ್ಸ್‌ಗಳು ಇವು ಉನ್ನತ ಶಿಕ್ಷಣವನ್ನು ಹಣವಂತರಿಗೆ ಮಾತ್ರ ಸೀಮಿತಗೊಳಿಸುತ್ತಿದ್ದವು. ಇವೆಲ್ಲವುಗಳಿಂದ ಮೊದಲೇ ಕಷ್ಟದಲ್ಲಿದ್ದ ವಿದ್ಯಾರ್ಥಿ ಸಮುದಾಯವನ್ನು 20ನೇ ಅಕ್ಟೋಬರ್ 2015ರಂದು ಯುಜಿಸಿಯ ಹೊಸದೊಂದು ಆದೇಶವು ರೊಚ್ಚಿಗೆಬ್ಬಿಸಿತು.

ಯುಜಿಸಿಯ ನೆಟ್ (NET) ಯೇತರ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಇಲ್ಲವೆಂಬ ತೀರ್ಮಾನ ಹೋರಾಟ ಹುಟ್ಟಲು ಕಾರಣವಾಯಿತು. ವಿದ್ಯಾರ್ಥಿ ಸಮುದಾಯ ಸಿಟ್ಟಿಗೆದ್ದು ದೇಶದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಪ್ರತಿಭಟನೆ ಮಾಡಿತು. ದೆಹಲಿಯಲ್ಲಿ ಪ್ರತಿಭಟಿಸುತ್ತಿದ್ದ ನೂರಾರು ವಿದ್ಯಾರ್ಥಿಗಳು ಯುಜಿಸಿ ಕಚೇರಿಯ ಹೊರಗೆ ಘೋಷಣೆ ಕೂಗುತ್ತ ಹಾಡುಗಳನ್ನು ಹಾಡುತ್ತ ಪೊಲೀಸರೊಂದಿಗೆ ಮುಖಾಮುಖಿ ಆದರು (ಪೊಲೀಸರು ಲಾಠಿಚಾರ್ಜ್ ಮಾಡಿದಾಗ ಹಲವು ವಿದ್ಯಾರ್ಥಿಗಳು ಗಾಯಗೊಂಡು ಐದು ವಿದ್ಯಾರ್ಥಿಗಳು ಆಸ್ಪತ್ರೆ ಸೇರಿದರು). ಹಾಗೂ ತಮ್ಮ ಬೇಡಿಕೆ ಈಡೇರುವವರೆಗೂ ಇಲ್ಲಿಂದ ಕದಲುವುದಿಲ್ಲ ಎಂದು ನಿರ್ಣಯಿಸಿದರು. ಅದು Occupy UGC ಚಳವಳಿಯಾಗಿ ಹೆಸರು ಪಡೆದುಕೊಂಡಿತು.

ಕೆಲವು ಗಂಟೆಗಳಲ್ಲಿ ದೆಹಲಿಯ ಬೇರೆ ಬೇರೆ ಹಲವು ಕಾಲೇಜು ಹಾಗೂ ವಿವಿಗಳ ವಿದ್ಯಾರ್ಥಿಗಳು ಈ ಹೋರಾಟದ ಜೊತೆ ಸೇರುತ್ತಾಹೋದರು. ನಂತರದ ದಿನಗಳಲ್ಲಿ ದೇಶದ ಇನ್ನಿತರ ಭಾಗಗಳ ವಿದ್ಯಾರ್ಥಿಗಳೂ ಬಂದು ಸೇರಿಕೊಂಡರು. ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿದ್ಯಾರ್ಥಿಗಳು, ನಾರ್ಥನ್ ಹಿಸ್ಟನ್ ಹಿಲ್ ವಿಶ್ವವಿದ್ಯಾಲಯ, ಜಾಧವ್‌ಪುರ್ ವಿವಿ, ಅಂಬೇಡ್ಕರ್ ವಿವಿ, ಜೆಎನ್‌ಯು, ಸೌಥೇಶಿಯನ್ ವಿವಿ, ಮಹಾತ್ಮ ಗಾಂಧಿ ಅಂತಾರಾಷ್ಟ್ರೀಯ ಹಿಂದಿ ವಿವಿ - ವಾರ್ಧಾ, ದೆಹಲಿ ವಿವಿ, ಹೈದರಾಬಾದ್ ವಿವಿ, ಗುಜರಾತ್ ಕೇಂದ್ರಿಯ ವಿವಿ, ಹರಿಯಾಣ ಕೇಂದ್ರಿಯ ವಿವಿ ಹಾಗೂ ದೇಶದ ಬೇರೆ ಬೇರೆ ಕಡೆಗಳಿಂದ ವಿದ್ಯಾರ್ಥಿ ವೇತನ ಕಡಿತದ ವಿರುದ್ಧದ ಹೋರಾಟದಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡರು.

ನೆಟ್ (NET) ಯೇತರ ಫೆಲೋಶಿಪ್‌ನ ಅಡಿಯಲ್ಲಿ ಯುಜಿಸಿ ಎಮ್‌ಫಿಲ್ ಹಾಗೂ ಪಿಹೆಚ್‌ಡಿ ವಿದ್ಯಾರ್ಥಿಗಳಿಗೆ ತಿಂಗಳಿಗೆ ತಲಾ 5,000 ಹಾಗೂ 8,000 ರೂಪಾಯಿಗಳನ್ನು ಕೊಡುತ್ತಿತ್ತು. ಬಹುಕಾಲದಿಂದ ಹಣದುಬ್ಬರದ ಜೊತೆ ಈ ಮೊತ್ತ ಏರಿಕೆ ಆಗದಿರುವುದರಿಂದ ಹೆಚ್ಚುತ್ತಿರುವ ಶಿಕ್ಷಣದ ಮತ್ತು ಸಂಶೋಧನೆಯ ವೆಚ್ಚವನ್ನು ಭರಿಸಲು ಸಾಲುತ್ತಿಲ್ಲ ಹಾಗೂ ಈ ಸೌಲಭ್ಯ ಇರುವುದು ಕೇವಲ ಕೇಂದ್ರಿಯ ವಿವಿ ವಿದ್ಯಾರ್ಥಿಗಳಿಗೆ ಮಾತ್ರ, ರಾಜ್ಯ ವಿವಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಈ ಸೌಲಭ್ಯ ಇಲ್ಲ, ಈ ಶಿಷ್ಯವೇತನ ಕೇವಲ ಕೇಂದ್ರಿಯ ವಿವಿಯ ಅಧ್ಯಯನ ವಿದ್ಯಾರ್ಥಿಗಳಿಗೆ ಮಾತ್ರ ತಲುಪುತ್ತಿದೆ ಎಂಬ ಕಾರಣದ ಅಡಿಯಲ್ಲಿ ಈ ವೇತನವನ್ನು ನಿಲ್ಲಿಸಬೇಕೆಂಬ ನಿರ್ಣಯವನ್ನು ಸಮಿತಿ ತೆಗೆದುಕೊಂಡಿತ್ತು (ಯುಜಿಸಿ ಈ ಸಮಿತಿಯನ್ನು ಫೆಬ್ರವರಿ 2015ರಲ್ಲಿ ರಚಿಸಿತ್ತು. ವಿಪರ್ಯಾಸವೆಂದರೆ ಈ ಸಮಿತಿಯನ್ನು ನೆಟ್ (NET) ಯೇತರ ವಿದ್ಯಾರ್ಥಿಗಳನ್ನು ಮೇಲಕ್ಕೆತ್ತಲು ರಚಿಸಲಾಗಿತ್ತು).

ಹೀಗಾಗಿ ಮೊದಲು ಹೋದ ಪ್ರತಿಭಟನಾನಿರತ ವಿದ್ಯಾರ್ಥಿಗಳ ನಿಯೋಗವು ಇಟ್ಟ ಬೇಡಿಕೆಗಳು- ವಿದ್ಯಾರ್ಥಿ ವೇತನವನ್ನು ಎಲ್ಲಾ ಸಂಶೋಧನಾ ವಿದ್ಯಾರ್ಥಿಗಳಿಗೂ ನೀಡಬೇಕು, ಅದರ ಮೊತ್ತವನ್ನು ಹೆಚ್ಚಿಸಬೇಕು ಹಾಗೂ ಈ ಸೌಲಭ್ಯವನ್ನು ರಾಜ್ಯ ವಿವಿ ವಿದ್ಯಾರ್ಥಿಗಳಿಗೂ ವಿಸ್ತರಿಸಬೇಕು. ಈ ಮೊದಲು ನೀಡುತ್ತಿದ್ದ ವಿದ್ಯಾರ್ಥಿವೇತನವನ್ನು ಎಲ್ಲರಿಗೂ ನೀಡಲು ಒಪ್ಪಿಕೊಂಡ ಯುಜಿಸಿಯು ನಂತರ ಯಾರಿಗೆ ವಿದ್ಯಾರ್ಥಿ ವೇತನವನ್ನು ನೀಡಬೇಕು ಎಂದು ತೀರ್ಮಾನಿಸಲು ರಿವ್ಯೂ ಕಮಿಟಿಯನ್ನು ರಚಿಸಿತ್ತು. ಈ ರಿವ್ಯೂ ಕಮಿಟಿ ಆಯ್ದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲು ಮಾನದಂಡಗಳನ್ನು (ಮೆರಿಟ್ ಮತ್ತು ಆದಾಯದ ಮಿತಿ) ನಿರ್ಣಯಿಸಿತ್ತು.

ಹೊಸದಾಗಿ ಸೇರಿಸಿದ ಮಾನದಂಡಗಳು ವಿದ್ಯಾರ್ಥಿಗಳನ್ನು ಹೊರಗಿಡುವಂತಹ ಕ್ರಮ ಎಂದು ಅದನ್ನು ವಿರೋಧಿಸಿ ಸುಮಾರು 800 ವಿದ್ಯಾರ್ಥಿಗಳು ಕೇಂದ್ರ ಮಾನವ ಅಭಿವೃದ್ಧಿ ಇಲಾಖೆಯ (MHRD) ಮುಂದೆ ಪ್ರತಿಭಟನೆ ಮಾಡಲು ಹೋದರು. ಸಚಿವೆ ಸ್ಮೃತಿ ಇರಾನಿ ಎಮ್‌ಹೆಚ್‌ಆರ್‌ಡಿ (MHRD) ಹೊರಗಡೆ ಅನಿವಾರ್ಯವಾಗಿ ವಿದ್ಯಾರ್ಥಿಗಳನ್ನು ಭೇಟಿ ಮಾಡಬೇಕಾಯಿತು ಮತ್ತು ಯುಜಿಸಿಯ ಮಾತುಗಳನ್ನೆ ಪುನರ್ ಉಚ್ಚರಿಸಿದರು. ರಿವ್ಯೂ ಕಮಿಟಿಯಲ್ಲಿ ಯಾವುದೇ ವಿದ್ಯಾರ್ಥಿ ಪ್ರಾತಿನಿಧ್ಯ ಇಲ್ಲವೆಂದು ಅವರು ಒಪ್ಪಿಕೊಂಡರು. ಮುಂದೆಯೂ ಯಾವುದೇ ವಿದ್ಯಾರ್ಥಿ ಅದರ ಭಾಗವಾಗಿ ಇರುವುದಿಲ್ಲ ಆದರೆ ವಿದ್ಯಾರ್ಥಿಗಳು ಅಭಿಪ್ರಾಯ, ವಾದಗಳನ್ನು ಕಳಿಸಬಹುದು ಎಂದರು.

ವಿದ್ಯಾರ್ಥಿಗಳು ನವೆಂಬರ್ 18 ರಂದು ಸಾಮೂಹಿಕ ಅಭಿಪ್ರಾಯವನ್ನು ಮಂಡಿಸಿ ಹೊಸ ಮಾನದಂಡಗಳನ್ನು ತಿರಸ್ಕರಿಸಿದರು. ವಿದ್ಯಾರ್ಥಿಗಳ ಪ್ರತಿಭಟನಾ ಮೆರವಣಿಗೆಯನ್ನು ಎಮ್‌ಹೆಚ್‌ಆರ್‌ಡಿ (MHRD) ತಲುಪುವ ಮೊದಲೇ ತಡೆಯಲಾಯಿತು. ಪೊಲೀಸ್ ಪಡೆಯನ್ನು ವಿದ್ಯಾರ್ಥಿಗಳ ಮೇಲೆ ಮತ್ತೆ ಹರಿ ಬಿಟ್ಟು ಲಾಠಿಚಾರ್ಜ್ ಮಾಡಿ, ಪ್ರತಿಭಟನೆಯನ್ನು ಚದುರಿಸಿ, ಬಲಪ್ರಯೋಗದ ಮೂಲಕ ವಿದ್ಯಾರ್ಥಿಗಳನ್ನು ಪಾರ್ಲಿಮೆಂಟ್ ಪೊಲೀಸ್ ಠಾಣೆಗೆ ಕರೆದೊಯ್ಯಲಾಯಿತು. ಹಲವು ವಿದ್ಯಾರ್ಥಿಗಳನ್ನು ಹೊಡೆದು, ತಳ್ಳಿ ಹಾಗೂ ಹಲವು ವಿದ್ಯಾರ್ಥಿನಿಯರ ಬಟ್ಟೆಯನ್ನು ಹರಿಯಲಾಯಿತು. ದೆಹಲಿ ಪೊಲೀಸರ ವರ್ತನೆ ತುಂಬಾ ಹದಗೆಟ್ಟಿದ್ದು, ಹಲವು ಬಾರಿ ಪುರುಷ ಪೊಲೀಸ್ ಅಧಿಕಾರಿಗಳು ವಿದ್ಯಾರ್ಥಿನಿಯರ ಮೇಲೆ ಬಹಿರಂಗವಾಗಿ ಹಲ್ಲೆ ನಡೆಸಿದರು.

ಗಮನಿಸಬೇಕಾದ ಅಂಶವೆಂದರೆ ನೆಟ್ (NET) ಯೇತರ ವಿದ್ಯಾರ್ಥಿಗಳಿಗೆ ಸಿಗುವ ವೇತನದ ಮೊತ್ತ ಈ ಹೆಚ್ಚುತ್ತಿರುವ ಬೆಲೆಯೇರಿಕೆ ಕಾಲದಲ್ಲಿ ತುಂಬಾ ಕಡಿಮೆಯದ್ದಾಗಿದ್ದರೂ ಅದು ಕುಟುಂಬದ ವಿಶೇಷ ನೆರವಿಲ್ಲದೇ ವಿದ್ಯಾಭ್ಯಾಸ ಮಾಡಬೇಕಾಗಿ ಬರುವ ಸ್ವಾವಲಂಬಿತ ದಲಿತ, ಆದಿವಾಸಿ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರು ಹಾಗೂ ವಿದ್ಯಾರ್ಥಿನಿಯರ ಜೀವನಾಧಾರವಾಗಿತ್ತು. ವರ್ಗ, ಜಾತಿ ಹಾಗೂ ಲಿಂಗ ಆಧಾರಿತ ದಮನಗಳು ಈ ದೇಶದ ಹಲವಾರು ಜನರನ್ನು ಶಿಕ್ಷಣದಿಂದ ದೂರವಿಟ್ಟಿದೆ ಹಾಗೂ ಹಲವಾರು ಅಸಮಾನತೆಗಳಿಂದ ಹೊರಬರಲು ಇರುವ ಒಂದೇ ಅವಕಾಶ ಶಿಕ್ಷಣ. ಶಿಕ್ಷಣವನ್ನು ಈ ಜನರಿಂದ ಕಸಿದುಕೊಳ್ಳುವುದು ಅಪರಾಧವೇ ಸರಿ. ಅದು ಏನೇ ಇರಲಿ ಕೇವಲ 4.5% ಭಾರತೀಯ ವಿದ್ಯಾರ್ಥಿಗಳು ಉನ್ನತ ಶಿಕ್ಷಣದ ಮಟ್ಟಕ್ಕೆ ಬರುತ್ತಾರೆ. ಅದರಲ್ಲೂ ಸಂಶೋಧನೆಗೆ ಬರುವ ವಿದ್ಯಾರ್ಥಿಗಳ ಸಂಖ್ಯೆ ಇನ್ನು ಕಡಿಮೆ. ಹಾಗಾಗಿ ಸರ್ಕಾರ ಈ ವಿದ್ಯಾರ್ಥಿಗಳಿಗೆ ಬೆಂಬಲವನ್ನು ನಿಲ್ಲಿಸಿದರೆ ತಮ್ಮ 25ರ ವಯೋಮಾನದಲ್ಲಿ ಅವರು ಜೀವನ ನಡೆಸಲು ಇತರ ದಾರಿಗಳನ್ನು ಕಂಡುಕೊಳ್ಳಬೇಕಾಗುತ್ತದೆ ಅಥವಾ ಶಿಕ್ಷಣವನ್ನು ಅರ್ಧದಲ್ಲೇ ಕೈಬಿಡಬೇಕಾಗುತ್ತದೆ. ಇದರ ಪರಿಣಾಮ ವಿಶ್ವವಿದ್ಯಾಲಯಗಳಲ್ಲಿ ನಡೆಯುವ ಸಂಶೋಧನೆಯ ಮೇಲೂ ಆಗುತ್ತದೆ. ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಮುದಾಯ ಮೇಲ್ವರ್ಗದವರೇ ಆದರೆ ಸಂಶೋಧನೆಯೂ ಅದೇ ವರ್ಗಕ್ಕೆ ಸೀಮಿತಗೊಳ್ಳುತ್ತದೆ.

ದಲಿತ, ಆದಿವಾಸಿ, ಒಬಿಸಿ, ಧಾರ್ಮಿಕ ಅಲ್ಪಸಂಖ್ಯಾತರು ಹಾಗೂ ಮಹಿಳೆಯರಿಗೆ ಕೊಡಬೇಕಾದ ಉನ್ನತ ಶಿಕ್ಷಣದ ಜವಾಬ್ದಾರಿಯಿಂದ ಸರಕಾರ ಮತ್ತಷ್ಟು ಹಿಂತೆಗೆಯುವ ಅಪಾಯದ ಸೂಚನೆ ಇದು. ಜಿಡಿಪಿಯ ಶೇ.6ರಷ್ಟನ್ನು ಶಿಕ್ಷಣಕ್ಕೆ ಮೀಸಲಿಡುವ ಸಂಬಂಧ ರಾಷ್ಟ್ರೀಯ ಶಿಕ್ಷಣ ನೀತಿಯ ಮೊದಲ ಶಿಫಾರಸ್ಸು ಆಗಿ ಸುಮಾರು 40 ವರ್ಷಗಳೆ ಆಗಿದ್ದರೂ (NEP 1968) ಹಾಗೂ NEP 1986ರಲ್ಲಿ ಅದನ್ನು ಮತ್ತೆ ಒತ್ತಿ ಹೇಳಲಾಗಿದ್ದರೂ (1990 ರಲ್ಲಿ ತಿದ್ದುಪಡಿ), ಅದನ್ನು ಮಾಡುವ ರಾಜಕೀಯ ಇಚ್ಛಾ ಶಕ್ತಿ ಈ ದೇಶದಲ್ಲಿ ಇಲ್ಲ.

ಯುಜಿಸಿಯ ಈ ನಡೆಯನ್ನು, ಡಬ್ಲ್ಯೂಟಿಒ (WTO) ಆದೇಶಗಳಿಗೆ ಭಾರತವು ತಲೆಬಾಗುತ್ತಿರುವುದರ ಜೊತೆಗೆ ನೋಡಬೇಕಾಗಿದೆ. ಇದು ದೇಶದ ಉನ್ನತ ಶಿಕ್ಷಣವನ್ನು ವ್ಯಾಪಾರಿಕರಣ ಹಾಗೂ ಖಾಸಗೀಕರಣಗೊಳಿಸುವ ಕಡೆಗೆ ಇನ್ನೊಂದು ನಡೆ ಅಷ್ಟೇ. ವಿಶ್ವಬ್ಯಾಂಕ್‌ನ ವಿತ್ತೀಯ ಕೊರತೆಯನ್ನು ಕಡಿತಗೊಳಿಸುವ ಒತ್ತಾಯಕ್ಕೆ ಮಣಿಯುವಂತೆ ಭಾರತ ಸರ್ಕಾರ ಹಲವಾರು ಪ್ರಮುಖ ಆರ್ಥಿಕ ಕ್ಷೇತ್ರಗಳಿಗೆ

ಹಿಂದೂಗಳು ದನದ ಮಾಂಸ ತಿನ್ನುವುದು ಪಾಪ; ಇತರೆ ಪ್ರಾಣಿಗಳನ್ನು ತಿನ್ನುವುದು ಪುಣ್ಯ ಕಾರ್ಯ?



ಮಾನವ ಸಮುದಾಯಗಳು ತನ್ನ ಜೀವನ ಪರಿಸರದಲ್ಲಿ ಸಿಗುವ ಸರಕು ಸರಂಜಾಮುಗಳಿಗೆ ಅನುಗುಣವಾಗಿ ತಮ್ಮ ಆಹಾರ ಪದ್ಧತಿಗಳನ್ನು ಅಳವಡಿಸಿಕೊಂಡಿವೆ. ಮಾನವನೊಂದಿಗೆ ಹುಟ್ಟುವ ಪ್ರತಿಯೊಂದು ಪ್ರಾಣಿ-ಪಕ್ಷಿಗಳು ಪ್ರಕೃತಿ ಮಡಿಲಲ್ಲಿ ಸಹಜವಾಗಿ ಬದುಕಬೇಕೆಂಬ ನಿಲುವನ್ನು ಬಹುತೇಕ ಧರ್ಮಗಳು ಪ್ರತಿಪಾದಿಸುತ್ತವೆ. ಆದರೆ, ಮಾನವ ಬೇಟೆ ಸಂಸ್ಕೃತಿ ಆರಿತ ಕಾಲದಿಂದಲೂ ಎಲ್ಲಾ ಬಗೆಯ ಮಾಂಸ ತಿಂದು ಬದುಕುತ್ತಿದ್ದಾನೆ. ಆದುದರಿಂದ, ಪ್ರಾಚೀನ ಕಾಲದಿಂದಲೂ ಮಾನವರು ಹಲವು ಬಗೆಯ ಮಾಂಸಗಳ ಪ್ರಿಯರಾಗಿದ್ದಾರೆ. ಇದೊಂದು ಜಾಗತಿಕ ವಿಷಯವಾಗಿದ್ದು ಆಹಾರ ಸೇವನೆ ವ್ಯಕ್ತಿ ಆಧಾರಿತ ಕುಟುಂಬ ಸಂಸ್ಕೃತಿಯೂ ಆಗಿದೆ. ದನದ ಮಾಂಸ ಸೇವನೆ ಕುರಿತು ಹಿಂದೂ ಧರ್ಮ ಗ್ರಂಥಗಳಲ್ಲಿ ಬರೆದಿರುವ ಪರ-ವಿರೋಧಗಳನ್ನು ಮುಚ್ಚಿಟ್ಟು ನೋಡುವುದಾದರೆ, ಈ ಸಂಸ್ಕೃತಿ ರಾತ್ರೋರಾತ್ರಿ ಹುಟ್ಟಿಕೊಂಡಿರುವ ಅಭ್ಯಾಸಗಳೇನಲ್ಲ, ಸಹಜವಾಗಿ ಮಾನವ ಸಮುದಾಯದೊಳಗಿನ ಘಟಕಗಳಾದ ಕುಟುಂಬಗಳು ರೂಢಿಗತವಾಗಿ ಒಪ್ಪಿರುವ ಆಹಾರ ಪದ್ಧತಿಯಿದು. ದನ ತಿನ್ನುವವರ ಮನಸ್ಸಿನಲ್ಲಿ ಅದೊಂದು ಅಪವಿತ್ರ ಮತ್ತು ಪಾಪಕೃತ್ಯವೆಂಬ ಕಲ್ಪನೆಗಳಿರುವುದಿಲ್ಲ, ಅದನ್ನು ತಿನ್ನುವ ಕುಟುಂಬಗಳು ಒತ್ತಿನ ಉದರ ನಿಮಿತ್ತವಾಗಿ ಸೇವಿಸುತ್ತಾರೆ ಅಥವಾ ವರ್ಷಪೂರ್ತಿ ಅದನ್ನೇ ಪ್ರಧಾನ ಆಹಾರವನ್ನಾಗಿ ಯಾವ ಕುಟುಂಬಗಳು ಸಹ ಸೇವಿಸುವುದಿಲ್ಲ, ದನದ ಮಾಂಸ ತಿನ್ನುವ ಮತ್ತು ತಿನ್ನದಿರುವ ಪ್ರಜಾಸಂಖ್ಯೆಯನ್ನು ನಿರ್ದಿಷ್ಟವಾಗಿ ಗುರುತಿಸಬಹುದು. ಗೋಹತ್ಯೆ ಧರ್ಮ ವಿರೋಧಿ ಅನ್ನುವುದಾದರೆ, ಇತರೆ ಪ್ರಾಣಿಗಳಾದ ಕುರಿ, ಕೋಳಿ, ಮೀನು, ಹಂದಿ ಮತ್ತು-ಕಾಡುಪ್ರಾಣಿಗಳ ಸೇವನೆಯು ಸಹ ಧಾರ್ಮಿಕವಾಗಿ ಮಹಾಪಾಪವಾಗುತ್ತದೆ. ಭಾರತದಲ್ಲಿ ದನದ ಮಾಂಸ ತಿನ್ನುವವರಿಗಿಂತ ಇತರೆ ಮಾಂಸಾಹಾರಿಗಳ ಪ್ರಜಾಸಂಖ್ಯೆ ದೊಡ್ಡದಿದೆ. ಹಾಗಾದರೆ ಇವರೆಲ್ಲರೂ ಸಹ ಅಪವಿತ್ರರಾಗಿ ಬಿಡುವರು. ಈ ಸಂಸ್ಕೃತಿಯನ್ನು ಟೀಕಿಸುವ ತಾಕತ್ತು ಯಾರಿಗೂ ಇಲ್ಲ, ಜಗತ್ತಿನ ಆಹಾರ ಸರಪಳಿಯನ್ನು ಒಮ್ಮೆ ವಿಶ್ಲೇಷಿಸಿದಾಗ ಅಲ್ಲಿ ಚಿತ್ರ-ವಿಚಿತ್ರ ಸಂಸ್ಕೃತಿಗಳಿರುವುದನ್ನು ಕಾಣಬಹುದು. ಭಾರತದಲ್ಲಿಯೇ ಸರಾಸರಿ 60 ಚದುರ ಮೀಟರ್ ಭೂಪ್ರದೇಶವನ್ನು ಸುತ್ತಿದಾಗ 3-4 ಆಹಾರ ಪದ್ಧತಿಗಳು ಎದುರುಗೊಳ್ಳುತ್ತವೆ. ಇಂತಹ ಸಂಸ್ಕೃತಿಗಳು ಪ್ರಾದೇಶಿಕತೆಯ ಸೊಗಡುಗಳನ್ನು ಪ್ರತಿಬಿಂಬಿಸುತ್ತವೆ. ಆದುದರಿಂದ ಭಾರತೀಯ ಆಹಾರ ಪದ್ಧತಿ ಸಹ ಹಲವು ವೈಶಿಷ್ಟ್ಯತೆಗಳನ್ನು ಅಲಂಕರಿಸಿಕೊಂಡಿದೆ.

ಬೌದ್ಧ ಧರ್ಮ ಎಲ್ಲಾ ಬಗೆಯ ಪ್ರಾಣಿಹತ್ಯೆಯನ್ನು ಉಗ್ರವಾಗಿ ವಿರೋಧಿಸಿ, ಅದರ ನಿಯಂತ್ರಣಕ್ಕೆ ಮುಂದಾಯಿತು. ಹಿಂದೂ ಧರ್ಮೀಯರು ದೇವಾನುದೇವತೆಗಳಿಗೆ ದನಗಳನ್ನು ನೇರವಾಗಿ ಬಲಿಕೊಡುವ ಪದ್ಧತಿಯನ್ನು ಬಹು ಶತಮಾನಗಳಿಂದ ನಿಲ್ಲಿಸಿದ್ದಾರೆ. ಇಂದಿಗೂ ಮಾಂಸಾಹಾರಿ ಹಿಂದೂಗಳಿಗೆ ಕೌಟುಂಬಿಕವಾಗಿ ಅಸೌಖ್ಯ ಆದಾಗ ಪ್ರಾಣಿಗಳನ್ನು ಬಲಿಕೊಡಲು ಮುಂದಾಗುತ್ತಾರೆ. ಕೆಲವು ವರ್ಗಗಳು ಹಟ್ಟಿ ದೇವತೆಗಳಿಗೆ ಮೇಕೆ-ಕೋಣಗಳನ್ನು ಸಹ ಹರಕೆ ನೀಡುತ್ತವೆ. ಇವುಗಳನ್ನು ಸಾಮಾನ್ಯವಾಗಿ ಪರಿಶಿಷ್ಟರ ಕೈಗೆ ನೀಡಿ ತಮ್ಮ ಪರವಾಗಿ ಅವುಗಳನ್ನು ಬಲಿ ನೀಡಿಸುತ್ತಾರೆ. ದನಮಾಂಸ ತಿನ್ನುವುದು ಮಹಾಪಾಪವೆಂದು ಆರೋಪಿಸುವವರು ಇದನ್ನು ಮಾತ್ರ ಉಗ್ರದನಿಯಲ್ಲಿ ಖಂಡಿಸುವುದಿಲ್ಲ. ಆರೆಸ್ಸೆಸ್ ಕೇಂದ್ರ ಸ್ಥಾನವಿರುವ ನಾಗಪುರದಲ್ಲಿ ಆಯುಧ ಪೂಜೆ ಮಾಡುವ ಮಾಂಸಾಹಾರಿಗಳು ಸಾವಿರಾರು ಕೋಳಿ, ಮೇಕೆ-ಕುರಿಗಳನ್ನು ಬಲಿನೀಡುತ್ತಾರೆ. ಗೋರಕ್ಷಕರು ಇಂತಹ ರಕ್ತ ಸಮರ್ಪಣಾ ಸಂಸ್ಕೃತಿಯನ್ನು ಕಂಡರೂ ಕಾಣದವರಂತೆ ನಡೆದುಕೊಳ್ಳುತ್ತಿದ್ದಾರೆ. ಹಾಗಾದರೆ, ಅವರದು ಸಹ ಇಬ್ಬಗೆಯ ನೀತಿಯಲ್ಲವೆ? ದನದ ಮಾಂಸ ತಿನ್ನುವ ಪರಿಶಿಷ್ಟರ ಕುಟುಂಬಗಳಿಂದ ಬಂದಿರುವ ಈ ಕಾಲಮಾನದ ಸುಶಿಕ್ಷಿತ ಉದ್ಯೋಗಸ್ಥರ ಮನೆಗಳಲ್ಲಿ ಅದರ ವಾಸನೆಯು ಸಹ ಇರುವುದಿಲ್ಲ. ಅಂತಹ ಕುಟುಂಬಗಳು ಧಾರ್ಮಿಕ ಉನ್ನತೀಕರಣಗಳಿಗಾಗಿ ಪೂಜೆ-ಪುನಸ್ಕಾರ, ಹೋಮ-ಹವನಗಳಿಗೆ ಪ್ರತಿ ವರ್ಷವೂ ಲಕ್ಷಗಟ್ಟಲೆ ಹಣ ಸುರಿದರೂ ಸಹ ಜಾತಿವಾದದ ತಿರಸ್ಕಾರಗಳಿಂದ ಸಂಪೂರ್ಣವಾಗಿ ವಿಮುಕ್ತರಾಗಿಲ್ಲ. ಇವರು ನಗರ ಮತ್ತು ಅರೆನಗರ ಪ್ರದೇಶಗಳಲ್ಲಿ ಬಾಡಿಗೆ ಮನೆ ಪಡೆಯಲು ತಮ್ಮ ಗುರುತುಗಳನ್ನೇ ಮುಚ್ಚಿಡುತ್ತಾರೆ.

ಸಂಪ್ರದಾಯಿಕವಾಗಿ ದನದ ಮಾಂಸ ತಿನ್ನದ ಹಿಂದುಳಿದ

ದಾನದ ಬಿಡುಗಡೆ ಹಾಗೂ ಸಬ್ಸಿಡಿಯನ್ನು ಕಡಿತಗೊಳಿಸಿದೆ. ಸರ್ಕಾರವು ರುಕಟ್ಟೆ ಶಕ್ತಿಗಳಿಗೆ ಮುಕ್ತಗೊಳಿಸಲು ಹೊರಟಿರುವ ಕ್ಷೇತ್ರಗಳಲ್ಲಿ ಉನ್ನತ ಣವು ಒಂದಾಗಿದೆ. ಹೆಚ್ಚು ಹೆಚ್ಚು ಖಾಸಗಿ ವಿವಿಗಳು ದೇಶದಲ್ಲಿ ವಾಗುವಂತೆ ಉತ್ತೇಜಿಸಲಾಗುತ್ತಿದೆ. ಜೊತೆಗೆ ಸರ್ಕಾರವು ಮತ್ತಷ್ಟು ವಿದೇಶಿ ಗಳನ್ನು ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಸ್ವಾಗತಿಸುತ್ತಿದೆ ಹಾಗೂ ವೈಭವೀಕರಿಸುತ್ತಿದೆ. ಬರ್ 2015ರ ಡಬ್ಲ್ಯೂಟಿಒ ಗ್ಯಾಟ್ಸ್ (WTO-GATS) ಸಮಾವೇಶದಲ್ಲಿ ರತ ಸರ್ಕಾರ 160 ಸದಸ್ಯ ರಾಷ್ಟ್ರಗಳಿಗೆ ಭಾರತದಲ್ಲಿ ವಿವಿ ಸ್ಥಾಪಿಸಲು ಮತಿ ನೀಡಿದೆ. ದೇಶಿ ಹಾಗೂ ವಿದೇಶಿ ಬಂಡವಾಳಶಾಹಿ ಶಕ್ತಿಗಳಿಗೆ ಣ ಕ್ಷೇತ್ರವನ್ನು ಲಾಭಕ್ಕಾಗಿ ಮೀಸಲಿಟ್ಟು ಸರ್ಕಾರ ಜನರ ಶಿಕ್ಷಣದ ಹಕ್ಕನ್ನು ನಗೊಳಿಸುತ್ತಿದೆ.



ಈ ಮಾರುಕಟ್ಟೆ "ಸ್ಪರ್ಧೆಯಲ್ಲಿ" ಲಾಭಮಾಡುವ ಘಟಕಗಳಾಗಿರುವ ಖಾಸಗಿ ಗೂ ವಿದೇಶಿ ವಿವಿಗಳು ಸಾರ್ವಜನಿಕ ವಿವಿಗಳಿಗೆ "ಸಮಾನ"ವಾಗಿರಲು ರ್ಕಾರ ಸಾರ್ವಜನಿಕ ವಿವಿಗಳಿಗೆ ಎಲ್ಲಾ ರೀತಿಯ ಅನುದಾನಗಳನ್ನು ಲ್ಲಿಸಬೇಕಾಗುತ್ತದೆ. ಡಬ್ಲ್ಯೂಟಿಒಗೆ (WTO) ಬದ್ಧವಾಗಿರಲು, ಸರ್ಕಾರದ ಟ್ (NET) ಯೇತರ ವಿದ್ಯಾರ್ಥಿ ವೇತನದ ಕಡಿತದ ನಡೆ, ತಯಾರಿ ಬಂತೆ ಕಾಣುತ್ತದೆ. ಆದ್ದರಿಂದ ಈ ನಡೆಯನ್ನು ಸಾರ್ವಜನಿಕ ವಿವಿಗಳನ್ನು ಶಮಾಡಿ ಉನ್ನತ ಶಿಕ್ಷಣದ ಯೋಜಿತ ವ್ಯಾಪಾರೀಕರಣ ಮತ್ತು ಖಾಸಗೀಕರಣಕ್ಕೆ ಡೆಸುತ್ತಿರುವ ಪ್ರಯತ್ನ ಎಂದು ನಾವು ಅರ್ಥಮಾಡಿಕೊಳ್ಳಬೇಕು. ಸಾರ್ವಜನಿಕ ರೋಗ್ಯ ಕ್ಷೇತ್ರದ ಅವನತಿಯೊಂದಿಗೆ ಇರುವ ವಿಚಿತ್ರ ಸಮೀಕರಣವನ್ನು ವು ಗಮನಿಸಬೇಕು. ಹೆಚ್ಚು ಜನರಿಗೆ ಅಗತ್ಯ ಇರುವ ಏಮ್ಸ್ (AIIMS) ದಿಗೊತ್ತಿ, ಮ್ಯಾಕ್ಸ್ (Max) ಮತ್ತು ಫೋರ್ಟಿಸ್ (Fortis) ಸ್ಪಿಟಲ್‌ಗಳಿಗೆ ಬೆಂಬಲ ನೀಡುತ್ತಿರುವುದನ್ನು ಕಾಣಬಹುದಾಗಿದೆ. ಇವೆರಡೂ ಮಾಜಿಕ ಕ್ಷೇತ್ರಗಳಾಗಿದ್ದು ಇವುಗಳಲ್ಲಿ ಖಾಸಗಿಕರಣವೆಂದರೆ ದೇಶದ ಸಮಾನತೆಯ ನಿರಂತರತೆ ಎಂದೇ ಅರ್ಥ.

ಸರ್ಕಾರದ ಈ ನಡೆಯನ್ನು ಅರ್ಥಮಾಡಿಕೊಂಡು ವಿದ್ಯಾರ್ಥಿಗಳು ಶಿಕ್ಷಣದ ಕ್ಕಿಗಾಗಿ ಬಹುದೊಡ್ಡ ಹೋರಾಟವನ್ನು ಮಾಡುತ್ತಿದ್ದಾರೆ. ವಿದ್ಯಾರ್ಥಿ ವೇತನದ ಮೊತ್ತವನ್ನು ಹೆಚ್ಚಿಸಲು ಒತ್ತಾಯ ಮತ್ತು ಆ ಮೊತ್ತವನ್ನು ಬೆಲೆಯೇರಿಕೆಗೆ ಕ್ಕಂತೆ ಹೆಚ್ಚಿಸುವುದು, ಮೆರಿಟ್ ಎಂಬ ಹುಸಿ ಮಾನದಂಡದಿಂದ ಅದನ್ನು ರ್ಪಡಿಸುವುದು, ಎಲ್ಲಾ ವಿವಿ ವಿದ್ಯಾರ್ಥಿಗಳಿಗೆ (ರಾಜ್ಯ ವಿವಿಗಳು ಸೇರಿದಂತೆ) ವೇತನವನ್ನು ಕಲ್ಪಿಸುವುದು ಹಾಗೂ ಮುಖ್ಯವಾಗಿ ಉನ್ನತ ಶಿಕ್ಷಣದ ಸಗಿಕರಣ ಹಾಗೂ ವ್ಯಾಪಾರಿಕರಣಕ್ಕೆ ಒಂದು ಪೂರ್ಣ ತಡೆ ಹಾಕುವುದು ಹೋರಾಟದ ಉದ್ದೇಶ. "# Occpy UGC" ಈಗಾಗಲೇ ದೇಶಾದ್ಯಂತ ಡೆಯುತ್ತಿರುವ ವಿದ್ಯಾರ್ಥಿ ಹೋರಾಟಗಳನ್ನು ತಲುಪಿ ಮತ್ತು ಅವುಗಳೆಲ್ಲವು ಟ್ಟಾಗಿ ಸೇರಿ ಹೋರಾಡಲು ಕರೆ ಕೊಟ್ಟಿದೆ.

('Aaghaaz' ಎಂಬ ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದ ಲೇಖನದ ಾವಾನುವಾದ)

● ರಘುನಂದನ್ ಮತ್ತು ಸಂಜಯ್.
ಕರ್ನಾಟಕ ವಿದ್ಯಾರ್ಥಿ ಸಂಘಟನೆ

ಯಾಕೆ ಯಕ್ಷಗಾನ ಜಾನಪದ ಕಲೆಯಲ್ಲ ಎಂದರೆ...

ಒಂದು ಪತ್ರ

ನಾನು ಹಿಂದಿನ ನನ್ನ ಒಂದು ಪತ್ರದಲ್ಲಿ (ಸಂಚಿಕೆ 09-12-2015) ಕರಾವಳಿಯ ಜಾನಪದ ಕಲೆಯಾದ ಯಕ್ಷಗಾನವನ್ನು ಹಿಂದೂತ್ವವಾದಿಗಳು ತಮ್ಮ ಕೋಮುವಾದ ಹಾಗೂ ವೈದಿಕಪರ ಮೌಢ್ಯಗಳನ್ನು ಹಬ್ಬಿಸಲು ಇತ್ತೀಚಿನ ವರ್ಷಗಳಲ್ಲಿ ಸಾಧನವನ್ನಾಗಿ ಮಾಡಿಕೊಂಡಿದ್ದಾರೆ ಎಂದು ಬರೆದಿದ್ದೆ. ಆದರೆ ಯಕ್ಷಗಾನಕ್ಕೆ 'ಜಾನಪದ ಕಲೆ' ಎಂದು ಕರೆದಿದ್ದಕ್ಕೆ ನನ್ನ ಮಿತ್ರರಾದ ಮೂಡಬಿದ್ರಿಯ ಭಾಸ್ಕರ್ ಬಂಗೇರ ಎಂಬ ತುಳುನಾಡ ಸಂಸ್ಕೃತಿಯ ಸಂಶೋಧಕರು ಆಕ್ಷೇಪ ವ್ಯಕ್ತ ಪಡಿಸಿದ್ದಾರೆ (ಮೂಡಬಿದ್ರಿಯ ಜನಪ್ರಿಯ ಹೋಮಿಯೋಪತಿ ವೈದ್ಯರಾದರು ಇವರು ತಮ್ಮ ಪತ್ರಿಕೆಯ ಅಂಕಣಕಾರ ಯೋಗೇಶ್ ಮಾಸ್ಟರ್ ಇವರ ಮಿತ್ರರೂ ಹೌದು ಹಾಗೂ ತಮ್ಮ ಘನ ಪತ್ರಿಕೆಯಲ್ಲಿ ಬರುವ ಲೇಖನಗಳ ಬಗ್ಗೆ ಬಂಗೇರರು ನನ್ನ ಜೊತೆ ಆಗಾಗ ಚರ್ಚಿಸುತ್ತಿರುತ್ತಾರೆ).

ವೈದಿಕರ ಒಳಗುಟ್ಟನ್ನೆಲ್ಲಾ ಅರಿತಿರುವ ಭಾಸ್ಕರ ಬಂಗೇರರು ಹೇಳುವ ಪ್ರಕಾರ ಯಕ್ಷಗಾನವು ಜಾನಪದ ಕಲೆ ಎನಿಸಿಕೊಳ್ಳುವ ಅರ್ಹತೆ ಹೊಂದಿಲ್ಲ. ಅದರಲ್ಲಿ ಸ್ಥಳೀಯ ಮಾತೃಪ್ರಧಾನ ತುಳು ಸಂಸ್ಕೃತಿಗೆ ಅಥವಾ ಇಲ್ಲಿಯ ನೆಲದ ಗುಣಕ್ಕೆ ಹಾಗೂ ಸ್ಥಳೀಯರ ಜನಜೀವನಕ್ಕೆ ಸಂಬಂಧಪಟ್ಟ ಯಾವುದೇ ಅಂಶಗಳಿಲ್ಲ. ಕೇವಲ ವೈದಿಕರು ಹೆಣೆದಿರುವ ಶುದ್ಧ ಕಾಲ್ಪನಿಕ ಪುರಾಣಗಳ ಮೇಲೆ ಆಧಾರಿತವಾಗಿರುವ ಎಲ್ಲಾ ಯಕ್ಷಗಾನ ಪ್ರಸಂಗಗಳು ಕೇವಲ ವೈದಿಕರ ಜಾಹೀರಾತು ಕಂಪನಿಗಳು ಅಷ್ಟೇ. ಸ್ಥಳೀಯ ವೈದಿಕ ದೇವಸ್ಥಾನಗಳ ಬಗ್ಗೆ ಕಾಲ್ಪನಿಕ ಮಹಿಮೆಯ ಕಥೆ ಕಟ್ಟಿ ಅದನ್ನು ಯಕ್ಷಗಾನದ ಮೂಲಕ ಮುಗ್ಧ ಶೂದ್ರರ ತಲೆಯಲ್ಲಿ ತೂರಿಸಿ ಅವರನ್ನು ಮಾನಸಿಕ ಗುಲಾಮರನ್ನಾಗಿ ಮಾಡಿ ಅರ್ಚಕರು ಸುಲಿಯಲು ಅನುವು ಮಾಡಿಕೊಡುವ ಕಲೆಯಾದ ಯಕ್ಷಗಾನವು ಜಾನಪದ ಕಲೆ ಎನಿಸಿಕೊಳ್ಳಲು ಎಂದಿಗೂ ಸಾಧ್ಯವಿಲ್ಲ ಎಂದು ಬಂಗೇರರು ಹೇಳುತ್ತಾರೆ.



ಯಕ್ಷಗಾನವು ವೈದಿಕರ ಜಾಹೀರಾತು ಕಂಪನಿ ಎನ್ನುವುದಕ್ಕೆ ನನ್ನದೂ ಸಹಮತವಿದೆ. ಯಾವುದೇ ಪ್ರತಿಫಲಾಪೇಕ್ಷೆಯೇ ಇಲ್ಲದೇ ತಮ್ಮ ಸ್ವಂತ ಆದಾಯದಿಂದ ಈವರೆಗೆ ಹಿಂದುಳಿದ ವರ್ಗದ 38 ಅನಾಥ ಮಕ್ಕಳನ್ನು ಸಾಕಿ ವಿದ್ಯೆ ಕಲಿಸಿ ಹೆಣ್ಣು ಮಕ್ಕಳಿಗೆ ಸ್ವಂತ ಖರ್ಚಿನಲ್ಲಿ ಮದುವೆ ಮಾಡಿಸಿ ಬದುಕು ಕಲ್ಪಿಸಿಕೊಟ್ಟ 70 ವರ್ಷ ವಯಸ್ಸಿನ ಸಾರ್ಥಕ ಜೀವನ ಭಾಸ್ಕರ ಬಂಗೇರರದ್ದು. ವಿಚಾರವಾದಿಗಳಾಗಿರುವ ಇವರು ಆದಿಮ ಪ್ರಕೃತಿಯ ಆರಾಧಕರು ಹಾಗೂ ಯೋಗ ಸಾಧಕರು.

ಕೇಸರಿ ಅಜೆಂಡಾದ ಅನುಷ್ಠಾನಕ್ಕೆ ಯಕ್ಷಗಾನವನ್ನು ಬಳಸಿ ಮನೋವೈಜ್ಞಾನಿಕ ಕಾರ್ಯತಂತ್ರ ನಮ್ಮ ಕರಾವಳಿಯಲ್ಲೇ ರೂಪುಗೊಳ್ಳುತ್ತಿರುವುದು ನಿಜ. ಉಡುಪಿಯ ಪೆರ್ಡೂರು ಮೇಳದವರು ಹೊಸ ಹೊಸ ಪ್ರಸಂಗ ಬರೆಯುತ್ತಿದ್ದು ಅದರಲ್ಲಿ ಕೇವಲ ಗೋಪೂಜೆಯಿಂದ ಮಹಿಳೆಯರು ಸ್ವರ್ಗಕ್ಕೇರಿದ ದೃಶ್ಯ ಗೋಹತ್ಯೆಯಿಂದ ಗಂಡಸರು ಘೋರ ನರಕಕ್ಕೆ ಬಿದ್ದ ದೃಶ್ಯ ಅಥವಾ ಮರುಜನ್ಮದಲ್ಲಿ ಕ್ರೂರ ರೋಗದಿಂದ ಬಳಲುವ ದೃಶ್ಯ ಕೃಷ್ಣನು ಗೋವರ್ಧನಗಿರಿ ಎತ್ತಿ ಹಿಡಿದು ಗೋಪೂಜೆಯ ಮಹತ್ವ ವರ್ಣಿಸುವ ದೃಶ್ಯ ಹಿಂದೂ ಧರ್ಮದಲ್ಲಿ ಸಂಸ್ಕೃತ ಭಾಷೆ ಹಾಗೂ ಮಂತ್ರಗಳ ಶಕ್ತಿ, ಹೋಮ ಹವನ ಮಾಡಿ ನಂತರ ಬ್ರಾಹ್ಮಣರಿಗೆ ದಾನ ಧರ್ಮ ಮಾಡಿದ ಮಾತ್ರಕ್ಕೆ ಶೂದ್ರರು ಮುಕ್ತಿ ಪಡೆಯುವ ದೃಶ್ಯ ಗೋಪೂಜೆ ಮಾಡಿದ ದಲಿತರು ಬ್ರಾಹ್ಮಣರಾಗಿ ಮರುಜನ್ಮ ಪಡೆಯುವುದು, ಗೋಮಾಂಸ ಸೇವಿಸಿದ ಮೇಲ್ಜಾತಿಯವರು ತೀರ ಕೆಳಜಾತಿಯಲ್ಲಿ ಹುಟ್ಟುವ ದೃಶ್ಯ ಗೋಮಾಂಸ ಭಕ್ಷಕರು ಎಲ್ಲರೂ ದಾನವರು-ಅಸುರರು-ರಾಕ್ಷಸರು ಎಂಬಂತೆ ತೋರಿಸುವ ದೃಶ್ಯ- ಹೀಗೆ ಎಲ್ಲವೂ ಸಂಪೂರ್ಣ ಹಿಂದೂತ್ವ ಅಜೆಂಡಾದಂತೆಯೇ ಹೊಸ ಯಕ್ಷಗಾನ ಪ್ರಸಂಗ ರಚಿಸಲಾಗುತ್ತಿದೆ. ದಲಿತರನ್ನು ಬ್ರೈನ್‌ವಾಶ್ ಮಾಡಿ ತಮ್ಮ ಕೇಸರಿಕರಣ ಪ್ರಯೋಗದಲ್ಲಿ ಸೇರಿಸಿಕೊಳ್ಳಲು ದಲಿತ ಕಲಾವಿದರನ್ನೂ ಯಕ್ಷಗಾನದ 'ದೇವರ' ಅಥವಾ 'ಋಷಿಯ' ಪಾತ್ರದಲ್ಲಿ ಕುಣಿಸಲಾಗುತ್ತಿದೆ. ಇಷ್ಟೇ ಸಾಕು ಮುಗ್ಧ ದಲಿತ ಯುವಕರನ್ನು ಮರುಳು ಮಾಡಲು!

ಪೌರಾಣಿಕ ಪ್ರಸಂಗಗಳಲ್ಲಿ ಅನವಶ್ಯಕ ಮುಸ್ಲಿಂ ಮತ್ತು ಕ್ರೈಸ್ತ ಪಾತ್ರಗಳು ತುರುಕಿ ಅವರು ವೈದಿಕ ದೇವರನ್ನು ಹಾಗೂ ಹಿಂದೂ ಸಂಸ್ಕೃತಿಯನ್ನು ಅಪಹಾಸ್ಯ ಮಾಡುವ ವಿದೇಶಿ ವಿಲನ್‌ಗಳಂತೆ ಅಥವಾ ಬಫೂನ್‌ಗಳಂತೆ ತೋರಿಸಲಾಗುತ್ತಿದೆ. ವೈದಿಕರ ಪಿತೃ ಪ್ರಧಾನ ಸಂಸ್ಕೃತಿಗೆ ವಿರುದ್ಧವಾಗಿರುವ ತುಳು ಪಾಡ್ದನ ಆಧಾರಿತ ಎಂಬತ್ತು ವರ್ಷ ಹಳೆಯ ಕಥಾ ಪ್ರಸಂಗಗಳಾದ 'ನಾಗಶ್ರೀ ಮಹಿಮೆ' ಹಾಗೂ 'ಕಲ್ಲುರ್ಟಿ ಪ್ರತಾಪ' ಇವೆರಡೂ ಉಡುಪಿ ಕೃಷ್ಣನನ್ನು ಖಳನಂತೆ ತೋರಿಸುವ ಕತೆಗಳಾದುದರಿಂದ ಇತ್ತೀಚಿನ ವರ್ಷಗಳಲ್ಲಿ ಈ ಎರಡೂ ಯಕ್ಷಗಾನ ಪ್ರಸಂಗಗಳನ್ನು ಪ್ರದರ್ಶಿಸಲು ಕೇಸರಿ ಪಡೆಗಳು ಬಿಡುತ್ತಿಲ್ಲ. ಹಾಗಾಗಿ ಸಿನಿಮಾ ಕ್ಷೇತ್ರಕ್ಕೆ ಒಂದು ಸೆನ್ಸಾರ್ ಬೋರ್ಡ್ ಇರುವಂತೆ ಯಕ್ಷಗಾನಕ್ಕೂ ಒಂದು ಸೆನ್ಸಾರ್ ಬೋರ್ಡ್ ಅಗತ್ಯವಿದೆ. ಇಲ್ಲದಿದ್ದರೆ ಕರಾವಳಿಯ ಹಿಂದೂತ್ವ ಪ್ರಯೋಗಶಾಲೆಯಲ್ಲಿ ಸ್ಥಳೀಯ ಜನಪ್ರಿಯ ಕಲೆ ಮತ್ತು ಸಂಗೀತಗಳ ಮೂಲಕ ಶೂದ್ರರನ್ನು ಮಾನಸಿಕ ಹಾಗೂ ಸಾಂಸ್ಕೃತಿಕವಾಗಿ ಸಂಪೂರ್ಣ ವಶೀಕರಣ ಮಾಡಿಕೊಂಡು 'ಗಿನಿ ಪಿಗ್'ಗಳಂತೆ ಬಳಸಿ ಧರ್ಮದ ಮತ್ತೇರಿಸಿ ಮೇಲ್ಜಾತಿ ಸೂತ್ರಧಾರರು ಸಂಪೂರ್ಣ ಸಮಾಜವನ್ನು ತಮ್ಮ ಕಪಿಮುಷ್ಠಿಯಲ್ಲಿ ಇರಿಸಿಕೊಂಡು ಅಲ್ಪಸಂಖ್ಯಾತರ ಮತ್ತು ದಲಿತರ ಜೀವನ ದುರ್ಭರ ಮಾಡುವುದು ಖಂಡಿತ.

– ಆರ್.ಬಿ.ಶೇಣವ, ಮಂಗಳೂರು

ರ್ಗಗಳಿಗೂ ಸಹ ಹೇಳಿಕೊಳ್ಳುವಂತಹ ಉನ್ನತ ಸಾಮಾಜಿಕ ನ್ನಣೆಗಳು ಸಿಕ್ಕಿಲ್ಲ. ಆರ್ಥಿಕ-ಶೈಕ್ಷಣಿಕವಾಗಿ ವರ್ತಿತವಾಗಿರುವ ಅನೇಕ ಮುಸ್ಲಿಮರ ಕುಟುಂಬಗಳು ಕ್ಷರಶಃ ದನದ ಮಾಂಸ ತಿನ್ನುವುದಿಲ್ಲ. ಆದರೂ ಅವರು ಹಿಂದೂಗಳ ಮ್ಲೇಚ್ಛ ಭಾವನೆಗಳಡಿ ತಿರಸ್ಕಾರಗಳಿಗೆ ಗಾಗುತ್ತಿದ್ದಾರೆ. ದನದ ಮಾಂಸ ತಿನ್ನದ ಶೋಷಿತ ಗಳು ಎಷ್ಟೇ ಧಾರ್ಮಿಕ ಔನ್ನತ್ಯ ಪ್ರದರ್ಶನ ಮಾಡಿದರೂ ರನ್ನು ಬ್ರಾಹ್ಮಣ ಸಂಸ್ಕೃತಿ ತನ್ನವರ ಸರಿಸಮಾನರೆಂದು ರಸ್ಕರಿಸುವುದಿಲ್ಲ. ಇಂದಿಗೂ ಹಿಂದೂ ಧರ್ಮದೊಳಗೆ ಪಾದನೆ ಒಂದಿದ್ದರೆ, ಪರಿಪಾಲನೆ ಇನ್ನೊಂದಾಗಿರುತ್ತದೆ. ಶಾದ್ಯಂತ ಮಾಂಸಾಹಾರ ವಿಚಾರದಲ್ಲಿಯೂ ಸಹ ದ್ವಂದ್ವ ತ್ತು ವಿಭಿನ್ನ ನಿಲುವುಗಳು ಪ್ರದರ್ಶನವಾಗುತ್ತಿವೆ. ರಕ್ಷಕರು ಮೊದಲು ಸಂಪೂರ್ಣ ಪ್ರಾಣಿಹತ್ಯೆ ಷೇಧಗಳಿಗೆ ಹೋರಾಡಲು ಮುಂದಾದರೆ, ಅವರ ಪ್ತಕಾರ್ಯ ಸೂಚಿಗಳು ಸೋಲುತ್ತವ. ಅದಕ್ಕಾಗಿ ದನ ದ ಮೇಲ್ವರ್ಗ ಮತ್ತು ಹಿಂದುಳಿದ ವರ್ಗಗಳನ್ನು ರೋಕ್ಷವಾಗಿ ತಮ್ಮ ರಾಜಕೀಯ ಹಿತಾಸಕ್ತಿಗಳಿಗೆ ಧೀಕರಿಸುವ ಹುನ್ನಾರಗಳನ್ನು ಗೋಮಾಂಸದ ಮೂಲಕ ರ್ಗತ ಮಾಡುತ್ತಿದ್ದಾರೆ. ಅಪ್ಪಟ ಸಸ್ಯಾಹಾರಿ ುಟುಂಬಗಳ (ಬ್ರಾಹ್ಮಣರೂ ಸೇರಿದಂತೆ) ಮಕ್ಕಳು ಆಧುನಿಕ ವಪಶ್ಚಿಮ ಪ್ರಭಾವಗಳಿಗೆ ಒಳಗಾಗಿ ಂಸಾಹಾರಿಗಳಾಗಿದ್ದಾರೆ. ಹಾಗೆಯೇ ಮದ್ಯ ವ್ಯಸನಿಗಳೂ ದ್ದಾರೆ. ಅಂತಹವರು ಹಿಂದೂ ಧರ್ಮದ ಪ್ರಾಮಾಣಿಕ ಯಾಯಿಗಳು ಹೇಗಾಗುತ್ತಾರೆ? ಹಾಗೆಯೇ ದನ ತಿನ್ನದ ಂಸಾಹಾರಿಗಳು ಸಹ ಆಗಾಗ ಪ್ರಚೋದನೆಗೆ ಒಳಗಾಗಿ ದನ್ನು ತಿನ್ನುವವರ ವಿರುದ್ಧ ಅಸಹಿಷ್ಣುತೆಗಳನ್ನು ಶಿಸುತ್ತಾರೆ.

ಜಾನುವಾರುಗಳ ಜನಗಣತಿಯನ್ನು ಒಮ್ಮೆ [illegible] ಅನೇಕ ಆಶ್ಚರ್ಯಕರ ಅಂಶಗಳು ಗೋಚರಿಸುತ್ತವೆ. ಸಾಮಾನ್ಯವಾಗಿ ಗಂಡು ಜಾನುವಾರುಗಳಾದ ದನ, ಎಮ್ಮೆ, ಮೇಕೆ ಹಾಗೂ ಹಾಲಿಂಡುವ ದೇಶಿಯ ಹಸು, ಕುರಿ ಮತ್ತು ಆಡುಗಳ ಸಂತಾನೋತ್ಪತ್ತಿಯಲ್ಲಿ ಸಹಜವಾಗಿ ಇಳಿಮುಖತೆ ಉಂಟಾಗಿದೆ. ರೈತಾಪಿ ಕುಟುಂಬಗಳು ತಾವು ಸಾಕಿದ ದನ-ಹಸುಗಳು ಅನುಪಯುಕ್ತವಾದಾಗ ಅವುಗಳನ್ನು ವಿಕ್ರಯಿಸುವ ಮೂಲಕ ಕೊಲ್ಲುತ್ತಿದ್ದೇವೆಂಬ ಕನಿಷ್ಠ ಅಳುಕನ್ನು ಹೊಂದಿರುವುದಿಲ್ಲ, ಅದೊಂದು ಆದಾಯದ ಮೂಲವೆಂದು ಭಾವಿಸಿದ್ದಾರೆ (ಸತ್ತ ದನವನ್ನು ಪುಕ್ಕಟೆಯಾಗಿ ನೀಡುವುದಿಲ್ಲ). ಒಟ್ಟಾರೆ, ಜಾನುವಾರುಗಳ ಇಳಿಮುಖತೆಗೆ ಮಾಂಸ ಸೇವನೆ ಪ್ರಧಾನ ಕಾರಣವಲ್ಲ, ಕೃಷಿ ವಲಯದಲ್ಲಿ ಆಗುತ್ತಿರುವ ಏರುಪೇರುಗಳು ಮತ್ತು ಆಧುನಿಕ ಉಪಕರಣಗಳ ಬಳಕೆಯಿಂದ ಹಾಗೂ ಪ್ರಾಕೃತಿಕ ವೈಪರೀತ್ಯಗಳು ಗಂಡು ದನಗಳ ಇಳಿಮುಖತೆಗೆ ಮೂಲ ಕಾರಣಗಳಾಗಿವೆ. ದೇಶಾದ್ಯಂತ ಇರುವ ಕೋಟಿಗಟ್ಟಲೆ ಬಿಡಾಡಿ ದನಗಳ ಪೈಕಿ ಶೇ. 83ರಷ್ಟು ಗ್ರಾಮೀಣ ಪ್ರದೇಶದಲ್ಲಿವೆ. ಅಂದರೆ, ಅಲ್ಲಿಯೂ ಸಹ ಜಾನುವಾರುಗಳ ಮೇಲಿದ್ದ ವ್ಯಾಮೋಹ ಸಹಜವಾಗಿ ಇಳಿಮುಖವಾಗಿದೆ. ದನದ ಮಾಂಸ ಸೇವನೆಗಳಿಂದ ಅವುಗಳು ಕ್ಷೀಣಿಸಿವೆ ಎಂದರೆ ತಪ್ಪಾದೀತು. ಹಾಲು ಉತ್ಪಾದನೆಯಲ್ಲಿ ದೇಶಿಯ ಹಸುಗಳಿಂದ ಶೇ.26 ಮತ್ತು ಮಿಶ್ರ ತಳಿಗಳಿಂದ ಶೇ.12ರಷ್ಟು ಸಿಗುತ್ತಿದೆ. ಇನ್ನುಳಿದ ಶೇ. 62ರಷ್ಟು ಹಾಲನ್ನು ಎಮ್ಮೆ ಮತ್ತು ಆಡುಗಳು ನೀಡುತ್ತಿವೆ. ಹಾಲು ಸರಬರಾಜುವಿನಲ್ಲಿಯೂ ಸಹ ಹಸುಗಳು ಪ್ರಮುಖವಾಗಿಲ್ಲ.

ಕೋಣನಿಗೆ ಸಾವಿರಲಿ; ಹಸು ಚಿರಂಜೀವಿ ಆಗಲಿ ಎಂಬ ಧೋರಣೆ ಗೋ ಸಂರಕ್ಷಕರ ದನಿಯಾಗಿದೆ. ಗೋ ಮಾತ್ರ ಬದುಕಿ, ಇತರೆ ಪ್ರಾಣಿಸಂಕುಲ ಸಾಯಬೇಕೆ? ವೇದಿಕೆಯ ಪ್ರವಚನಗಳಲ್ಲಿ ಪ್ರಚುರ ಮಾಡುವ ಹಿಂದೂ ಧರ್ಮದ ಪ್ರಾಕೃತಿಕ ಧೋರಣೆಗಳನ್ನು ವಿಮರ್ಶಿಸಿ, ಗೋಸಂರಕ್ಷಕರ ನಡೆಗಳನ್ನು ಗಮನಿಸಿದಾಗ ಅವರೊಳಗೆ ಸಕಲ ಜೀವಿಗಳಿಗೂ ಜೀವಿಸುವ ಸಮಾನ ಅವಕಾಶ ಇಲ್ಲವೆಂದೇ ಪರಿಭಾವಿಸಬೇಕಾಗುತ್ತದೆ. ಪ್ರತಿ ನಗರ-ಗ್ರಾಮಗಳ ಹಬ್ಬಗಳಲ್ಲಿ ಸಾವಿರಾರು ಪ್ರಾಣಿ ಬಲಿ ನೀಡುವುದನ್ನು ಗೋರಕ್ಷಕರು ತಡೆಯುವಲ್ಲಿ ಜಯ ಸಾಧಿಸಿದರೆ, ಗೋ ಹತ್ಯೆ ಸಹ ಸಂಪೂರ್ಣವಾಗಿ ನಿಂತುಹೋಗುತ್ತದೆ. ಸಕಲಜೀವಿಗಳಲ್ಲಿ ಪರಮಾತ್ಮನಿರಬೇಕಾದರೆ ಎಲ್ಲಾ ಪ್ರಾಣಿಗಳ ಮಾಂಸ ಸೇವನೆ ನಿಷೇಧಕ್ಕೆ ಹಿಂದೂ ಧರ್ಮ ಪ್ರಿಯರಿಂದ ಆಗ್ರಹವಾಗಬೇಕು. ಆವಾಗ ಭಾರತ ಪರಿಪೂರ್ಣವಾದ ಅಹಿಂಸಾ ನಾಡಾಗುತ್ತದೆ. ಸಾಧು-ಸಂತರ ಪುಣ್ಯ ನಾಡಿನಲ್ಲಿ ಜನಿಸುವ ಪ್ರತಿಯೊಂದು ಜೀವರಾಶಿಗಳ ನಾಡಿಮಿಡಿತಗಳಿಗೆ ಜಾಗತಿಕ ಮನ್ನಣೆ ಸಿಗುವುದು. ಅನೇಕ ಶಾಖಾಹಾರಿ ಕುಟುಂಬಗಳು ಈರುಳ್ಳಿ, ಬೆಳ್ಳುಳ್ಳಿ, ಅತಿಯಾದ ಸಾಂಬಾರ ಪದಾರ್ಥ, ಕೆಲವೊಂದು ತರಕಾರಿ ಮತ್ತು ಗೆಡ್ಡೆಗಳನ್ನು ಸೇವಿಸುವುದಿಲ್ಲ. ಇಂತಹವರ ಕಟ್ಟುನಿಟ್ಟಿನ ನಡಾವಳಿಕೆಗಳನ್ನು ಹಿಂದೂ ವಿರೋಧಿ ಧೋರಣೆ ಅನ್ನಲಾಗದು. ಇಂತಹ ಗುಣಲಕ್ಷಣಗಳು ದೇಶಾದ್ಯಂತ ಬೇಕಾದಷ್ಟಿವೆ. ಉದಾಹರಣೆಗೆ ಛತ್ತೀಸಘಡದ ಸತ್ನಾಮಿ ಚರ್ಮಕಾರರು ತಮ್ಮದೆಯಾದ ಧಾರ್ಮಿಕ ಪಂಥವೊಂದನ್ನು ಕಟ್ಟಿಕೊಂಡಿದ್ದಾರೆ. ಅವರು ಕೆಂಪು ಬದನೆಕಾಯಿ ತಿನ್ನುವುದಿಲ್ಲ, ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಇವರೆ ಪ್ರಮುಖ ಪಾತ್ರವಹಿಸಿದ್ದರು. ಆದರೂ ಅಸ್ಪೃಶ್ಯರಾಗಿ ಉಳಿದಿದ್ದಾರೆ.

ಪುರೋಹಿತಶಾಹಿಗಳ ಹಿಡಿತದಲ್ಲಿರುವ ಹಿಂದೂ ಧರ್ಮದ ಕಲ್ಪನೆಗಳು ಅವರ ಬದುಕಿನ ಬಂಡವಾಳವಾಗಿದೆ. ಗೋಹತ್ಯೆಯಿಂದ ಅಂತಹ ಹಿಂದೂಗಳ ಪಾವಿತ್ರ್ಯತೆ [illegible] ಪರಿಶಿಷ್ಟರಿಗೆ ಸಾಮಾಜಿಕ ಸಮಾನತೆ ಸಿಕ್ಕಿಲ್ಲ. ಗ್ರಾಮೀಣ ಮತ್ತು ಅರೆ ನಗರ ಪ್ರದೇಶಗಳಲ್ಲಿ ಅವರನ್ನು ದನಗಳಿಗಿಂತಲೂ ಕೀಳಾಗಿ ನೋಡುವ ಪರಿಸರವಿದೆ. ಇವರು ಹೋಟೆಲ್ಲುಗಳಲ್ಲಿ ಪ್ರತ್ಯೇಕವಾಗಿ ಕೂರಬೇಕಿದೆ. ಕ್ಷೌರದಂಗಡಿ ಹಾಗೂ ದವಳಗಳಿಗೆ ಮುಕ್ತ ಪ್ರವೇಶವಿಲ್ಲ. ಹಿಂದೂ ಧರ್ಮೀಯರೆ ನಿರ್ದಯವಾಗಿ ದಮನಿತರ ಹಸುಗೂಸುಗಳನ್ನು ರಾಜಾರೋಷವಾಗಿ ಸುಡುವಾಗ, ಹೆಣ್ಣುಮಕ್ಕಳನ್ನು ಬಹಿರಂಗವಾಗಿ ಅತ್ಯಾಚಾರ ಮಾಡುವಾಗ, ಅನೇಕ ಅನಾಚಾರಗಳನ್ನು ಆಚರಿಸುವವರಿಗೆ ತಮ್ಮ ಧರ್ಮಾಚಾರದ ತಿರುಳು ನೆನಪಿರುವುದಿಲ್ಲ. ಪುರೋಹಿತಶಾಹಿ ವರ್ಗದವರ ನಡೆಗಳು ಈ ದೇಶದ ಸಾಮಾಜಿಕ ಸಮಾನತೆ ಪುನರ್ ನಿರ್ಮಾಣಮಾಡುವತ್ತ ಹೆಜ್ಜೆಯಿಟ್ಟಿಲ್ಲ. ಬಹುಶಃ ಇಟ್ಟಿದ್ದರೆ, ಅಸ್ಪೃಶ್ಯತಾ ಆಚರಣೆ ಇಷ್ಟೊತ್ತಿಗೆ ಸಂಪೂರ್ಣವಾಗಿ ನಾಶವಾಗಿಬಿಡುತ್ತಿತ್ತು. ಈ ದೇಶದಲ್ಲಿರುವಷ್ಟು ಧರ್ಮ ಪ್ರಚಾರದ ವೈಖರಿ ಬೇರೆ ದೇಶಗಳಲ್ಲಿ ಸಿಗದು. ಆದರೂ ಭಾರತೀಯರು ವಿವಿಧ ಕಾರಣಗಳಿಗೆ ಆತ್ಮಹತ್ಯೆ ಮಾಡಿಕೊಳ್ಳುವವರ ಪ್ರಮಾಣ ಜಾಗತಿಕ ಮಟ್ಟದಲ್ಲಿ 12ನೇಯ ಸ್ಥಾನದಲ್ಲಿದ್ದಾರೆ. ಹಾಗಾದರೆ ಇಲ್ಲಿರುವ ಧರ್ಮ ಸಂಸ್ಕೃತಿಗಳು ತಮ್ಮ ಭಕ್ತರ ಮನಸ್ಸಿನ ನಿಯಂತ್ರಕರಾಗಿಲ್ಲ ಎಂಬರ್ಥ ಬರುತ್ತದೆ. ಆಹಾರ ಸೇವನೆ ಕುಟುಂಬದ ಆಯ್ಕೆಯಾಗಿರುತ್ತದೆ. ಅದರ ಮೇಲೆ ಯಾರೊಬ್ಬರ ಯಜಮಾನಿಕೆ ಇರಬಾರದು. ಸಮುದಾಯದ ಮನಸ್ಸುಗಳನ್ನು ಅಸಹಿಷ್ಣುತಾ ಮನೋಧರ್ಮದಡಿ ಕೆಣಕಿದಷ್ಟು ಯಾವ ಧರ್ಮವೂ ವಿಸ್ತಾರ ಕಾಣದೆ ಕ್ಷೀಣಿಸುತ್ತದೆ. ಆವಾಗ ಅಭಿವೃದ್ಧಿಯ ಚಿಂತನೆಗಳು ಮೂಲೆಗುಂಪಾಗುತ್ತವೆ.

● ದಾಸನೂರು ಕೂಸಣ್ಣ
ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಸಂಸ್ಥೆ, ಬೆಂಗಳೂರು

ಹೊಲೆ ಮಾದಿಗರು ಯಾರು?

ಕೊಲುವನೇ ಮಾದಿಗ ಹೊಲಸು ತಿಂಬವನೇ ಹೊಲೆಯ
ಕುಲವೇನೋ ಆವದಿರ ಕುಲವೇನೋ?
ಸಕಲಜೀವಾತ್ಮರಿಗೆ ಲೇಸನೆ ಬಯಸುವ
ನಮ್ಮ ಕೂಡಲಸಂಗನ ಶರಣರೆ ಕುಲಜರು.

- ಬಸವಣ್ಣ

ಇಂಥ ವಚನಗಳು ಮತ್ತು ವಚನಗಳಲ್ಲಿ ವಿವಿಧ ಕಡೆ ಬರುವ ಹೊಲೆ ಮಾದಿಗ ಶಬ್ದಗಳು ಹಾಗೂ ತಳಸಮುದಾಯದ ವಿವಿಧ ದೈವಗಳ ಬಗ್ಗೆ ಬಸವಣ್ಣನವರು ತಿರಸ್ಕರಿಸುವ ರೀತಿಯಿಂದ ಅನೇಕ ದಲಿತ ವಿದ್ವಾಂಸರು ಕೂಡ ಸಿಡಿಮಿಡಿಗೊಂಡಿದ್ದನ್ನು ಕಂಡಿದ್ದೇನೆ, ಕೇಳಿದ್ದೇನೆ. ಮೊನ್ನೆ ಒಬ್ಬರು ದೂರವಾಣಿ ಮೂಲಕ ಸಂಪರ್ಕಿಸಿ ಮೇಲಿನ ವಚನದ ಬಗ್ಗೆ ಸಿಡಿಮಿಡಿಗೊಂಡರು. ತಮ್ಮದು ಮಾದಿಗ ಜಾತಿ. ತಮ್ಮ ಮಗನ ಸಹಪಾಠಿಗಳು 'ಕೊಲ್ಲುವವರು ಮಾದಿಗರು' ಎಂದು ಹೀಯಾಳಿಸುತ್ತಾರೆ ಎಂದು ಹೇಳಿದರು. ಬೃಹನ್ಮಠವೊಂದರ ಗೋಡೆಯ ಮೇಲೆ ಕೂಡ ಈ ವಚನವನ್ನು ಬರೆದದ್ದಕ್ಕೆ ಅಸಮಾಧಾನ ವ್ಯಕ್ತಪಡಿಸಿದರು. ನಿಮ್ಮ ಅಭಿಪ್ರಾಯವೇನು ಎಂದು ಕೇಳಿದರು. ನನ್ನ ಅಭಿಪ್ರಾಯ ಏನು ಎಂಬುದನ್ನು ಕೇಳುವುದಕ್ಕೂ ಅವರಿಗೆ ತಾಳ್ಮೆ ಇರಲಿಲ್ಲ. 'ಮಾದಿಗರು ಎಂದಾದರೂ ಕೊಲ್ಲುವುದನ್ನು ನೋಡಿದ್ದೀರಾ? ಹೊಲೆಯರು ಹೊಲಸು ತಿಂಬುವುದನ್ನು ನೋಡಿದ್ದೀರಾ?' ಎಂದು ಕೇಳಿದೆ. 'ಇಲ್ಲ' ಎಂದರು. 'ಹಾಗಾದರೆ ಕೊಲುವನೇ ಮಾದಿಗ ಹೊಲಸು ತಿಂಬವನೇ ಹೊಲೆಯ ಎಂದು ಬಸವಣ್ಣನವರು ಹೇಳಿದ್ದರಲ್ಲಿ ತಪ್ಪೇನಿದೆ?' ಎಂದು ಪ್ರಶ್ನಿಸಿದೆ. 'ಯಜ್ಞದಲ್ಲಿ ಪ್ರಾಣಿವಧೆ ಮಾಡುವವರ ಮತ್ತು ಕಾಯಕ ಮಾಡದೆ ಯಜ್ಞದೂಟದಲ್ಲೇ ಬದುಕುವವರ ಕುರಿತು ಬಸವಣ್ಣನವರು ಈ ವಚನ ಬರೆದಿದ್ದಾರೆ' ಎಂದು ವಿವರಿಸಿದೆ. ಆದರೂ ಆ ವ್ಯಕ್ತಿಗೆ ತೃಪ್ತಿಯಾಗಲಿಲ್ಲ. ಜನರಲ್ಲಿ ದಲಿತರ ಬಗ್ಗೆ ಕೀಳುಭಾವನೆ ಹುಟ್ಟಿಸುವ ಇಂಥ ವಚನಗಳ ಬಳಕೆ ನಿಲ್ಲಬೇಕು ಎಂದೇ ವಾದಿಸಿದರು.

ಯಜ್ಞದಲ್ಲಿ ಕೊಲ್ಲುವವನೇ ಮಾದಿಗ. ಕಾಯಕ ಮಾಡದೆ ತಿನ್ನುವವನೇ ಹೊಲೆಯ. 'ಕುಲವೇನೋ ಆವದಿರ' ಅಂದರೆ ಕೊಲ್ಲದವರನ್ನು ಮಾದಿಗರು ಎನ್ನುವ ಮತ್ತು ದುಡಿದು ತಿನ್ನುವವರನ್ನು ಹೊಲೆಯರು ಎಂದು ಕರೆಯುವ ಆ ವೈದಿಕರ ಕುಲವೇನೋ ಎಂದು ಬಸವಣ್ಣನವರು ಈ ವಚನದಲ್ಲಿ ಸಾತ್ವಿಕ ಕೋಪ ವ್ಯಕ್ತಪಡಿಸಿದ್ದಾರೆ. ಹಲವು ಹದಿನೆಂಟು ಜಾತಿಗಳ ಕಾಯಕಜೀವಿಗಳು ತಮ್ಮ ಜಾತಿಗಳ ಕುರುಹುಗಳನ್ನು ಕಳೆದುಕೊಂಡು, ಸಕಲಜೀವಾತ್ಮರಿಗೆ ಲೇಸನೆ ಬಯಸುತ್ತ, ನಿರ್ಜಾತಿ ಶರಣಸಂಕುಲದಲ್ಲಿ ಒಂದಾಗಿ ಬದುಕುತ್ತಿರುವ ಕೂಡಲಸಂಗನ ಶರಣರೇ ಕುಲಜರು ಹೊರತಾಗಿ ಇಂಥವರನ್ನು ನಿಂದಿಸುವವರು ಕುಲಜರಲ್ಲ, ಹಾಗೆ ನಿಂದಿಸುತ್ತ ಯಜ್ಞದ ಮೂಲಕ ಹೊಟ್ಟೆಹೊರೆಯುವವರೇ ಹೊಲೆ ಮಾದಿಗರು ಎಂದು ಬಸವಣ್ಣನವರು ಸೂಚಿಸಿದ್ದಾರೆ.

ರಾಜರು ಯಜ್ಞಗಳನ್ನು ವರ್ಷಗಟ್ಟಲೆ ಮಾಡುತ್ತಿದ್ದರು. ವೈದಿಕರು ವರ್ಷಗಟ್ಟಲೆ ಅಲ್ಲೇ ಉಳಿದು ದಕ್ಷಿಣೆ ಪಡೆಯುತ್ತ ಮಾಂಸದೂಟ ಸವಿಯುತ್ತ ಕೂಡುತ್ತಿದ್ದರು. ಇಂಥ ಒಂದು



ಪ್ರಸಂಗ ಕಾಳೀದಾಸನ ಮೇಘದೂತ ಖಂಡಕಾವ್ಯದಲ್ಲಿ ಬರುತ್ತದೆ. ರಂತಿದೇವ ಎಂಬ ರಾಜನ ಯಜ್ಞಕ್ಕಾಗಿ ವೈದಿಕರು ಪ್ರತಿದಿನ ಪಶುಗಳನ್ನು ಕೊಂದು ಅವುಗಳ ಚರ್ಮವನ್ನು ರಾಶಿ ಹಾಕುತ್ತಿದ್ದರು. ವರ್ಷಗಟ್ಟಲೆ ನಡೆದ ಈ ಯಜ್ಞದ ಕೊನೆಯ ದಿನದ ಕೊನೆಯ ಗಳಿಗೆಯಲ್ಲಿ ದೂರದ ನೇಪಾಳದ ಕಡೆಯಿಂದ ವೈದಿಕರ ಗುಂಪೊಂದು ಬಂದಿತು. ಆಗ ಮಾಂಸದ ತುಂಡುಗಳು ಖಾಲಿಯಾಗಿ ಬರಿ ಸೂಪ್ (ಸಂಸ್ಕೃತದ ಈ ಸೂಪ್ ಇಂಗ್ಲಿಷ್ ಭಾಷೆ ಸೇರಿದೆ) ಮಾತ್ರ ಉಳಿದಿತ್ತು. ಇದರಿಂದ ಕೆಂಡಾಮಂಡಲವಾದ ವೈದಿಕರು ರಂತಿದೇವನಿಗೆ ಶಾಪ ಕೊಡಲು ಮುಂದಾದರು. ಆಗ ಭಯಭೀತನಾದ ರಂತಿದೇವ 'ತಾವು ತಡಮಾಡಿ ಬಂದಿದ್ದೀರಿ. ಈ ದೀರ್ಘಕಾಲದ ಯಜ್ಞದಲ್ಲಿ ಅದೆಷ್ಟು ಪಶುಗಳ ಬಲಿ ಕೊಡಲಾಗಿದೆ ಎಂಬುದಕ್ಕೆ ಈ ಚರ್ಮಗಳ ರಾಶಿಯನ್ನು ನೋಡಿರಿ. ಇವುಗಳ ರಕ್ತದಿಂದಲೇ ಹರಿಯುತ್ತಿರುವ ನದಿಯನ್ನು ನೋಡಿರಿ. ಇದು ಚರ್ಮಣ್ವತಿ ನದಿ ಎಂದು ಹೆಸರು ಪಡೆದಿದೆ' ಎಂದು ಮನವಿ ಮಾಡಿದ. (ಆ ಚರ್ಮಣ್ವತಿ ನದಿಯೇ ಇಂದಿನ ಚಂಬಲ್ ನದಿ.)

ಈ ರಾಜರು ಇಷ್ಟೊಂದು ಪಶುಗಳನ್ನು ಎಲ್ಲಿಂದ ತರುತ್ತಿದ್ದರು ಎಂಬುದಕ್ಕೆ ಧರ್ಮಾನಂದ ಕೋಸಂಬಿಯವರ 'ಭಗವಾನ ಬುದ್ಧ' ಗ್ರಂಥದಲ್ಲಿ ಮಾಹಿತಿ ದೊರೆಯುತ್ತದೆ. ಭಗವಾನ ಬುದ್ಧ ಉಪದೇಶ ಮಾಡುತ್ತ ಒಂದು ಗ್ರಾಮಕ್ಕೆ ಹೋದ ವೇಳೆ ರಾತ್ರಿಯಾಗಿತ್ತು. ಅಲ್ಲಿನ ರೈತಾಪಿ ಜನ ಒಬ್ಬರಿಗೊಬ್ಬರು ತಬ್ಬಿಕೊಂಡು ಅಳುತ್ತಿದ್ದರು. ಕಾರಣವಿಷ್ಟೆ ಆ ಪ್ರದೇಶದ ರಾಜ ಯಜ್ಞ ಮಾಡುವುದಾಗಿ ಘೋಷಿಸಿದ್ದ. ದೀರ್ಘ ಕಾಲದ ಆ ಯಜ್ಞಕ್ಕೆ ಬೇಕಾದ ಬಲಿಪಶುಗಳನ್ನು ಸೈನಿಕರು ಬಂದು ಕಂಡ ಕಂಡ ರೈತರ ಮನೆಗಳ ಮುಂದೆ ಕಟ್ಟಿದ ಪಶುಗಳನ್ನು ಹೊಡೆದುಕೊಂಡು ಹೋಗುತ್ತಿದ್ದರು. ಹಾಗೆ ದನಗಳನ್ನು ಹೊಡೆದುಕೊಂಡು ಹೋಗುವಾಗ ರೈತರಿಗೆ ಪರಿಹಾರ ಕೊಡುವುದಿರಲಿ, ಸೌಜನ್ಯಕ್ಕಾಗಿ ಕೇಳುತ್ತಲೂ ಇರಲಿಲ್ಲ! ಯಜ್ಞಹಿಂಸೆಯನ್ನು ತಡೆಯಲು ಬುದ್ಧ ನಿರ್ಧರಿಸಿದ್ದು ಇಂಥ ಕಾರಣಗಳಿಂದ ಎಂಬುದರ ಅರಿವು ನಮಗಾಗದೆ ಇರದು.

'ಹಿಂದೂ ಧರ್ಮಶಾಸ್ತ್ರಕ್ಕೆ ಬುನಾದಿಯಾಗಿರುವ ಮನುಸ್ಮೃತಿಯ ವಸ್ತುನಿಷ್ಠ ಸಮಗ್ರ ಅನುವಾದ' ಎಂದು ಹೇಳಿಕೊಂಡ ದಿವಂಗತ ಶೇಷ ನವರತ್ನ ಅವರು ಮನುಸ್ಮೃತಿಯ ಅನುವಾದವನ್ನು ನಿಜವಾಗಿಯೂ ನಿಷ್ಪಕ್ಷಪಾತಿಯಾಗಿ ಮಾಡಿದ್ದಾರೆ. ಮನು ಎಷ್ಟೊಂದು ಪಕ್ಷಪಾತಿ ಎಂಬುದಕ್ಕೆ ಆತನ ಮನುಸ್ಮೃತಿ ಗ್ರಂಥ ಸಾಕ್ಷಿಯಾಗಿದೆ.

ಮೇಲಿನ ಮೂರೂ ವರ್ಣದವರು ಮಾತ್ರ ಶುದ್ಧ ಮಾಂಸ ಭಕ್ಷಣೆ ಮಾಡಬೇಕು; ಶೂದ್ರರು ಮತ್ತು ಅತಿಶೂದ್ರರಿಗೆ ಇಂಥ ಮಾಂಸಾಹಾರ ಸೇವನೆಗೆ ಅವಕಾಶವಿರಬಾರದು ಎಂಬ ಕುತಂತ್ರದಿಂದ ಮನು ಅನೇಕ ಶ್ಲೋಕಗಳನ್ನು ರಚಿಸಿದ್ದಾನೆ. 'ಯಜ್ಞಹಿಂಸೆ ಎಂಬುದು ಹಿಂಸೆ ಅಲ್ಲ' ಎಂಬುದು ಅವನ ವಾದವಾಗಿದೆ. ಆದರೆ 'ಶೂದ್ರರು ಪ್ರಾಣಿಹಿಂಸೆ ಮಾಡಬಾರದು' ಎಂದು ಉಪದೇಶಿಸುತ್ತಾನೆ. ವೈದಿಕರು ಪ್ರಾಣಿಗಳನ್ನು ಯಜ್ಞದಲ್ಲಿ ಕೊಲ್ಲುವುದು ಧರ್ಮಸಮ್ಮತ, ಆದರೆ ಶೂದ್ರರು ಪ್ರಾಣಿವಧೆ ಮಾಡುವುದು ಧರ್ಮಬಾಹಿರ ಎಂದು ಎಚ್ಚರಿಸುತ್ತಾನೆ.

ಆಹಾರ ಸಂಸ್ಕೃತಿಯ ಮೇಲೆ ಪ್ರತಿಬಂಧ ಹೇರುವ ಕೆಳಗಿನ ಶ್ಲೋಕಗಳು ಮನುವಿನ ವರ್ಣಭೇದ ನೀತಿಗೆ ಕನ್ನಡಿ ಹಿಡಿಯುತ್ತವೆ.

ಪ್ರಾಣಸ್ಯಾನ್ನಮಿದಂ ಸರ್ವಂ ಪ್ರಜಾಪತಿರಕಲ್ಪಯತ್।

ಸ್ಥಾವರಂ ಜಂಗಮಂ ಚೈವ ಸರ್ವಂ ಪ್ರಾಣಸ್ಯ ಭೋಜನಂ॥

(ಮನುಸ್ಮೃತಿ ಅಧ್ಯಾಯ 5 ಶ್ಲೋಕ 28)

(ಈ ಜಗತ್ತಿನಲ್ಲಿರುವ ಸಮಸ್ತ ಸ್ಥಾವರ ಜಂಗಮ ಜೀವಜಂತುಗಳನ್ನು, ಚರಾಚರ ವಸ್ತುಗಳನ್ನು ತಿನ್ನಲಿಕ್ಕೆಂದೇ ಪರಮಾತ್ಮನು ಸೃಷ್ಟಿಸಿದ್ದಾನೆ.)

ಚರಾಣಾಮನ್ನಮಚರಾ ದಂಷ್ಟ್ರಿಣಾಮಪ್ಯದಂಷ್ಟ್ರಿಣಃ।

ಅಹಸ್ತಾಶ್ಚ ಸಹಸ್ತಾನಾಂ ಶೂರಾಣಾಂ ಚೈವ ಭೀರವಃ॥

(ಮನುಸ್ಮೃತಿ ಅಧ್ಯಾಯ 5 ಶ್ಲೋಕ 29)

(ಚಲಿಸುವ ಪಶುಪ್ರಾಣಿಗಳಿಗೆ ಚಲಿಸದಿರುವ ಹುಲ್ಲು ಸಸ್ಯಗಳು ಆಹಾರ. ಕೋರೆದಾಡೆಗಳಿರುವ ಸಿಂಹ ಹುಲಿಗಳಿಗೆ ಕೋರೆದಾಡೆಗಳಿರದ ಜಿಂಕೆ ಇತ್ಯಾದಿಗಳು ಆಹಾರ. ಕೈಗಳಿರುವ ಮನುಷ್ಯರಿಗೆ ಕೈಗಳಿಲ್ಲದ ಪಶುಪ್ರಾಣಿಗಳು ಆಹಾರ. ಶೂರವಾದ ಕ್ರೂರವಾದ ಪ್ರಾಣಿಗಳಿಗೆ ಸಾಧುವಾದ ಭೀರುವಾದ ಪ್ರಾಣಿಗಳು ಆಹಾರ.)

ಮಧುಪರ್ಕೇ ಚ ಯಜ್ಞೇ ಚ ಪಿತೃದೈವತ ಕರ್ಮಣಿ।

ಅತ್ರೈವ ಪಶವೋ ಹಿಂಸ್ಯಾ ನಾನ್ಯತ್ರೇತ್ಯಬ್ರವೀನ್ಮನುಃ॥

(ಮನುಸ್ಮೃತಿ ಅಧ್ಯಾಯ 5 ಶ್ಲೋಕ 41)

(ಮಧುಪರ್ಕದಲ್ಲಿ, ಯಜ್ಞದಲ್ಲಿ, ದೇವ-ಪಿತೃ ಕರ್ಮಗಳಲ್ಲಿ ಮಾತ್ರ ಪಶುಗಳನ್ನು ಕೊಲ್ಲಬೇಕೇ ಹೊರತಾಗಿ ಬೇರೆ ಸಂದರ್ಭಗಳಲ್ಲಿ ಪಶುಹಿಂಸೆ ಸಲ್ಲದು ಎಂದು ಮನುವು ಹೇಳಿದ್ದಾನೆ.)

ಏಷ್ವರ್ಥೇಷು ಪಶೂನ್ ಹಿಂಸನ್ ವೇದತತ್ತ್ವಾರ್ಥವಿದ್ದ್ವಿಜಃ।

ಆತ್ಮಾನಂ ಚ ಪಶುಂ ಚೈವ ಗಮಯತ್ಯುತ್ತಮಾಂ ಗತಿಂ॥

(ಮನುಸ್ಮೃತಿ ಅಧ್ಯಾಯ 5 ಶ್ಲೋಕ 42)

(ಹೀಗೆ ಯಜ್ಞ ಶ್ರಾದ್ಧ ಹಾಗೂ ಮಧುಪರ್ಕ ಮುಂತಾದ ಕಾರ್ಯಗಳಿಗಾಗಿ ಮಾತ್ರ ವೇದಜ್ಞನಾದ ಬ್ರಾಹ್ಮಣನು ಪಶುವನ್ನು ಕೊಂದರೆ ತನ್ನ ಜೊತೆಗೆ ಆ ಪಶುವಿಗೂ ಉತ್ತಮ ಗತಿಯನ್ನುಂಟುಮಾಡುತ್ತಾನೆ.)

ಯಾ ವೇದ ವಿಹಿತಾ ಹಿಂಸಾ ನಿಯತಾಸ್ಮಿಂಶ್ಚರಾಚರೇ।

ಅಹಿಂಸಾಮೇವ ತಾಂ ವಿದ್ಯಾದ್ವೇದಾದ್ಧರ್ಮೋ ಹಿ ನಿರ್ಬಭೌ॥

(ಮನುಸ್ಮೃತಿ ಅಧ್ಯಾಯ 5 ಶ್ಲೋಕ 44)

(ವೇದವಿಹಿತವಾದ ಎಂದರೆ ವೇದಗಳಲ್ಲಿ 'ಯಜ್ಞಗಳಲ್ಲಿ' ಹೇಳಿದ ಹಿಂಸೆಯು ಶಾಸ್ತ್ರನಿಯಮ ರೀತ್ಯಾ ನಡೆಯುವುದರಿಂದ ಅದನ್ನು ಅಹಿಂಸೆಯೆಂದೇ ಪರಿಗಣಿಸಬೇಕು. ಏಕೆಂದರೆ ವೇದಗಳಿಂದಲೇ ಧರ್ಮ ಹುಟ್ಟಿದೆ.)

ಯಜ್ಞಾಯ ಜಗ್ಧಿರ್ಮಾಂಸಸ್ಯೇತ್ಯೇಷ ದೈವೋ ವಿಧಿಃ ಸ್ಮೃತಃ।

ಅತೋಽನ್ಯಥಾ ಪ್ರವೃತ್ತಿಸ್ತು ರಾಕ್ಷಸೋ ವಿಧಿರುಚ್ಯತೇ॥

(ಮನುಸ್ಮೃತಿ ಅಧ್ಯಾಯ 5 ಶ್ಲೋಕ 31)

(ಯಜ್ಞಕ್ಕಾಗಿ ಪಶುವನ್ನು ಕೊಂದು ಮಾಡಿದ ಮಾಂಸಭಕ್ಷಣವು 'ದೈವಿಕರೀತಿ' ಎಂದು ಹೇಳಲ್ಪಟ್ಟಿದೆ. ಇದಕ್ಕೆ ವಿರುದ್ಧವಾಗಿ ಅನ್ಯಸಂದರ್ಭಗಳಲ್ಲಿ ಮಾಡುವ ಅಕಾರಣ ಪಶುವಧೆ ಮತ್ತು ಮಾಂಸಭಕ್ಷಣವು 'ರಾಕ್ಷಸರೀತಿ' ಎಂದು ಹೇಳಲ್ಪಟ್ಟಿದೆ.)

ವೇದ ಪ್ರಮಾಣವಾದ ಮನುಸ್ಮೃತಿಯ ಪ್ರಕಾರ ಶೂದ್ರರಿಗೆ ಯಜ್ಞ ಮಾಡುವ ಹಕ್ಕಿಲ್ಲ. ಆದ್ದರಿಂದ ಅವರು ಪ್ರಾಣಿಹಿಂಸೆ ಮಾಡುವ ಹಾಗಿಲ್ಲ. (ಬಿಸಿದ್ದರೂ ಅವರು ಸತ್ತದ್ದನ್ನೇ ತಿನ್ನಬೇಕು.) ಶೂದ್ರರು ಆಹಾರಕ್ಕಾಗಿ ಪ್ರಾಣಿವಧೆ ಮಾಡಿದರೆ ಅದು ರಾಕ್ಷಸೀ ಕೃತ್ಯ. ಸವರ್ಣೀಯರು ಯಜ್ಞದಲ್ಲಿ ಪ್ರಾಣಿಗಳನ್ನು ಕೊಂದು ತಿಂದರೆ ಅದು ದೈವಿಕರೀತಿ. ದೇವಮಾರ್ಗದಲ್ಲಿ ಪ್ರಾಣಿಗಳನ್ನು ಕೊಲ್ಲುವ ಹಕ್ಕು ವೈದಿಕರಿಗೆ ಮಾತ್ರ ಇದೆ. ಶೂದ್ರರಿಗೆ ಪ್ರಾಣಿಗಳನ್ನು ಆಹಾರವಾಗಿಸುವ ಹಕ್ಕಿಲ್ಲ. ಹೇಗಿದೆ ಮನುಧರ್ಮ ನ್ಯಾಯ?

'ನುಡಿ ಲೇಸು ನಡೆ ಅಧಮವಾದಲ್ಲಿ ಬಿಡಿಸಲಾಗದ ಹೊಲೆ' ಎಂದು ಮಾದಾರ ಚೆನ್ನಯ್ಯನವರು ಹೇಳುತ್ತಾರೆ. ಮನುವಾದಿಗಳು ಬಿಡಿಸಲಾಗದ ಹೊಲೆಯಲ್ಲಿ ಒದ್ದಾಡುತ್ತಿದ್ದಾರೆ. ಹೊಲಗೇರಿಯಲ್ಲಿರುವವರು ಹೊಲೆಯರಲ್ಲ ಮನುವಾದಿಗಳೇ ಹೊಲೆಯರು ಎಂಬುದನ್ನು ಶರಣರು 12ನೇ ಶತಮಾನದಲ್ಲೇ ತೋರಿಸಿಕೊಟ್ಟಿದ್ದಾರೆ.

'ಬೆಟ್ಟದ ಲಿಂಗವ ಕಿರಿದು ಮಾಡಿ ತನ್ನ ಇಷ್ಟಲಿಂಗವ ಕಿರಿದು ಮಾಡುವ ಮೂಳ ಹೊಲೆಯರಿರಾ' ಎಂದು ಅಂಬಿಗರ ಚೌಡಯ್ಯನವರು ಲಿಂಗವಂತರಾದ ಮೇಲೆ ಕೂಡ ಸ್ಥಾವರಲಿಂಗಕ್ಕೆ ಎರಗುವವರನ್ನು ಟೀಕಿಸಿದ್ದಾರೆ. 'ಊರೊಳಗಣ ಹೊಲೆಯ, ಊರ ಹೊರಗಣ ಕುಲಜ' ಎಂದು ಬಾಲ ಸಂಗಣ್ಣ ಅಸ್ಪೃಶ್ಯರನ್ನು ಎತ್ತಿ ಹಿಡಿದಿದ್ದಾರೆ. 'ಸತ್ತುದನೆಳವನೆತ್ತಾ ಹೊಲೆಯ ಹೊತ್ತು ತಂದು ನೀವು ಕೊಲುವಿರಿ' ಎಂದು ಬಸವಣ್ಣನವರು ವೈದಿಕರಿಗೆ ಎಚ್ಚರಿಸಿದ್ದಾರೆ. 'ಸವಣನ ಮನದ ಕೊನೆಯ ಮೊನೆಯ ಮೇಲೆ ಹೊಲೆಯಿದ್ದಿತ್ತಾಗಿ ಜಿನನಿಲ್ಲ' ಎಂದು ಸಕಳೇಶ ಮಾದರಸ ತಿಳಿಸುತ್ತಾರೆ. 'ಅನೀತಿ ದೇವರುಗಳ ಎಡೆಯ ತಿನ್ನುವಂತಹ ಮಾದಿಗರು ನೀವು ಕೇಳಿರೊ' ಎಂದು ಅಂಬಿಗರ ಚೌಡಯ್ಯನವರು ಹೇಳುತ್ತಾರೆ. 'ಚತುರ್ವೇದಿಯಾದಡೇನು ಲಿಂಗವಿಲ್ಲದವನೆ ಹೊಲೆಯ' ಎಂದು ಬಸವಣ್ಣನವರು ಸ್ಪಷ್ಟಪಡಿಸುತ್ತಾರೆ.

'ಹೊಲೆಯರ ಬಾವಿಯಲೊಂದು ಎಲು ನಟ್ಟಿದ್ದಡೆ
ಹೊಲೆಯೆಂಬುದು ಲೋಕವೆಲ್ಲ.
ಹಲವೆಲುವಿದ್ದ ಬಾಯಿ ಒಲವರ 'ಪಕ್ಷಪಾತಿಯಾಗಿ' ನಡಿದಡೆ
ಹೊಲೆಯರ ಬಾವಿಯಿಂದ ಕರಕಷ್ಟ ಕಾಣಾ ರಾಮನಾಥ'

ಎಂದು ಜೇಡರ ದಾಸಿಮಯ್ಯನವರು ಮಾನಸಿಕವಾಗಿ ಕೀಳಾದವರ ಕುರಿತು ತಿಳಿಸುತ್ತಾರೆ.

'ಹೊಲೆಯು ಹೊಲೆಯನೆಂದು ಹೊರಗಿರು ಎಂದೆಂಬರು
ಹೊಲೆಯನೆಂತವನಯ್ಯಾ?
ತನ್ನ ಹೊಲೆಯ ತಾನರಿಯದೆ
ಮುನ್ನಿನವರ ಹೊಲೆಯನರಸುವ
ಭ್ರಷ್ಟರಿಗೆ ಏನೆಂಬೆನಯ್ಯಾ
ಮಹಾದಾನಿ ಕೂಡಲಚೆನ್ನಸಂಗಮದೇವಾ'

ಎಂದು ಚೆನ್ನಬಸವಣ್ಣನವರು ಸವರ್ಣೀಯರ ಮಾನಸಿಕ ಭ್ರಷ್ಟತೆಯನ್ನು ಎತ್ತಿ ತೋರಿಸುತ್ತಾರೆ.

ಹೀಗೆ ಶರಣರು ಭಾಷಾವಿಜ್ಞಾನಿಗಳೂ ಮನೋವಿಜ್ಞಾನಿಗಳೂ ಆಗಿದ್ದರು. ಕಾಳೀದಾಸ ಹೇಳುವಂತೆ ಶಬ್ದ ಮತ್ತು ಅರ್ಥಗಳ ಸಂಬಂಧ ಪಾರ್ವತೀಪರಮೇಶ್ವರರ ಹಾಗೆ ಇಲ್ಲ. ಶಬ್ದವೆಂಬ ಪರಮೇಶ್ವರನಿಗೆ ಅರ್ಥಗಳೆಂಬ ಅನೇಕ ಪಾರ್ವತಿಯರಿದ್ದಾರೆ. ಶಬ್ದವು ಅನೇಕ ಅರ್ಥಗಳನ್ನು ಆಯಾ ಕಾಲದ, ಪರಿಸರದ ಮತ್ತು ಪರಿಸ್ಥಿತಿಯ ಹಿನ್ನೆಲೆಯಲ್ಲಿ ವಿವಿಧಾರ್ಥಗಳನ್ನು ಸ್ಫುರಿಸುತ್ತಲೇ ಇರುತ್ತದೆ ಎಂಬುದನ್ನು ಅರ್ಥವಿಜ್ಞಾನ ವಿವರಿಸುತ್ತದೆ. ಒಂದೇ ಶಬ್ದ ವಿವಿಧಾರ್ಥಗಳನ್ನು ಕೊಡುವುದನ್ನು ವಿವರಿಸುತ್ತದೆ. ಶರಣರು ಹೊಲೆ ಮಾದಿಗ ಶಬ್ದಗಳನ್ನು ಬಳಸಿದ ಕ್ರಮ ವಿನೂತನವಾಗಿದೆ. ಆ ಬಳಕೆಯ ಹಿಂದೆ ದರ್ಶನವಿದೆ, ಮನೋವಿಜ್ಞಾನವಿದೆ, ಶಬ್ದಗಳನ್ನು ಲೀಲಾಜಾಲವಾಗಿ ಬಳಸುವ ಸೃಜನಶೀಲತೆ ಇದೆ. ಯಾರು ಬಹುಜನರನ್ನು ಕೀಳುಮಾಡುತ್ತ ತಾವು ಉನ್ನತ ಕುಲದವರೆಂದು ಸಾವಿರಾರು ವರ್ಷಗಳಿಂದ ಬೀಗುತ್ತಿದ್ದರೋ ಅವರನ್ನು ಕೀಳಾಗಿ ನೋಡುವ ನೈತಿಕ ಧೈರ್ಯವಿದೆ. 'ಕುಲಕ್ಕೆ ತಿಲಕ ನಮ್ಮ ಮಾದಾರ ಚೆನ್ನಯ್ಯ ನಿಮ್ಮಿಂದಧಿಕ ನೋಡಾ, ಕೂಡಲಸಂಗಮದೇವಾ' ಎಂದು ತುಳಿತಕ್ಕೊಳಗಾದವರನ್ನು ದೇವರಿಗಿಂತಲೂ ಮೇಲೆತ್ತಿ ತೋರಿಸುವ ಸೈದ್ಧಾಂತಿಕ ಸಾಮರ್ಥ್ಯವಿದೆ.

ಬಸವಣ್ಣನವರು ಯಾರ ವಿರೋಧಿಗಳೂ ಅಲ್ಲ. ಅವರು ಅನ್ಯಾಯದ ವಿರೋಧಿಗಳು. ಕೆಳಜಾತಿಯವರನ್ನು ಮೇಲ್ಜಾತಿಗೆ ಏರಿಸುವ ಉದ್ದೇಶವೂ ಅವರದಾಗಿರಲಿಲ್ಲ. ಕೆಳಜಾತಿಯವರು ಮತ್ತು ಮೇಲ್ಜಾತಿಯವರು ಒಂದಾಗಿ ನಿಜಮಾನವರಾಗಬೇಕೆಂಬುದೇ ಅವರ ಆಶಯವಾಗಿತ್ತು. ಅವರು ವೈದಿಕ ದೇವತೆಗಳನ್ನು ಅಲ್ಲಗಳೆದಂತೆ ಶೂದ್ರದೈವಗಳನ್ನೂ ಅಲ್ಲಗಳೆದರು. ಏಕದೇವೋಪಾಸನೆಯ ಮೂಲಕ ನಮ್ಮೆಲ್ಲರೊಳಗೆ ಇರುವ ದೇವರು ಒಬ್ಬನೇ, ಒಂದೇ ವಿಶ್ವ, ಒಂದೇ ಮಾನವ ಜನಾಂಗ ಎಂಬ ಸತ್ಯದ ಅರಿವು ಮೂಡಿಸಿದರು.

■ ರಂಜಾನ್ ದರ್ಗಾ

ಕಳೆದುಹೋಗಿದ್ದೆ

ಕಳೆದುಹೋಗಿದ್ದೆ ನಾ ಹರಕಿನೊಳಗೆ
ಹುಡುಕುತ್ತಿದ್ದೆ ನನ್ನ ನಾ ಅದರೊಳಗೆ.

ಬದುಕಿನ ಬ್ಯಾವಿ ಗಂಟಿನೊಳಗೆ
ಎಲ್ಲ ಸಣ್ಣ ದೊಡ್ಡ ಕಲೆಯೊಳಗೆ.

ಬಿಚ್ಚಿದಾಗ ಬಂದ ಮುಗ್ಗುವಾಸನೆಯೊಳಗೆ
ಹೊರಬರದೆ ಒಳಹೋಗದೆ ಅದರೊಳಗೆ.

ಒದ್ದಾಡುತ್ತ ಬಿದ್ದೆ ಆ ಗಂಟಿನೊಳಗೆ
ಮನಸ್ಸೆಂಬ ಸಮುದ್ರದಾಳದೊಳಗೆ.

ವಚನಗಳ ಝೇಂಕಾರ ಅಲೆಯೊಳಗೆ
ನೆಮ್ಮದಿಯ ಆಶಾಕಿರಣ ಮನದೊಳಗೆ.

ಬೀಜ ಬಿತ್ತುವ ಹದಕ್ಕೆ ಮೈ ಅರಳಿತೊಳಗೆ
ಅತಿ ಸಂಭ್ರಮದ ಆಗರ ಕಣ್ಣೆವೆಯೊಳಗೆ.

ಬದುಕಲು ಸಾಕೆನ್ನುವಷ್ಟಿದೆ ಒಂದರೊಳಗೆ
ಜೀವನದ ಸಾರವಿದೆ ಪ್ರತಿ ವಚನದೊಳಗೆ.



■ ಜಯಶ್ರೀ ಸುಕಾಲೆ, ಬೀದರ



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಯಂತ್ರ ಮಂತ್ರ ಮತ್ತು ತಂತ್ರ


ಪ್ರಕೃತಿಯು ಜೀವಿಗಳಿಗೆ ಇತ್ತಿರುವ ಅತ್ಯಪೂರ್ವವಾದ ...ವೆಂದರೆ ಅದು ಸೂಕ್ಷ್ಮ ಸಂವೇದನೆ ಮತ್ತು ಆಂತರಿಕ ...ವಹನ. ನಿಸರ್ಗ ಮತ್ತು ತನ್ನ ಪ್ರಕೃತಿಗೆ ಬದ್ಧವಾಗಿರುವ ...ವುದೇ ಜೀವಿಯೂ ಈ ಕೊಡುಗೆಯಿಂದ ಹೊರತಾ...ೇ ಅದನ್ನು ತನಗೇ ಗೊತ್ತಿಲ್ಲದಂತೆ ಸಹಜವಾಗಿ ಉಪ...ೀಗಿಸುತ್ತಿರುತ್ತದೆ. ನೈಸರ್ಗಿಕ ಸಂವೇದನೆಯಿಂದ ಕೂಡಿದ್ದು ...ಭಾವಿಕವಾದ ಸಂವಹನದಲ್ಲಿ ತೊಡಗಿರುತ್ತದೆ. ಅದೇ ...ದು ಅದ್ಭುತವಾದಂತಹ ಕ್ರಿಯಾಶೀಲತೆಯಾಗಿರುತ್ತದೆ. ...ಕ್ರಿಯಾಶೀಲ ಗುಣವನ್ನು ಯಾವುದೇ ವಿಶ್ವವಿದ್ಯಾಲಯವು, ...ವುದೇ ಉನ್ನತ ವ್ಯಾಸಂಗಗಳು, ಅಧ್ಯಯನಗಳು ...ಸ್ವರಮಟ್ಟಗೆಯೂ ದೊರಕಿಸಿಕೊಡುವುದಿಲ್ಲ. ಅದಕ್ಕೆ ...ಕಾಗಿರುವುದೇ ಅದರ ಇರುವಿಕೆಯ ಪ್ರಜ್ಞೆ ಮತ್ತು ...ಉದ್ದೇಶವಾದಂತಹ ಅರಿವು. ಇಷ್ಟರ ಮಟ್ಟಿಗಿನ ಪೀಠಿಕೆ ...ಕಬೇಕಾದ ಕಾರಣವೇನೆಂದರೆ, ಯಾವುದನ್ನು ಮಾಟ, ...ಂತ್ರ, ತಂತ್ರ ವಿದ್ಯೆಯೆಂದು ಸಾಧಕರು, ಮಾಟಗಾರರು, ...ತ್ರಿಗಳು ಮತ್ತು ಇತರೇ ವಾಮಾಚಾರಿಗಳು ತಾವು ...ಂದಿದ್ದೇವೆಂದು ಘೋಷಿಸಿಕೊಳ್ಳುತ್ತಾರೋ ಅಥವಾ ...ವಂತರೆಂದು ನಿರೂಪಿಸಲು ಯತ್ನಿಸುತ್ತಾರೋ; ಅದು ...ವಾಗಿರಬೇಕು. ಸೂಕ್ಷ್ಮ ಸಂವೇದನೆ ಮತ್ತು ಆಂತರಿಕ ...ವಹನ. ಈ ಗುಣಗಳನ್ನು ಅಥವಾ ಸಾಮರ್ಥ್ಯವನ್ನು ...ಂದಿಲ್ಲದೇ ಇರುವಂತಹ ಯಾರೇ ಆಗಲಿ, ಅದೇನೇ ...ೀಷಿಸಿಕೊಳ್ಳಲಿ ಅದು ವ್ಯರ್ಥವೂ ಹೌದು ಮತ್ತು ...ಥ್ಯೆಯಿಂದ ಕೂಡಿರುವ ಭ್ರಮೆಯೂ ಹೌದು.

ವೈಜ್ಞಾನಿಕ ತಾಂತ್ರಿಕರು

ಈಗಿನ ಬಹಳಷ್ಟು ಜನ ಮೆಟಾ ಫಿಸಿಕ್ಸ್, ಮನಶಾಸ್ತ್ರ ...ಂಗ ವಿಜ್ಞಾನ ಮೊದಲಾದ ಭೌತ ಮತ್ತು ಪರಮಾಣು ...ಜ್ಞಾನಗಳನ್ನು ತಿಳಿದ ಮೇಲೆ; ಅವುಗಳನ್ನು ತಂತ್ರ, ಮಂತ್ರ, ...ಂತ್ರ ಮೊದಲಾದ ತಾಂತ್ರಿಕ ಜ್ಞಾನದ ವೈಜ್ಞಾನಿಕ







...ರಣೆಗಳಿಗೂ, ಆಧ್ಯಾತ್ಮವೇ ಮೊದಲಾದ ಸಿದ್ಧಾಂತಗಳನ್ನು ...ತ್ವಿಕವಾಗಿ ಅರ್ಥೈಸುವಿಕೆಗೂ ಬಳಸುತ್ತಾರೆ. ಇದು ...ಳಷ್ಟು ಬಾರಿ ಕೇವಲ ತಾರ್ಕಿಕ ವಿಶ್ಲೇಷಣೆಗಳಾಗಿರುವವೇ ...ರತು ನಿಜಕ್ಕೂ ಅನುಭವಿತ ಸತ್ಯವಾಗಲಿ ಅಥವಾ ...ಯೋಗಿಕ ಶಾಸ್ತ್ರವಾಗಲಿ ಆಗಿರುವುದಿಲ್ಲ, ಅದೇ ಅಪಾಯ. ... ಚಾನೆಲ್‌ಗಳಲ್ಲಿ ವೈಜ್ಞಾನಿಕ ಜ್ಯೋತಿಷಿ ಎಂದು ...ಗಳಿಸಿಕೊಂಡು, ಪ್ರಖ್ಯಾತವಾಗಿದ್ದ ಸಚ್ಚಿದಾನಂದ ಬಾಬು ...ಯ ಜ್ಯೋತಿಷಿಗಳು ಮನುಷ್ಯನ ಮನಸ್ಸನ್ನು ಮತ್ತಷ್ಟು ...ಧ್ಯಕ್ಕೆ ದಬ್ಬುವಂತಹ ಅಪಾಯಕರ ತಿಳಿವಳಿಕೆಗಳನ್ನು ...ರಿಗೆ ನೀಡುತ್ತಾ ಹೋದಂತೆ, ಸಾಮಾನ್ಯ ಜನರು ...ರ್ಥವಾಗದ ವೈಜ್ಞಾನಿಕ ವಿವರಣೆಗಳಿಗೆ ಬೆರಗಾಗುತ್ತಾರೆ. ...ಚ್ಚಿದಾನಂದ ಬಾಬು ಯಾರೆಂದು ನಿಮಗೆ ನೆನಪಾಗಲಿಲ್ಲ ...ದರೆ ಯಾವ ಯಾವ ಜಾತಕದವರಿಗೆ ಎಲ್ಲೆಲ್ಲಿ, ...ರ್ಯಾರಿಂದ, ಹೇಗೇಗೆ ಅತ್ಯಾಚಾರಗಳಾಗುತ್ತವೆ ಎಂದೆಲ್ಲಾ ... ಕೆಡಿಸಿದ ಮನುಷ್ಯನ ನೆನಪಿಸಿಕೊಳ್ಳಿ.)

ಅರ್ಥವಾಗದಿರುವುದೇ ಉತ್ಕೃಷ್ಟ

ನಾನು 80 ಮತ್ತು 90ರ ದಶಕಗಳಲ್ಲಿ ...ಪ್ರಯೋಗಗಳನ್ನು ಮಾಡುವಾಗ ನಾಟಕಗಳು ಮುಗಿದ ...ಲೆ ಎಷ್ಟೋ ಜನ ಬಂದು ನಮ್ಮ ರಂಗರೂಪಕಗಳು ...ಳ ಚೆನ್ನಾಗಿವೆಯೆಂದು ಹಾಡಿಹೊಗಳುತ್ತಿದ್ದರು. ಹಾಗೆಯೇ ... ಅತ್ಯಂತ ಉನ್ನತ ಮಟ್ಟದ್ದು ಎಂದು ವಾಚಿಕವಾಗಿ ...ಳ ಎತ್ತರದ ಮಾನ್ಯತೆಯನ್ನು ನೀಡುತ್ತಿದ್ದರು. ನಿಮಗೆ ...ದ ಅಂಶ ಇಷ್ಟವಾಯಿತು. ಇದರಿಂದ ನಿಮ್ಮ ತಿಳಿವಳಿಕೆಗೆ ...ದ ವಿಷಯವೇನು ಎಂದು ಮಾತಿನ ವರಸೆಯಲ್ಲಿ ...ದರೆ ಆಗ ನನಗೆ ತಿಳಿಯುತ್ತಿದ್ದದ್ದು ಏನೆಂದರೆ, ಅವರಿಗೆ ...ಪ್ರಯೋಗಗಳು ಏನೇನೂ ಅರ್ಥವಾಗಿರಲಿಲ್ಲ, ಜೊತೆಗೆ ... ಅಂತಹ ಅರ್ಥವೇ ಆಗದಂತಹ ಪ್ರಯೋಗಗಳನ್ನು ...ರಿರುವ ನಾನು ಬೃಹಸ್ಪತಿಯೆಂದೂ, ನನಗೆ ಅತ್ಯಂತ ...ಷ್ಟ ಮಟ್ಟಗಿನ ಜ್ಞಾನವಿದೆಯೆಂದೂ ಅವರು

ಭಾವಿಸುತ್ತಿದ್ದರು. ಅವರಿಗೆ, ಅವರ ಸಾಮಾನ್ಯ ತಿಳಿವಳಿಕೆಗೆ ಎಟುಕಲಿಲ್ಲವೆಂದರೆ ಅದೊಂದು ಅದ್ಭುತವಾದದ್ದು ಎಂಬ ಮಾನ್ಯತೆಯನ್ನು ಯಾವ ಮುಲಾಜೂ ಇಲ್ಲದೇ ಕೊಟ್ಟುಬಿಡುತ್ತಿದ್ದರು. ಈ ಮೂಲಕ ನನ್ನ ಪ್ರಯೋಗಗಳು ವಿಫಲ ಪ್ರಯೋಗಗಳು ಎಂದು ನನಗೆ ಅನ್ನಿಸತೊಡಗಿದವು. ಯಾವ ಸಂಕೇತಗಳ ಮೂಲಕ ನಾನು ಸಂವಹನ ಮಾಡಬೇಕೆಂದುಕೊಂಡಿದ್ದೆನೋ, ಯಾವ ಕೃತಿಗಳ ಮೂಲಕ ಸಂವೇದನೆಯನ್ನು ಜಾಗೃತಗೊಳಿಸಬೇಕೆಂದು ಕೊಂಡಿದ್ದೆನೋ ಅದು ಸಂಪೂರ್ಣ ವಿಫಲವಾಗಿತ್ತು, ನಂತರ ನನ್ನ ತಪ್ಪಿನ ಅರಿವಾಗಿ ಸಂಕೇತಗಳನ್ನು, ಅಸಂಗತ ಪ್ರಯೋಗಗಳನ್ನು ಕಡಿಮೆ ಮಾಡುತ್ತಾ ಆದಷ್ಟು ನೇರವಾದ ಮತ್ತು ಸರಳವಾದಂತಹ ಪ್ರಯೋಗಗಳಿಗೆ ತೊಡಗಿಕೊಂಡೆವು.

ಹಾಗೆಯೇ ವಿದ್ಯಾವಂತರು, ವಿಜ್ಞಾನ ಬಲ್ಲವರೂ ಕೂಡ ಒಪ್ಪಲು ಸಾಧ್ಯವಾಗುವಂತಹ ವಿವರಣೆಗೆ ಸಾಧ್ಯತೆಗಳನ್ನು ಹುಡುಕುತ್ತಾ ಹೋಗುತ್ತಾರೆ. ಒಟ್ಟಾರೆ ಇಲ್ಲಿ ಪ್ರಧಾನವಾಗುವುದು ಒಪ್ಪಿಸಲು ಸಾಧ್ಯವಾಗುವಂತಹ ಗಾಢ ಪಾಂಡಿತ್ಯದ ತರ್ಕ ಶಾಸ್ತ್ರವೇ ಹೊರತು, ಜನರಲ್ಲಿ ಅರಿವನ್ನು ಉಂಟು ಮಾಡುವಂತಹ ಪ್ರಕ್ರಿಯೆ ಎಂದಿಗೂ ಉಂಟಾಗುವುದಿಲ್ಲ. ಅರಿವು ಎಂಬುದು ಒಪ್ಪಿಸಲು ದೊಂಬರಾಟ ಮಾಡುವುದಿಲ್ಲ. ವಿವರಣೆಗಳ ಬಲೆಗಳನ್ನು ಎಸೆಯುವುದಿಲ್ಲ. ಇರುವ ಎಲ್ಲಾ ಶಾಸ್ತ್ರಗಳ ಆಧಾರ ಮತ್ತು ಪ್ರಮಾಣಗಳನ್ನು ಉಪಯೋಗಿಸಿಕೊಳ್ಳಲು ಶತಾಯಗತಾಯ ಪ್ರಯತ್ನ ಮಾಡುವುದಿಲ್ಲ. ಅದು ಬರಿದೇ ಸಹಜವಾಗಿ, ನೇರವಾಗಿ ಅಭಿವ್ಯಕ್ತವಾಗುತ್ತದೆ. ಅದಕ್ಕೆ ಒಪ್ಪಿಸುವ, ಮೆಚ್ಚಿಸುವ ಹಾಗೂ ಎದುರಾಳಿಯದನ್ನು ಖಂಡಿಸಿ ತನ್ನದನ್ನು ಮಂಡಿಸುವ ಧಾರ್ಷ್ಟ್ಯದ ಇರಾದೆ ಇರುವುದಿಲ್ಲ. ಅದು ಬಹಳ ಮುಕ್ತ ಮತ್ತು ಉಚಿತ. ತನ್ನಿಂದ ವ್ಯಕ್ತವಾದುದಕ್ಕೆ ಉಂಟಾದ ಪ್ರತಿಕ್ರಿಯೆಯನ್ನು ತಾನು ಎದುರಿಸುತ್ತದೆ. ನೈಸರ್ಗಿಕವಾಗಿರುವುದು, ಸಹಜವಾಗಿರುವುದು ನೇರ ಮತ್ತು ಸರಳ ಸಂವಹನವನ್ನು ನಡೆಸುತ್ತದೆ.


ಶಾಸ್ತ್ರೀಯ ಅಧ್ಯಯನಗಳ ಮಹತ್ವ

ಹಾಗೆಯೇ ಕೆಲವು ಬಾರಿ ನಿಸರ್ಗದ ಮತ್ತು ಪ್ರಕೃತಿಯ ಮಕ್ಕಳನ್ನು ವಿವೇಚಿಸಲು, ವಿಶ್ಲೇಷಿಸಲು ಶಾಸ್ತ್ರೀಯ ಮತ್ತು ವೈಜ್ಞಾನಿಕ ಅಧ್ಯಯನ ಮಾಡುವವರ ಪ್ರತಿಭೆ ಮತ್ತು ಸೂಕ್ಷ್ಮ ಗ್ರಹಿಕೆ ಖಂಡಿತ ಅಗತ್ಯವಿದೆ. ಆದರೆ, ಪಾಂಡಿತ್ಯ ಮತ್ತು ಶಾಸ್ತ್ರೀಯ ಅಧ್ಯಯನಕ್ಕೂ ಈ ಸರಳ ಮತ್ತು ನೇರ ಅಭಿವ್ಯಕ್ತಿಯೇ ಮೊದಲು. ಸಮಾಜವು ಸಂಸ್ಕೃತೀಕರಣಕ್ಕೆ ಒಳಗಾದಂತೆ, ವಿವಿಧ ರೀತಿಯ ಪ್ರಭಾವ (ಮಾನವ ನಿರ್ಮಿತ)ಗಳಿಗೆ ಸಿಕ್ಕುತ್ತಾ ಹೋದಂತೆ, ಸಮುದಾಯಗಳು ನಾನಾ ರೀತಿಯ ಬದುಕು ಬವಣೆಗಳಿಗೆ ತೆರೆದುಕೊಳ್ಳುತ್ತಾ ವಿಕಾಸವಾಗುತ್ತಾ, ವಿಕೃತವಾಗುತ್ತಾ, ಪ್ರಕೃತಿಯ ಸಂವೇದನೆಗಳಿಗೆ ವಿಮುಖವಾಗುತ್ತಾ ಹೋಗುತ್ತಿದ್ದಂತೆ ಅದನ್ನು ಒಂದು ಹಂತಕ್ಕೆ ಸರಿಯಾದ ರೀತಿಯಲ್ಲಿ ಗ್ರಹಿಸಲು ಶಾಸ್ತ್ರೀಯ ಅಧ್ಯಯನಗಳ ನೆರವು ಬೇಕಾಗುತ್ತದೆ. ಅದೂ ಕೂಡ ತನ್ನ ಗಮ್ಯವನ್ನು ಕಾಣುವುದು ಪ್ರಕೃತಿಯ ಸರಳತೆಯ ಕಡೆಗೆಯೇ.

ಪ್ರಕೃತಿಯನ್ನು ಅಧೀನಗೊಳಿಸಿಕೊಳ್ಳುವ ಯತ್ನ

ಮನುಷ್ಯನ ಸಂಕೀರ್ಣತೆಯು ಬಲಿಯುತ್ತಾ ಹೋದಂತೆಲ್ಲಾ ಪ್ರಕೃತಿಯ ಸೂಕ್ಷ್ಮತಮವಾದಂತಹ ವರದಾನಗಳು ಅವನಿಂದ ದೂರಾಗುತ್ತಾ ಹೋದವು. ಆದರೆ ಇಂತಹದ್ದೊಂದು ಶಕ್ತಿ ಅಥವಾ ಅನುಗ್ರಹವು ಪ್ರಕೃತಿಯಲ್ಲಿ ನಮಗಾಗಿ ಇದೆ ಎಂಬ ಅರಿವು ಉಂಟಾದವರೆಲ್ಲಾ ನಾನಾರೀತಿಯ ಪ್ರಯೋಗಗಳ ಮೂಲಕ ಅವುಗಳನ್ನು ತಾವು ಪಡೆಯಲು ಯತ್ನಿಸುತ್ತಾ ಹೋದರು. ನಾನಾರೀತಿಯ ತಂತ್ರ(ಟೆಕ್ನಿಕ್)ಗಳನ್ನು ಮತ್ತು ಸಾಧನ ಅಥವಾ ಕರಣ(ಇನ್‌ಸ್ಟ್ರುಮೆಂಟ್ಸ್)ಗಳನ್ನು ನೆರವಿಗೆ ತೆಗೆದುಕೊಳ್ಳಲೂ ಯತ್ನಿಸತೊಡಗಿದರು. ಅವುಗಳಲ್ಲಿ ಎಷ್ಟೋ ವಿಫಲವಾದವು. ಕೆಲವು ಸಫಲವಾದವು ಮತ್ತೂ ಒಂದಷ್ಟು ಭಾಗಶಃ

ಯಶಸ್ಸಿಯನ್ನು ಪಡೆದವು. ವಿಜ್ಞಾನಿಗಳು ಇಷ್ಟು ಕಾಲ ಮಾಡಿರುವ ಸಂಶೋಧನೆಗಳಾದರೂ ಏನು? ಪ್ರಕೃತಿಯಲ್ಲಿಯೇ ಇರುವಂತಹ ಶಕ್ತಿ ಮತ್ತು ವಸ್ತುಗಳನ್ನು ತಮ್ಮ ಇಚ್ಛೆಗೆ ಅನುಗುಣವಾಗಿ ಹೇಗೆ ಪರಿವರ್ತಿಸಿಕೊಳ್ಳಬಹುದು ಅಥವಾ ಉಪಯೋಗಿಸಿಕೊಳ್ಳಬಹುದು ಎಂಬುದು ತಾನೇ? ವಿಜ್ಞಾನಿಗಳು ಭೌತ ಮತ್ತು ಸ್ಥೂಲ ಪ್ರಕೃತಿಯ ಶಕ್ತಿಯನ್ನು ಬಳಸಿಕೊಂಡರೆ ತಾಂತ್ರಿಕರು ಅದೇ ಪ್ರಕೃತಿಯ ಸೂಕ್ಷ್ಮ ಮತ್ತು ತರಂಗ ಅಥವಾ ಕಣದ ಶಕ್ತಿಯನ್ನು ಬಳಸಿಕೊಳ್ಳಲು, ಪರಿವರ್ತಿಸಿಕೊಳ್ಳಲು, ಅಧೀನಗೊಳಿಸಿಕೊಳ್ಳಲು ಯತ್ನಿಸಿದರು. ಅವರ ಅಮೂರ್ತ ವಿಚಾರಗಳನ್ನು ಪರಿಕಲ್ಪನೆಗಳ ಹಾಗೂ ಭಾವುಕ ಅಂಶಗಳ ರೂಪದಲ್ಲಿ ಅರ್ಥೈಸಿಕೊಳ್ಳಲು ಯತ್ನಿಸಿದರು. ಆ ಪರಿಕಲ್ಪನೆಗಳನ್ನು ಮತ್ತು ಭಾವುಕ ಅಂಶಗಳನ್ನು ವಿವಿಧ ರೀತಿಗಳಲ್ಲಿ ಭೌತ, ಜೀವ ಮತ್ತು ರಾಸಾಯನಿಕ ವಸ್ತುಗಳ ಜೊತೆಗೆ ಸಮೀಕರಿಸಿಕೊಳ್ಳುತ್ತಾ ಪ್ರಯೋಗಗಳನ್ನು ಮಾಡುತ್ತಾ ಹೋದರು. ಅದರ ಫಲವೇ ಯಂತ್ರ, ಮಂತ್ರ ಮತ್ತು ತಂತ್ರವೆಂದು ನನ್ನ ಗ್ರಹಿಕೆ.



ಶಕ್ತಿಯ ಕ್ರಿಯೆ ಮತ್ತು ಪ್ರತಿಕ್ರಿಯೆ

ಅಸ್ತಿತ್ವದಲ್ಲಿರುವ ಎಲ್ಲದರಲ್ಲೂ ಶಕ್ತಿ ಇರುತ್ತದೆ. ಎಲ್ಲಾ ಶಕ್ತಿಯೂ ಸ್ವಯಂಪ್ರೇರಿತವಾಗಿ ತಮ್ಮ ಪ್ರಭಾವಗಳನ್ನು ಹೊರಸೂಸುತ್ತಿರುತ್ತದೆ. ಯಾವುದೇ ಶಕ್ತಿಯ ಕ್ರಿಯೆ ನಡೆದಾಗ ಅದಕ್ಕೆ ಅನುಕೂಲವಾಗಿಯೋ ಅಥವಾ ಪ್ರತಿಕೂಲವಾಗಿಯೋ ಮತ್ತೊಂದು ಕ್ರಿಯೆ ಉಂಟಾಗುತ್ತದೆ. ಅದೇ ಪ್ರತಿಕ್ರಿಯೆ. ಅಂದಮೇಲೆ ಶಕ್ತಿಯ ಕ್ರಿಯೆ ಮತ್ತು ಅದರ ಪ್ರತಿಕ್ರಿಯೆಗಳನ್ನು ನಾವು ಇಚ್ಛಿಸಿದ ಹಾಗೆ ಯಾಕೆ ನಡೆಯಬಾರದು? ನಾವು ಆರೋಪಿಸುವ ವ್ಯಕ್ತಿ ಅಥವಾ ವಸ್ತುವಿನ ಮೇಲೆಯೇ ಯಾಕಾಗಬಾರದು ಎಂದು ಪ್ರಯತ್ನ ಮಾಡುವುದು ಮನುಷ್ಯನ ಮನಸ್ಸು.

ಶಬ್ದ ತರಂಗಗಳಲ್ಲಿ ಶಕ್ತಿಯಿದೆ. ಹೊರಡಿಸುವ ಸದ್ದು ಮಾಡುವ ನಾಡ, ಹೇಳುವ ಮಾತು ಇವುಗಳೆಲ್ಲವೂ ಅಸ್ತಿತ್ವದ ಹರವಿಗೆ ಬಂದಕೂಡಲೇ ಸೂಕ್ಷ್ಮಾತಿ ಸೂಕ್ಷ್ಮ ಕಣಗಳ ರೂಪದಲ್ಲಿರುವ ಅವು ತರಂಗಗಳನ್ನು ಉಂಟುಮಾಡುತ್ತವೆ. ಇದು ಭೌತಶಾಸ್ತ್ರದಲ್ಲಿ ರೇಡಿಯೋ ತಂತ್ರಜ್ಞಾನದ ಬಗ್ಗೆ ತಿಳಿದಿರುವವರಿಗೆ ಅರ್ಥವಾಗುವುದು ಕಷ್ಟವೇನಲ್ಲ. ಇದು ಸಾಧಕರಿಗೆ ಮಂತ್ರವೆಂಬ ಒಂದು ತಂತ್ರವಾಯಿತು. ಮಂತ್ರಯೋಗ ಅಥವಾ ಮಂತ್ರಸಾಧನ ಎಂದೆಲ್ಲಾ ಆಧ್ಯಾತ್ಮಿಕ ಮತ್ತು ತಾಂತ್ರಿಕದ ಅಭ್ಯಾಸಿಗಳಿಗೆ ಒಂದು ವಿಷಯವನ್ನು ಸಾಮಾನ್ಯವಾಗಿ ಗೊತ್ತು ಮಾಡಿಕೊಂಡಿರುತ್ತಾರೆ. ಮನುಷ್ಯನು ಉಚ್ಚರಿಸುವ ಪ್ರತಿಯೊಂದು ಶಬ್ದವೂ ಶಕ್ತಿಯುಳ್ಳದ್ದು ಮತ್ತು ಅದು ತನ್ನದೇ ಆದಂತಹ ಪ್ರಭಾವವನ್ನು ಉಂಟುಮಾಡುತ್ತದೆ ಎಂದು. ಆದ್ದರಿಂದ ಮನುಷ್ಯ ಅಥವಾ ಯಾವುದೇ ಜೀವಿಯಿಂದ ಹೊರಡುವ ಪ್ರತಿಯೊಂದು ವರ್ಣವೂ (ಸ್ವರ, ವ್ಯಂಜನಗಳಿಂದಾಗಿರುವ ಅಕ್ಷರಗಳು ಮತ್ತು ಶಬ್ದಗಳು) ಮಂತ್ರವೇ ಆಗಿರುತ್ತದೆ. ಆ ಎಲ್ಲಾ ಮಂತ್ರಗಳೂ ಶಕ್ತಿಯಿಂದಲೇ ಕೂಡಿರುತ್ತವೆ ಎಂದು ಹೇಳುತ್ತಾರೆ. ಹಾಗೆಯೇ ವಿವಿಧ ಸ್ವರಗಳು, ಶಬ್ದಗಳನ್ನು ಕ್ರೋಢೀಕರಿಸಿ ಒಂದು ಮಂತ್ರವನ್ನು ಮಾಡುವ ಪ್ರಯೋಗಗಳು ಸಾಕಷ್ಟು ನಡೆದಿವೆ.

ಡ್ರಾಮಾ ಕಂಪನಿಯ ದೇವಿ


ದೇವಿ ಎಂಬುದು ಒಂದು ಪ್ರಕೃತಿಯ ಶಕ್ತಿಯ ರೂಪಕವಾಗಿರುವ ಪರಿಕಲ್ಪನೆ. ಆ ಪರಿಕಲ್ಪನೆಯನ್ನು ಹತ್ತಾರು ತಂತ್ರಪ್ರಯೋಗಗಳಲ್ಲಿ ಬಳಸುತ್ತಾರೆ. ಅದರಲ್ಲಿ ಶ್ರೀವಿದ್ಯೆ ಎಂಬ ಸಾಧನಾಕ್ರಮವೂ ಒಂದು. ಈ ಶ್ರೀವಿದ್ಯೆಯೆಂಬುದನ್ನು ಸಾಧಿಸುವ ಹಲವರನ್ನು ಕಂಡಿದ್ದೇನೆ. ಅವರಲ್ಲಿ ಕಂಡು (ನಾನು ನೇರವಾಗಿ ಕಂಡವರಲ್ಲಿ) ಬರುವ ಬಹುದೊಡ್ಡ ದೋಷವೆಂದರೆ ತಾಂತ್ರಿಕ ಆಚರಣೆಗಳಿಗೆ, ಮಂತ್ರೋಚ್ಚಾರಣೆಗಳಿಗೆ ತಮ್ಮ ಸಂಪೂರ್ಣ ಸಮಯವನ್ನು ವಿನಿಯೋಗಿಸಿಕೊಂಡು ಪ್ರಕೃತಿಯ ಸಹಜವಾದ ಮತ್ತು ಸರಳವಾದ ನೇರ ಸಂವಹನವನ್ನು ಗಮನಿಸದೆಯೇ ಭಾವುಕರಾಗುತ್ತಾ ಭ್ರಾಮಕ ಪ್ರತಿಮೆಗಳಿಗೆ ಮಾರುಹೋಗುವುದು. ಒಂದು ಏನೋ ವಿಶೇಷ ಅನುಭವವಾಗಬೇಕು, ಇನ್ನೆಂತದ್ದೋ ಅಪರೂಪವಾಗಿರುವುದು ಘಟಿಸಬೇಕು ಎಂದು ಮುಂಗಾಣುತ್ತಾ ಅಥವಾ ಕಾಯುತ್ತಾ ಸಹಜತೆಯನ್ನು ಸಂಪೂರ್ಣವಾಗಿ ಮರೆತುಹೋಗುವುದು.

ದೇವಿ ಎಂಬುದೇ (ಇವರು ಹೇಳುವಂತಹ ಡ್ರಾಮಾ ಕಂಪನಿಯ ವೇಷಭೂಷಿತೆ) ಇಲ್ಲ. ಆದರೆ ಇವರು ಕಾಣಬಯಸುವುದು, ಸಂಪಹಿಸಲು ಯತ್ನಿಸುವುದು ಅಂತಹ ದೇವಿಯನ್ನು. ಅವಳು ಬಂದು ಮಾತಾಡಿದಂತೆ, ಅವಳು ನಕ್ಕಂತೆ, ಅವಳು ಕನಸಿನಲ್ಲಿ ಬಂದು ಪರಿಹಾರ ಹೇಳಿದಂತೆ ಅಥವಾ ನೇರವಾಗಿ ಪ್ರಾರ್ಥನೆ, ಯಜ್ಞ ಮತ್ತೊಂದೇನಕ್ಕೋ ಒಲಿದು ಬಂದು, ಕಣ್ಣಿಗೆ ಕಾಣದೇ ಗೆಜ್ಜೆಗಳ ಸದ್ದನ್ನು ಮಾತ್ರ ಕೇಳಿಸುವಂತೆ, ತನ್ನ ಮೈಗೆ ಹಚ್ಚಿಕೊಂಡಿರುವ ಗಂಧ ಸುಗಂಧವನ್ನು ಆ ಪರಿಸರದಲ್ಲಿ ಪಸರಿಸಿದಂತೆ, ಒಟ್ಟು ಕಾಣದೇ ಇರುವ ಮನುಷ್ಯನೇ ಏನೋ ಮಾಡಿದ ರೀತಿಯಲ್ಲಿ ಆಗುವುದನ್ನು ಭ್ರಮಿಸುತ್ತಾರೆ, ಇದನ್ನೇ ಎದುರು ನೋಡುತ್ತಿರುತ್ತಾರೆ. ಯಾವಾಗ ಧ್ಯಾನ, ತಂತ್ರ ಸಾಧನೆಯಲ್ಲಿ ಸಾಧಕರು ಏನೋ ಅತಿಭೌತಿಕವಾದುದನ್ನು ಮತ್ತು ವಿಶೇಷಾನುಭವವನ್ನು ಎದುರು ನೋಡುತ್ತಾ ಪ್ರಯತ್ನಗಳನ್ನು ಮಾಡುತ್ತಾರೋ, ಡ್ರಾಮಾ ದೇವಿಯನ್ನು ಕಂಡರೋ (ಗಂಭೀರವಾದ ಅಧ್ಯಯನದ ಭಾಷೆಯಲ್ಲಿ ಪೌರಾಣಿಕ ದೇವಿ ಎಂದು ಓದಿಕೊಳ್ಳಬಹುದು) ಅವರು ಅಲ್ಲಿಯೇ ವಿಫಲಗೊಂಡರು ಎಂದೇ ಅರ್ಥ. ಯಾವುದೋ ಒಂದು ಘಟಿಸಿ, ನಂತರ ಮನುಷ್ಯನಿಗೆ ಸ್ಮರಣೆ ಮತ್ತು ಸ್ಮರಿಸಿಕೊಂಡು ಉಚ್ಚರಿಸುವ ಮತ್ತು ಪುನರುಚ್ಚರಿಸುವ ಸಾಮರ್ಥ್ಯವಿರುವುದರಿಂದ (ಮನುಷ್ಯನ ಗುಣ ಮತ್ತು ಸ್ವಭಾವ ಸಹಜವಾಗಿ) ಮುಂದೆ ಹೇಳಬಹುದೇ ಹೊರತು, ಪೂರ್ವಭಾವಿಯಾಗಿ ಯಾವುದೇ ನಿರೀಕ್ಷೆ ಅಪೇಕ್ಷೆಗಳನ್ನು ಹೊಂದಿರುವುದೇ ಅನೈಸರ್ಗಿಕ ಮತ್ತು ತಾನು ಭ್ರಮೆಗೆ ಒಳಗಾಗಲು ಸಿದ್ಧತೆ ನಡೆಸಿದಂತೆ. ಹಾಗೂ ಒಂದು ತರಹದ ವಿಸ್ಮೃತಿಗೆ ಒಳಗಾಗಿರಲು ಮಾಡುವ ಒಂದು ಯತ್ನವು ಹೆಚ್ಚು ಕುಡಿತದಿಂದಲೋ ಅಥವಾ ಗಾಂಜಾದಿಂದ ಹೊಂದಬಹುದಾದಂತಹ ಸ್ಥಿತಿಯಷ್ಟೇ ಆಗಿರುತ್ತದೆ.

ಪ್ರಕೃತಿಯಲ್ಲಿ ಸಂಬಂಧವಿರುತ್ತದೆ. ಆದರೆ ಆ ಸಂಬಂಧಗಳಿಗೆ ಕಟ್ಟು ಪಾಡುಗಳಿರುವುದಿಲ್ಲ ಮತ್ತು ಹೆಸರಿರುವುದಿಲ್ಲ. ಹೆಸರಿಡುವುದರ ಮೂಲಕವೇ ಮನುಷ್ಯ ಪ್ರಕೃತಿಗೆ ಮೊದಲು ಹೊರತಾಗುತ್ತಾನೆ. ಆದರೆ ಮಾನವನ ಸ್ಮರಣ ಶಕ್ತಿ ಮತ್ತು ಪುನರುಚ್ಚಾರದ ಶಕ್ತಿಗೆ ಅನುಗುಣವಾಗಿ (ಸಹಜವಾಗಿ) ಹೆಸರನ್ನೂ ಇಡುತ್ತಾನೆ. ಮನುಷ್ಯನ ಸಂಕೀರ್ಣತೆ ಇರುವುದೇ ಇಲ್ಲಿ. ಮನುಷ್ಯನ ಕೆಲವು (ಪ್ರಕೃತಿದತ್ತವಾದ) ಸಾಮರ್ಥ್ಯಗಳೇ ಅವನನ್ನು ಪ್ರಕೃತಿಗೆ ವಿಮುಖನನ್ನಾಗಿ ಮಾಡುವುದು. ಇದೇ ಒಂದು ದೊಡ್ಡ ಸವಾಲು. ಈ ಸವಾಲನ್ನು ಸಮರ್ಥವಾಗಿ ಎದುರಿಸಿದವನು ಮಾತ್ರವೇ ಪ್ರಕೃತಿಯ ಸೂಕ್ಷ್ಮ ಸಂವೇದನೆ ಮತ್ತು ಆಂತರಿಕ ಸಂವಹನವನ್ನು ಪಡೆಯಬಲ್ಲವನಾಗಿರುತ್ತಾನೆ.


ಮೈಸೂರಿನಲ್ಲಿ ಬಹು ಪ್ರಖ್ಯಾತ ಶ್ರೀವಿದ್ಯಾ ಉಪಾಸಕರಿದ್ದಾರೆ. ಅವರ ಬಳಿಗೆ ಅನೇಕಾನೇಕ ರಾಜಕಾರಣಿಗಳು, ಸಮಾಜದ ಪ್ರಭಾವಿ ವ್ಯಕ್ತಿಗಳು, ಕಲಾವಿದರು ಎಲ್ಲಾ ಬರುತ್ತಾರೆ. ಅವರು ಅವರಿಗೆಲ್ಲಾ ತಮಗೊದಗಿರುವ ದೇವಿಯ ಶಕ್ತಿಯಿಂದ ಕೆಲಸಗಳನ್ನು ಮಾಡಿಕೊಡುತ್ತಾರಂತೆ. ಅವರು ಮಾಡುವ ಪ್ರಯೋಗಗಳು ಯಶಸ್ವಿಯಾಗುತ್ತದೆಯಂತೆ. ಅವರನ್ನು ನಾನು ಹತ್ತಿರದಿಂದ ಬಲ್ಲೆ. ಅದೇನು ಅವರು ಮಾಡುವ ಮಾಟಮಂತ್ರಗಳು, ಅದೇನು ದೇವಿಯನ್ನು ಒಲಿಸಿಕೊಳ್ಳುವ ಶ್ರೀವಿದ್ಯಾಕ್ರಮವನ್ನು ಅವರು ಹೇಳಿಕೊಡುವುದು. ಇಳೆಯರಾಜರಂತಹ ಖ್ಯಾತನಾಮರೂ ಕೂಡ ಇಂತಹವರಿಗೆ, ಏಕೆ ಮಾರುಹೋಗುತ್ತಾರೆ? ನೋಡೋಣ ಮುಂದಿನ ವಾರ. ■

ಅಷ್ಟ ಮಠದ ಖಾಸಗಿ ಸಮಾರಂಭಕ್ಕೆ ಯಾಕೆ ಸಾರ್ವಜನಿಕರ ಹಣ



ಬಾಬ್ರಿ ಮಸೀದಿ ಧ್ವಂಸದ ಬೆಚ್ಚಿಬೀಳಿಸುವ ಮಾಹಿತಿಗಳನ್ನು ಸುರೇಶ್ ಭಟ್ ಬಾಕ್ರಬೈಲ್ ಅವರು ಬಿಚ್ಚಿಟ್ಟು ಕನ್ನಡಿಗರಿಗೆ ದೊಡ್ಡ ಉಪಕಾರ ಮಾಡಿದ್ದಾರೆ (ಸಂಚಿಕೆ 16-12-15). ಇನ್ನು ಯಾವುದಾದರೂ ತಲೆಕೆಟ್ಟ ಶೆಟ್ಟಿ ಅಥವಾ ಪೂಜಾರಿ ಅವರ ಮೇಲೆ ಮಸಿ ದಾಳಿ ಮಾಡದಿದ್ದರಾಯಿತು.

23 ವರ್ಷಗಳ ಹಿಂದೆ ನಡೆದ ಬಾಬ್ರಿ ಧ್ವಂಸದಲ್ಲಿ ಪೇಜಾವರ ಶ್ರೀಗಳು ನೇರವಾಗಿ ಭಾಗವಹಿಸಿದ್ದರು ಎಂಬುದು ಹೆಚ್ಚಿನ ಕನ್ನಡಿಗರಿಗೆ ಈವರೆಗೆ ಗೊತ್ತೇ ಇರಲಿಲ್ಲ. ಅದೂ ಅವರು ಮಸೀದಿಯ ಮುಖ್ಯದ್ವಾರದ ಮೇಲೆ ಸ್ಪೈಡರ್ ಮ್ಯಾನ್ ತರಹ ಹಾರಿ ಹೋಗಿ ನಿಂತಿದ್ದರಂತೆ ಹಾಗೂ ತಮ್ಮ ಕೆಳ ಜಾತಿಯ ಗುಲಾಮರಿಗೆ ಅದ್ಯಾವುದೋ



ಕೋಡ್ ಭಾಷೆಯಲ್ಲಿ ಕುಡ್ಸೇವ ಕುಡ್ಸೇವ ಎಂದು ಆದೇಶ ಕೊಡುತ್ತಿದ್ದರಂತೆ (1992 ರಲ್ಲಿ ಇನ್ನೂ ಮೊಬೈಲ್ ಫೋನುಗಳು ಬಂದಿರಲಿಲ್ಲ, ಇಲ್ಲದಿದ್ದರೆ ಪೇಜಾವರರ ಹಾರಾಟದ ಫೋಟೋ ಹಿಡಿದು ಯಾರಾದರೂ ಖಂಡಿತಾ ವಾಟ್ಸ್‌ಆಪ್‌ನಲ್ಲಿ ಹಾಕುತ್ತಿದ್ದರು). ಲೈಬರ್‌ಹಾನ್ ಆಯೋಗದಲ್ಲಿ ಈ ಕುಡ್ಸೇವ ಸಾಹಸ ಅಧಿಕೃತವಾಗಿ ದಾಖಲಾಗಿರುವುದರಿಂದ ಪೇಜಾವರರು ನೇರವಾಗಿ ಬಾಬ್ರಿ ಧ್ವಂಸದಲ್ಲಿ ಭಾಗಿಯಾಗಿದ್ದು ಸಾಬೀತಾಗಿದೆ. ಹಾಗಾಗಿ ಭಾರತೀಯ ದಂಡಸಂಹಿತೆಯ ಪ್ರಕಾರ ಅವರು ಒಬ್ಬ ಅಪರಾಧಿ ಸ್ಥಾನದಲ್ಲಿ ನಿಲ್ಲುತ್ತಾರೆ. ಅದೂ ಸಾರ್ವಜನಿಕ ಆಸ್ತಿ ನಾಶಕ್ಕೆ ಪ್ರಚೋದನೆ ಹಾಗೂ ಕೋಟ್ಯಾಂತರ ಜನರ ಧಾರ್ಮಿಕ ಭಾವನೆಗಳಿಗೆ ಘಾಸಿಗೊಳಿಸಿದ ಅಪರಾಧವಿದು. ಇಂತಹ ಭಾರಿ ಅಪರಾಧ ಹೊತ್ತಿರುವ ಪೇಜಾವರ ಶ್ರೀಗಳ ಪರ್ಯಾಯ ಉತ್ಸವಕ್ಕೆ ಸರಕಾರ ಕೋಟ್ಯಾಂತರ ರೂಪಾಯಿ ಕರದಾತರ ಹಣವನ್ನು ಅನುತ್ಪಾದಕ ಖರ್ಚು ಮಾಡುವುದು ಕಾನೂನಿಗೆ ವಿರುದ್ಧವಲ್ಲವೇ? ಇಂತಹ ಗಹನ ಅಪರಾಧ ಮಾಡಿರುವವರು ಪವಿತ್ರ ಮಠದ ಪರ್ಯಾಯ ಸ್ವಾಮೀಜಿ ಆಗಬಹುದೇ? ಯಾರಾದರೂ ಸ್ಟೇ ಆರ್ಡರ್ ತರಲು ಸಾಧ್ಯವೇ?

ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರಿಗೆ ಕೆಲ ವರ್ಷಗಳ ಹಿಂದೆ ಪದ್ಮವಿಭೂಷಣ ಪ್ರಶಸ್ತಿ ಘೋಷಿಸಿದಾಗ ಅದಕ್ಕೆ ಅನೇಕರು ವಿರೋಧ ವ್ಯಕ್ತಪಡಿಸಿದ್ದರು. ಕಾರಣ ಹೆಗ್ಗಡೆಯವರ ವಿರುದ್ಧ ಲೇವಾದೇವಿ ನಡೆಸಿದ ಹಾಗೂ ಸಾರ್ವಜನಿಕ ಭೂಮಿಯನ್ನು ಖಾಸಗಿ ಕೆಲಸಕ್ಕೆ ಉಪಯೋಗಿಸಿದ ಆರೋಪಗಳಿರುವಾಗ ಅವರಿಗೆ ಪದ್ಮಭೂಷಣ ಕೊಟ್ಟಿದ್ದು ಸರಿಯಲ್ಲ ಎಂದು ಅನೇಕ ಬುದ್ಧಿಜೀವಿಗಳು ಪ್ರತಿಭಟಿಸಿದ್ದರು. ಹೆಗ್ಗಡೆಯವರ ವಿರುದ್ಧ ಇದ್ದುದು ಇನ್ನೂ ತನಿಖಾ ಹಂತದಲ್ಲಿರುವ ಆರೋಪಗಳು. ಆದರೆ ಪೇಜಾವರ ಶ್ರೀಗಳ ವಿರುದ್ಧ ಇರುವುದು ಅವರ ಗುರುತರ ಅಪರಾಧ ಸಾಬೀತುಮಾಡುವ ಘನ ಸಾಕ್ಷಿಗಳು. ಖಾಸಗಿ ಆಸ್ತಿ ಕಬಳಿಕೆಗಿಂತ ಹೆಚ್ಚು ಗುರುತರ ಅಪರಾಧವೆಂದರೆ ಪುರಾತನ ಐತಿಹಾಸಿಕ ಕಟ್ಟಡ ಬೀಳಿಸಿ ಸಾರ್ವಜನಿಕ ಆಸ್ತಿಪಾಸ್ತಿ ನಾಶಮಾಡಿ ದೇಶದ ಮೂಲೆಮೂಲೆಯಲ್ಲಿ ಕೋಮುಗಲಭೆ ಹರಡಿ ಹತ್ತಾರು ಜನರ ಸಾವಿಗೆ ಕಾರಣವಾಗಿರುವುದು. ಹೀಗಿರುವಾಗ ಪೇಜಾವರರ ಪರ್ಯಾಯೋತ್ಸವದಲ್ಲಿ ಕರ್ನಾಟಕ ಸರಕಾರ ನೇರವಾಗಿ ಭಾಗಿಯಾಗಿರುವುದು ಪ್ರಜಾಪ್ರಭುತ್ವ ನೀತಿಗೆ ವಿರುದ್ಧವಾಗಿದೆ.

ಉಡುಪಿ ಮಠ ಒಂದು ಖಾಸಗಿ ಮಠ ಮತ್ತು ಪೂಜೆ ಮಾಡುವ ಅಧಿಕಾರ ಬದಲಾವಣೆ ಸಹ ಖಾಸಗಿ ಮಠದೊಳಗಿನ ಖಾಸಗಿ ಕಾರ್ಯಕ್ರಮ. ಅದಕ್ಕೂ ಸಾರ್ವಜನಿಕರಿಗೂ ನಿಜವಾಗಿ ಏನೇನೂ ಸಂಬಂಧವಿಲ್ಲ. ಕೇವಲ ಇಬ್ಬರು ಯತಿಗಳು ಪೂಜೆಯ ಬಟ್ಟಲು ಮತ್ತು ಕೈವಾರ ಬದಲಿಸುವ ಸರಳ ಕಾರ್ಯವನ್ನು ವೈಭವೀಕರಿಸಿ ಸರಕಾರವು ತೆರಿಗೆದಾರರ ಅಮೂಲ್ಯ ನಿಧಿಯಿಂದ ಕೋಟ್ಯಾಂತರ ಖರ್ಚು ಮಾಡುವುದು ಎಷ್ಟು ಸರಿ? ಮೈಸೂರು ದಸರೆಯಾದರೆ ಅದು ಸರಕಾರದ ಅಧಿಕೃತ ಸಮಾರಂಭ. ಅದು ಪ್ರವಾಸೋದ್ಯಮ ಅಭಿವೃದ್ಧಿಗೆ ಸಹ ಭಾರಿ ಸಹಾಯಕವಾಗಿದೆ. ಆದರೆ ಉಡುಪಿಯ ಪರ್ಯಾಯ ಒಂದು ಖಾಸಗಿ ಕಾರ್ಯಕ್ರಮ ಹಾಗೂ ಅದರ ಲಾಭವೂ ಖಾಸಗಿಯವರಿಗೇ ಹೋಗುವುದು. ಸರಕಾರಕ್ಕೆ ಅಥವಾ ಸಾರ್ವಜನಿಕರಿಗೆ ಇದರಿಂದ ಏನೂ ಪ್ರಯೋಜನವಿಲ್ಲ. ಹಾಗಿರುವಾಗ ಮಂತ್ರಿಗಳ ಹಾಗೂ ಅಧಿಕಾರಿಗಳ ದೊಡ್ಡ ದಂಡು ಮುಂದಿನ ತಿಂಗಳು ಉಡುಪಿಗೆ ಸರಕಾರಿ ವೆಚ್ಚದಲ್ಲಿ ದಾಳಿಯಿಡುವುದು ಸರಿಯೇ?

ಉಡುಪಿಯ ಸುತ್ತಮುತ್ತ ಇರುವ ಹಳ್ಳಿಗಳಲ್ಲಿ ಸರಿಯಾದ ರಸ್ತೆಯಿಲ್ಲ, ಕುಡಿಯುವ ನೀರಿಲ್ಲ, ಆದರೆ ಉಡುಪಿ ನಗರ ಮಾತ್ರ ಕೋಟ್ಯಾಂತರ ಸರಕಾರಿ ಹಣ ನುಂಗಿ ಕಂಗೊಳಿಸುತ್ತಿರುವುದು ವಿಪರ್ಯಾಸ. ಕರ್ನಾಟಕದ ಜನಸಂಖ್ಯೆಯಲ್ಲಿ ಶೇ. ಒಂದಕ್ಕಿಂತಲೂ ಕಡಿಮೆಯಿರುವ ಮಧ್ವ ಬ್ರಾಹ್ಮಣರ ಖಾಸಗಿ ಮಠದ ಖಾಸಗಿ ಸಮಾರಂಭಕ್ಕೆ ಈ ಪರಿಯ ಪ್ರಾಮುಖ್ಯತೆ ಸರಕಾರ ಕೊಡಬೇಕೆ? ಈ ಮಠ ಸ್ಥಾಪಿಸಿದ ಮಧ್ವಾಚಾರ್ಯರು ಯಾರೆಂದು ಕರ್ನಾಟಕದ ಹೊರಗಿನ ಬ್ರಾಹ್ಮಣರಿಗೂ ಗೊತ್ತಿಲ್ಲ. ಅದಕ್ಕಾಗೇ ಸಾಕ್ಷಿ ಮಹಾರಾಜ ಪೇಜಾವರರಿಗೆ ಉಡುಪಿ ಶಂಕರಾಚಾರ್ಯ ಎಂದು ತಪ್ಪಾಗಿ ಕರೆದು ಉಳಿದ ಶಂಕರಾಚಾರ್ಯರಿಗೆ ಅವಮಾನಿಸಿರುವುದು. ಉಡುಪಿಯ ಅಷ್ಟ ಯತಿಗಳ ಸಹಿತ ಯಾವುದೇ ಮಧ್ವ ಬ್ರಾಹ್ಮಣನೂ ಇತರ ಸಮುದಾಯದ ಹಿಂದೂ ದೇವರಿಗೆ ಕೈ ಮುಗಿಯುವುದಿಲ್ಲ ಮತ್ತು ತೀರ್ಥ-ಪ್ರಸಾದ ಸಹ ಮುಟ್ಟುವುದಿಲ್ಲ (ಕಟೀಲಿನ ಮಧ್ವ ವೈಷ್ಣವ ಅರ್ಚಕರು ಈ ಬಾರಿ ನಮ್ಮ ವಠಾರದ ಸಾರ್ವಜನಿಕ ಗಣಪತಿ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಬಂದಿದ್ದರೂ ಗಣಪತಿಯ ಪೂಜೆಯ ನಂತರ ನಮ್ಮ ಭಟ್ಟರು ಕಟೀಲು ಅರ್ಚಕರಿಗೆ ಕೊಟ್ಟ ತೀರ್ಥ ಪ್ರಸಾದವನ್ನು ಅವರು ನಿರಾಕರಿಸಿದ್ದನ್ನು ನಾನು ಕಣ್ಣಾರೆ ನೋಡಿದ್ದೇನೆ). ಹಾಗಿರುವಾಗ ಇತರ ಜಾತಿಯವರ ದೇವರಿಗೆ ಗೌರವ ಕೊಡದ ಉಡುಪಿಯ ಮಧ್ವ ಬ್ರಾಹ್ಮಣ ಯತಿಗಳ ಸಮಾರಂಭಕ್ಕೆ ಇತರ ಜಾತಿಯವರ ತೆರಿಗೆ ಹಣ ಯಾಕೆ ಖರ್ಚಾಗಬೇಕು? ಪೇಜಾವರರು ಕಳೆದ ಜನವರಿಯಲ್ಲಿ ದಲಿತರ ಕೇರಿಗೆ ಭೇಟಿ ಕೊಡುವ ನಾಟಕ ಆಡಿದ್ದಾಗ ಅವರು ದಲಿತರ ದೇವಸ್ಥಾನದಲ್ಲಿ ಕೊಟ್ಟ ತೀರ್ಥ ಪ್ರಸಾದ ನಿರಾಕರಿಸಿದ್ದು ಸ್ಥಳೀಯ ಪತ್ರಿಕೆಗಳಲ್ಲಿ ದೊಡ್ಡ ಸುದ್ದಿಯಾಗಿತ್ತು. ಇಂತಹ ಪಂಕ್ತಿ ಭೇದದ ರೂವಾರಿ ಕುಳಿತ ಪಲ್ಲಕ್ಕಿಗೆ ಕೀಳ್‌ಜಾತಿಯವರು ಯಾಕೆ ಹೆಗಲು ಕೊಡಬೇಕು? ಹೊರೆ ಕಾಣಿಕೆ ಯಾಕೆ ಕೊಡಬೇಕು?


- ರಾಮಕೃಷ್ಣ ಎ ಕಿಲ್ಲೆ, ಮಂಗಳೂರು



ಆಸ್ಕರ್ ಯಾರಿಗೋಸ್ಕರ?!

ಕರಾವಳಿ ಜಿಲ್ಲೆಯಲ್ಲೀಗ ಆಸ್ಕರ್‌ಗಳದೇ ಸುದ್ದಿ. ಕರಾವಳಿ ಮೂಲದ ಕಥೆ-ಕಲಾವಿದರಿರುವ ಸಿನಿಮಾವೊಂದು (ರಂಗಿತರಂಗ) ಇದೀಗ ಆಸ್ಕರ್ ರೇಸಿನಲ್ಲಿರುವುದು ಒಂದು ಸುದ್ದಿಯಾದರೆ, ಇನ್ನೊಂದು ಅಂದಕಾಲತ್ತಿಲ್ ಉಡುಪಿಯನ್ನಾಳಿದ ಈಗಿನ ಎನ್‌ಆರ್‌ಯು (ಅನಿವಾಸಿ ಉಡುಪಿಗ) ಆಸ್ಕರ್ ಫರ್ನಾಂಡಿಸ್ ರಾಜಕೀಯದಾಟಗಳ ಸುದ್ದಿ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಕರಾವಳಿಯಲ್ಲಿ ಭರ್ಜರಿ ಗೆಲುವು ಸಾಧಿಸಿದ್ದು ಕಾಂಗ್ರೆಸಿನ ಸಾಧನೆಯೆಂದು ಯಾರಾದರೂ ಹೇಳಿದರೆ ಕಾಂಗ್ರೆಸ್ ಕಾರ್ಯಕರ್ತರೇ ಬಿದ್ದು ಬಿದ್ದು ನಗುತ್ತಾರೆ. ರೆಡ್ಡಿ-ಯಡ್ಡಿಗಳ ಕಪಿಮುಷ್ಟಿಯಲ್ಲಿ ಸಿಕ್ಕ ಬಿಜೆಪಿಯ ಇನ್ನಿಲ್ಲದ ದುರಾಡಳಿತ ಹಾಗು ತಮ್ಮ ಜಿಲ್ಲೆಯ ಶಾಸಕರೇ ವಿಧಾನಸಭೆಯಲ್ಲಿ ಬ್ಲೂಫಿಲಮ್ ನೋಡಿ ಸಿಕ್ಕಿಬಿದ್ದದ್ದು (ಇದು ಮಹಿಳಾ ಮತದಾರರನ್ನ ಕೆರಳಿಸಿತು) ಮೊದಲಾದ ಚಿಡ್ಡಿ ರಾದ್ಧಾಂತಗಳೇ ಕರಾವಳಿಯಲ್ಲಿ ಕಾಂಗ್ರೆಸನ್ನು ಗೆಲ್ಲಿಸುವಂತೆ ಮಾಡಿತೇ ವಿನಃ ಕಾಂಗ್ರೆಸ್ಸಿನ ವರ್ಚಸ್ಸಾಗಲೀ, ಆ ಪಕ್ಷದ ನಾಯಕರುಗಳ ಪ್ರಾಮಾಣಿಕ ಶ್ರಮವಾಗಲೀ ಈ ಗೆಲುವಿಗೆ ಕಾರಣವಾಗಿರಲೇ ಇಲ್ಲ ಎಂಬುವುದು ಕರಾವಳಿಯ ಚಿಕ್ಕ ಮಗುವಿಗೂ ಗೊತ್ತಿರುವಂತಹ ಸಂಗತಿ.



ತೀರಾ ಮೊನ್ನೆ ಮೊನ್ನೆ ಕಾಂಗ್ರೆಸ್‌ನ ಹಳೆಹುಲಿಗಳಾದ ವೀರಪ್ಪ ಮೊಯ್ಲಿ-ಜನಾರ್ದನ ಪೂಜಾರಿಗಳು ಬಹಿರಂಗವಾಗಿ ಕಚ್ಚಾಡಿಕೊಂಡಿದ್ದರು. ಒಬ್ಬರಿಗೊಬ್ಬರು ಸಮಸ್ಥಿಯತೆ ಇರದೇ ಒಬ್ಬ ಎತ್ತಿನಹೊಳೆ ಪರ ಮಾತನ್ನಾಡಿದರೆ ಇನ್ನೊಬ್ಬ ವಿನಾಕಾರಣ (ತಟಸ್ಥವಾಗಿರುವ ಬದಲು) ಎದುರಾಳಿಗೂ ಮಿಗಿಲಾಗಿ ವಿರೋಧದ ಮಾತನಾಡುತ್ತಾ ಕಾದಾಡಿದ್ದರು. "ಈತನನ್ನ ಪರಿಚಯಿಸಿದ್ದೇ ನಾನು? ನನ್ನ ಬಾಯಿಗೆ ಕೋಲು ಹಾಕಿದರೆ ನಿನ್ನ ಜನ್ಮ ಜಾಲಾಡುವೆ" ಎಂಬಂತಹ ಬೀದಿ ಜಗಳದಂತಹ ಮಾತುಗಳು ಈ ಇಬ್ಬರು 'ಧುರೀಣ'ರ ಬಾಯಿಂದ ಉದುರಿ ಜನರಿಗೆ ಸಖತ್ ಮನರಂಜನೆಯನ್ನು ನೀಡಿದ್ದವು.

ಸ್ವಜನಪಕ್ಷಪಾತ ತೋರುವ ಕರಾವಳಿ ಕಾಂಗ್ರೆಸಿನ ಎಲ್ಲಾ ಹಹು (ಹಳೆ ಹುಲಿ)ಗಳು ಕಾಂಗ್ರೆಸ್ ವೃಕ್ಷಕ್ಕೆ ಹತ್ತಿಕೊಂಡಂತಹ ಬಂದಳಿಕೆಗಳಾಗ ಹೊರಟವೆಯೇ ಹೊರತು ಇವರಿಗೆ ತಮ್ಮನ್ನು ಮೇಲೆತ್ತಿದ ಪಕ್ಷದ ಉನ್ನತಿಗಿಂತ ತಮ್ಮ ಸ್ವಾರ್ಥವೇ ಮುಖ್ಯ ಎನಿಸಿರುವುದು ಮಾತ್ರ ದುರದೃಷ್ಟಕರ. ಅಂತಹ ಬಂದಳಿಕೆಗಳಲ್ಲಿ ಆಸ್ಕರ್ ಎಂಬ ಬಂದಳಿಕೆಯ ವ್ಯಾಪ್ತಿ ದೊಡ್ಡದು. ಇದಕ್ಕೆ ಬಲಿಯಾಗುತ್ತಿರುವ ಸದ್ಯದ ಹೆಸರೆಂದರೆ ಅದು ಜಯಪ್ರಕಾಶ್ ಹೆಗ್ಡೆ. ಆಸ್ಕರ್ ಒಂದು ಕಾಲದಲ್ಲಿ ಎದುರಾಳಿಯೇ ಇಲ್ಲದಂತೆ ಉಡುಪಿಯಲ್ಲಿ ಗೆಲ್ಲುತ್ತಿದ್ದದ್ದು ಇಂದಿರಾ-ರಾಜೀವರ ಸುವರ್ಣಯುಗ ಕಾಲದಲ್ಲಿ. ಆವತ್ತು ಕಾಂಗ್ರೆಸಿನಿಂದ ಲೈಟ್ ಕಂಬವನ್ನು ನಿಲ್ಲಿಸಿದರೂ ಅದು ಗೆಲ್ಲುತ್ತದೆ ಎಂಬ ವಾತಾವರಣವಿತ್ತಲ್ಲದೇ ಮುಂಚಿನಿಂದ ಸಾಕಷ್ಟು ಅಭಿವೃದ್ಧಿ ಪಥದಲ್ಲೇ ಇದ್ದಿರುವ ಉಡುಪಿಯಲ್ಲಿ ಯಾರೂ ಊರ ಅಭಿವೃದ್ಧಿ ಬಗ್ಗೆ ತಲೆಕೆಡಿಸುವಂತವರೂ ಇರಲಿಲ್ಲ. ಆಸ್ಕರ್ ಗೆದ್ದು ದೆಲ್ಲಿಗೆ ಹೋಗಿ ಕೂತರೂ ನಂತರ ಬಂದಾಗ ತಲೆಕೆಡಿಸಿಕೊಳ್ಳದೇ ಓಟ್ ಹಾಕುತ್ತಿದ್ದರು. ಹೀಗಾಗಿ ಕಾಂಗ್ರೆಸ್ ಹೆಸರಲ್ಲಿ ಉಡುಪಿಯ 'ಮುದ್ದುಮಗ' (ಏನು ಮಾಡಿದರೂ ಕ್ಷಮಾರ್ಹ)ನಾಗಿ ಹೋದ ಆಸ್ಕರ್ ಸುದೀರ್ಘ ಕಾಲ ಆಳ್ವಿಕೆ ನಡೆಸಿ, ದೆಲ್ಲಿ ದೊರೆಗಳ ಸಹವರ್ತಿಯಾಗಿದ್ದುಕೊಂಡರೂ, ಕೂಡ ತನ್ನ ಊರಿಗೆ ನೆನಪುಲ್ಲುಳಿಯುವಂತಾದ್ದನ್ನ ಮಾಡಲಾಗಲೇ ಇಲ್ಲ.

ಅವಿಭಜಿತ ದಕ ಜಿಲ್ಲೆಯಲ್ಲಿ ಕುಂದಾಪುರದಿಂದ ಹಿಡಿದು ಸುಳ್ಯದವರೆಗೆ ಕಾಂಗ್ರೆಸನ್ನು ಕೊಂದಂತವರು ಕಾಂಗ್ರೆಸ್ ನಾಯಕರುಗಳೇ ವಿನಃ ಬೇರಿನ್ಯಾರಲ್ಲ. ಮೀಸಲು ಕ್ಷೇತ್ರ ಸುಳ್ಯದಲ್ಲಿ ಕಾಂಗ್ರೆಸ್ ಹೇಳಹೆಸರಿಲ್ಲದಂತಾಗಿದ್ದರೆ ಪುತ್ತೂರಿನಲ್ಲಿ ಕಾಂಗ್ರೆಸ್ ಶಕುಂತಲಾ ಶೆಟ್ಟಿಯ ಹೆಸರಲ್ಲಿ ಮರುಹುಟ್ಟು ಪಡೆದಿದ್ದರೂ ಆಕೆಯನ್ನು ನೆಟ್ಟಗೆ ಕೆಲಸ ಮಾಡಲೂ ಬಿಡದೆ ಹೊಸ ಹೊಸ ಬಣಗಳನ್ನು ರಚಿಸುತ್ತಾ ಅಲ್ಲಿ ಕಾಲೆಳೆಯುತ್ತಿದ್ದಾರೆ.

ಇನ್ನು ಮಂಗಳೂರಿನಲ್ಲಿ ಮೊಯ್ಲಿ-ಪೂಜಾರಿ-ಆಸ್ಕರ್ ಎಂಬ "ಹಹು"ಗಳ ಚೇಲಾಗಳದ್ದೇ ಆಟಾಟೋಪ. ಯಾವ ಜನಕಲ್ಯಾಣವನ್ನೂ ಮಾಡದೆ ಉಡುಪಿಯ ಜನತೆಯ ಮನಸ್ಸಿಂದ ಯಾವತ್ತೋ ಮಾಸಿಹೋದ ಆಸ್ಕರ್ ಫೆರ್ನಾಂಡಿಸ್‌ಗೆ ಉಡುಪಿ ಮಠ ಹಾಗು ಮಣಿಪಾಲ ನಿಷ್ಠೆಯ ಮುಂದೆ ರಾಜಕೀಯ ಲೆಕ್ಕಾಚಾರಗಳೆಲ್ಲ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಿದೆ. ಇದ್ದ ಸುವರ್ಣಾವಕಾಶವನ್ನು ಬಳಸಿಕೊಳ್ಳದೇ ದೆಲ್ಲಿಯಲ್ಲಿ ಸತ್ತ ಪದ್ಮಪ್ರಿಯಾ ಕೇಸನ್ನು ಹಳ್ಳ ಹಿಡಿಸಿ ಮಠಕ್ಕೆ ಮತ್ತು ಆ ಮೂಲಕ ಚಡ್ಡಿಗಳಿಗೆ ಸಹಕರಿಸಿದ್ದೇ ಈ ಆಸ್ಕರ್ ಎಂಬ ಮಹಾನುಭಾವ. ಸೊರಕೆ ಅತ್ಯಾಚಾರ ಮಾಡದಿದ್ದರೂ ಅತ್ಯಾಚಾರಿಯೆಂದು ಆರೋಪಿಸುವ ಶೋಭಾಳಂತಹ ಚಡ್ಡಿಗಳಿರುವಾಗ ದೆಲ್ಲಿಯ ಕೊಲೆ(ಆತ್ಮಹತ್ಯೆ)ಗೆ ನಿಜಕ್ಕೂ ಚಡ್ಡಿ ಶಾಸಕ ಕಾರಣನಾಗಿದ್ದರೂ ಆಗಿಲ್ಲ ಎಂಬಂತಾಗಲು ಸಹಕರಿಸಿದ ಆಸ್ಕರ್‌ನನ್ನ ನಿಜಕ್ಕೂ ಗ್ರೇಟ್ ಎನ್ನಬೇಕೋ ವರ್ಸ್ಟ್ ಎನ್ನಬೇಕೋ ಜನರಿ... ತಿಳಿಯುತ್ತಿಲ್ಲ. ತನ್ನ ಪಕ್ಷೀಯರಾದ ಉಡುಪಿಯ ಶಾ... ಮಧ್ವರಾಜ್ ಹಾಗು ಮಾಜಿ ಸಂಸದ ಜೆಪಿ ಇವರುಗಳ್ಯಾರ... ಉಡುಪಿಯಲ್ಲಿ ಗಟ್ಟಿಯಾಗುಳಿಯಬಾರದೆಂದು ಪರೋಕ್ಷವಾ... ಅವರ ಕಾಲೆಳೆಯುತ್ತಾ ಯಾವುದಕ್ಕೂ ಸಹಕರಿಸದೇ ಬ... ರಾಜಕೀಯ ಮಾಡುತ್ತಿರುವ ಆಸ್ಕರ್ ಉಡುಪಿಯ ಕಾಂಗ್ರೆ... ಕೊಡುತ್ತಿರುವ ಕೊಡುಗೆ ಶೂನ್ಯ.

ಕರಾವಳಿ ಹಿರಿತಲೆಗಳು ಮನಸ... ಮಾಡಿದ್ದರೆ ಬಿಜೆಪಿಯವರ ಪ... ಹಗರಣಗಳಲ್ಲಿ ಧ್ವನಿಯೆತ್ತಿ ಮಾತಾಡು... ಅವರನ್ನು ಆಟವಾಡಿಸಿ ಜನರಿಗೆ ನಿಜ... ತಿಳಿಸುತ್ತಾ ಕಾಂಗ್ರೆಸನ್ನ ಇ... ಗಟ್ಟಿಗೊಳಿಸುತ್ತಾ ಹೋಗಬಹುದಿತ... ಹೇಗಿದ್ದರೂ ಈ ಜಿಲ್ಲೆ ಮೂಲ... ಕಾಂಗ್ರೆಸ್ಸಿನದ್ದೇ ಭದ್ರಕೋಟೆಯಾಗಿತ್ತಲ್ಲವೇ... ಆದರೆ ಈ ಎಲ್ಲ ವಿಚಾರದಲ್ಲೂ ... ಕರಾವಳಿ ಕಾಂಗ್ರೆಸ್ಸಿಗರದ್ದು ಮಾತ್ರ ದಿ... ಮೌನ (ಬಹುಶಃ ನಾಳೆ ಬಿಜೆ... ಹಾರಬೇಕಾದ ಪ್ರಮೇಯ ಬಂದ... ಎಂಬ ದೂರಾಲೋಚನೆಯೂ ಇದ... ಹಿಂದೆ ಇರಬಹುದೇನೋ ಯಾರಿಗೆ ಗೊತ್ತು?). ಎಲ್ಲರ... ಒಬ್ಬರಿಗೊಬ್ಬರು ಕಾಲೆಳೆಯುವುದರಲ್ಲೇ ನಿರತರಾ... ವಿರೋಧಿಗಳು ಬೆಳೆಯುವಲ್ಲಿ ತಮ್ಮದೇ ಅ... ಸಹಾಯವನ್ನವರು ಮಾಡುತ್ತಲೇ ಇರುತ್ತಾರೆ. ಇದೇ ಸಂದರ್ಭ... ಬಿಜೆಪಿಗೆ ಸಿಕ್ಕಿದ್ದರೆ ಅದು ಸಣ್ಣ ಸಂಗತಿಯಾಗಿದ್ದರೂ ಸತ್ಯವ... ಸುಳ್ಳೊ ರಂಪಾಟಮಾಡಿ ಜನರನ್ನ ಸೇರಿಸುತ್ತಿದ್ದರು. ನಂದಿ... ಪ್ರಕರಣದಂತೆ ನಂತರ ಅದು ಸುಳ್ಳೆಂದು ಗೊತ್ತಾದರ... ಆ ಸಂದರ್ಭವನ್ನು ಸಮರ್ಥವಾಗಿ ಬಳಸಿಕೊಂಡದ್ದ... ಮುಖ್ಯ ಅವರಿಗೆ ಹೊರತು ಸಮಸ್ಯೆಯ ಪೂರ್ವೋತ್ತ... ಪರಿಣಾಮಗಳು ಅವರಿಗೆ ಅನವಶ್ಯ ವಿಚಾರ.

ಬಿಜೆಪಿ ಬಗ್ಗೆ ಅದರ ನಾಯಕರ ಬಗ್ಗೆ ಅಸಹ್ಯವಾ... ಬೈದ ಯಡ್ಡಿಯನ್ನು ಲಾಭಕ್ಕೋಸ್ಕರ ಕ್ಷಮಿಸಿ ಬಿಜೆಪಿ ಪು... ಕರಕೊಂಡರೆ ತಮಗೆ ಲಾಭ ತರಬಲ್ಲ ಜಯಪ್ರಕಾ... ಹೆಗ್ಡೆ ಶಕುಂತಲಾ ಶೆಟ್ಟಿಯಂತವರನ್ನು ಉಳಿಸಿಕೊಳ್ಳು... ಬದಲು ಅವರ ಅಭಿಮಾನಿ ವರ್ಗದ ಮತದ ಜೊ... ಕಾಂಗ್ರೆಸಿನ ಚರಿಶ್ಮಾವನ್ನು ಹಾಳುಗೆಡವುವ ಲೆಕ್ಕಾಚಾ... ಕಾಂಗ್ರೆಸಿನ ಸ್ವಾರ್ಥಿ ನಾಯಕರುಗಳದ್ದು. ಇವತ್ತಿನ ಕಾಂಗ್ರೆ... ಕಷ್ಟಕಾಲದಲ್ಲಿ ಈ ನಾಯಕರುಗಳು ತಮ್ಮ ಸ್ವಾರ್ಥ ಬಿಟ... ಯೋಚಿಸುವಂತಾಗಲಿ. ಇಲ್ಲವಾದಲ್ಲಿ ಎಂದೋ ಸ... ಹೋದ "ಮೋದಿಅಲೆ"ಯ ಹೊರತಾಗಿಯೂ ... ನಾಯಕರುಗಳ ಸ್ವಾರ್ಥ ರಾಜಕಾರಣದಿಂದಲೇ ದೇ... "ಕಾಂಗ್ರೆಸ್ ಮುಕ್ತ ಭಾರತ"ವಾಗುವುದಂತೂ ಖಂಡಿ... ಅದರಲ್ಲಿ ಅನುಮಾನ ಬೇಡ.

- ಅವಿನಾಶ್ ಎಮ್.ಎಸ್, ನೆಲ್ಲಿಕಾ...

ಮಡೆ, ಎಡೆ ಈಗ ಗೋಮಡೆ!

ಕಳೆದ ವರ್ಷ ಕುಕ್ಕೆ ಸುಬ್ರಹ್ಮಣ್ಯದಲ್ಲಿ ಮಡೆಸ್ನಾನವ... ಸ್ವಲ್ಪ ಬದಲಾಯಿಸಿ ಎಡೆಸ್ನಾನ ಮಾಡಲಾಯಿತು. ... ವರ್ಷ ಎಡೆಸ್ನಾನವನ್ನು 'ಗೋಮಡೆ ಸ್ನಾನ' ಮಾಡು... ಹುನ್ನಾರು ನಡೆಯುತ್ತಿದೆ. ಕುಕ್ಕೆ- ಕಡಂದಲೆ- ತೊಕೂರಿನ... ಮಡೆಸ್ನಾನ (ತುಳುವಿನಲ್ಲಿ -ಮಡಸ್ನಾನ) ಮಾಡುವವರು... ಹೆಚ್ಚಿನವರು ಪರಿಶಿಷ್ಟ ಜಾತಿ-ಜನಾಂಗದವರು ಮತ್ತು... ಹಿಂದುಳಿದ ವರ್ಗದವರು. ಇವರಲ್ಲಿ ಹೆಚ್ಚಿನವರ... ಗೋಮಾಂಸ ಸೇವಿಸುವವರೇ ಆಗಿರುವರು. ಹಾಗಾಗಿ ... ಸಾರಿ ಕುಕ್ಕೆಯಲ್ಲಿ ಎಡೆಸ್ನಾನಕ್ಕೆ ಇಟ್ಟ ಅನ್ನವನ್ನು ಮೊದಲ... ಸ್ವಲ್ಪ ಹಸುವಿಗೆ ತಿನ್ನಿಸಿ ಅಂದರೆ ಆಕಳಿನಿಂದ ಅದಕ... ಮಡೆ (ಎಂಜಲು) ಮಾಡಿಸಿ ನಂತರ ಅದರ ಮೇ... ಭಕ್ತರು ಉರುಳುವ ವ್ಯವಸ್ಥೆ ಮೊನ್ನೆ ಚಂಪಾಷಷ್ಠಿಯಂದು... ಕುಕ್ಕೆಯಲ್ಲಿ ಮಾಡಲಾಯಿತು. ಒಟ್ಟಾರೆ ಎಲ್ಲಾ ಹಿಂದು... ಪವಿತ್ರ ಕಾರ್ಯಗಳಲ್ಲಿ ಗೋವನ್ನು ಒಳಗೊಳಿಸಿ ಗೋಮಾಂ... ತಿನ್ನುವ ಕೆಳವರ್ಗದ ಹಿಂದೂಗಳ ಮನದಲ್ಲೂ ಗೋಮಾಂ... ಸೇವನೆ ದೈವ ವಿರೋಧಿ ಎಂದು ಪಾಪಪ್ರಜ್ಞೆ ಹುಟ್ಟಿ... ಅವರು ಗೋಮಾಂಸ ತಿನ್ನುವುದನ್ನು ಶತಾಯಗತಾಯ... ನಿಲ್ಲಿಸುವಂತೆ ಮಾಡುವ ಮಹಾ ಕುಟಿಲ ಮನೋವೈಜ್ಞಾನಿ... ಯೋಜನೆ ಹೊಳೆದಿರುವುದು ಯಾವ ಜುಟ್ಟಿರುವ ತಲೆಯ... ಎಂದು ಊಹಿಸುವುದು ಕಷ್ಟವಾಗಲಾರದು. ನಾಗಪು... ಹೆಡ್ ಆಫೀಸಿನ ಯೋಜನೆ ಮೆಲ್ಲಮೆಲ್ಲಗೆ ಎಲ್ಲೆ... ಕಾರ್ಯಗತಗೊಳಿಸಿ, ಕೊನೆಗೆ ಕೇವಲ ಮುಸ್ಲಿಮರು ಮಾ... ಗೋಮಾಂಸ ಸೇವಿಸುತ್ತಾರೆ ಹಾಗೂ ಹಿಂದೂಗಳ...

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನ... ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.



ಯಾವುದೇ ಜಾತಿಯವರು ಗೋಮಾಂಸ ಸೇವಿಸುವುದೇ ಇಲ್ಲ ಎಂಬಂತೆ ಬಿಂಬಿಸುವ ವ್ಯವಸ್ಥಿತ ಷಡ್ಯಂತ್ರ ನಡೆದಿರುವುದು ಖಚಿತ. ಹಾಗಾಗಿ ಮಡೆಸ್ನಾನ, ಎಡೆಸ್ನಾನ ಹಾಗೂ ಗೋ-ಮಡೆಸ್ನಾನ ಇವು ಮೂರನ್ನೂ ಕಾನೂನಿನಡಿ ನಿರ್ಬಂಧಿಸಬೇಕು.

ಪ್ರತಿವರ್ಷ ಡಿಸೆಂಬರ್ ತಿಂಗಳಲ್ಲಿ ಷಷ್ಠಿಯಂದು ಕೇವಲ ಕುಕ್ಕೆಯಲ್ಲಿ ನಡೆಯುವ ಮಡೆಸ್ನಾನದ ಬಗ್ಗೆ ಮಾತ್ರ ಪ್ರಗತಿಪರರು ಪ್ರತಿಭಟನೆ ಮಾಡಿ ಪತ್ರಿಕೆಗಳಲ್ಲಿ ಸುದ್ದಿ ಮಾಡಿಸಿಕೊಳ್ಳುತ್ತಾರೆ. ನಿಜವಾಗಿ ಕೇವಲ ಕುಕ್ಕೆಯಲ್ಲಿ ಮಾತ್ರವಲ್ಲ ಕರಾವಳಿಯ ಇತರ ಸುಬ್ರಹ್ಮಣ್ಯ ದೇವಳಗಳಲ್ಲೂ ಪ್ರತಿವರ್ಷ ಮಡೆಸ್ನಾನ ನಡೆಯುತ್ತದೆ. ಆದರೆ ಪ್ರಗತಿಪರರು ಕೇವಲ ಕುಕ್ಕೆಯನ್ನು ಮಾತ್ರ ಗುರಿ ಮಾಡಿರುವುದರಿಂದಾಗಿ ಇತರ ಸುಬ್ರಹ್ಮಣ್ಯ ದೇವಸ್ಥಾನಗಳಲ್ಲಿ ನಡೆಯುವ ಮಡೆಸ್ನಾನದ ಬಗ್ಗೆ ಮಾಧ್ಯಮದವರು ತಲೆ ಕೆಡಿಸಿಕೊಳ್ಳುತ್ತಿಲ್ಲ. ಮೂಡಬಿದ್ರಿಯ ಹತ್ತಿರದ ಕಡಂದಲೆ ಹಾಗೂ ಹಳೆಯಂಗಡಿ ಹತ್ತಿರದ ತೋಕೂರು ಸುಬ್ರಹ್ಮಣ್ಯ ದೇವಳಗಳಲ್ಲೂ ಮಡೆಸ್ನಾನ ನಡೆಯುವುದನ್ನು ನಾನೇ ನೋಡಿದ್ದೇನೆ. ಅದರಲ್ಲಿ ಎಲ್ಲಾ ಳ ಜಾತಿಯವರಿರುತ್ತಾರೆ. ಮೇಲಾಗಿ ಇಲ್ಲಿ ಅನಕ್ಷರಸ್ಥ ಡ ಕ್ರೈಸ್ತ ಮತ್ತು ಮುಸ್ಲಿಮರೂ ಮಡೆಸ್ನಾನ ಮಾಡುತ್ತಾರೆ. ಕ್ಕೆ ಕ್ಷೇತ್ರ ದೇಶದಲ್ಲೆಲ್ಲಾ ಪ್ರಸಿದ್ಧಿ ಪಡೆದಿರುವುದರಿಂದ ಲ್ಲಿಯ ಮಡೆಸ್ನಾನದ ವಿರುದ್ಧ ಪ್ರತಿಭಟಿಸಿದರೆ ದೇಶವ್ಯಾಪಿ ಪ್ರಚಾರ ಸಿಗುತ್ತದೆ ಎಂಬ ಕಾರಣಕ್ಕೆ ಕೇವಲ ಕುಕ್ಕೆಯ ಬಗ್ಗೆ ಮಾತ್ರ ಪ್ರಗತಿಪರ ಸಂಘಟನೆಗಳು ತಮ್ಮ ಗಮನ ಕೇಂದ್ರೀಕರಿಸಿ ಪ್ರಸಿದ್ಧಿ ಪಡೆಯಲು ಹವಣಿಸುವುದು ಸರಿಯಲ್ಲ. ಒಟ್ಟಾರೆ ರಾಜ್ಯದ ಎಲ್ಲಾ ಸುಬ್ರಹ್ಮಣ್ಯ ದೇವಸ್ಥಾನಗಳಲ್ಲೂ ಹೇಯ ಮಡೆಸ್ನಾನ ನಿಲ್ಲಬೇಕು.

- ವೀರಪ್ಪ ದಿ ನಾಯ್ಕ್, ಮಂಗಳೂರು


ಹಣಕ್ಕಾಗಿ ಯಾವುದಕ್ಕೂ ಹೇಸದ ಬ್ರಾಹ್ಮಣರು

ಉಡುಪಿ ಕೃಷ್ಣ ಮಠದ ಒಳಗಿರುವ ಸುಬ್ರಹ್ಮಣ್ಯ ದೇವಸ್ಥಾನದಲ್ಲೂ ಮೊನ್ನೆ ಷಷ್ಠಿಯಂದು ಮಡೆಸ್ನಾನ ಆಯೋಜಿಸಲಾಗಿತ್ತು. ಕುಕ್ಕೆಯ ಮಡೆಸ್ನಾನ (ಕು) ಪ್ರಸಿದ್ಧಿ ಪಡೆದ ಮೇಲೆ ಅದು ಹೆಚ್ಚು ಹೆಚ್ಚು ಭಕ್ತರನ್ನು ಆಕರ್ಷಿಸುವುದನ್ನು ಕಂಡು ಉಡುಪಿಯವರೂ ಹೆಚ್ಚು ಭಕ್ತರನ್ನು ಆಕರ್ಷಿಸಲು ನಾಲ್ಕು ವರ್ಷಗಳ ಹಿಂದೆ ಮಡೆಸ್ನಾನ ಶುರು ಮಾಡಿದ್ದರು. ಆದರೆ ಅದು ಐನೂರು ವರ್ಷಗಳ ಹಿಂದೆ ವಾದಿರಾಜರೇ ಶುರು ಮಾಡಿದ್ದು ಎಂಬ ನೆಪ ಹೇಳಿದ್ದರು. ಕೃಷ್ಣ ಮಠದಲ್ಲಿ ಮಡೆಸ್ನಾನ ಮಾಡುವವರು ಮೊಗವೀರ ಎಂಬ ಮೀನುಗಾರ ಜಾತಿಯವರು ಮಾತ್ರ. ಈ ಬಾರಿ ಮಾಧ್ವ ಬ್ರಾಹ್ಮಣರು ಮೊದಲು ಸುಬ್ರಹ್ಮಣ್ಯ ಗುಡಿಯ ಸುತ್ತ ಪಟ್ಟಾಗಿ ಊಟ ಜಡಿದು ಎದ್ದ ಮೇಲೆ ಮೊಗವೀರ ಜಾತಿಯ ಎಂಟು ಹೆಂಗಸರು ಮತ್ತು ಹದಿನೇಳು ಗಂಡಸರು ಆ ಮಾಧ್ವ ಬ್ರಾಹ್ಮಣರ ಎಂಜಲಿನ ಮೇಲೆ ಉರುಳಾಡುವುದನ್ನು ಸ್ಥಳೀಯ ಟಿವಿಗಳು ಮತ್ತೆ ಮತ್ತೆ ತೋರಿಸಿದವು. ಹೀಗಿದ್ದರೂ ಇದೇ ಕೃಷ್ಣ ಮಠದ ಪೇಜಾವರ ಶ್ರೀಗಳು ತಾನು ಮಡೆಸ್ನಾನಕ್ಕೆ ವಿರುದ್ಧವಾಗಿದ್ದೇನೆ ಮತ್ತು ಎಡೆಸ್ನಾನದ ಪರವಾಗಿದ್ದೇನೆ ಎಂದು ದಲಿತರ ಕೇರಿಗೆ ಭೇಟಿ ಕೊಟ್ಟಾಗಲೆಲ್ಲಾ ಘೋಷಿಸುತ್ತಿರುವುದು ವಿಪರ್ಯಾಸ. ಮುಂದಿನ ಪರ್ಯಾಯದಲ್ಲಿ ಪೇಜಾವರ ಶ್ರೀಗಳು ಸರ್ವಜ್ಞ) ಪೀಠ ಏರಿದ ಮೇಲೆ ಉಡುಪಿಯಲ್ಲೂ ಸರ್ಪಸಂಸ್ಕಾರ ಪೂಜೆಗಳನ್ನು ಶುರು ಮಾಡುವ ಯೋಚನೆಯಿದೆಯಂತೆ. ಕುಕ್ಕೆಯ ಸುಬ್ರಹ್ಮಣ್ಯ ದೇವಸ್ಥಾನದವರು ಸರ್ಪಸಂಸ್ಕಾರದಿಂದ ಕೋಟ್ಯಾಂತರ ಗಳಿಸುತ್ತಿರುವುದನ್ನು ಕಂಡು ಉಡುಪಿ ಮಠದ ಸೋ-ಕಾಲ್ಡ್ ಸರ್ವಜ್ಞರು ತಾವೂ ಸರ್ಪ ಸಂಸ್ಕಾರ ಎಂಬ ಮೌಢ್ಯದ ನೆರವಿನಿಂದ ಲಕ್ಷಾಂತರ ಗಳಿಸಲು ಸ್ಕೆಚ್ ತಯಾರಿಸಿದ್ದಾರಂತೆ. ಅದಕ್ಕಾಗಿ ಪೂರ್ವಭಾವಿ ಯೋಜನೆಯಂತೆ ಈ ವರ್ಷ ನಡೆದ ಉಡುಪಿ ಮಠದ ಮಡೆಸ್ನಾನಕ್ಕೆ ಮಾಧ್ಯಮಗಳಲ್ಲಿ ಭಾರಿ ಪ್ರಚಾರ ಸಿಗುವಂತೆ ನೋಡಿಕೊಳ್ಳಲಾಗಿತ್ತು.

ಒಂದು ವಿಷಜಂತುವಿನ ಹೆಸರಲ್ಲಿ ಮನುಷ್ಯರು ಏನೆಲ್ಲಾ ನಾಟಕ ಅಡಿ ದಂಡಿಯಾಗಿ ಹಣ ಗಳಿಸುವುದನ್ನು ನೋಡಿ ನಾಗರ ಹಾವನ್ನು ಕಂಡಲ್ಲಿ ಕೊಂದು ತಿನ್ನುವ ಗರುಡ ನವಿಲು ಮುಂಗುಸಿಗಳು ಹೊಟ್ಟೆ ಹುಣ್ಣಾಗುವಂತೆ ನಗುತ್ತಿರಬಹುದು. ಒಂದೇ ಜನ್ಮದಲ್ಲಿ ನೂರಾರು ನಾಗರ ಹಾವನ್ನು ಕೊಲ್ಲುವ ಈ ಪ್ರಾಣಿ-ಪಕ್ಷಿಗಳಿಗೆ ಸಾವಿರಾರು ಜನ್ಮದಲ್ಲೂ ತೊಳೆಯಲಾಗದಷ್ಟು ಸರ್ಪಹತ್ಯೆ ದೋಷ ಈ ಜನ್ಮದಲ್ಲಿ ಅಂಟಿಕೊಂಡಿರಬಹುದು ಅಲ್ಲವೇ? ಹೊಟ್ಟೆಪಾಡಿಗಾಗಿ ಪ್ರಾಣಿ-ಪಕ್ಷಿಗಳು ಏನೆಲ್ಲಾ ಮಾಡಬೇಕಾ ಗುತ್ತೆ ನೋಡಿ ಪಾಪ! ವಿಷ್ಣುವಿನ ವಾಹನ ಗರುಡನನ್ನು ಪೂಜಿಸಿ ನಾಗರ-ಪಂಚಮಿಗೆ ಎದುರಾಗಿ ಗರುಡ-ಪಂಚಮಿ ಆಚರಿಸುವ ಮಾಧ್ವ ವೈಷ್ಣವರು ತಮ್ಮದೇ ಮಠದಲ್ಲಿ ಗರುಡನ ಕಟ್ಟಾ ವೈರಿ ನಾಗನ ಪೂಜೆ ಮಾಡಿ ಮಡೆಸ್ನಾನವನ್ನು ಪ್ರೋತ್ಸಾಹಿಸುತ್ತಿರುವುದು ದೈವದ್ರೋಹ -ಗರುಡದ್ರೋಹ ತಾನೇ!

- ಹರೀಶ್ ಎಂ ರಾವ್, ಉಡುಪಿ


ಮೌಢ್ಯ ವಿರುದ್ಧ ಹೋರಾಟ ಸರಿ, ಆದರೆ...



ಮೌಢ್ಯದ ವಿರುದ್ಧ ಸಚಿವ ಸತೀಶ್ ಜಾರಕಿಹೊಳಿಯವರ ಹೋರಾಟ ಸ್ವಾಗತಾರ್ಹ. ಬಿಜೆಪಿ, ಜೆಡಿಎಸ್ ಮಾತ್ರವಲ್ಲ ಕಾಂಗ್ರೆಸ್ಸಿನ ಹೆಚ್ಚಿನ ಎಲ್ಲ ರಾಜಕಾರಣಿಗಳೂ ಜ್ಯೋತಿಷಿ ಮತ್ತು ವಾಸ್ತು ಪಂಡಿತರ ಕಾಲಿಗೆ ಉರುಳುವ ಮೂಢರೇ ಆಗಿದ್ದಾರೆ. ಅವರ ನಡುವೆ ಜಾರಕಿಹೊಳಿ ವಿಭಿನ್ನವಾಗಿದ್ದಾರೆ. ಆದರೆ ಮೌಢ್ಯಕ್ಕೆ ಅತೀ ಹೆಚ್ಚು ಬಲಿಯಾಗುವವರು ಮಹಿಳೆಯರು. ಅವರನ್ನು ಮೌಢ್ಯದಿಂದ ಹೊರತರುವ ಕೆಲಸವಾಗದೇ ಯಾವುದೇ ತರಹದ ಮೌಢ್ಯ ವಿರೋಧಿ ಹೋರಾಟ ಸಫಲವಾಗದು. ಯಾವುದೇ ವಿದ್ಯಾವಂತರ ಮನೆಯಲ್ಲಿ ನೋಡಿ - ಗಂಡಸರು ಪ್ರಗತಿಪರರಾಗಿದ್ದರೂ ಅವರ ಮನೆಯ ವಿದ್ಯಾವಂತ ಮಹಿಳೆಯರು ಮಾತ್ರ ಹಳ್ಳಿಯ ಹೆಂಗಸರಿಗಿಂತ ಹೆಚ್ಚು ಮೌಢ್ಯಭರಿತರಾಗಿರುತ್ತಾರೆ. ಇವರನ್ನು ಬದಲಾಯಿಸಲು ಯಾರಿಂದಾದರೂ ಸಾಧ್ಯವೇ? ಸಂಸ್ಕಾರ್ ಟಿವಿ, ಆಸ್ಥಾಟಿವಿ ಅಥವಾ ಇತರ ಧಾರ್ಮಿಕ ಚಾನೆಲ್ಲುಗಳನ್ನು ನೋಡಿ, ಅಲ್ಲಿ ಢೋಂಗಿ ಸಾಧು-ಸಾಧ್ವಿಗಳ ಪ್ರವಚನ ಕೇಳಲು ಬರುವವರಲ್ಲಿ 90% ಜನರು ಮಹಿಳೆಯರೇ ಆಗಿರುವರು. ಆದುದರಿಂದ ಇದಕ್ಕೆ ಮನೋವೈಜ್ಞಾನಿಕ ಕಾರಣ ಹುಡುಕಿ ಪರಿಹಾರ ಕಂಡುಹಿಡಿಯುವುದು ಅತ್ಯಗತ್ಯ.


ಇನ್ನು ಜಾರಕಿಹೊಳಿಯವರ ತವರು ಗೋಕಾಕಕ್ಕೆ ಬಂದರೆ ಅದು ಕರ್ನಾಟಕದ ಬಿಹಾರ ಅರ್ಥಾತ್ ಜಂಗಲ್ ರಾಜ್ ಎಂದೇ ಕರೆಸಿಕೊಳ್ಳುತ್ತದೆ. ಅಲ್ಲಿಯ ಜನರು ಭೂತಪ್ರೇತಗಳಿಗೆ ಹೆದರುವುದಿಲ್ಲ. ಅಲ್ಲಿಯವರು ಕೇವಲ ರಾಜಕಾರಣಿಗಳ ಕೃಪಾಪೋಷಿತ ಮಾಫಿಯಾಗಳಿಗೆ ಮಾತ್ರ ಹೆದರುವುದು. ಗೋಕಾಕ ನಗರದ ನಡು ಬೀದಿಯಲ್ಲಿ ಪ್ರಾಮಾಣಿಕ ಪೊಲೀಸ್ ಇನ್ಸ್‌ಪೆಕ್ಟರ್‌ನನ್ನೇ ರೌಡಿಗಳು ಬತ್ತಲೆ ಮಾಡಿ ಕೊಲೆ ಮಾಡಿದರೂ ಬೆಳಗಾವಿ ಜಿಲ್ಲೆಯ ಸಮಸ್ತ ಪೊಲೀಸ್ ಇಲಾಖೆ ನಪುಂಸಕರಂತೆ ತಮ್ಮವನ ಕೊಲೆ ಅಪರಾಧಿಗಳನ್ನು ಹಿಡಿಯುವ ಧೈರ್ಯ ಮಾಡಲಿಲ್ಲ. ಅಲ್ಲಿಯ ಸಕ್ಕರೆ ಮಿಲ್ಲಿನವರು ಬಾಕಿ ಇಟ್ಟುಕೊಂಡಿರುವ ಬೃಹತ್ ಮೊತ್ತವನ್ನು ಕೊಡುವಂತೆ ರೈತರು ಮುಖಂಡ ಒತ್ತಾಯಿಸಿದರೆ ಮರುದಿನ ಅವನ ಹೆಣ ಮಹಾರಾಷ್ಟ್ರದ ಗಡಿಯಲ್ಲಿ ಸಿಗುತ್ತದೆ. ಇಂತಹ ಕೊಲೆಗಾರರನ್ನು ಹಾಗೂ ಪೊಲೀಸರನ್ನು ಕಂಡಿರುವ ಬೆಳಗಾವಿ-ಗೋಕಾಕಿನ ಜನರು ಭೂತಪ್ರೇತಗಳಿಗೆ ಹೇಗೆ ಹೆದರಲು ಸಾಧ್ಯ!

- ಗಿರೀಶ್ ಟಿ ಕುಂಟಿ, ಬೆಳಗಾವಿ



'ಸಂಗೀತ ಬಿಟ್ಟು ಬೇರೇನೂ ಯೋಚಿಸೊಲ್ಲ': ಹರಿಕೃಷ್ಣ

ಸ್ಯಾಂಡಲ್‌ವುಡ್‌ನ ನಂಬರ್ ಒನ್ ಸಂಗೀತ ನಿರ್ದೇಶಕ ವಿ.ಹರಿಕೃಷ್ಣ ಆರೇಳು ವರ್ಷಗಳಿಂದ ಈ ಸ್ಥಾನವನ್ನು ಇವರು ಯಾರಿಗೂ ಬಿಟ್ಟು ಕೊಟ್ಟಿಲ್ಲ. ಸದ್ಯ ಇವರು ಹೊಸ ದಾಖಲೆ ಬರೆದಿದ್ದಾರೆ. ಏಕಕಾಲಕ್ಕೆ ಸ್ಯಾಂಡಲ್‌ವುಡ್‌ನ ಅಷ್ಟೂ ಟಾಪ್ ಸ್ಟಾರ್ ಜತೆ ಕೆಲಸ ಮಾಡುತ್ತಿದ್ದಾರೆ.



ಸಂಗೀತವನ್ನೇ ಧ್ಯಾನಿಸುವ ಅಪರೂಪದ ಸಂಗೀತ ನಿರ್ದೇಶಕರಲ್ಲಿ ವಿ.ಹರಿಕೃಷ್ಣ ಕೂಡ ಒಬ್ಬರು. ಆರೇಳು ವರ್ಷಗಳಿಂದ ಸ್ಯಾಂಡಲ್‌ವುಡ್‌ನಲ್ಲಿ ಹೆಚ್ಚಾಗಿ ಹರಿಕೃಷ್ಣರ ಹಾಡುಗಳೇ ಕೇಳಿಬರುತ್ತಿವೆ. ಈಗಲೂ ಅವರು ನಂಬರ್ ಒನ್. ಟಾಪ್ ಹಾಡುಗಳ ಲಿಸ್ಟ್‌ನಲ್ಲಿ ಯಾವಾಗಲೂ ಇವರ ಹಾಡುಗಳೇ ಇರುತ್ತವೆ. ಸದ್ಯ ಇವರು ಕನ್ನಡದ ಅಷ್ಟೂ ಟಾಪ್ ನಟರ ಜತೆ ಕೆಲಸ ಮಾಡುತ್ತಿದ್ದಾರೆ. ಈ ಕುರಿತಾಗಿ ಅವರು ಮಾತನಾಡಿದ್ದು ಇಲ್ಲಿದೆ.

** ಸಾಹಿತ್ಯ ಎಂಥದ್ದೇ ಆಗಿರಲಿ, ಅದಕ್ಕೊಂದು ಚೆಂದದ ಲಯ ಹಾಕಿ, ಹೊಸ ಭಾವ ಹೊಮ್ಮಿಸುವ ಜಾಣ್ಮೆ ನಿಮ್ಮಲ್ಲಿದೆ. ಇದು ಹೇಗೆ ಬಂತು?*


ನಾನು ಶಾಸ್ತ್ರೀಯವಾಗಿ ಸಂಗೀತ ಕಲಿತವನು ಅಲ್ಲ, ಬೇರೆಯವರ ಗರಡಿಯಲ್ಲಿ ಬೆಳೆದಿದ್ದೇನೆ. ಸಂಗೀತವನ್ನು ತಪಸ್ಸು ಅಂದುಕೊಂಡಿದ್ದೇನೆ. ಅಲ್ಲದೇ ನನಗೆ ಇಷ್ಟ ಆಗುವತನಕ ಕೆಲಸ ಮಾಡುತ್ತೇನೆ. ಹೀಗಾಗಿ ಸಂಗೀತ ನನ್ನ ಕೈ ಹಿಡಿದಿದೆ. ಅದೇ ಕೆಲಸ ಮಾಡಿಸುತ್ತಿದೆ.

** ಮೊದಲ ಬಾರಿಗೆ ಸಂಗೀತ ನಿರ್ದೇಶಕ ಅನ್ನುವ ಪಟ್ಟ ಸಿಕ್ಕಾಗ ಏನನಿಸಿತು?*

ಸಂಗೀತ ನಿರ್ದೇಶಕ ಅನ್ನುವ ಪಟ್ಟ ಸಿಗುವುದಕ್ಕಿಂತ ಮುಂಚೆ ಆಗಲೇ ನಾನು ಸಾಕಷ್ಟು ಹಾಡುಗಳಿಗೆ ಕೆಲಸ ಮಾಡಿದ್ದೆ. ಅನೇಕ ನಿರ್ದೇಶಕರ ಒಡನಾಟವೂ ನನಗಿತ್ತು. ಸಂಗೀತಕ್ಕೆ ಸಂಬಂಧಿಸಿದ ಅನೇಕ ಪ್ರಯೋಗಗಳಿಗೆ ನಾನು ಸಾಕ್ಷಿ ಆಗಿದ್ದೆ. ಹೀಗಾಗಿ ಬಹುತೇಕರಲ್ಲಿ ಆಗುವಂಥ ಪುಳಕವು ನನಗೂ ಆಯಿತು. ಈ ಕಾರಣಕ್ಕಾಗಿ ನಾನು ದರ್ಶನ್ ಮತ್ತು ಸಹೋದರ ದಿನಕರ್ ಅವರಿಗೆ ಧನ್ಯವಾದ ಹೇಳಬೇಕು.

** ಸಿನಿಮಾ ಸಂಗೀತವೆಂದರೆ ಅದು ಹೀಗೆಯೇ ಇರಬೇಕು ಅನ್ನುವ ಮಾತಿತ್ತು. ಅದನ್ನು ನೀವು ಬ್ರೇಕ್ ಮಾಡಿದಿರಿ ಅಂತ ಅನಿಸ್ತಿದೆಯಾ?*

ನಾನು ಏನೋ ಮಹಾನ್ ಸಾಧನೆ ಮಾಡಿಲ್ಲ. ಯಾವುದೋ ಒಂದು ಹೊಸ ರೀತಿಯ ಗೀತೆ ಕೊಟ್ಟಿದ್ದೇನೆ ಅಂತ ಯಾವತ್ತೂ ಬೀಗಿಲ್ಲ. ನನ್ನ ಪಾಡಿಗೆ ನಾನು ಕೆಲಸ ಮಾಡಿದ್ದೇನೆ. ಹೊಸ ಹೊಸ ಆಲೋಚನೆಯ ನಿರ್ದೇಶಕರು ನನಗೆ ಸಿಕ್ಕ ಕಾರಣ, ಅದು ಹೊಸದು ಅನಿಸಿರಬೇಕು. ನನ್ನ ಅಭಿರುಚಿಗೆ ತಕ್ಕ ಚಿತ್ರ ಸಾಹಿತಿಗಳೂ ಸಾಥ್ ನೀಡಿದ್ದಾರೆ.



ಆ ಹಾಡುಗಳನ್ನು ಕಲಾವಿದರು ಪ್ರೇಕ್ಷಕರಿಗೆ ತಲುಪಿಸಿದ್ದಾರೆ. ಎಲ್ಲವೂ ಸೇರಿ ಹೊಸದಾಗಿದೆ.

** ನಿಮ್ಮ ಬಹುತೇಕ ಸಂಗೀತ ನಿರ್ದೇಶನದ ಸಿನಿಮಾಗಳಲ್ಲಿ ಹಾಡಿದ್ದೀರಿ. ನಿಮ್ಮೊಳಗಿನ ಗಾಯಕದ ಬಗ್ಗೆ ಹೇಳಿ..*

ನಾನು ಗಾಯಕನಾಗಬೇಕು ಅಂತ ಯಾವತ್ತೂ ಅಂದುಕೊಂಡಿರಲಿಲ್ಲ, ಅನಿವಾರ್ಯಕ್ಕೆ ನಾನು ಹಾಡುಗಾರನಾಗಿದ್ದು. ಎಲ್ಲರಿಗೂ ಗೊತ್ತಿದೆ ನಾನು ಒಳ್ಳೆಯ ಸಿಂಗರ್ ಅಲ್ಲ ಅಂತ. ನನ್ನ ಪುಣ್ಯ ಅನಿಸತ್ತೆ, ನಾನು ಹಾಡಿದ ಬಹುತೇಕ ಸಾಂಗ್ಸ್ ಹಿಟ್ ಆಗಿವೆ. ಇದರ ಕ್ರೆಡಿಟ್ ಕೂಡ ನನ್ನ ಹಾಡುಗಳನ್ನು ಸಹಿಸಿಕೊಂಡ ರಸಿಕರಿಗೆ ಸಲ್ಲಬೇಕು.

** ನೀವು ಯಾವ ರೀತಿಯ ಹಾಡುಗಳನ್ನು ಇಷ್ಟಪಡುತ್ತೀರಿ?*

ಐಟಂ ಸಾಂಗ್ ಅನ್ನು ನಾನು ಹೇಟ್ ಮಾಡುತ್ತೇನೆ. ಭಕ್ತಿಗೀತೆಗಳು ನನ್ನ ನೆಚ್ಚಿನ ಹಾಡುಗಳು. ಆದರೆ, ನನ್ನ ಸಂಗೀತ ಸಂಯೋಜನೆಯಲ್ಲಿ ಮೂಡಿಬಂದ ಅಷ್ಟೂ ಮಾದಕ ಗೀತೆಗಳೂ ಹಿಟ್ ಆಗಿವೆ. ರಿಯಾಲಿಟಿ ಶೋ, ಆರ್ಕೆಸ್ಟ್ರಾಗಳಲ್ಲಿ ಮಾದಕ ಗೀತೆಗಳೇ ಹೆಚ್ಚೆಚ್ಚು ಕೇಳಿಬರುತ್ತವೆ.

** ಸದ್ಯ ನೀವು ಕನ್ನಡದ ಅಷ್ಟೂ ಟಾಪ್ ನಾಯಕರ ಚಿತ್ರಕ್ಕೆ ಸಂಗೀತ ನಿರ್ದೇಶನ ಮಾಡುತ್ತಿದ್ದೀರಿ. ಈ ಬಗ್ಗೆ ಹೇಳಿ.*

ಈವರೆಗೂ ನಾನು ಎಲ್ಲಾ ನಾಯಕರ ಚಿತ್ರಗಳಿಗೆ ಸಂಗೀತ ನಿರ್ದೇಶನ ಮಾಡಿರುವೆ. ಅಲ್ಲದೇ ಬಹುತೇಕ ಹಾಡುಗಳು ಹಿಟ್ ಆಗಿವೆ. ನಾನು ಒಂದು ಕೆಲಸ ಒಪ್ಪಿಕೊಂಡರೆ, ಅದು ಖುಷಿ ಕೊಡುವತನಕ ಬಿಡುವುದಿಲ್ಲ. ಅದೆಷ್ಟೇ ಟೈಮ್ ತೆಗೆದುಕೊಂಡರೂ, ಒಳ್ಳೆಯ ಹಾಡುಗಳನ್ನೇ ಕೊಟ್ಟಿದ್ದೇನೆ. ಇದೇ ಅವರಿಗೆಲ್ಲ ಇಷ್ಟ ಆಗಿರಬಹುದು. ಮ್ಯೂಸಿಕ್ ಬೇಗ ಕೊಡುವುದಿಲ್ಲ ಅನ್ನುವ ಆರೋಪವೂ ನನ್ನ ಮೇಲಿದೆ. ಆದರೆ ನಾನು ಒಂದೊಂದು ಹಾಡನ್ನು ಏಳೆಂಟು ಬಾರಿ ಕಂಪೋಸ್ ಮಾಡುವೆ. ನಾನು ಇಷ್ಟಪಟ್ಟ ನಂತರವೇ ನಿರ್ದೇಶಕರಿಗೆ ಕೇಳಿಸುವೆ. ಹೀಗಾಗಿ ನನ್ನನ್ನು ಸಹಿಸಿಕೊಂಡಿದ್ದಾರೆ.

ನನ್ನ ಜತೆ ಕೆಲಸ ಮಾಡಿದ ಬಹುತೇಕ ನಿರ್ದೇಶಕರಿಗೆ ಗೊತ್ತಿದೆ. ಹಾಡೊಂದನ್ನು ಕಂಪೋಸ್ ಮಾಡಲು ಕೂತರೆ, ಒಂದೇ ಹಾಡಿಗೆ ನಾನು ತೃಪ್ತಿ ಪಡುವುದಿಲ್ಲ. ಒಂದು ಸಾಹಿತ್ಯಕ್ಕೆ ಏಳೆಂಟು ರೀತಿಯಲ್ಲಿ ಕಂಪೋಸ್ ಮಾಡಿದ್ದು ಇದೆ. ಶೂಟಿಂಗ್ ಮಾಡಲು ಹಾಡು ಕೊಟ್ಟರೂ ಮತ್ತೆ ನಾನು ಅದರ ಮೇಲೆ ವರ್ಕ್ ಮಾಡುತ್ತೇನೆ. ಸಾಕಷ್ಟು ಹಾಡುಗಳನ್ನು ನಾನು ಹೀಗೆ ಮಾಡಿದ್ದೇನೆ. ನಿಜ ಹೇಳಬೇಕೆಂದರೆ ಅದು ನನಗೆ ಲಾಸ್. ಆದರೆ ನಾನು ಯೋಚಿಸುವುದಿಲ್ಲ, ನನಗೆ ನನ್ನ ಹಾಡುಗಳು ಮುಖ್ಯ.

** ಡಿ ಬಿಟ್ಸ್ ಕಂಪೆನಿ ಮಾಡಿದ್ದೀರಿ. ಆ ಬೆಳವಣಿಗೆ ಕುರಿತು ಹೇಳಿ.*

ಮ್ಯೂಸಿಕ್ ಕಂಪೆನಿ ಶುರು ಮಾಡಬೇಕು ಎನ್ನುವುದು ನನ್ನ ಬಹುದಿನಗಳ ಆಸೆ ಆಗಿತ್ತು, ಅದನ್ನು ಮಾಡಿದೆ. ಈ ಕೆಲಸದಲ್ಲಿ ನನ್ನ ಜತೆ ಈಗ ಶೈಲಜಾ ನಾಗ್ ಕೈ ಜೋಡಿಸಿದ್ದಾರೆ. ಕಂಪೆನಿ ಒಳ್ಳೆಯ ರೀತಿಯಲ್ಲಿ ಸಾಗುತ್ತಿದೆ. ತನ್ನದೇ ಆದ ಮಾರುಕಟ್ಟೆಯನ್ನು ಅದು ಹೊಂದಿದೆ. ಕಂಪೆನಿಗಾಗಿ ಹಲವರು ನನ್ನ ಜತೆ ದುಡಿಯುತ್ತಿದ್ದಾರೆ. ಬೇರೆ ಮ್ಯೂಸಿಕ್ ಡೈರೆಕ್ಟರ್ಸ್ ಹಾಡುಗಳನ್ನೂ ನಾವು ಕೊಂಡುಕೊಳ್ಳುತ್ತಿದ್ದೇವೆ. ■

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 06-01-2016 RNI No. KARKAN200



ಹರಿಪ್ರಿಯಾ ಸಂಭಾವನೆ 35 ಲಕ್ಷ

'ನೀರ್‌ದೋಸೆ' ಸಿನಿಮಾದಿಂದ ಹರಿಪ್ರಿಯಾ ತಮ್ಮ ಸಂಭಾವನೆಯನ್ನು ಮೂವತ್ತೈದು ಲಕ್ಷಕ್ಕೆ ಏರಿಸಿಕೊಂಡಿದ್ದಾರೆ. ಏಕಾಏಕಿ ಹದಿನೈದು ಲಕ್ಷ ಸಂಭಾವನೆ ಏರಿಸಲು ಕಾರಣ 'ನೀರ್ ದೋಸೆ' ಚಿತ್ರದ ಪಾತ್ರ. ಈ ಸಿನಿಮಾದಲ್ಲಿ ಹರಿಪ್ರಿಯಾ ಹೈಟೆಕ್ ಕಾಲ್‌ಗರ್ಲ್ ಪಾತ್ರ ಮಾಡಿದ್ದಾರೆ. ಸಾಕಷ್ಟು ಹಾಟ್ ದೃಶ್ಯಗಳಲ್ಲಿ ಕಾಣಿಸಿಕೊಂಡಿದ್ದಾರೆ. 'ಡರ್ಟಿ ಪಿಕ್ಚರ್'ನಲ್ಲಿ ವಿದ್ಯಾ ಬಾಲನ್‌ಗಿಂತಲೂ ಬೋಲ್ಡ್ ಆಗಿ ಕಾಣಿಸಿಕೊಂಡಿದ್ದಾರೆ. ಹೀಗಾಗಿ ಅವರ ಮುಂದಿನ ಕೆರಿಯರ್ ಚೆನ್ನಾಗಿರುತ್ತದೆ ಎಂಬ ನಂಬಿಕೆ ಅವರದ್ದು.

ಸದ್ಯ ಹರಿಪ್ರಿಯಾ ನಾಲ್ಕು ಚಿತ್ರಗಳಲ್ಲಿ ನಟಿಸುತ್ತಿದ್ದಾರೆ. 'ರಿಕ್ಕಿ' ಸಿನಿಮಾ ಬಿಡುಗಡೆ ಆಗಬೇಕು. ಈ ಚಿತ್ರದಲ್ಲಿ ಇವರು ಹೋರಾಟಗಾರ್ತಿಯ ಪಾತ್ರವನ್ನು ನಿರ್ವಹಿಸಿದ್ದಾರೆ. ರಕ್ಷಿತ್ ಶೆಟ್ಟಿ ಸಿನಿಮಾದ ನಾಯಕ. ಅಲ್ಲದೇ 'ನಾಟಕೋಳಿ' ಸಿನಿಮಾಗೂ ಇವರ ಹೆಸರು ಕೇಳಿಬಂದಿದೆ. ಈ ಚಿತ್ರಕ್ಕಾಗಿ ಅವರು ಮೂವತ್ತೈದು ಲಕ್ಷ ಸಂಭಾವನೆ ಕೇಳಿದ್ದಾರೆ ಎನ್ನಲಾಗುತ್ತಿದೆ. ಟಾಲಿವುಡ್ ನಾಯಕಿಯರಿಗೆ ಹೋಲಿಸಿದರೆ ಈ ಸಂಭಾವನೆ ಕಡಿಮೆ. ಆದರೆ ಕನ್ನಡದಲ್ಲಿ ಸಿಗುವ ಹೆಚ್ಚು ಮೊತ್ತದ ಸಂಭಾವನೆ ಇದಾಗಿದೆ.


ಬುಟ್ಟಿಯಿಂದ ಆಚೆಬಂದ ನಾಗಪ್ಪ



ಕವಿಯತ್ರಿ ಪ್ರತಿಭಾ ನಂದಕುಮಾರ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ 'ಸ್ನೇಕ್‌ನಾಗ' ಚಿತ್ರಕ್ಕೆ ಮತ್ತೆ ಮರುಜೀವ ಬಂದಿದೆ. ಬುಟ್ಟಿ ಸೇರಿಕೊಂಡಿದ್ದ ನಾಗಪ್ಪ ಈಗ ನೋಡುಗರ ದರ್ಶನಕ್ಕೆ ಸಜ್ಜಾಗುತ್ತಿದ್ದಾನೆ.

ಹಲವು ಕಾರಣಗಳಿಂದಾಗಿ ಲೂಸ್‌ಮಾದ ನಟನೆಯ 'ಸ್ನೇಕ್‌ನಾಗ' ಸಿನಿಮಾದ ಚಿತ್ರೀಕರಣ ನಿಂತಿತ್ತು. ಹಣಕಾಸಿನ ಮುಗ್ಗಟ್ಟು ಮತ್ತು ನಿರ್ಮಾಪಕರಿಗಾದ ತೊಂದರೆಯಿಂದಾಗಿ ಮತ್ತೆ 'ಸ್ನೇಕ್‌ನಾಗ' ಆಟ ಆಡುವುದಿಲ್ಲ ಅನ್ನುವ ಮಾತೂ ಕೇಳಿಬಂದಿತ್ತು. ಈಗ ಎಲ್ಲವೂ ಸರಿಹೋಗಿದೆಯಂತೆ. ಮುಂದಿನ ತಿಂಗಳಿಂದ ಮತ್ತೆ ಚಿತ್ರೀಕರಣ ಶುರುವಾಗಲಿದೆಯಂತೆ.

ಹಲವು ಕಾರಣಗಳಿಂದಾಗಿ ಈ ಸಿನಿಮಾ ನಿರೀಕ್ಷೆ ಮೂಡಿಸಿದೆ. ಯೋಗಿ ವಿಶೇಷ ಪಾತ್ರ ಮಾಡುತ್ತಿದ್ದಾರೆ. ಅಲ್ಲದೇ ಸಿಹಿಕಹಿ ಚಂದ್ರು ಪುತ್ರಿ ಈ ಸಿನಿಮಾದ ಮೂಲಕ ಸ್ಯಾಂಡಲ್‌ವುಡ್‌ಗೆ ಪ್ರವೇಶ ಮಾಡುತ್ತಿದ್ದಾರೆ. ಅಲ್ಲದೇ ಪ್ರತಿಭಾ ನಂದಕುಮಾರ್‌ರ ಮೊದಲ ಸಿನಿಮಾ ಇದು.



ಪಾವನಾ ಫೋಟೋ ಶೂಟ್ ಕತೆ


ಸದಭಿರುಚಿಯ ಸಿನಿಮಾಗಳ ಮೂಲಕ ಗುರುತಿಸಿಕೊಂಡಿರುವ ಪಾವನಾಗೆ ಗ್ಲಾಮರ್ ನಟಿ ಆಗುವ ಆಸೆ. ಹೀಗಾಗಿಯೇ, ಮೊನ್ನೆಯಷ್ಟೇ ಮೇಕ್‌ಓವರ್ ಮಾಡಿಕೊಂಡು ಫೋಟೋ ಶೂಟ್ ಮಾಡಿಸಿದ್ದಾರೆ. ಈ ಫೋಟೋ ಶೂಟ್‌ನಲ್ಲಿ ಕೊಂಚ ಹಾಟ್ ಆಗಿ ಕಾಣಿಸಿಕೊಂಡಿದ್ದಾರೆ.

ಈ ಫೋಟೋ ಶೂಟ್ ಹಿಂದೆಯೂ ಒಂದು ಕತೆ ಇದೆ. ಕನ್ನಡದ ಬಹುತೇಕ ನಿರ್ದೇಶಕರಿಗೆ ಡಿಗ್ಲಾಮ್ ಪಾತ್ರ ಅಂದಾಕ್ಷಣ ಪಾವನಾ ನೆನಪಾಗುತ್ತಾರಂತೆ. ಅಲ್ಲದೇ ಆ ಸಿನಿಮಾಗಳು ತೆರೆ ಕಾಣುವುದಿಲ್ಲ, ತೆರೆಕಂಡ ಚಿತ್ರಗಳು ಒಂದು ವಾರವೂ ಪ್ರದರ್ಶನ ಕಾಣುವುದಿಲ್ಲ. ಹೀಗಾಗಿ ಪಾವನಾಗೆ ನೆಲೆಯೂರಲು ಕಷ್ಟವಾಯಿತಂತೆ. ತಾವು ಎಂಥ ಪಾತ್ರ ಮಾಡಲು ರೆಡಿ ಎಂದು ಸಾರಲು ಈ ಫೋಟೋ ಶೂಟ್ ಮಾಡಿಸಲಾಗಿದೆ.

ಅಂದಹಾಗೆ ಪಾವನಾ ಒಳ್ಳೆಯ ನಟಿ. ಅದನ್ನು 'ಗೊಂಬೆಗಳ ಲವ್ ಸ್ಟೋರಿ' ಸಿನಿಮಾದಲ್ಲಿ ಸಾಬೀತು ಪಡಿಸಿದ್ದಾರೆ. ಆದರೆ, ಗ್ಲಾಮ್ ಪಾತ್ರದಿಂದಲೇ ತಾವು ಜನಪ್ರಿಯ ಆಗಬೇಕು ಅನ್ನುವ ನಿರ್ಧಾರ ಮಾತ್ರ ಹಾಸ್ಯಾಸ್ಪದವಾಗಿದೆ.



ನಿರುದ್ಯೋಗಿಯಾದ ದಿಗಂತ್



ದಿಗಂತ್ ಈಗ ನಿರುದ್ಯೋಗಿ. ಕೈಯಲ್ಲಿರುವ ಎಲ್ಲಾ ಸಿನಿಮಾಗಳು ಖಾಲಿ ಆಗಿವೆ. ರಿಲೀಸ್ ಆದ ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಮುಗ್ಗರಿಸಿವೆ. ಹೀಗಾಗಿ ದಿಗಂತ್ ಕಂಗಾಲಾಗಿದ್ದಾರೆ. ಮೊನ್ನೆಯಷ್ಟೇ ಇವರ 'ಶಾರ್ಪ್ ಶೂಟರ್' ಚಿತ್ರ ಬಿಡುಗಡೆ ಆಗಿದೆ. ಈ ಸಿನಿಮಾದ ಬಗ್ಗೆ ಸಾಕಷ್ಟು ನಿರೀಕ್ಷೆ ಇತ್ತು, ಆದರೆ ಅಂದುಕೊಂಡಂತೆ ಸಿನಿಮಾ ಬಾರದ ಕಾರಣ ಎರಡೇ ದಿನಕ್ಕೆ ಹಲವು ಥಿಯೇಟರ್‌ಗಳಿಂದ ಚಿತ್ರ ಎತ್ತಂಗಡಿ ಆಗಿದೆ. ಹೀಗಾಗಿ ದಿಗಂತ್ ಚಿತ್ರಕ್ಕೆ ದುಡ್ಡು ಹಾಕಲು ನಿರ್ಮಾಪಕರು ಹಿಂದೇಟು ಹಾಕುತ್ತಿದ್ದಾರೆ.

ಸದ್ಯ ಯೋಗರಾಜ್ ಭಟ್ ನಿರ್ಮಾಣದ 'ಪರಪಂಚ' ಸಿನಿಮಾ ಬಿ... ಆಗಬೇಕು. ಈ ಸಿನಿಮಾದಲ್ಲಿ ದಿಗಂತ್ ವಿಶೇಷ ಪಾತ್ರ ಮಾಡಿದ್ದಾರೆ ಎನ್ನಲಾ... ಆದರೆ ಲ್ಯಾಬ್ ರಿಪೋರ್ಟ್ ಬೇರೆ ಹೇಳುತ್ತಿದೆ. ಸಿನಿಮಾದ ಮೊದ... ತುಂಬಾ ಬೋರ್ ಅಂತೆ. ಹೀಗಾಗಿ ನಿರ್ಮಾಪಕರು ತಲೆ ಓಡಿಸಿ, ವೆಂಕಟ್‌ರನ್ನು ಆ ಸಿನಿಮಾಗೆ ಕರೆತಂದಿದ್ದಾರೆ. ವೆಂಕಟ್ ಈ ಸಿನಿಮಾಗೆ ... ಹಾಡು ಹಾಡಿದ್ದಾರೆ. ಅಲ್ಲದೇ ಅದೇ ಹಾಡಿನಲ್ಲಿ ಕಾಣಿಸಿಕೊಂಡಿದ್ದಾರೆ ... ಸಿನಿಮಾ ದಿಗಂತ್ ಅವರ ಅಂತಿಮ ಭವಿಷ್ಯ ನಿರ್ಧಾರ ಮಾಡಲಿದೆ.


ಸೆಟ್ಟೇರಿದ ಜೋಗಯ್ಯ

ಧರ್ಮಕೀರ್ತಿ ರಾಜ್ ನಟನೆಯ 'ಜೋಗಿ ಗುಡ್ಡ' ಸಿನಿಮಾ ಚಿತ್ರೀ... ಪ್ರಾರಂಭಿಸಿದೆ. 'ಜೋಗಿ', 'ಜೋಗಯ್ಯ' ಸಿನಿಮಾದ ನಂತರ ಇಂಥದ್ದೊ... ಶೀರ್ಷಿಕೆ ಹೊತ್ತ ಸಿನಿಮಾ ಕುತೂಹಲ ಮೂಡಿಸಿದೆ. 'ಮುನಿಯಾ' ನಿರ್ದೇ... ನಂತರ ನಿರ್ದೇಶಕ ನಾಗಚಂದ್ರ ಈ ಚಿತ್ರವನ್ನು ಕೈಗೆತ್ತಿಕೊಂಡಿದ್ದಾರೆ. ನಿರ್ದೇ... ಎರಡನೇ ಸಿನಿಮಾ ಇದು.ಹಾಗಂತ ಇದು 'ಜೋಗಯ್ಯ'ನ ಮುಂದು... ಭಾಗ ಅಲ್ಲವಂತೆ. ಜೋಗಿ ಗುಡ್ಡದಲ್ಲಿ ನಡೆಯುವ ಅಪರೂ... ಪ್ರೇಮಕತೆಯನ್ನು ಸಿನಿಮಾ ಮಾಡುತ್ತಿದ್ದಾರೆ ನಿರ್ದೇಶಕ...

ಧರ್ಮಕೀರ್ತಿ ರಾಜ್ ಇಲ್ಲಿ ಲವರ್‌ಬಾಯ್ ... ಕಾಣಿಸಿಕೊಂಡಿದ್ದು, ಈ ಸಿನಿಮಾ ಇವರಿಗೊ... ಬ್ರೇಕ್ ನೀಡಲಿದೆಯಂತೆ.

ಧ್ರುವ ಸರ್ಜಾ ... ಮತ್ತೆ ಕಿರಿಕ್...

ಅಂದುಕೊಂಡಂತೆ ಆಗಿದ್ದರೆ ಧ್ರುವ ಸರ್ಜಾ ನಟನೆ... 'ಭರ್ಜರಿ' ಸಿನಿಮಾ ಶೂಟಿಂಗ್ ಇಷ್ಟು ಹೊ... ಮುಗಿದಿರಬೇಕಿತ್ತು, ಆದರೆ ನಿರ್ದೇಶಕ ಚೇತನ್ ಕುಮಾರ್ ವ... ಹೀರೋ ಧ್ರುವ ನಡುವಿನ ಮನಸ್ತಾಪದಿಂದಾಗಿ ಆರು ತಿಂಗಳು ... ಮುಂದೆಹೋಗಿತ್ತು, ಧ್ರುವನ ಮಾತಿಗೆ ಬೇಸತ್ತಿದ್ದ ಚೇತನ್ ಈ ಪ್ರಾಜೆಕ್... ಕೈಬಿಡುವುದಾಗಿಯೂ ಆಪ್ತರ ಮುಂದೆ ಹೇಳಿಕೊಂಡಿದ್ದರು. ಆಮೇ... ಸಂಧಾನ ನಡೆದು ಶೂಟಿಂಗ್ ಶುರುವಾಯಿತು. ಈಗ ಮತ್ತೆ ಧ್ರು... ಕಿರಿಕ್ ಮಾಡುತ್ತಿದ್ದಾರೆ. ತಾವು ಹೇಳಿದಂತೆ ಶೂಟಿಂಗ್ ನಡೆಯಬೇ... ಎನ್ನುತ್ತಿದ್ದಾರೆ.



ಚೇತನ್ ಕುಮಾರ್ ಪ್ರತಿಭಾವಂತ ನಿರ್ದೇಶಕ ಮತ್ತು ಗೀತ ರಚನೆಕಾರ. ಹೀಗಾಗಿಯೇ ಕತೆಯನ್ನೇ ಹೀರೋ ಮಾಡಿಕೊಂಡು ಶೂಟಿಂಗ್‌ಗೆ ರೆಡಿಯಾಗಿದ್ದಾರೆ. ಆದರೆ ಧ್ರುವನಿಗೆ ತಾನೇ ಹೀರೋ ಅನ್ನುವ ಅಹಂ. ಕತೆಗಿಂತ ತಾನೇ ಮಿಂಚಬೇಕು ಅನ್ನುವ ದುರಾಸೆ. ಹೀಗಾಗಿ ಮತ್ತೆ ಮನಸ್ತಾಪ ಮುಂದುವರೆದಿದೆ. ಅವರಿಬ್ಬರ ಜಗಳ ತಣ್ಣಗಾಗುವ ಲಕ್ಷಣ ಕಾಣದು ಅನ್ನುವ ಮಾತೂ ಕೇಳಿಬರುತ್ತಿ... ಇದೆಲ್ಲದರಿಂದಾಗಿ ಈ ಸಿನಿಮಾದ ಚಿತ್ರೀಕರಣ ಕುಂಟು... ಸಾಗಿದೆ. ಧ್ರುವ ಅವರು ಬದಲಾಗದೇ ಇದ್ದರೆ ಸಿನಿಮಾ... ಕೆರಿಯರ್ ಇನ್ನೆರಡು ಸಿನಿಮಾಗೆ ಖತಂ ಎನ್ನುತ್ತಿದೆ ಗಾಂಧಿನ...

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com